ವಿಶ್ವವಾಣಿ
ವಿಶ್ವಾಸವೇ ವಿಶ್ವ



ಬನ್ನಿ, ಚಹಾ, ಕಾಫಿ ಕುಡಿದು ಪುಸ್ತಕ ಲೋಕಾರ್ಪಣೆಯಲ್ಲಿ ಮಿಂದೇಳೋಣ..

ಎಫ್‌ಕೆಸಿಸಿಐ ಭವನದಲ್ಲಿ ವಿಶ್ವೇಶ್ವರ ಭಟ್ಟರ ನೂರನೇ ಕೃತಿ ವಿದೇಶ ಕಾಲ ಅನಾವರಣ

ವಿಶ್ವವಾಣಿ ಪ್ರಕಾಶನದ 8 ಕೃತಿ ಇಂದು ಬಿಡುಗಡೆ

ಬೆಂಗಳೂರು: ವಿಶ್ವವಾಣಿ ಪುಸ್ತಕ ಪ್ರಕಾಶನದ ವತಿಯಿಂದ ಎಂಟು ಪುಸ್ತಕಗಳ ಲೋಕಾರ್ಪಣೆ ಕಾರ್ಯಕ್ರಮವನ್ನು ಬೆಂಗಳೂರಿನ ಎಫ್‌ಕೆಸಿಸಿಐ ಸಭಾಂಗಣದಲ್ಲಿ ಶನಿವಾರ ಸಂಜೆ 5ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರ ನೂರನೇ ಕೃತಿ 'ವಿದೇಶ ಕಾಲ' ಈ ಕಾರ್ಯಕ್ರಮದಲ್ಲಿ ಬಿಡುಗಡೆಯಾಗಲಿರುವುದು ವಿಶೇಷ. ಉದ್ಯಮಿ, ಅಂಕಣಕಾರ ಎಸ್. ಷಡಕ್ಷರಿ, ರೂಪಾ ಗುರುರಾಜ್, ಕಿರಣ್ ಉಪಾಧ್ಯಾಯ ಹಾಗೂ ರಾಜು ಅಡಕಳ್ಳಿ ಅವರ ಪುಸ್ತಕಗಳೂ ಬಿಡುಗಡೆಯಾಗಲಿವೆ..

ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಎಸ್.ಎಲ್. ಭೈರಪ್ಪ ಅವರು ಸಾನಿಧ್ಯ ವಹಿಸಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಮುಖ್ಯಮಂತ್ರಿ, ಸಂಸದ ಬಸವರಾಜ ಬೊಮ್ಮಾಯಿ ಅವರು ವಹಿಸಲಿದ್ದಾರೆ. ಎಂಟು ಪುಸ್ತಕಗಳನ್ನು ಧರ್ಮಸ್ಥಳದ ಧರ್ಮಾಧಿಕಾರಿ ಹಾಗೂ ರಾಜ್ಯಸಭಾ ಸದಸ್ಯ ವೀರೇಂದ್ರ ಹೆಗ್ಗಡೆ ಅವರು ಬಿಡುಗಡೆಗೊಳಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ, ರಿಪಬ್ಲಿಕ್ ಕನ್ನಡ ಚಾನೆಲ್ ಸಂಪಾದಕಿ ಶೋಭಾ ಮಳವಳ್ಳಿ ಅವರು ಭಾಗವಹಿಸಲಿದ್ದಾರೆ. ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ವಿಶ್ವವಾಣಿ ಪುಸ್ತಕ ಪ್ರಕಾಶಕರಾದ ಸುಷ್ಮಾ ಭಟ್, ಲೇಖಕರಾದ ಎಸ್. ಷಡಕ್ಷರಿ, ಕಿರಣ್ ಉಪಾಧ್ಯಾಯ, ರಾಜು ಅಡಕಳ್ಳಿ, ರೂಪಾ ಗುರುರಾಜ್ ಉಪಸ್ಥಿತರಿರಲಿದ್ದಾರೆ.

ಬಿಡುಗಡೆಯಾಗಲಿರುವ ಪುಸ್ತಕಗಳು: ವಿಶ್ವೇಶ್ವರ ಭಟ್ ಅವರ 'ವಿದೇಶ ಕಾಲ', 'ಆಸ್ಕ್ ದಿ ಎಡಿಟರ್ 3', 'ಸಂಪಾದಕರ ಸದ್ಯಶೋಧನೆ 7', 'ಸಂಪಾದಕರ ಸದ್ಯಶೋಧನೆ 8', ಎಸ್. ಷಡಕ್ಷರಿ ಅವರ 'ಯಶಸ್ವಿ ಬದುಕಿಗೆ ಸರಳ ಸೂತ್ರಗಳು', ಕಿರಣ್ ಉಪಾಧ್ಯಾಯ ಅವರ 'ಉಭಯ ದೇಶವಾಸಿ', ರೂಪಾ ಗುರುರಾಜ್ ಅವರ 'ಒಂದೊಳ್ಳೆ ಮಾತು 4', ರಾಜು ಅಡಕಳ್ಳಿ ಅವರ 'ಗೆದ್ದವರ ಕಥೆಗಳು' ಪುಸ್ತಕ ಬಿಡುಗಡೆಯಾಗಲಿವೆ.

ಪುಸ್ತಕದ ಮೇಲೆ ಶೇ.20ರಷ್ಟು ರಿಯಾಯಿತಿ

ವಿಶ್ವವಾಣಿ ಪುಸ್ತಕ ಪ್ರಕಾಶನದ ಶನಿವಾರ ಲೋಕಾರ್ಪಣೆಗೊಳ್ಳಲಿರುವ ಎಂಟು ಪುಸ್ತಕಗಳೊಂದಿಗೆ ಪ್ರಕಾಶನದ ಇತರ ಪುಸ್ತಕಗಳು ಮಳಿಗೆಯಲ್ಲಿ ಲಭ್ಯವಿರಲಿದೆ. ಬಿಡುಗಡೆಯಾಗಲಿರುವ ಪುಸ್ತಕ ಹಾಗೂ ಈ ಹಿಂದಿನ ಪುಸ್ತಕಗಳ ಮೇಲೆ ಶೇ.20ರಷ್ಟು ರಿಯಾಯಿತಿ ಇದೆ. ಇದರೊಂದಿಗೆ ಲೋಕಾರ್ಪಣೆಗೊಳ್ಳಲಿರುವ ಎಂಟು ಪುಸ್ತಕಗಳನ್ನು ಪೋಸ್ಟ್ ಮೂಲಕವೂ ತಲುಪಿಸಲು ಆನ್‌ಲೈನ್ ಬುಕ್ಕಿಂಗ್‌ಗೆ ಕೂಡ ಅವಕಾಶ ನೀಡಲಾಗಿದೆ.

ವಿಶ್ವವಾಣಿ ಪುಸ್ತಕ

ಸೊಂಪಾದ ಪುಟಗಳು

ಜಿಎಸ್‌ಟಿ ನೋಟಿಸ್ ತಕರಾರಿನ ಸುತ್ತಮುತ್ತ!
ವೀಕೆಂಡ್ ವಿತ್ ಮೋಹನ್ – ಮೋಹನ್ ವಿಶ್ವ 6

ಸ್ವಾಸ್ಥ್ಯದ ಅಳಿವು ಆಗುವುದು ಈ ಮೂರರಿಂದಲೇ!
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ – ಡಾ.ಸಾಧನಶ್ರೀ 7

ದಾರಿದೀಪೋಕ್ತಿ

ಕಾಲವು ನಮ್ಮ ಜೀವನವನ್ನು ಬದಲಿಸುತ್ತದೆ ಎಂಬ ಭ್ರಮೆಯಲ್ಲಿ ಇರಬಾರದು. ಕಾಲವು ಅವಕಾಶಗಳ ಕೊನೆಯ ದಿನಾಂಕವನ್ನು ಬದಲಿಸುತ್ತದೆ. ನಮ್ಮ ಮುಂದೆ ಅವಕಾಶಗಳು ಬಂದಾಗ ಬೇರೆ ನೆಪಗಳನ್ನು ಹೇಳದೇ ಬಳಸಿಕೊಳ್ಳಬೇಕು.

ವಕ್ರತುಂಡೋಕ್ತಿ

'ಕಠಿಣ ಪರಿಶ್ರಮ ಯಶಸ್ಸಿನ ಕೀಲಿ' ಅಂದ್ರೆ ಬೀಗಕ್ಕೆ ಹುಡುಕಬಾರದು.

ಅಪಘಾತ: ನಾಲ್ವರ ಸಾವು

ಸುಳ್ಯ: ಮಾಣಿ-ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕೊಯನಾಡು- ದೇವರ ಕೊಲ್ಲಿ ಮಧ್ಯೆ ಲಾರಿ ಮತ್ತು ಕಾರಿನ ನಡುವೆ ಶುಕ್ರವಾರ ಭೀಕರ ಅಪಘಾತ ಸಂಭವಿ ಸಿದ್ದು, ಕಾರಿನಲ್ಲಿದ್ದ ನಾಲ್ಕೂ ಜನ ಮೃತ ಪಟ್ಟಿದ್ದಾರೆ.

ಗಂಭೀರ ಗಾಯ ಗೊಂಡು ಚಿಂತಾಜನಕ ಸ್ಥಿತಿಯಲ್ಲಿದ್ದ ಗಾಯಾಳು ಗಳನ್ನು ಆಂಬ್ಯುಲೆನ್ಸ್ ಮೂಲಕ ಸುಳ್ಯದ ಕೆವಿಜಿ ಆಸ್ಪತ್ರೆಗೆ ಕರೆ ತರುವಾಗಲೇ ಮೃತರಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಮೃತಪಟ್ಟವರು ಕೊಡಗು ಜಿಲ್ಲೆಯ ಗೋಣಿಕೊಪ್ಪ ಮೂಲದವರು ಎಂದು ತಿಳಿದು ಬಂದಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಮರೆತಿದ್ದ ಪತ್ನಿಯನ್ನು ಕರೆತರಲು 22 ಬೆಂಗಾವಲು ಪಡೆಯ ಜೊತೆ ಬಂದ ಸಚಿವ

ಸಿಎಂ ಬೆಂಗಳೂರಿಗೆ ವಾಪಸಾದ ಬಳಿಕ ಅಂತಿಮ ಹೆಸರು ಪ್ರಕಟ

ನಿಗಮ-ಮಂಡಳಿ ಪಟ್ಟಿ ಫೈನಲ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಳೆದ ಎರಡೂವರೆ ವರ್ಷಗಳಿಂದ ತೀವ್ರ ಕುತೂಹಲಕ್ಕೆ ಕಾರಣವಾಗಿದ್ದ ನಿಗಮ-ಮಂಡಳಿ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ನಿರ್ದೇಶಕರ ನೇಮಕ ಬಹುತೇಕ ಅಂತಿಮಗೊಂಡಿದ್ದು, ಎರಡನೇ ಹಂತದಲ್ಲಿ ಬಾಕಿಯಿರುವ 40 ನಿಗಮ ಮಂಡಳಿಗಳ ಪೈಕಿ 25ರಿಂದ 30ಕ್ಕೆ ನೇಮಕ ಮಾಡಲು ಅನುಮತಿ ಸಿಕ್ಕಿದೆ.

ದೆಹಲಿ ಪ್ರವಾಸದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲ ಅವರೊಂದಿಗೆ ಸಭೆ ನಡೆಸಿದ್ದಾರೆ. ಈ ವೇಳೆ 20 ನಿಗಮಗಳ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳನ್ನು ಅಂತಿಮಗೊಳಿಸಲಾಗಿದೆ. ಸುರ್ಜೇವಾಲ ನಿವಾಸದಲ್ಲಿ ಸುಮಾರು 2 ಗಂಟೆ ಸಭೆ ನಡೆಸಿದ್ದು, ಬಾಕಿ ಇರುವ 40 ನಿಗಮ ಮಂಡಳಿಗಳ ನೇಮಕದ ಪೈಕಿ, 20 ಸ್ಥಾನಗಳಿಗೆ ಹೆಸರನ್ನು ಅಂತಿಮಗೊಳಿಸಿದ್ದಾರೆ. ಈ ಪೈಕಿ ಶಾಸಕರು, ಪಕ್ಷದ ಪ್ರಮುಖರು ಸೇರಿ ಕಾರ್ಯಕರ್ತರನ್ನು ಒಳಗೊಂಡ ಪಟ್ಟಿ ಇದಾಗಿದೆ. ಸಿಎಂ ದೆಹಲಿ ಪ್ರವಾಸ ಮುಗಿಸಿ ಬೆಂಗಳೂರಿಗೆ ವಾಪಸಾದ ಬಳಿಕ ಅಂತಿಮಗೊಂಡ ಹೆಸರನ್ನು ಪ್ರಕಟಿಸಲಿದ್ದಾರೆ ಎಂದು ತಿಳಿದುಬಂದಿದೆ.

ಇನ್ನುಳಿದ 20 ನಿಗಮಗಳಿಗೆ ಸಿಎಂ, ಡಿಸಿಎಂ ಕೂತು ತೀರ್ಮಾನಿಸಲಿ ಎನ್ನುವ ಸೂಚನೆಯನ್ನು ಹೈಕಮಾಂಡ್ ನೀಡಿದೆ. ಈ ಮೂಲಕ ಎರಡನೇ ಹಂತದಲ್ಲಿ ಸುಮಾರು 10 ನಿಗಮಗಳನ್ನು ಬಾಕಿ ಉಳಿಸಿಕೊಂಡು ಇನ್ನುಳಿದ ಎಲ್ಲ ನಿಗಮ ಮಂಡಳಿಗಳಿಗೆ ಅಧ್ಯಕ್ಷರನ್ನು ಘೋಷಿಸುವುದು ಬಹುತೇಕ ಖಚಿತ ಎನ್ನಲಾಗಿದೆ. ಪಕ್ಷದ ಹೈಕಮಾಂಡ್ ತೀರ್ಮಾನಿಸಿರುವ 20 ನಿಗಮ ಮಂಡಳಿ ಅಧ್ಯಕ್ಷರೊಂದಿಗೆ, ಸಿಎಂ, ಡಿಸಿಎಂ 10 ನಿಗಮಗಳನ್ನು ಅಂತಿಮಗೊಳಿಸಲಿದ್ದಾರೆ. ಎಲ್ಲ ನಿಗಮಗಳನ್ನು ಭರ್ತಿ ಮಾಡಿದರೆ, ಭವಿಷ್ಯದಲ್ಲಿ ಅಸಮಾಧಾನ ಉಂಟಾದರೆ 'ಹಂಚಿಕೆ' ಮಾಡಲು 10 ನಿಗಮಗಳನ್ನು ಹಾಗೇ ಉಳಿಸಿಕೊಳ್ಳುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ.

ರಣದೀಪ್ ಸುರ್ಜೇವಾಲ ಅವರೊಂದಿಗೆ ನಡೆದ ಸಭೆಯಲ್ಲಿ ನಿಗಮ ಮಂಡಳಿಗಳ ಅಧ್ಯಕ್ಷರ ಸ್ಥಾನಕ್ಕೆ ಸಂಬಂಧಿಸಿದಂತೆ ನಾನು ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅಭಿಪ್ರಾಯವನ್ನು ನೀಡಿದ್ದೇವೆ. ಅಂತಿಮವಾಗಿ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳಲಿದೆ. ವಿಧಾನ ಪರಿಷತ್ತಿಗೆ ಶಾಸಕರ ನಾಮನಿರ್ದೇಶನ ವಿಧಾನಮಂಡಲ ಅಧಿವೇಶನಕ್ಕೂ ಮೊದಲು ಆಗಬಹುದು.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ದೆಹಲಿಯಲ್ಲಿ ಸಿದ್ದರಾಮಯ್ಯ ಹವಾ

ಎಐಸಿಸಿ ಆಶ್ರಯದಲ್ಲಿ ನಡೆದ ರಾಷ್ಟ್ರಮಟ್ಟದಲ್ಲಿ ಹಿಂದುಳಿದ ವರ್ಗಗಳ ಭಾಗಿದಾರಿ ಸಮಾವೇಶದಲ್ಲಿ ಸಿಎಂ ಸಿದ್ದರಾಮಯ್ಯ ಕೇಂದ್ರಬಿಂದುವಾಗಿದ್ದು, ಬೆಂಗಳೂರು ಘೋಷಣೆಗಳನ್ನು ದೆಹಲಿಯ ಸಮಾವೇಶದಲ್ಲಿ ಘೋಷಿಸಲಾಗಿದೆ. ಹಿಂದುಳಿದ ವರ್ಗಗಳ ಪ್ರಮುಖ ನಾಯಕರನ್ನೊಳಗೊಂಡ ರಾಷ್ಟ್ರಮಟ್ಟದ ಸಮಾವೇಶ ಬೆಂಗಳೂರಿನಲ್ಲಿ ನಡೆದಿತ್ತು. ಅದರ ಮುಂದುವರಿದ ಭಾಗವಾಗಿ ದೆಹಲಿಯ ಕಾಲ್ಕಟೋರ ಸ್ಟೇಡಿಯಂನಲ್ಲಿ 2ನೇ ಹಂತದ ಬೃಹತ್ ಸಮಾವೇಶ ನಡೆದಿದೆ. ಸಮಾವೇಶದ ಸ್ಥಳಕ್ಕೆ ತಲುಪುವ ದಾರಿಯುದ್ದಕ್ಕೂ ಕಾಂಗ್ರೆಸ್ ನಾಯಕರ ಫ್ಲೆಕ್ಸ್, ಬ್ಯಾನರ್‌ಗಳಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಸಮಾನಂತರವಾಗಿ ಸಿದ್ದರಾಮಯ್ಯನವರ ಭಾವಚಿತ್ರಗಳು ಫ್ಲೆಕ್ಸ್‌ನಲ್ಲಿ ಕಂಡುಬಂದವು. ಈವರೆಗೆ ಕರ್ನಾಟಕದಲ್ಲಿ ಪ್ರಭಾವಿ ನಾಯಕರಾಗಿದ್ದ ಸಿದ್ದರಾಮಯ್ಯ ಹಿಂದುಳಿದ ವರ್ಗಗಳ ಸಮಾವೇಶದ ಮೂಲಕ ರಾಷ್ಟ್ರಮಟ್ಟದಲ್ಲೂ ಮಿಂಚಲಾರಂಭಿಸಿದ್ದಾರೆ. 2013 ರಿಂದ 2018ರ ನಡುವೆ ಮುಖ್ಯಮಂತ್ರಿಯಾಗಿದ್ದಾಗ ಹಲವು ಭಾಗ್ಯಸರಣಿ ಯೋಜನೆಗಳ ಘೋಷಣೆ ಮೂಲಕ ಸಿದ್ದರಾಮಯ್ಯ ಅವರು ಮನೆಮಾತಾಗಿದ್ದರು. 2023ರ ಚುನಾವಣೆ ಬಳಿಕ ಮತ್ತೆ ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ, ಪಂಚಖಾತ್ರಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸುವ ಮೂಲಕ ಮತ್ತೊಮ್ಮೆ ದೇಶದ ಗಮನ ಸೆಳೆದಿದ್ದಾರೆ.

ನಿರ್ದೇಶಕ ಸ್ಥಾನಗಳೂ ಅಂತಿಮ: ಪಕ್ಷದ ಕಾರ್ಯಕರ್ತರಿಗೆ ನೀಡಬೇಕಿರುವ ನಿಗಮ ಮಂಡಳಿಗಳ ನಿರ್ದೇಶಕ ಸ್ಥಾನಗಳಿಗೂ ಹೆಸರುಗಳು ಬಹುತೇಕ ಅಂತಿಮಗೊಂಡಿವೆ. ಆದರೆ ಕೆಲವೊಂದಷ್ಟು ಜಾತಿ ನಿಗಮ ಮಂಡಳಿಗಳಿಗೆ ಇತರ ಜಾತಿಯವರನ್ನು ಸದಸ್ಯರನ್ನಾಗಿ ಮಾಡಲಾಗಿದೆ. ಈ ರೀತಿ ಮಾಡುವುದು ಸರಿಯಲ್ಲ ಎನ್ನುವ ಅಭಿಪ್ರಾಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೊರಹಾಕಿದ್ದು, ಇದಕ್ಕೆ ಹೈಕಮಾಂಡ್ ಒಪ್ಪಿಗೆ ನೀಡಿದ್ದರಿಂದ, ನಾಮನಿರ್ದೇಶನ ಪಟ್ಟಿಯನ್ನು ಮಾರ್ಪಾಟು ಮಾಡಲು ತೀರ್ಮಾನಿಸಲಾಗಿದೆ. ಬೆಂಗಳೂರಿಗೆ ವಾಪಸಾದ ಬಳಿಕ ಸಿಎಂ, ಡಿಸಿಎಂ ಮತ್ತೊಂದು ಸುತ್ತಿನ ಸಭೆ ನಡೆಸಿ ಬದಲಾವಣೆಗೊಂಡ ಪಟ್ಟಿಯನ್ನು ಸುರ್ಜೇವಾಲ ಅವರ ಗಮನಕ್ಕೆ ತಂದು ಘೋಷಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರಧಾನಿಯಾಗಿ 4078 ದಿನಗಳ ಆಡಳಿತ ನೆಹರೂ ಬಳಿಕದ ಸುದೀರ್ಘಾವಧಿ ಸೇವೆ

ಇಂದಿರಾ ದಾಖಲೆ ಮುರಿದ ಮೋದಿ

ದೆಹಲಿ: ಮಾಜಿ ಪ್ರಧಾನಿ ಇಂದಿರಾ ಗಾಂಧಿ ದಾಖಲೆ ಮುರಿದಿರುವ ನರೇಂದ್ರ ಮೋದಿ, ಅತಿ ಹೆಚ್ಚು ಕಾಲ ಪ್ರಧಾನಿಯಾಗಿ ಸೇವೆ ಸಲ್ಲಿಸಿದ ಭಾರತದ ಎರಡನೇ ಪ್ರಧಾನಿ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಪ್ರಧಾನಿಯಾಗಿ 4,078 ದಿನಗಳನ್ನು ಪೂರ್ಣಗೊಳಿಸಿದ್ದಾರೆ. ಈ ಹಿಂದೆ 1966ರ ಜನವರಿ 24ರಿಂದ 1977ರ ಮಾರ್ಚ್ 24ರವರೆಗೆ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ ಅವರು 4,077 ದಿನಗಳ ಕಾಲ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದ್ದರು.

ಅಂದ ಹಾಗೆ ದೇಶದ ದೀರ್ಘಾವಧಿಯ ಪ್ರಧಾನಿ ಎಂಬ ದಾಖಲೆ, ದೇಶದ ಮೊದಲ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರೂ ಅವರ ಹೆಸರಲ್ಲಿದೆ. 1947ರ ಆಗಸ್ಟ್ 15ರಿಂದ 1964ರ ಮೇ 27ರ ವರೆಗೆ 16 ವರ್ಷ 286 ದಿನಗಳ ಕಾಲ ಜವಾಹರಲಾಲ್ ನೆಹರೂ ಪ್ರಧಾನಿಯಾಗಿ ಕಾರ್ಯ ನಿರ್ವಹಿಸಿದ್ದರು. ಸತತ ಮೂರನೇ ಬಾರಿ ಪ್ರಧಾನಿಯಾಗಿ ಆಯ್ಕೆಯಾಗುವ ಮೂಲಕ ಈಗಾಗಲೇ ನೆಹರೂ ದಾಖಲೆಯನ್ನು ಮೋದಿ ಸರಿಗಟ್ಟಿದ್ದರು.

2001ರಲ್ಲಿ ಗುಜರಾತ್ ಸಿಎಂ ಆಗಿ ಆಯ್ಕೆಯಾಗಿದ್ದ ಮೋದಿ, 2014ರಲ್ಲಿ ಮೊದಲ ಬಾರಿಗೆ ದೇಶದ ಪ್ರಧಾನಿಯಾಗಿ ಆಯ್ಕೆಯಾಗಿದ್ದರು.

- ಮೋದಿ ಅವರು ಮೇ 26, 2014 ರಂದು ಮೊದಲ ಬಾರಿಗೆ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದರು
- ಇಲ್ಲಿಯವರೆಗೆ ಒಟ್ಟು 11 ವರ್ಷ 60 ದಿನಗಳು ಅಧಿಕಾರದಲ್ಲಿ ಸೇವೆ ಸಲ್ಲಿಸಿದ್ದಾರೆ.

ಸ್ವಾತಂತ್ರ್ಯ ನಂತರ ಜನಿಸಿದ ಮೊದಲ ಪ್ರಧಾನಿ ಎನಿಸಿರುವ ಮೋದಿ, ಅತಿ ಹೆಚ್ಚು ಕಾಲ ಕಾರ್ಯನಿರ್ವಹಿಸಿದ ಕಾಂಗ್ರೆಸ್ಸೇತರ ಪ್ರಧಾನಿಯೂ ಆಗಿದ್ದಾರೆ. ಎರಡು ಸಲ ಅವಧಿ ಪೂರ್ಣಗೊಳಿಸಿದ ಏಕಮಾತ್ರ, ಕಾಂಗ್ರೆಸ್ಸೇತರ ನಾಯಕ ಕೂಡ ಹೌದು. ದೇಶದ ಎಲ್ಲ ಪ್ರಧಾನಿ ಹಾಗೂ ಸಿಎಂಗಳ ಪೈಕಿ ಸತತ ಆರು ಬಾರಿ ಚುನಾವಣೆಗಳಲ್ಲಿ ಗೆಲುವು ದಾಖಲಿಸಿದ ಏಕೈಕ ನಾಯಕ ಎಂಬ ಹೆಗ್ಗಳಿ ಕೆಯೂ ಮೋದಿಗೆ ಸಲ್ಲುತ್ತದೆ. 2002, 2007 ಹಾಗೂ 2012ರ ಗುಜರಾತ್ ವಿಧಾನಸಭಾ ಚುನಾವಣೆ ಮತ್ತು 2014, 2019 ಹಾಗೂ 2014ರ ಲೋಕಸಭಾ ಚುನಾವಣೆಗಳಲ್ಲಿ ಗೆಲುವು ಸಾಧಿಸಿದ್ದರು.

ಎಫ್‌ಐಆರ್‌ಗೆ ಅನುಮತಿ ಕಡ್ಡಾಯ

ಬೆಂಗಳೂರು: ಭಾರತೀಯ ನ್ಯಾಯ ಸಂಹಿತೆಯ ನಾಲ್ಕು ಕಾಯಿದೆಗಳಡಿ ಎಫ್‌ಐಆರ್ ದಾಖಲಿಸುವ ಮುನ್ನ ತನಿಖಾಧಿಕಾರಿಗಳು ಕಡ್ಡಾಯವಾಗಿ ಮೇಲಧಿಕಾರಿಗಳ ಅನುಮತಿ ಪಡೆಯುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ ಎಂ.ಎ. ಸಲೀಂ ಅವರು ಸುತ್ತೋಲೆ ಹೊರಡಿಸಿದ್ದಾರೆ.

ಬಿಎನ್‌ಎಸ್‌ನ 304, 103(2), 111 ಹಾಗೂ 113(ಅ) ಕಾಯಿದೆಯಡಿ ಪ್ರಕರಣ ದಾಖಲಿಸಿಕೊಳ್ಳುವ ಮುನ್ನ ಮೇಲಧಿಕಾರಿಗಳ ಅನುಮತಿ ಪಡೆಯು ವುದು ಕಡ್ಡಾಯವಾಗಿ ರಲಿದೆ. ಬಿಎನ್‌ಎಸ್ 304, 103(2) ಹಾಗೂ 111 ಕಾಯಿದೆಯಡಿ ಪ್ರಕರಣ ದಾಖಲಿಸಿ ಕೊಳ್ಳಲು ಜಿಲ್ಲಾ ಮಟ್ಟದಲ್ಲಿ ಎಸ್‌ಪಿ ಹಾಗೂ ಕಮಿಷನರೇಟ್ ವ್ಯಾಪ್ತಿ ಯಲ್ಲಿ ಡಿಸಿಪಿ ಹಂತದ ಅಧಿಕಾರಿಗಳಿಂದ ಲಿಖಿತ ಅನುಮತಿ ಪಡೆದಿರಬೇಕು. 113(ಬಿ) ಕಾಯ್ದೆಯಡಿ ಪ್ರಕ ರಣ ದಾಖಲಿಸಿಕೊಳ್ಳಲು ಜಿಲ್ಲಾಮಟ್ಟದಲ್ಲಿ ಎಸ್‌ಪಿ ಹಾಗೂ ಕಮೀಷನರೇಟ್ ವ್ಯಾಪ್ತಿ ಯಲ್ಲಿ ಡಿಸಿಪಿ ಯವರ ನ್ನೊಳಗೊಂಡಂತೆ ಮೇಲಧಿಕಾರಿ ಯಿಂದ ಲಿಖಿತ ಅನುಮತಿ ಪಡೆದಿರಬೇಕು.

ತುರ್ತು ಕಾರ್ಯಗಳ ನಿಮಿತ್ತ ಮೌಖಿಕವಾಗಿ ಆದೇಶ ಪಡೆದರೆ, 24 ಗಂಟೆಗಳೊಳಗೆ ಲಿಖಿತ ಅನು ಮತಿ ಪಡೆದಿರಬೇಕು. ಹಿರಿಯ ಪೊಲೀಸ್ ಅಧಿಕಾರಿಗಳು ಪರಿಶೀಲಿಸಿ ಅನುಮೋದನೆ ನೀಡಿದ ನಂತರವಷ್ಟೇ ಆ ಕಾಯಿದೆಗಳಡಿ ಎಫ್‌ಐಆರ್ ದಾಖಲಿಸಬೇಕು ಎಂದು ತಿಳಿಸಲಾಗಿದೆ.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ವಿರೋಧಿಸಿ ಸಂಸತ್ತಿನ ಆವರಣದಲ್ಲಿ ಇಂಡಿಯಾ ಕೂಟದ ಸಂಸದರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಯೂರಿಯಾ ಕೊರತೆ ಕೇಂದ್ರಕ್ಕೆ ಸಿಎಂ ಪತ್ರ

ಬೆಂಗಳೂರು: ರಾಜ್ಯದಲ್ಲಿ ಯೂರಿಯಾ ಗೊಬ್ಬರದ ಅಭಾವ ಸೃಷ್ಟಿಯಾಗಿರುವ ಹಿನ್ನೆಲೆಯಲ್ಲಿ ರೈತರು ಹತಾಶರಾಗಿದ್ದು, ಸಿಎಂ ಸಿದ್ದರಾಮಯ್ಯ ಕೇಂದ್ರ ಸಚಿವ ಜೆ.ಪಿ.ನಡ್ಡಾಗೆ ಪತ್ರ ಬರೆದು ರಾಜ್ಯಕ್ಕೆ ಹಂಚಿಕೆ ಯಾದ ರಸಗೊಬ್ಬರ ಪೂರೈಸುವಂತೆ ಮನವಿ ಮಾಡಿದ್ದಾರೆ.

ಕೇಂದ್ರ ಸರಕಾರವು 2025ರ ಖಾರಿಫ್ ಬೆಳೆಗೆ ರಾಜ್ಯಕ್ಕೆ 11,17,000 ಮೆಟ್ರಿಕ್ ಟನ್ ಯೂರಿಯಾ ಹಂಚಿಕೆ ಮಾಡಿದೆ. ಈವರೆಗೆ ಕೇವಲ 5,16,959 ಮೆಟ್ರಿಕ್ ಟನ್ ರಸಗೊಬ್ಬರ ಸರಬರಾಜು ಮಾಡಲಾಗಿದೆ. ಏಪ್ರಿಲ್ ತಿಂಗಳಿನಿಂದ ಜುಲೈವರೆಗೆ ರಾಜ್ಯಕ್ಕೆ 6,80,655 ಮೆಟ್ರಿಕ್ ಟನ್ ಯೂರಿಯಾದ ಅವಶ್ಯಕತೆ ಇದೆ. ಕೆಲ ರಸಗೊಬ್ಬರ ಕಂಪನಿಗಳು ಕೇಂದ್ರವು ಮಾಡಿದ ಹಂಚಿಕೆಯ ಪ್ರಕಾರ ಯೂರಿಯಾ ಗೊಬ್ಬರ ಪೂರೈಸಲು ಅಸಮರ್ಥತೆಯನ್ನು ವ್ಯಕ್ತಪಡಿಸಿವೆ ಎಂದು ಹೇಳಿದ್ದಾರೆ.

ಡಿಆರ್‌ಡಿಒ ಕ್ಷಿಪಣಿ ಪರೀಕ್ಷೆ ಯಶಸ್ವಿ

ದೆಹಲಿ: ಡ್ರೋನ್ ಮೂಲಕ ದಾಳಿ ನಡೆಸಬಹುದಾದ ನಿಖರ ನಿರ್ದೇಶಿತ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವು ಆಂಧ್ರ ಪ್ರದೇಶದ ಕರ್ನೂಲ್‌ನಲ್ಲಿ ಯಶಸ್ವಿಯಾಗಿ ಶುಕ್ರವಾರ ನಡೆಯಿತು. ಈ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಪ್ರತಿಕ್ರಿಯೆ ನೀಡಿರುವ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ನೇತೃತ್ವದಲ್ಲಿ ಯುಎಲ್‌ಪಿಜಿಎಂ-ವಿ3 ಕ್ಷಿಪಣಿ ಪರೀಕ್ಷೆ ಯಶಸ್ವಿಯಾಗಿ ನಡೆಯಿತು. ಇದರಿಂದ ರಕ್ಷಣಾ ವಲಯದಲ್ಲಿ ಭಾರತದ ಸಾಮರ್ಥ್ಯವು ಇಮ್ಮಡಿಗೊಂಡಿದೆ ಎಂದು ಹೇಳಿದರು.



ಪ್ರಜ್ವಲ್ ರೇವಣ್ಣಗೆ ಜಾಮೀನು ಇಲ್ಲ

ಬೆಂಗಳೂರು: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಹೊಳೆನರಸೀಪುರ ಟೌನ್ ಠಾಣೆಯಲ್ಲಿ ದಾಖಲಾಗಿದ್ದ ಅತ್ಯಾಚಾರ ಪ್ರಕರಣದ ಜಾಮೀನು ಅರ್ಜಿ ವಜಾಗೊಂಡಿದೆ. ಮನೆಗೆಲಸದ ಮಹಿಳೆ ಮೇಲಿನ ಅತ್ಯಾಚಾರ ಪ್ರಕರಣದ ಆರೋಪಿ ಪ್ರಜ್ವಲ್ ರೇವಣ್ಣ ಜಾಮೀನು ಕೋರಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಎರಡನೇ ಬಾರಿಗೆ ಅರ್ಜಿ ಸಲ್ಲಿಸಿದ್ದರು. ಹೈಕೋರ್ಟ್ ಸೂಚನೆ ಮೇರೆಗೆ ಜಾಮೀನು ಕೋರಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಮೊರೆ ಹೋಗಿದ್ದರು. ಅದರಂತೆ ವಿಚಾರಣೆ ನಡೆಸಿದ ನ್ಯಾಯಾಲಯ, ಅರ್ಜಿ ವಜಾಗೊಳಿಸಿದೆ.

5 ಹುಲಿ ಸಾವು ರಾಜ್ಯಕ್ಕೆ ನೋಟಿಸ್

ದೆಹಲಿ: ಚಾಮರಾಜನಗರದಲ್ಲಿ ವಿಷಪ್ರಾಶನದಿಂದ ಐದು ಹುಲಿಗಳ ಸಾವು ಪ್ರಕರಣ ಕುರಿತು ಪ್ರತಿಕ್ರಿಯಿಸುವಂತೆ ರಾಜ್ಯ ಸರಕಾರಕ್ಕೆ ಸುಪ್ರೀಂಕೋರ್ಟ್ ಸೂಚಿಸಿದೆ. ಅಲ್ಲದೇ, ವನ್ಯಜೀವಿ ಅಭಯಾರಣ್ಯಗಳಲ್ಲಿ ಸಿಬ್ಬಂದಿ ಕೊರತೆ ಬಗ್ಗೆ ಟೀಕೆ ವ್ಯಕ್ತಪಡಿಸಿದೆ. ಮಾನವ-ಪ್ರಾಣಿ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳುವಂತೆ ಕೇಂದ್ರಕ್ಕೆ ನಿರ್ದೇಶನ ನೀಡಿದೆ. ಅರಣ್ಯಾಧಿಕಾರಿಗಳು ಮತ್ತು ಅರಣ್ಯ ವೀಕ್ಷಕರ ಹುದ್ದೆಗಳಲ್ಲಿ ಶೇ.80ರಷ್ಟು ಖಾಲಿ ಇವೆ ಎಂದು ನ್ಯಾಯಾಲಯ ಬೇಸರ ವ್ಯಕ್ತಪಡಿಸಿದ್ದು, ಎಲ್ಲ ರಾಜ್ಯಗಳು ಸೇರಿ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಎಂದು ಸೂಚಿಸಿದೆ.

ಸಿಎಂ ವಿಶೇಷ ಕರ್ತವ್ಯಾಧಿಕಾರಿ ವಿರುದ್ಧ ಡಿಸಿಎಂ ವಿಶೇಷ ಕರ್ತವ್ಯಾಧಿಕಾರಿ ದೂರು

ಕರ್ನಾಟಕ ಭವನ ಅಧಿಕಾರಿಗಳ ಜಟಾಪಟಿ

ಬೆಂಗಳೂರು: ದೆಹಲಿ ಕರ್ನಾಟಕ ಭವನದಲ್ಲಿರುವ ಸಿಎಂ ಮತ್ತು ಡಿಸಿಎಂ ವಿಶೇಷ ಕರ್ತವ್ಯಾಧಿಕಾರಿಗಳ ನಡುವೆ ಜಟಾಪಟಿ ನಡೆದಿದ್ದು, ಈ ಕಾಳಗ ಇದೀಗ ಮುಖ್ಯ ಕಾರ್ಯದರ್ಶಿ ಅಂಗಳಕ್ಕೆ ಬಂದಿದೆ.

ಡಿಸಿಎಂ ವಿಶೇಷ ಕರ್ತವ್ಯಾಧಿಕಾರಿ ಎಚ್. ಆಂಜನೇಯ ಅವರು ಸಿಎಂ ವಿಶೇಷ ಕರ್ತವ್ಯಾಧಿಕಾರಿ ಹಾಗೂ ಸಹಾಯಕ ನಿವಾಸಿ ಆಯುಕ್ತರು ಮೋಹನ್ ಕುಮಾರ್ ವಿರುದ್ಧ ಕರ್ನಾಟಕ ಭವನ ನಿವಾಸಿ ಆಯುಕ್ತರಿಗೆ ದೂರು ನೀಡಿದ್ದಾರೆ. 'ಮೋಹನ್ ಕುಮಾರ್ ಅವರು ಬೂಟು ಕಳಚಿಕೊಂಡು ಹೊಡೆಯುತ್ತೇನೆ ಅಂತ ಸಿಬ್ಬಂದಿ ಎದುರಿಗೆ ತಮ್ಮ ಅಧಿಕಾರ ದರ್ಪ ತೋರಿಸಿ ಹೊಡೆಯಲು ಬಂದಿದ್ದಾರೆ' ಎಂದು ಆರೋಪಿಸಿ ಆಂಜನೇಯ ದೂರು ನೀಡಿದ್ದಾರೆ.



- ನನಗೇನಾದರೂ ಅಪಘಾತ ಆದರೆ ಮೋಹನ್ ಕುಮಾರ್ ಕಾರಣ
- ಸಿಎಸ್‌ಗೆ ದೂರು ಸಲ್ಲಿಸಿದ ಡಿಸಿಎಂ ವಿಶೇಷ ಕರ್ತವ್ಯಾಧಿಕಾರಿ

→ 4

ಕೇಂದ್ರ ಚುನಾವಣಾ ಆಯೋಗದಿಂದ ಮಹತ್ವದ ನಿರ್ಧಾರ

ದೇಶಾದ್ಯಂತ ಮತದಾರರ ಪಟ್ಟಿ ಪರಿಷ್ಕರಣೆ

ದೆಹಲಿ: ಮುಕ್ತ ಮತ್ತು ನ್ಯಾಯಯುತ ಚುನಾವಣೆ ನಡೆಸಲು ದೇಶಾದ್ಯಂತ ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆ ನಡೆಸಲು ಕೇಂದ್ರ ಚುನಾವಣಾ ಆಯೋಗ ನಿರ್ಧಾರ ಕೈಗೊಂಡಿದೆ.

ಮತದಾರರ ಪಟ್ಟಿಗಳಲ್ಲಿರುವ ಹೆಸರನ್ನು ಖಚಿತಪಡಿಸಿಕೊಳ್ಳಲು ತನ್ನ ಸಾಂವಿಧಾನಿಕ ಕರ್ತವ್ಯವನ್ನು ಪೂರೈಸಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಆಯೋಗ ತನ್ನ ನಿರ್ಧಾರವನ್ನು ಸಮರ್ಥಿಸಿಕೊಂಡಿದೆ. ದೇಶದ ಇತರ ಭಾಗಗಳಲ್ಲಿ ನಡೆಯಲಿರುವ ಪರಿಷ್ಕರಣೆಯ ವೇಳಾಪಟ್ಟಿಯನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು ಎಂದು ಆದೇಶದಲ್ಲಿ ತಿಳಿ ದೆ. ಬಿಹಾರ ಮತದಾರರ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಪ್ರತಿಪಕ್ಷ ಗಳು ಸಂಸತ್ತಿನಲ್ಲಿ 4 ದಿನಗಳಿಂದ ಭಾರೀ ಪ್ರತಿ ಭಟನೆ ನಡೆಸುತ್ತಿದ್ದು, ಈ ಸಂದರ್ಭದಲ್ಲೇ ಚುನಾವಣಾ ಆಯೋಗ ನಿರ್ಧಾರ ಕೈಗೊಂಡಿದೆ.

ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳನ್ನು ನಡೆಸಲು ಮತದಾರರ ಪಟ್ಟಿಯನ್ನು ಪರಿಷ್ಕರಿಸುವುದು ಬಹಳ ಮುಖ್ಯ. ಮತದಾರರ ಪಟ್ಟಿಗಳನ್ನು ಹೇಗೆ ರಚಿಸಲಾಗುತ್ತದೆ? ಯಾರನ್ನು ಸೇರಿಸಬಹುದು ಮತ್ತು ಪ್ರಕ್ರಿಯೆಯನ್ನು ಹೇಗೆ ನಡೆಸಬೇಕು ಎಂಬುದರ ನಿಯಮಗಳನ್ನು 1950 ರ ಜನತಾ ಪ್ರಾತಿನಿಧ್ಯ ಕಾಯ್ದೆ ಮತ್ತು 1960 ರ ಮತದಾರರ ನೋಂದಣಿ ನಿಯಮಗಳಲ್ಲಿ ವಿವರಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಿದೆ.

ಕಳೆದ 20 ವರ್ಷಗಳಲ್ಲಿ ಹೆಚ್ಚಿನ ಸಂಖ್ಯೆಯ ಸೇರ್ಪಡೆ ಮತ್ತು ಅಳಿಸುವಿಕೆಗಳಿಂದಾಗಿ ಮತದಾರರ ಪಟ್ಟಿಗಳಲ್ಲಿ ಅನೇಕ ಬದಲಾವಣೆಗಳಾಗಿವೆ. ನಗರೀಕರಣ ಮತ್ತು ಜನರು ಉದ್ಯೋಗಗಳು, ಶಿಕ್ಷಣ ಮತ್ತು ಇತರ ಕಾರಣಗಳಿಗಾಗಿ ಆಗಾಗ ಸ್ಥಳಾಂತರಗೊಳ್ಳುತ್ತಿರುವುದರಿಂದ ಮತದಾರರು ತಮ್ಮ ಹಳೆಯ ಸ್ಥಳದಿಂದ ತಮ್ಮ ಹೆಸರುಗಳನ್ನು ತೆಗೆಯದೇ ಹೊಸ ವಿಳಾಸದಲ್ಲಿ ನೋಂದಾಯಿಸಿಕೊಳ್ಳುವುದು ಸಾಮಾನ್ಯವಾಗಿದೆ. ಇದರಿಂದ ಮತದಾರರ ಪಟ್ಟಿಯಲ್ಲಿ ನಕಲಿಗೆ ಕಾರಣವಾಗುತ್ತದೆ. ಈ ಕಾರಣದಿಂದಾಗಿ ಪ್ರತಿಯೊಬ್ಬ ವ್ಯಕ್ತಿಯನ್ನು ಪಟ್ಟಿಗೆ ಸೇರಿಸುವ ಮೊದಲು ಸಂಪೂರ್ಣವಾಗಿ ಪರಿಶೀಲಿಸುವ ಅವಶ್ಯಕತೆಯಿದೆ ಎಂದು ಆಯೋಗ ತನ್ನ ವಿಶೇಷ ತೀವ್ರ ಪರಿಷ್ಕರಣೆ ನಿರ್ಧಾರವನ್ನು ಸಮರ್ಥಿಸಿದೆ.

ಅರ್ಹ ಯಾರನ್ನೂ ಹೊರಗಿಡುವುದಿಲ್ಲ

ಅರ್ಹ ನಾಗರಿಕರಾಗಿ ಅರ್ಹತೆ ಪಡೆದ ಯಾರನ್ನೂ ಮತದಾರರ ಪಟ್ಟಿಯಿಂದ ಹೊರಗಿಡುವುದಿಲ್ಲ. ಸಂವಿಧಾನದ 326 ನೇ ವಿಧಿಯ ಪ್ರಕಾರ ಅರ್ಹತಾ ದಿನಾಂಕದಂದು 18 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನ ಮತ್ತು ಯಾವುದೇ ಕಾನೂನಿನ ಅಡಿಯಲ್ಲಿ ಅನರ್ಹಗೊಳಿಸದ ಪ್ರತಿಯೊಬ್ಬ ಭಾರತೀಯ ನಾಗರಿಕನು ಮತದಾರರ ಪಟ್ಟಿಗೆ ಹೆಸರನ್ನು ಸೇರಿಸುವ ಹಕ್ಕನ್ನು ಹೊಂದಿರುತ್ತಾನೆ ಎಂದು ಆಯೋಗ ತಿಳಿಸಿದೆ.

- ಬಿಹಾರ ಮತದಾರರ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಪ್ರತಿಪಕ್ಷಗಳು ಸಂಸತ್ತಿನಲ್ಲಿ ಪ್ರತಿಭಟನೆ ನಡೆಸುತ್ತಿರುವ ಸಂದರ್ಭದಲ್ಲೇ ಆಯೋಗ ನಿರ್ಧಾರ
- ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳನ್ನು ನಡೆಸಲು ಮತದಾರರ ಪಟ್ಟಿ ಪರಿಷ್ಕರಿಸುವುದು ಬಹಳ ಮುಖ್ಯ ಎಂದ ಕೇಂದ್ರ ಚುನಾವಣಾ ಆಯೋಗ

ವಿರಾಮ
ಪ್ರತಿ ಭಾನುವಾರ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, **ಶ್ರೀ.ಧರ್ಮಪಾಲ ವರಪ್ಪಡೆ** ಇವರು ಕೆಳಗೆ ಷೆಡ್ಯೂಲ್‌ನಲ್ಲಿ ತಿಳಿಸಿರುವ ಸ್ಥಿರಾಸ್ತಿ ಸ್ವತ್ತಿಗೆ ಮಾಲೀಕರಾಗಿರುತ್ತಾರೆ ಮತ್ತು ಶ್ರೀ. ಕೆ. ಭೂಪತಿ ರವರನ್ನು ಪ್ರತಿನಿಧಿಸುವ ಇವರ ಜಿ.ಪಿ.ಎ. ಹೋಲ್ಡರ್ ಶ್ರೀ. ಜಿ.ಲೋಕ್‌ನಾಥ್ ಇವರು ಶ್ರೀ. ಸುನಿಲ್.ಟಿ. ಜಾರ್ಜ್‌ರವರ ಹೆಸರಿಗೆ ಬರೆದುಕೊಟ್ಟಿರುವ ಈ ಸ್ವತ್ತಿನ ಕ್ರಯ ಪತ್ರದ ದಿನಾಂಕ : 19–08–2009, ಈ ಸ್ವತ್ತು ಅತ್ತಿಬೆಲೆ, ಅನೇಕಲ್ ತಾಲೂಕಿನ ಉಪನೋಂದಣಿದಾರರ ಕಚೇರಿಯಲ್ಲಿ ನೋಂದಣಿಯಾಗಿರುವ ಮೂಲ ಅಸಲಿ ಮಾರಾಟ ಪತ್ರವನ್ನು ಕಳೆದುಕೊಂಡಿರುತ್ತಾರೆ. ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಾದರೂ ಸ್ವತ್ತಿನ ಮೇಲೆ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸು ಪ್ರಕಟವಾದ **ಏಳು ದಿನಗಳ** ಒಳಗಾಗಿ ಕೆಳಸಹಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿಯ ಹೀಲಲಿಗೆ ಗ್ರಾಮದ ಬಯೋ–ಸಾಫ್ಟ್ ಇಂಟರ್ನ್ಯಾಷನಲ್ ಸಿಟಿಯಲ್ಲಿರುವ ಸರ್ವೆ ಸಂಖ್ಯೆ 10/2, 10/3, 11 & 17/1 ರಲ್ಲಿರುವ ಸ್ಥಿರಾಸ್ತಿ ಸ್ವತ್ತಿನ ಬಿಯರಿಂಗ್ ಸೈಟ್ ನಂ.04, ಖಾತಾ ಸಂಖ್ಯೆ 777, ಸ್ವತ್ತಿನ ಸಂಖ್ಯೆ 223, ಪರಿವರ್ತನಾ ಆದೇಶ ಸಂಖ್ಯೆ **BDS/ALN SR (A) 203/2003-04**, ದಿನಾಂಕ 15.04.2004,ಇದರ ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 42 ಅಡಿ ಒಟ್ಟು 1260 ಚದರ ಅಡಿ ಸ್ವತ್ತಿಗೆ ಚಕ್ಕುಬಂದಿ:– ಪೂರ್ವಕ್ಕೆ: ಸೈಟ್ ಸಂಖ್ಯೆ 5, ಪಶ್ಚಿಮಕ್ಕೆ: ಸೈಟ್ ಸಂಖ್ಯೆ 3, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಖಾಸಗಿ ಆಸ್ತಿ.

ಎನ್ ಜಗದೀಶ್ ಕುಮಾರ್, ವಕೀಲರು
ನಂ.30/1, 2ನೇ ಮಹಡಿ, 7ನೇ ಕ್ರಾಸ್,
ಎನ್.ಆರ್.ಕಾಲೋನಿ ಬಸ್ ನಿಲ್ದಾಣದ ಹತ್ತಿರ,
ಹೋಟೆಲ್ ದ್ವಾರಕ ಎದುರು, ಬೆಂಗಳೂರು–560019.

IN THE COURT OF THE HON'BLE SMALL CAUSES COURT AT BANGALORE (SCCH-05)
SC. NO. 263 /2025
BETWEEN : THE STATE BANK OF INDIA
HESARAGHATTA 8TH MILE Shree Lakshmi Towers, No. 2 & 3, 1st Cross, Netajinagar, Chokkasandra, Bengaluru -560057 Represented by its Branch Manger Ritesh N Vaidhya ...PLAINTIFF
AND : MR. FAYAZULLA, ...DEFENDANT
SUMMONS TO DEFENDANT
BY WAY OF PAPER PUBLICATION
MR. FAYAZULLA, S/o. not known Aged about: Major #411, 2ND CROSS, 4TH MAIN, RAVINDRANAGAR, T DASARAHALLI, BANGALORE-560057
Ph : 9844011537
Whereas the Plaintiff has filed a suit Recovery of money instituted the present suit, for sum of Rs.1,70,194/- (Rupees One Lakh seventy Thousand One Hundred Ninety Four Only), and future interest at contractual rate together with other applicable expenses, charges from the date of NPA till closure of loan. Hence you are hereby summoned to appear before court, person or through a Pleader **on 2/9/25. at 11 A.M.** to answer the same failing which suit will be disposed of expartee.
Given under my hand and the seal of the court this day of 22/7/25
By Order of the Court
Sd/- Assistant Registrar
Court of Small Causes, Bangalore
Advocate for Plaintiff
J. SATHISH KUMAR Advocate
EWS. 16/2, 1st Cross, 2nd Main, 2nd Stage,
KHB (AD Halli), Basaveshwaranagar,
Bengaluru -79 Mob 9448448238
Email: gsnadvocates@yahoo.com

IN THE COURT OF THE HON'BLE SMALL CAUSES COURT AT BANGALORE (SCCH-05)
S.C. NO. 260 / 2025
BETWEEN : THE STATE BANK OF INDIA
Madhavanagar Branch, 32/1&2, "CRESCENT TOWERS' CRESCENT ROAD, HIGH GROUNDS, BANGALORE - 560001 Represented by its Branch Manager MR. Vijay Koushik B ...PLAINTIFF
AND : Mr. NAGARAJU, ...DEFENDANT
SUMMONS TO DEFENDANT
BY WAY OF PAPER PUBLICATION
Mr. NAGARAJU, S/o. REDDAPPA Aged about 36 years. NO 14, QUARTERS PALACE COMPOUND, ARAMANENAGAR, MALLESWARAM, BANGALORE-560028
Whereas the Plaintiff has filed a suit Recovery of money instituted the present suit, for sum of Rs.1,34,783/- (Rupees One Lakhs Thirty Four Thousand Seven Hundred Eighty Three Only), and future interest at contractual rate together with other applicable expenses, charges from the date of NPA till closure of loan. Hence you are hereby summoned to appear before court, person or through a Pleader **on 2/9/25. at 11 A.M.** to answer the same failing which suit will be disposed off exparte.
Given under my hand and the seal of the court this 22/7/25
By Order of the Court
Sd/- Assistant Registrar
Court of Small Causes, Bangalore
Advocate for Plaintiff
J. SATHISH KUMAR Advocate
EWS. 16/2, 1st Cross, 2nd Main, 2nd Stage,
KHB (AD Halli), Basaveshwaranagar,
Bengaluru -79 Mob 9448448238
Email: gsnadvocates@yahoo.com

IN THE COURT OF THE HON'BLE SMALL CAUSES COURT AT BANGALORE (SCCH-05)
S.C. NO. 261 / 2025
BETWEEN : THE STATE BANK OF INDIA
KUMARA PARK BRANCH (1626) NO.159, 1st MAIN ROAD, NEAR BHIMAS HOTEL, SHESHADRIPURAM, BANGALORE-560020 Represented by its Branch Manger, Lakshminarayana Meruga ...PLAINTIFF
AND : MR. BIKRAM PARAJULI ...DEFENDANT
SUMMONS TO DEFENDANT
BY WAY OF PAPER PUBLICATION
MR. BIKRAM PARAJULI, S/o. PARAJULI, Aged about: 36 years R/a. NO.128, 1ST MAIN ROAD, 2ND STAGE, OKALIPURAM, BANGALORE-560021 Ph: 7259360807
Whereas the Plaintiff has filed a suit Recovery of money instituted the present suit, for sum of Rs.1,46,378/ (Rupees One Lakhs Forty Six Thousand Three Hundred Seventy eight Only), and future interest at contractual rate together with other applicable expenses, charges from the date of NPA till closure of loan. Hence you are hereby summoned to appear before court, person or through a Pleader **on 2/9/25. at 11 A.M.** to answer the same failing which suit will be disposed off exparte.
Given under my hand and the seal of the court this day of 22/7/25
By Order of the Court
Sd/- Assistant Registrar
Court of Small Causes, Bangalore
Advocate for Plaintiff
J. SATHISH KUMAR Advocate
EWS. 16/2, 1st Cross, 2nd Main, 2nd Stage,
KHB (AD Halli), Basaveshwaranagar,
Bengaluru -79 Mob 9448448238
Email: gsnadvocates@yahoo.com

ಪ್ರಮಾಣ ಪತ್ರ

ದಿನಾಂಕ : 09–06–2025 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಕುಂಬಳಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಎಂ. ಕೃಷ್ಣಪ್ಪ ರವರ ಮಗನಾದ ಶ್ರೀ ಗೋವಿಂದರಾಜು ಕೆ. ಆದ ನಾನು ಈ ಪ್ರಮಾಣಪತ್ರದ ಮೂಲಕ ಪ್ರಮಾಣೀಕರಿಸುವುದೇನೆಂದರೆ, ಆದಾಗಿ, ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುತ್ತೇನೆ. ನಮಗೆ ದಿನಾಂಕ 05–03–2012ರಂದು ಶಿವ ನರ್ಸಿಂಗ್ ಹೋಂ ವಿಲ್ಸನ್ ಗಾರ್ಡನ್ ಬೆಂಗಳೂರು ಇಲ್ಲಿ HEMA LATHA G, ಎಂಬ ಹೆಣ್ಣು ಮಗು ಜನನವಾಗಿರುತ್ತದೆ, ಅದರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಜಯನಗರ ವಲಯ, ಬೆಂಗಳೂರು ಇಲ್ಲಿ ಜನನ ಮರಣ ನೋಂದಣಾಧಕಾರಿಗಳಲ್ಲಿ ನೋಂದಣಿ **HOM/B/**2012/00592/000–453, **Dt:**19–03–2012ರಂತೆ ಜನನ ಪ್ರಮಾಣಪತ್ರವನ್ನು ಪಡೆದಿರುತ್ತೇನೆ. ಸದರಿ ಜನನ ಪ್ರಮಾಣಪತ್ರದಲ್ಲಿ ಮಗುವಿನ ಹೆಸರು ಕಾಲಂನಲ್ಲಿ **G. HEMA PRIYA** ಎಂದು ನಮೂದು ಆಗಿರುತ್ತದೆ.
ಅದರೆ ಸದರಿ ನನ್ನ ಮಗಳ ಹೆಸರು **HEMA LATHA G.** ಸರಿಯಾಗಿರುತ್ತದೆ. ಆದ್ದರಿಂದ ಸದರಿ ನನ್ನ ಮಗಳ ಜನನ ಪ್ರಮಾಣ ಪತ್ರದಲ್ಲಿ ಮಗುವಿನ ಹೆಸರು ಕಾಲಂನಲ್ಲಿ ಮೇಲ್ಕಂಡಂತೆ ಸರಿಯಾಗಿ ನಮೂದು ಮಾಡಿಸುವ ಸಲುವಾಗಿ ಈ ಪ್ರಮಾಣಪತ್ರದ ಮೂಲಕ ಪ್ರಮಾಣೀಕರಿಸಿ, ಸಂಬಂಧಪಟ್ಟವರಿಗೆ ಹಾಜರುಪಡಿಸಿರುತ್ತೇನೆ. ಈ ಮೇಲ್ಕಂಡ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ಈ ಪ್ರಮಾಣಪತ್ರದ ಮೂಲಕ ನೋಟರಿ ಆರ್. ಜಯಶ್ರೀ ಬೆಂಗಳೂರು ಯವರ ಮುಂದೆ ಪ್ರಮಾಣೀಕರಿಸುತ್ತೇನೆ.
ಸ್ಥಳ:ಬೆಂಗಳೂರು ದಿನಾಂಕ;09–06–2025

ಅಧಿಕಾರಿಗಳಿಗೆ ಸುರ್ಜೇವಾಲ ಕರೆ ಮಾಡಿದ್ದ ಬಗ್ಗೆ ಕೆಲ ಸಚಿವರಿಗೆ ಮಾಹಿತಿ

ಅಧಿಕಾರಿಗಳ ಜತೆ ಸುರ್ಜೇವಾಲ ಸಭೆ: ಕಾಂಗ್ರೆಸ್‌ನಲ್ಲೇ ವಿರೋಧ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೆಲದಿನಗಳ ಹಿಂದೆ ಶಾಸಕರು, ಸಚಿವರೊಂದಿಗೆ ಪ್ರತ್ಯೇಕ ಸಭೆ ನಡೆಸಿದ್ದಕ್ಕೆ 'ಅಸಮಾಧಾನ'ಕ್ಕೆ ಕಾರಣವಾಗಿದ್ದ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಸರಕಾರಿ ಅಧಿಕಾರಿಗಳೊಂದಿಗೂ ಸಭೆ ನಡೆಸಿದ್ದಾರೆ ಎನ್ನುವುದು ಇದೀಗ ಭಾರಿ ವಿವಾದಕ್ಕೆ ಕಾರಣವಾಗಿದೆ.

ಸುರ್ಜೇವಾಲ ಅವರ ನಡೆಯನ್ನು ಸಹಕಾರ ಸಚಿವ ಕೆ.ಎನ್.ರಾಜಣ್ಣ ವಿರೋಧಿಸಿದ್ದು, ಬೆಂಗಳೂರು ಭೇಟಿಯ ಸಂದರ್ಭದಲ್ಲಿ ಸರಕಾರಿ ಅಧಿಕಾರಿಗಳ ಜತೆಗೆ ಸುರ್ಜೇವಾಲ ಸಭೆ ನಡೆಸಲು ಮುಂದಾಗಿದ್ದರು ಎನ್ನುವುದಾದರೆ ಅದು ಸಂವಿಧಾನಬಾಹಿರ ಕೃತ್ಯ ಎಂದಿದ್ದಾರೆ. ಬೆಂಗಳೂರು ಪ್ರವಾಸದ ವೇಳೆ ಅವರು ತಂಗಿದ್ದ ಖಾಸಗಿ ಹೋಟೆಲ್‌ನಲ್ಲಿ ಅಧಿಕಾರಿಗಳ ಸಭೆ ಕೂಡ ನಡೆಸಿದ್ದಾರೆ ಎನ್ನಲಾಗಿದ್ದು, ವ್ಯಾಪಕ ಟೀಕೆಗೆ ಗುರಿಯಾಗಿದೆ.

ಸುರ್ಜೇವಾಲಾ ಅಧಿಕಾರಿಗಳಿಗೆ ಕರೆ ಮಾಡಿದ್ದ ಬಗ್ಗೆ ಕೆಲ ಸಚಿವರಿಗೆ ಮಾಹಿತಿ ದೊರೆತಿದೆ. ಮಾಹಿತಿ ಸಿಕ್ಕ ತಕ್ಷಣ ಕೆಲ ಸಚಿವರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸುರ್ಜೇವಾಲಾಗೆ ಸಚಿವರ, ಶಾಸಕರ ಸಭೆ ಮಾಡುವ ಅವಕಾಶ ಇದೆ. ಆದರೆ, ಸರಕಾರದ ಅಧಿಕಾರಿಗಳನ್ನು ಭೇಟಿ ಮಾಡಿ ಯಾವುದೇ ಸೂಚನೆ ನೀಡುವುದು ಸರಿಯಲ್ಲ. ನಿಯಮಗಳ ಪ್ರಕಾರ ಕೂಡ ಸುರ್ಜೇವಾಲಾ ಅಧಿಕಾರಿಗಳ ಸಭೆ ನಡೆಸುವುದು ತಪ್ಪು. ನಿಯಮಬದ್ಧವಾಗಿ ಸುರ್ಜೇವಾಲಾಗೆ ಅಧಿಕಾರಿಗಳ ಸಭೆ ನಡೆಸಲು ಅವಕಾಶವೇ ಇಲ್ಲ. ಕಾನೂನು ಕೂಡ ಹೀಗೆ ಸಭೆ ನಡೆಸಲು ಅವಕಾಶ ನೀಡುವುದಿಲ್ಲ ಎಂದು ಕೆಲ ಸಚಿವರು ಖಡಕ್ ಆಗಿಯೇ ಸಂದೇಶ ರವಾನಿಸಿದ್ದಾರೆ ಎನ್ನಲಾಗಿದೆ.

ಸುರ್ಜೇವಾಲ ಅವರ ಈ ನಡೆಯನ್ನು ರಾಜಣ್ಣ ಮಾತ್ರವಲ್ಲದೇ ಹಲವು ಕಾಂಗ್ರೆಸ್ ಶಾಸಕರು ವಿರೋಧಿಸಿದ್ದಾರೆ. ಪಕ್ಷದ ಉಸ್ತುವಾರಿ ನಾಯಕರಾದ ಸುರ್ಜೇವಾಲ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರು, ಶಾಸಕರ ಜತೆ ಸಭೆ ನಡೆಸುವ ಎಲ್ಲಾ ಅಧಿಕಾರವನ್ನು ಹೊಂದಿದ್ದಾರೆ. ಆದರೆ ಅಧಿಕಾರಿಗಳ ಜೊತೆ ಸಭೆ ನಡೆಸಿದರೆ ಅದು ಸಂವಿಧಾನ ವಿರೋಧಿ ನಡವಳಿಕೆ ಎಂದು ಬಹಿರಂಗವಾಗಿ ಅಸಮಾಧಾನ ಹೊರಹಾಕಿದ್ದಾರೆ. ಸುರ್ಜೇವಾಲ ಅವರ ನಡವಳಿಕೆಗೆ ಪಕ್ಷದ ಬಹಳಷ್ಟು ಮಂದಿ ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಿದ್ದು, ಇಲಾಖಾವಾರು ಮಾಹಿತಿ ಕಲೆ ಹಾಕುವ ಮೂಲಕ ಸುರ್ಜೇವಾಲ ಸೂಪರ್ ಸಿಎಂ ಅಂತೆ ವರ್ತಿಸುತ್ತಿದ್ದಾರೆ ಹಾಗೂ ಹೈಕಮಾಂಡ್‌ಗೆ ಸಚಿವರ ಮೇಲೆ ನಂಬಿಕೆ ಇಲ್ಲ ಎಂಬ ಸಂದೇಶ ರವಾನೆ ಮಾಡುತ್ತಿದೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ ಎಂದು ಶಾಸಕರು, ಸಚಿವರು ಕಿಡಿಕಾರುತ್ತಿದ್ದಾರೆ.

ಶಾಸಕರನ್ನು ಕರೆದು ಸುರ್ಜೇವಾಲಾ ಮೀಟಿಂಗ್ ಮಾಡಬಹುದು. ಆದರೆ ಸರಕಾರಿ ಅಧಿಕಾರಿಗಳನ್ನು ಕರೆದು ಮಾತನಾಡುತ್ತಾರೆ ಎಂದರೆ ಅದು ಸಂವಿಧಾನಬಾಹಿರ ಕೃತ್ಯ ಆಗುತ್ತದೆ. ಅಧಿಕಾರಿಗಳನ್ನು ಕರೆದು ಅವರ ಜೊತೆಗೆ ಚರ್ಚೆ ಮಾಡುವುದು ಸಂವಿಧಾನ ವಿರೋಧಿ ಕೆಲಸ.
-ಕೆ.ಎನ್.ರಾಜಣ್ಣ
ಸಹಕಾರಿ ಸಚಿವ

ಅಧಿಕಾರ ಕೊಟ್ಟವರು ಯಾರು?: ಜೆಡಿಎಸ್

ಇನ್ನು ಈ ವಿಷಯವನ್ನು ಜೆಡಿಎಸ್ ಪ್ರಶ್ನಿಸಿದ್ದು, ರಾಜ್ಯ ಸರಕಾರದ ಕಾರ್ಯದರ್ಶಿಗಳು ಮತ್ತು ಅಧಿಕಾರಿಗಳೊಂದಿಗೆ ರಾಜ್ಯ ಉಸ್ತುವಾರಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲ ಅವರಿಗೆ ಸಭೆ ನಡೆಸುವ ಅಧಿಕಾರ ಕೊಟ್ಟವರು ಯಾರು? ಅಧಿಕಾರಿಗಳೊಂದಿಗೆ ಸಭೆ ನಡೆಸುವುದು ಸಂವಿಧಾನ ವಿರೋಧಿ ಕೃತ್ಯ ಎಂದು ಆಕ್ರೋಶ ವ್ಯಕ್ತಪಡಿಸಿದೆ. ವಸೂಲಿವಾಲಾ ಸುರ್ಜೇವಾಲ ಅವರು ಕೇವಲ ರಾಜ್ಯ ಉಸ್ತುವಾರಿಯೋ? ಕರ್ನಾಟಕದ ಮುಖ್ಯಮಂತ್ರಿಯೋ? ಇಷ್ಟು ದಿನ ಕಾಂಗ್ರೆಸ್ ಶಾಸಕರು ಹಾಗೂ ಸಚಿವರೊಂದಿಗೆ ಸಭೆ ನಡೆಸುತ್ತಿದ್ದ ರಣದೀಪ್ ಸುರ್ಜೇವಾಲ, ಈಗ ಸೂಪರ್ ಸಿಎಂ ರೀತಿ ಸರಕಾರದ ಕಾರ್ಯದರ್ಶಿಗಳು ಮತ್ತು ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದಾರೆ ಎಂದು ಆರೋಪಿಸಿದೆ.

ಅತ್ಯಾಚಾರ ಪ್ರಕರಣದಲ್ಲಿ 2ನೇ ಬಾರಿ ಜಾಮೀನು ಅರ್ಜಿ ವಜಾ

ಆರೋಪಿ ಪ್ರಜ್ವಲ್ ರೇವಣ್ಣಗೆ ಮತ್ತೆ ನಿರಾಸೆ

ಬೆಂಗಳೂರು: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಹೊಳೆನರಸೀಪುರ ಟೌನ್ ಠಾಣೆಯಲ್ಲಿ ದಾಖಲಾಗಿದ್ದ ಅತ್ಯಾಚಾರ ಪ್ರಕರಣದ ಜಾಮೀನು ಅರ್ಜಿ ವಜಾಗೊಂಡಿದೆ.

ಮನೆಗೆಲಸದ ಮಹಿಳೆ ಮೇಲಿನ ಅತ್ಯಾಚಾರ ಪ್ರಕರಣದ ಆರೋಪಿ ಪ್ರಜ್ವಲ್ ರೇವಣ್ಣ ಜಾಮೀನು ಕೋರಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಎರಡನೇ ಬಾರಿಗೆ ಅರ್ಜಿ ಸಲ್ಲಿಸಿದ್ದರು. ಹೈಕೋರ್ಟ್ ಸೂಚನೆ ಮೇರೆಗೆ ಜಾಮೀನು ಕೋರಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಮೊರೆ ಹೋಗಿದ್ದರು. ಅದರಂತೆ ವಿಚಾರಣೆ ನಡೆಸಿದ ನ್ಯಾಯಾಲಯ, ಅರ್ಜಿ ವಜಾಗೊಳಿಸಿದೆ.

ಈ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣ ಜಾಮೀನು ಕೋರಿ ಮೊದಲ ಬಾರಿಗೆ ಸಲ್ಲಿಸಿದ್ದ ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ವಜಾಗೊಳಿಸಿತ್ತು. ಬಳಿಕ ಪ್ರಜ್ವಲ್ ಜಾಮೀನು ಕೋರಿ ಕಳೆದ ಜೂನ್‌ನಲ್ಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ವಿಚಾರಣಾಧೀನ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವಂತೆ ಸೂಚಿಸಿತ್ತು. ಅದರಂತೆ ಪ್ರಜ್ವಲ್ ಜಾಮೀನು ಕೋರಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಎರಡನೇ ಬಾರಿಗೆ ಅರ್ಜಿ ಸಲ್ಲಿಸಿದ್ದರು.

ಪ್ರಕರಣದ ಹಿನ್ನೆಲೆ

ಹಾಸನ ಲೋಕಸಭಾ ಕ್ಷೇತ್ರದ ಸಂಸದನಾಗಿದ್ದ ಪ್ರಜ್ವಲ್ ರೇವಣ್ಣ ತಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯನ್ನು ಬೆದರಿಸಿ ಲೈಂಗಿಕವಾಗಿ ಬಳಸಿಕೊಂಡಿದ್ದರು. ಲೋಕಸಭಾ ಚುನಾವಣೆ ವೇಳೆ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರದ್ದೆನ್ನಲಾದ ಸುಮಾರು 15 ಸಾವಿರಕ್ಕೂ ಅಧಿಕ ಫೋಟೋ ಮತ್ತು ವಿಡಿಯೋಗಳು ಪೆನ್‌ಡ್ರೈವ್ ಮೂಲಕ ಸಾರ್ವಜನಿಕರಿಗೆ ಹಂಚಿಕೆ ಆಗಿದ್ದವು. ಸಾವಿರಾರು ಮಹಿಳೆಯರನ್ನು ಪ್ರಜ್ವಲ್ ರೇವಣ್ಣ ಲೈಂಗಿಕವಾಗಿ ಬಳಸಿಕೊಂಡಿದ್ದಾನೆ ಎಂಬ ಆರೋಪ ಕೇಳಿಬಂದಿತ್ತು. ಆದರೆ, ಇದರ ಬಗ್ಗೆ ತನಿಖೆ ನಡೆಸಲು ಸರ್ಕಾರ ಮುಂದಾದಾಗ ಸಂತ್ರಸ್ತ ಮಹಿಳೆಯರಿಗೆ ಭದ್ರತೆ ನೀಡುವ ಭರವಸೆ ನೀಡಿತ್ತು. ಈ ವೇಳೆ ಸಂತ್ರಸ್ತ ಮಹಿಳೆ ಹೊಳೆನರಸೀಪುರದಲ್ಲಿ ಅತ್ಯಾಚಾರ ಪ್ರಕರಣ ದಾಖಲಿಸಿದ್ದರು. ಈ ಪ್ರಕರಣದ ಪ್ರಮುಖ ಆರೋಪಿ ಆಗಿದ್ದ ಪ್ರಜ್ವಲ್ ರೇವಣ್ಣ ವಿದೇಶಕ್ಕೆ ಹೋಗಿ ತಲೆ ಮರೆಸಿಕೊಂಡಿದ್ದರು. ಈ ಪ್ರಕರಣದ ಸ್ವರೂಪ ಗಂಭೀರ ಆಗುತ್ತಿದ್ದಂತೆ ವಿದೇಶದಿಂದ ಮರಳಿ ಬಂದ ಪ್ರಜ್ವಲ್ ರೇವಣ್ಣನನ್ನು ಪೊಲೀಸರು ವಶಕ್ಕೆ ಪಡೆದು ಜೈಲಿಗಟ್ಟಿದ್ದರು. ಇನ್ನು ಹಲವು ಬಾರಿ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಲಾಗಿದ್ದುಮ ಪೊಲೀಸರು ಚಾರ್ಜ್‌ಶೀಟ್ ಕೂಡ ಸಲ್ಲಿಕೆ ಮಾಡಿದ್ದಾರೆ.

ಅಪ್ಪು ಕಪ್ ಪಂದ್ಯಾವಳಿಗೆ ಚಾಲನೆ

ಬೆಂಗಳೂರು: ದಿವಂಗತ ನಟ ಪುನೀತ್ ರಾಜ್‌ಕುಮಾರ್ ಅವರ ಸ್ಮರಣಾರ್ಥ ಆಯೋಜಿಸಲಾಗುವ ಅಪ್ಪುಕಪ್ ಸೀಸನ್ 3ರ ಬ್ಯಾಡ್ಮಿಂಟನ್ ಪಂದ್ಯಾವಳಿಗೆ ನಗರದ ಕಿಂಗ್ಸ್ ಕ್ಲಬ್‌ನಲ್ಲಿ ಚಾಲನೆ ನೀಡಲಾಯಿತು.

ಮೂರು ದಿನಗಳ ಕಾಲ ನಡೆಯುವ ಈ ಪಂದ್ಯಾವಳಿಗೆ ದೀಪ ಬೆಳಗುವ ಮೂಲಕ ಉದ್ಘಾಟನೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ನಟ ಅನಿರುದ್ಧ್, ನಿರ್ದೇಶಕ ಇಂದ್ರಜಿತ್ ಲಂಕೇಶ್ ಸೇರಿದಂತೆ ವಿವಿಧ ತಂಡದ ನಾಯಕರು ಮತ್ತು ಮಾಲೀಕರು, ಪಂದ್ಯಾವಳಿಯ ನಿರ್ದೇಶಕ ಉಮೇಶ್, ಆಯೋಜಕ ಚೇತನ್ ಸೂರ್ಯ ಉಪಸ್ಥಿತರಿದ್ದರು.

ಪಂದ್ಯದ ಆರಂಭವು ಜೇಮ್ಸ್ ವಾರಿಯರ್ಸ್ ಮತ್ತು ಯುವರತ್ನ ಚಾಂಪಿಯನ್ಸ್ ತಂಡದ ನಡುವೆ ನಡೆಯಿತು. ಈ ಪಂದ್ಯದ ನಾಲ್ಕು ವಿಭಾಗಗಳಲ್ಲಿ ನಿರ್ದೇಶಕ ಇಂದ್ರಜಿತ್ ಲಂಕೇಶ್ ಮುಂದಾಳತ್ವ ವಹಿಸಿರುವ ಯುವರತ್ನ ಚಾಂಪಿಯನ್ಸ್ ತಂಡ ಮೂರರಲ್ಲಿ ಮುಂಚೂಣಿಯಲ್ಲಿದ್ದು ಗೆಲುವನ್ನು ಸಾಧಿಸಿದೆ. ಯುವರತ್ನ ಚಾಂಪಿಯನ್ಸ್ ತಂಡದಲ್ಲಿ ಮಹೇಶ್, ಸಿದ್ದೇಶ್, ಮಂಜು, ಸ್ಫೂರ್ತಿ, ಕಾರ್ತಿಕ್ (ನಿರ್ದೇಶಕ), ರಂಜನ್, ಅರ್ಪಿತಾ ಗೌಡ, ರಿತ್ವಿ ಜಗದೀಶ್, ಹರಿ, ಲಾವಣ್ಯ, ಮತ್ತು ಐಶ್ವರ್ಯ ಸೇರಿದಂತೆ ಇನ್ನೂ ಹಲವಾರು ಕಲಾವಿದರಿದ್ದರು. ನಂತರದಲ್ಲಿ ವೀರ ಕನ್ನಡಿಗ ಬುಲ್ಸ್, ಗಂಧದ ಗುಡಿ ವಾರಿಯರ್, ಜಾಕಿ ರೈಡರ್ಸ್, ಜೇಮ್ಸ್ ವಾರಿಯರ್ಸ್, ಅರಸು ಹಂಟರ್ಸ್, ಬಿಂದಾಸ್ ರಾಯಲ್ ಚಾಲೆಂಜರ್ಸ್, ದೊಡ್ಮನೆ ಡ್ರಾಗನ್ಸ್, ಪೈಥಾನ್ಸ್, ಮೌರ್ಯ ವೀವರ್ಸ್ ತಂಡಗಳ ನಡುವೆ ಸ್ಪರ್ಧೆಯು ಬಿರುಸಾಗಿ ಜರುಗಿತು.

ಮಾನ್ಯ ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್ ನಂ.479/2025
ಅರ್ಜಿದಾರರು: ಶ್ರೀ ಬಿ.ಎಸ್. ರಮೇಶ್ ಬಿನ್ ಲೇಟ್ ಸೀನಯ್ಯ ಸುಮಾರು 44 ವರ್ಷ ವಾಸ: ಬೊಮ್ಮನಹಳ್ಳಿ ಗ್ರಾಮ, ಅಚ್ಚಲು ಅಂಚೆ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಹಾಲಿ ಬೆಂಗಳೂರು ದಕ್ಷಿಣ ಜಿಲ್ಲೆ.
ವಿರುದ್ಧ
ಪ್ರತಿ ಅರ್ಜಿದಾರರು: ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ ಮತ್ತು ಇನ್ನೊಬ್ಬರು.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಾಯಿಯವರಾದ ಶ್ರೀಮತಿ ಕಾಳಮ್ಮ ಕೋಂ ಲೇಟ್ ಸೀನಯ್ಯ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಬೊಮ್ಮನಹಳ್ಳಿ ಗ್ರಾಮದಲ್ಲಿ ದಿನಾಂಕ 08.05.1999 ರಂದು ಮರಣ ಹೊಂದಿರುತ್ತಾರೆ, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಹಾಗೂ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 01/09/2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2025ರ ಜುಲೈ 14ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೆದಾರರು,
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಸುರೇಶ್ ಕುಮಾರ್.ಎಸ್
ವಕೀಲರು, ಕನಕಪುರ
ದಿನಾಂಕ: 14/7/2025
ಸ್ಥಳ: ಕನಕಪುರ

ಮಾನ್ಯ ಗೌರವಾನ್ವಿತ 1ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ.404/2025
ಅರ್ಜಿದಾರರು: 1. ಶ್ರೀಮತಿ. ನಿಂಗಮ್ಮ ಕೋಂ ಲೇಟ್ ಮಾದೇಗೌಡ ವಯಸ್ಸು 77 ವರ್ಷ ವಾಸ: ಹಣಕಡಬೂರು ಗ್ರಾಮ, ಹೊಸದುರ್ಗ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಇತರರು
ವಿರುದ್ಧ
ಎದುರುದಾರರು: 1. ತಹಶೀಲ್ದಾರ್‌ರವರು ಜನನ & ಮರಣ ನೋಂದಣಾಧಿಕಾರಿಗಳು ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. 2. ಕಂದಾಯ ಗ್ರಾಮ ಲೆಕ್ಕಾಧಿಕಾರಿ, ಹಣ–ಕಡಬೂರು ಗ್ರಾಮ. ಹೊಸದುರ್ಗ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.
ಪತ್ರಿಕಾ ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಗಂಡ ಮತ್ತು 2, 3 & 10ನೇ ಅರ್ಜಿದಾರರ ತಂದೆ ಹಾಗೂ 4 & 7ನೇ ಅರ್ಜಿದಾರರ ಮಾವ, 5, 6, 8 & 9ನೇ ಅರ್ಜಿದಾರರ ತಾತನಾದ ಶ್ರೀ ಮಾದೇಗೌಡ ಬಿನ್ ಲೇಟ್ ಮಾದೇಗೌಡರವರು ಇದೇ ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಹಣಕಡಬೂರು ಗ್ರಾಮದಲ್ಲಿ ದಿನಾಂಕ: 15.02.1999 ರಂದು ಮರಣಹೊಂದಿದ್ದು, ಇವರ ಮರಣ ಪ್ರಮಾಣಪತ್ರವನ್ನು ನೀಡುವಂತೆ ಎದುರುದಾರ–ರಿಗೆ ನಿರ್ದೇಶನ ನೀಡುವಂತೆ ಹಾಗೂ ನ್ಯಾಯಾಲಯದ ಆದೇಶವನ್ನು ಕೋರಿ ಈ ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 30.08.2025 ರ ಬೆಳಿಗ್ಗೆ ಸರಿಯಾಗಿ 11–00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.
ದಿನಾಂಕ: 25–07–2024 ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಶಿವಶಂಕರ ಟಿ.ಎನ್., ವಕೀಲರು
ಸ್ಥಳ : ಕನಕಪುರ
ದಿನಾಂಕ: 24/07/2025

ಮೊದಲ ಸುತ್ತಿನ ಅಣಕು ಸೀಟು ಹಂಚಿಕೆ ಫಲಿತಾಂಶ ಪ್ರಕಟ: ಕೆಇಎ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಸೇರಿ ಇತರ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಮೊದಲ ಸುತ್ತಿನ ಸೀಟು ಹಂಚಿಕೆಯ ಅಣಕು ಫಲಿ ತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಶುಕ್ರವಾರ ಪ್ರಕಟಿಸಿದೆ.

ಅಭ್ಯರ್ಥಿಗಳು ಕೆಇಎ ವೆಬ್‌ಸೈಟ್‌ನಲ್ಲಿ ಬಿಟ್ಟಿರುವ ಲಿಂಕ್ ಮೂಲಕ ಫಲಿತಾಂಶ ತಿಳಿದುಕೊಳ್ಳಬಹುದಾಗಿದೆ. ಅರ್ಹ ಅಭ್ಯರ್ಥಿಗಳು ದಾಖಲಿಸಿರುವ ಇಚ್ಛೆ/ಆಯ್ಕೆಗಳನ್ನು ಪರಿಗಣಿಸಿ, ಮೆರಿಟ್ ಮತ್ತು ರೋಸ್ಟರ್ ಪದ್ಧತಿ ಅನುಸಾರ ಮೊದಲನೇ ಸುತ್ತಿನ ಅಣಕು ಸೀಟು ಹಂಚಿಕೆ ಫಲಿತಾಂಶವನ್ನು ಪ್ರಕಟಿಸಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ವೈದ್ಯಕೀಯ, ದಂತ ವೈದ್ಯಕೀಯ, ಎಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶುವೈದ್ಯಕೀಯ, ಬಿಎಸ್‌ಸಿ (ನರ್ಸಿಂಗ್), ಬಿ–ಫಾರ್ಮಾ, ಫಾರ್ಮಾ–ಡಿ, ಬಿಪಿಟಿ, ಬಿಪಿಒ, ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಜು.22ರ ಸಂಜೆ 6ಗಂಟೆವರೆಗೆ ದಾಖಲಿಸಿರುವ ಇಚ್ಛೆ/ಆಯ್ಕೆಗಳನ್ನು (ಆಪ್ಷನ್) ಅಣಕು ಸೀಟು ಹಂಚಿಕೆ ಫಲಿತಾಂಶಕ್ಕೆ ಪರಿಗಣಿಸಲಾಗಿದೆ ಎಂದಿದ್ದಾರೆ.

ಆಯುರ್ವೇದ, ಯುನಾನಿ, ನ್ಯಾಚುರೋಪತಿ, ಯೋಗಾ ಮತ್ತು ಹೋಮಿಯೋಪತಿ ಕೋರ್ಸ್‌ಗಳಿಗೆ ಸೀಟು ಮ್ಯಾಟ್ರಿಕ್ಸ್ ಇನ್ನೂ ಬಂದಿರದ ಕಾರಣ ಅಣಕು ಸೀಟು ಹಂಚಿಕೆಗೆ ಈ ಕೋರ್ಸ್‌ಗಳನ್ನು ಪರಿಗಣಿಸಿಲ್ಲ. ಸೀಟು ಮ್ಯಾಟ್ರಿಕ್ಸ್ ಬಂದ ನಂತರ ಇಚ್ಛೆ/ಆಯ್ಕೆಗಳನ್ನು ದಾಖಲಿಸಲು ಅವಕಾಶ ನೀಡಲಾಗುವುದು ಎಂದು ವಿವರಿಸಿದ್ದಾರೆ.

ಅಣಕು ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆ ನಂತರ ಮೊದಲನೇ ಸುತ್ತಿನ ಸೀಟು ಹಂಚಿಕೆಗೆ ಇಚ್ಛೆ/ಆಯ್ಕೆಗಳನ್ನು ಹೊಸದಾಗಿ ಸೇರಿಸಲು, ಬೇಡದಿದ್ದಲ್ಲಿ ಅಳಿಸಲು, ಕ್ರಮಾಂಕ ಬದಲಿಸಲು, ಮಾರ್ಪಡಿಸಲು ಜು.26ರಿಂದ–29ರ ಸಂಜೆ 5ಗಂಟೆವರೆಗೆ ಅವಕಾಶ ನೀಡಲಾಗಿದೆ. ಆ.1ರಂದು ಬೆಳಗ್ಗೆ 11ಕ್ಕೆ ಮೊದಲ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶ ಪ್ರಕಟಿಸಲಾಗುವುದು. ಆ.2ರಂದು ಮಧ್ಯಾಹ್ನ 2ಕ್ಕೆ ಅಂತಿಮ ಫಲಿತಾಂಶ ಪ್ರಕಟಿಸಲಾಗುವುದು. ಬಳಿಕ ಛಾಯ್ಸ್ ಆಯ್ಕೆಗೆ ಆ.4ರಿಂದ 7ರವರೆಗೆ ಅವಕಾಶ ನೀಡಲಾಗುವುದು ಎಂದು ಹೇಳಿದ್ದಾರೆ.

ಇದುವರೆಗೂ ಇಚ್ಛೆ/ಆಯ್ಕೆಗಳನ್ನು ದಾಖಲಿಸದೇ ಇರುವ ಅಭ್ಯರ್ಥಿಗಳು ಕೂಡ ಇಷ್ಟವಿದ್ದಲ್ಲಿ 750 ರು.. ಪಾವತಿಸಿ, ಆಪ್ಷನ್ಸ್ ದಾಖಲಿಸಬಹುದು. ಮೊದಲ ಸುತ್ತಿಗೆ ನಿಗದಿಪಡಿಸಿರುವ ಕೊನೆ ದಿನಾಂಕದ ನಂತರ ಮುಂದಿನ ಯಾವುದೇ ಸುತ್ತಿಗೆ ಇಚ್ಛೆ–ಆಯ್ಕೆಗಳನ್ನು ದಾಖಲಿಸಲು ಅವಕಾಶ ಇರುವುದಿಲ್ಲ. ಹೀಗಾಗಿ ಕೋರ್ಸ್, ಶುಲ್ಕ ಇತ್ಯಾದಿ ನೋಡಿಕೊಂಡು, ಈಗಲೇ ತಮಗೆ ಇಷ್ಟವಾದ ಕಾಲೇಜು/ಕೋರ್ಸ್‌ಗಳಿಗೆ ಇಚ್ಛೆ/ಆಯ್ಕೆಗಳನ್ನು ದಾಖಲಿಸಬಹುದು ಎಂದಿದ್ದಾರೆ.

ಸಿಎಸ್ ಶಾಲಿನಿ ರಜನೀಶ್ ವಿರುದ್ಧ ಅವಹೇಳನಕಾರಿ ಹೇಳಿಕೆ

ರವಿಕುಮಾರ್‌ಗೆ ರಿಲೀಫ್

ಬೆಂಗಳೂರು: ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದ ಆರೋಪ ಹೊತ್ತಿದ್ದ ಎಂಎಲ್‌ಸಿ ಎನ್. ರವಿಕುಮಾರ್ ವಿರುದ್ಧದ ಪ್ರಕರಣಕ್ಕೆ ಹೈಕೋರ್ಟ್ ಶುಕ್ರವಾರ ತಡೆ ನೀಡಿದೆ.

ಶಾಲಿನಿ ರಜನೀಶ್ ದೂರು ನೀಡಿಲ್ಲ, 3ನೇ ವ್ಯಕ್ತಿ ದೂರು ಆಧರಿಸಿ ಪ್ರಕರಣ ದಾಖಲಿಸಲಾಗಿದೆ. ಹೇಳಿಕೆಯಲ್ಲಿ ಅಪರಾಧದ ಅಂಶಗಳಿಲ್ಲವೆಂದು ಎಂಎಲ್‌ಸಿ ರವಿಕುಮಾರ್ ಪರ ಹಿರಿಯ ವಕೀಲ ಅರುಣ್ ಶ್ಯಾಮ್ ವಾದ ಮಂಡಿಸಿದರು. ರಾಜಕೀಯ ಪಕ್ಷದ ಮೂಲಕ ಎಫ್‌ಐಆರ್ ದಾಖಲಾಗದಿದ್ದಾಗ ಸಾಮಾಜಿಕ ಕಾರ್ಯಕರ್ತರ ಮೂಲಕ ಎಫ್‌ಐಆರ್ ದಾಖಲಿಸಲು ಮುಂದಾದರು. ಹೀಗಾಗಿ ಪ್ರಸ್ತುತ ಪ್ರಕರಣವು ರಾಜಕೀಯ ಪ್ರೇರಿತವಾಗಿದೆ ಮತ್ತು ಕಾನೂನು ಪ್ರಕ್ರಿಯೆಯ ದುರುಪಯೋಗವಾಗಿದೆ ಎಂದು ಎಂಎಲ್‌ಸಿ ರವಿಕುಮಾರ್ ಪರ ಹಿರಿಯ ವಕೀಲ ಅರುಣ್ ಶ್ಯಾಮ್ ವಾದ ಮಾಡಿ ದರು. ವಾದ–ಪ್ರತಿವಾದ ಆಲಿಸಿದ ನ್ಯಾ.ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಪೀಠ ಎಫ್‌ಐಆರ್ ಮತ್ತು ಹೆಚ್ಚಿನ ತನಿಖೆಗೆ ತಡೆ ನೀಡಿದೆ.

ಸ್ಮಗ್ಲರ್ ಪರಾರಿ: 3.5 ಕೆಜಿ ಚಿನ್ನ ಪತ್ತೆ

ಬೆಂಗಳೂರು: ದುಬೈ ಪ್ಯಾಸೆಂಜರ್ ಬ್ಯಾಗ್‌ಗೆ 3.5 ಕೆಜಿ ಚಿನ್ನದ ಬಿಸ್ಕೆಟ್ ಅಂಟಿಸಿ, ಗೋಲ್ಡ್ ಸ್ಮಗ್ಲರ್ ಪರಾರಿಯಾಗಿರುವ ಘಟನೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆದಿದೆ.

ಬ್ಯಾಗ್ ಮಾಲೀಕ ತನ್ನ ಟ್ರ್ಯಾಲಿಯನ್ನು ಎಳೆದುಕೊಂಡು ಹೋಗುವಾಗ ಚಿನ್ನದ ಬ್ಯಾಗ್ ಕೆಳಗೆ ಬಿದ್ದಿದೆ. ಇದನ್ನು ಗಮನಿಸಿದ ಮಾಲೀಕ ಚಿನ್ನದ ಬ್ಯಾಗ್ ಅನ್ನು ಡಿಆರ್‌ಐ ಅಧಿಕಾರಿಗಳ ಬಳಿ ತೆಗೆದುಕೊಂಡು ಹೋಗಿದ್ದಾನೆ. ಅಧಿಕಾರಿಗಳು ಬ್ಯಾಗ್ ಪರಿಶೀಲನೆ ಮಾಡಿದಾಗ 3.5 ಕೆಜಿ ಚಿನ್ನದ ಬಿಸ್ಕೆಟ್ ಇರುವುದು ಪತ್ತೆಯಾಗಿದೆ. ಅಧಿಕಾರಿಗಳು ಮಾಲೀಕನ ವಿಚಾರಣೆ ನಡೆಸಿದಾಗ ಚಿನ್ನಕ್ಕೂ ಆತನಿಗೂ ಯಾವುದೇ ಸಂಬಂಧ ಇಲ್ಲ ಎನ್ನುವುದು ಬಹಿರಂಗ ಆಗಿದೆ. ಬಳಿಕ ಸ್ಮಗ್ಲರ್, ಪ್ರಯಾಣಿಕನ ಬ್ಯಾಗ್‌ಗೆ ಚಿನ್ನ ಅಂಟಿಸಿ ಪರಾರಿಯಾಗಿರುವುದು ತಿಳಿದು ಬಂದಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

sagility™
ಸಜಿಲಿಟಿ ಇಂಡಿಯಾ ಲಿಮಿಟೆಡ್
(ಹಿಂದೆ ಸಜಿಲಿಟಿ ಇಂಡಿಯಾ ಪ್ರೈವೇಟ್ ಲಿಮಿಟೆಡ್)
ಕಾರ್ಪೊರೇಟ್ ಐಡೆಂಟಿಫಿಕೇಷನ್ ಸಂಖ್ಯೆ: L72900KA2021PLC150054
ನೋಂದಾಯಿತ ಕಚೇರಿ – ನಂ. 23 ಮತ್ತು 24, ಎಎಂಆರ್ ಟೆಕ್ ಪಾರ್ಕ್, ಬಿಲ್ಡಿಂಗ್ 2ಎ, ಮೊದಲ ಮಹಡಿ, ಹೊಂಗಸಂದ್ರ ಗ್ರಾಮ, ಹೊಸೂರು ರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು – 560068, ಕರ್ನಾಟಕ, ಭಾರತ
ದೂರವಾಣಿ ಸಂಖ್ಯೆ: 080–71251500, **ವೆಬ್‌ಸೈಟ್:** https://sagilityhealth.com/

ಸಜಿಲಿಟಿ ಇಂಡಿಯಾ ಲಿಮಿಟೆಡ್‌ನ 4ನೇ ವಾರ್ಷಿಕ ಪ್ರಧಾನ ಸಭೆಯ (ವೀಡಿಯೊ ಕಾನ್ಫರೆನ್ಸ್ ಮೂಲಕ) ಮಾಹಿತಿ

ಸಜಿಲಿಟಿ ಇಂಡಿಯಾ ಲಿಮಿಟೆಡ್‌ನ 4ನೇ ವಾರ್ಷಿಕ ಪ್ರಧಾನ ಸಭೆ ("ಎಜಿಎಂ") ಗುರುವಾರ, ಆಗಸ್ಟ್ 21, 2025 ರಂದು ಸಂಜೆ 4:00 ಗಂಟೆಗೆ ಐಎಸ್‌ಟಿ (IST) ಸಮಯದಲ್ಲಿ ವೀಡಿಯೊ ಕಾನ್ಫರೆನ್ಸಿಂಗ್ ("VC") ಮೂಲಕ ನಡೆಯಲಿದ್ದು, ಕಂಪನಿಗಳ ಕಾಯಿದೆ, 2013 ("ಕಾಯಿದೆ"), ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ("MCA") ಹೊರಡಿಸಿದ ಸುತ್ತೋಲೆ ಸಂಖ್ಯೆಗಳು 14/2020 (ಏಪ್ರಿಲ್ 8, 2020), 17/2020 (ಏಪ್ರಿಲ್ 13, 2020), ಮತ್ತು 09/2024 (ಸೆಪ್ಟೆಂಬರ್ 19, 2024), ಹಾಗೂ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ("ಸೆಬಿ") ಹೊರಡಿಸಿದ ಸುತ್ತೋಲೆ ಸಂಖ್ಯೆಗಳು SEBI/HO/CFD/CFD-PoD-2/P/CIR/2024/133 ದಿನಾಂಕ ಅಕ್ಟೋಬರ್ 3, 2024) ಮತ್ತು SEBI/HO/CFD/PoD2/CIR/ P/0155 ದಿನಾಂಕ ನವೆಂಬರ್ 11, 2024 ಮತ್ತು ಇತರ ಅನ್ವಯವಾಗುವ ಎಲ್ಲಾ ಕಾನೂನುಗಳ ಅನುಸಾರವಾಗಿ, ಎಜಿಎಂ ಸೂಚನೆಯಲ್ಲಿ ನಿಗದಿಪಡಿಸಿದ ವ್ಯವಹಾರಗಳನ್ನು ನಡೆಸಲು ಈ ಸಭೆಯನ್ನು ಕರೆಯಲಾಗಿದೆ.

ಎಜಿಎಂ (AGM) ಸೂಚನೆ, ಇ-ವೋಟಿಂಗ್ ಕಾರ್ಯವಿಧಾನ ಮತ್ತು ಸೂಚನೆಗಳು ಹಾಗೂ ಹಣಕಾಸು ವರ್ಷ 2024-25ರ ವಾರ್ಷಿಕ ವರದಿಯ ಎಲೆಕ್ಟ್ರಾನಿಕ್ ಪ್ರತಿಗಳನ್ನು ಕಂಪನಿ/ ಡಿಪಾಸಿಟರಿಗಳಲ್ಲಿ ತಮ್ಮ ಇ-ಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರುವ ಎಲ್ಲಾ ಸದಸ್ಯರಿಗೆ ಮಾತ್ರ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಕಳುಹಿಸಲಾಗುತ್ತದೆ. ತಮ್ಮ ಇ-ಮೇಲ್ ವಿಳಾಸವನ್ನು ನೋಂದಾಯಿಸದ ಸದಸ್ಯರಿಗೆ, ಎಲೆಕ್ಟ್ರಾನಿಕ್ ರೂಪದಲ್ಲಿ ಹೊಂದಿರುವ ಷೇರುಗಳಿಗೆ ಸಂಬಂಧಿಸಿದಂತೆ, ತಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್ (DP) ಮೂಲಕ ಅದನ್ನು ನೋಂದಾಯಿಸಲು ವಿನಂತಿಸಲಾಗಿದೆ.

ಎಜಿಎಂ (AGM) ಸೂಚನೆ ಮತ್ತು ಹಣಕಾಸು ವರ್ಷ 2024-25ರ ವಾರ್ಷಿಕ ವರದಿಯು ಕಂಪನಿಯ ವೆಬ್‌ಸೈಟ್ https://sagilityhealth.com/investor-relations/ ನಲ್ಲಿ, ಸ್ಟಾಕ್ ಎಕ್ಸ್‌ಚೇಂಜ್‌ಗಳಾದ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್‌ಗಳಾದ www.bseindia.com ಮತ್ತು www.nseindia.com ನಲ್ಲಿ, ಹಾಗೂ ಎಂಯುಎಫ್ ಜಿ ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ವೆಬ್‌ಸೈಟ್ https://instavote.linkintime.co.in/ ನಲ್ಲಿ ಲಭ್ಯವಿರುತ್ತದೆ. ವಾರ್ಷಿಕ ವರದಿಯ ಸಂಪೂರ್ಣ ವಿವರಗಳು ಲಭ್ಯವಿರುವ ವೆಬ್-ಲಿಂಕ್, ನಿಖರವಾದ ಮಾರ್ಗ ಸಹಿತ, ಡೆಪಾಸಿಟರಿಗಳಲ್ಲಿ ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸದ ಸದಸ್ಯರಿಗೆ ಪತ್ರ ದ ಮೂಲಕ ಕಳುಹಿಸಲಾಗುತ್ತದೆ.

ಕಂಪನಿಯು ತನ್ನ ಸದಸ್ಯರಿಗೆ ಎಜಿಎಂ ಸೂಚನೆಯಲ್ಲಿ ನಿಗದಿಪಡಿಸಿದ ವ್ಯವಹಾರಗಳ ಮೇಲೆ ಮತ ಚಲಾಯಿಸಲು ರಿಮೋಟ್ ಇ-ವೋಟಿಂಗ್ ಮತ್ತು ಎಜಿಎಂನಲ್ಲಿ ಇ-ವೋಟಿಂಗ್ ಎರಡರ ಮೂಲಕವೂ ಎಲೆಕ್ಟ್ರಾನಿಕ್ ಸೌಲಭ್ಯವನ್ನು ಒದಗಿಸುತ್ತಿದೆ. ವೀಡಿಯೊ ಕಾನ್ಫರೆನ್ಸಿಂಗ್ ಮೂಲಕ ಭಾಗವಹಿಸುವಿಕೆ ಮತ್ತು ಇ-ವೋಟಿಂಗ್ ಪ್ರಕ್ರಿಯೆಯ ಕುರಿತು ವಿವರವಾದ ಸೂಚನೆಗಳನ್ನು, (ತಮ್ಮ ಇ-ಮೇಲ್ ವಿಳಾಸಗಳನ್ನು ಡಿಪಾಸಿಟರಿಗಳೊಂದಿಗೆ ನೋಂದಾಯಿಸದ ಸದಸ್ಯರು ರಿಮೋಟ್ ಇ-ವೋಟಿಂಗ್ ಅಥವಾ ಎಜಿಎಂನಲ್ಲಿ ಇ-ವೋಟಿಂಗ್ ಮೂಲಕ ಹೇಗೆ ಮತ ಚಲಾಯಿಸಬಹುದು ಎಂಬುದೂ ಸೇರಿದಂತೆ), ಎಜಿಎಂ ಸೂಚನೆಯ ಭಾಗವಾಗಿ ಒದಗಿಸಲಾಗಿದೆ.

ರಿಮೋಟ್ ಇ-ವೋಟಿಂಗ್ ಮೂಲಕ ಎಜಿಎಂಗೆ ಮೊದಲು ಮತ ಚಲಾಯಿಸಿದ ಸದಸ್ಯರು ವೀಡಿಯೊ ಕಾನ್ಫರೆನ್ಸಿಂಗ್ (VC) ಮೂಲಕ ಎಜಿಎಂಗೆ ಹಾಜರಾಗಬಹುದು, ಆದರೆ ಮತ್ತೆ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ. ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸದ ಮತ್ತು ವೀಡಿಯೊ ಕಾನ್ಫರೆನ್ಸಿಂಗ್ (VC) ಮೂಲಕ ಎಜಿಎಂನಲ್ಲಿ ಹಾಜರಿರುವ ಸದಸ್ಯರು ಎಜಿಎಂನಲ್ಲಿ ಇ-ವೋಟಿಂಗ್ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ.

ಯಾವುದೇ ಪ್ರಶ್ನೆಗಳಿದ್ದಲ್ಲಿ, ಷೇರುದಾರರಿಗಾಗಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳು (FAQs) ಮತ್ತು ಸದಸ್ಯರಿಗಾಗಿ ಇ-ವೋಟಿಂಗ್ ಬಳಕೆದಾರರ ಕೈಪಿಡಿಯನ್ನು https://instavote.linkintime.co.in (ಸಹಾಯ ವಿಭಾಗದ ಅಡಿಯಲ್ಲಿ) ಡೌನ್‌ಲೋಡ್ ವಿಭಾಗದಲ್ಲಿ ನೀವು ಉಲ್ಲೇಖಿಸಬಹುದು. ಪರ್ಯಾಯವಾಗಿ, ನೀವು investorservices@sagilityhealth.com ಅಥವಾ enotices@in.mpms.mufg.com ಗೆ ಇ-ಮೇಲ್ ಮಾಡಬಹುದು, ಅಥವಾ ಎಂಯುಎಫ್‌ಜಿ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಶ್ರೀ ರಾಜೀವ್ ರಂಜನ್, ಅಸಿಸ್ಟೆಂಟ್ ವೈಸ್ ಪ್ರೆಸಿಡೆಂಟ್ - ಇ-ವೋಟಿಂಗ್ ತಂಡ, ಅಥವಾ ಶ್ರೀ ಆಶಿಶ್ ಉಪಾಧ್ಯಾಯ, ಅಸೋಸಿಯೇಟ್ – ಇ-ವೋಟಿಂಗ್ ತಂಡ, ಇವರನ್ನು +91 22 4918 6000 ಸಂಖ್ಯೆಗೆ ಸಂಪರ್ಕಿಸಬಹುದು. ಅವರ ವಿಳಾಸ: C-101, ಎಂಬಿಸಿ 247, ಎಲ್.ಬಿ.ಎಸ್. ಮಾರ್ಗ್, ವಿಕ್ರೋಲಿ (ಪಶ್ಚಿಮ), ಮುಂಬೈ – 400 083. ಸದಸ್ಯರು ಸೂಚನೆಯಲ್ಲಿ ನೀಡಲಾದ ಎಲ್ಲಾ ಟಿಪ್ಪಣಿಗಳನ್ನು, ವಿಶೇಷವಾಗಿ ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸುವ ವಿಧಾನವನ್ನು ಎಚ್ಚರಿಕೆಯಿಂದ ಓದಲು ವಿನಂತಿಸಲಾಗಿದೆ.

ಸಜಿಲಿಟಿ ಇಂಡಿಯಾ ಲಿಮಿಟೆಡ್ ಪರವಾಗಿ
(ಈ ಹಿಂದೆ ಸಜಿಲಿಟಿ ಇಂಡಿಯಾ ಪ್ರೈವೇಟ್ ಲಿಮಿಟೆಡ್)
ಸಹಿ/-
ಸತೀಶ್‌ಕುಮಾರ್ ಸಖರಾಯಪಟ್ಟಣ ಸೀತಾರಾಮಯ್ಯ
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣೆ ಅಧಿಕಾರಿ
ಎಂ.ನಂ. ಎ16008
ಜುಲೈ 26, 2025
ಬೆಂಗಳೂರು
CONCEPT

standard chartered **ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್**

ರೀಟೈಲ್ ಕಲೆಕ್ಷನ್ಸ್, 2ನೇ ಮಹಡಿ, ಈಸ್ಟ್ ವಿಂಗ್ ರಹೇಜ ಟವರ್ಸ್, ಎಂ ಜಿ ರಸ್ತೆ, ಬೆಂಗಳೂರು –560001. ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ : ಶ್ರೀ ರಾಜೇಶ್ ಕುಮಾರ್ ಬತಿನ, ದೂ: 9985799277, ಇ–ಮೇಲ್: RajeshKumar.Bathina@sc.com
ಅಥವಾ ಶ್ರೀ ಅರ್ವಿಂದರ್ ಸಿಂಗ್ , ಮೊ. ಸಂ. 9873382900, ಇ–ಮೇಲ್: arvinder.singh@sc.com ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ / ಪೂರಕ ಭದ್ರತಾದಾರರ ವೆಬ್‌ಸೈಟ್‌ನಲ್ಲಿ ನೀಡಲಾದ ಲಿಂಕ್ https://www.sc.com/in/important-information/public-sale-notice-of-properties-under-the-possession-of-bank/ ನ್ನು ಆಧಾರ ಮಾಡಿಕೊಳ್ಳಿ.

ಇ–ಹರಾಜು ಸೂಚನೆ

ಸರ್ಫೇಸಿ ಕಾಯಿದೆ 2002 ಪ್ರೊವಿಜನ್ ನಿಯಮ 6(2) ಮತ್ತು 8(6) ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಅಡಿ ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟ ಸೂಚನೆ.
ಕೆಳಸಹಿದಾರರು ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್‌ನ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆ್ಯಕ್ಟ್, 2002 (ಕಾಯಿದೆ) ಮತ್ತು ಸೆಕ್ಷನ್ 13(12)ರ ನಿಯಮ 3ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ಕಾಯಿದೆ, 2002 (ನಿಯಮಗಳು)ರ ಅಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 16.01.2023ರಂದು ತಗಾದೆ ಸೂಚನೆಯನ್ನು ನೀಡಿದ್ದು, ಈ ಕೆಳಗಿನ ಸಾಲಗಾರರಾದ ಮೆ॥ ಸೇಮ್ಸ್ಕೆ ಕನ್‌ಫೆಕ್ಷನರೀಸ್ (ಇಂಡಿಯ) ಪ್ರೈವೇಟ್ ಲಿಮಿಟೆಡ್ ಇದರ ನಿರ್ದೇಶಕರು ಮತ್ತು ಜಾಮೀನುದಾರರಾದ ಶ್ರೀ ರೂಪೇಶ್ ಕೆಡಿಯ ಮತ್ತು ಶ್ರೀಮತಿ ಕಾನುಪ್ರಿಯ ಕೆಡಿಯ ಇವರುಗಳು ಒಡಿ ಖಾತಾ ಸಂ. 45505400694 ಮತ್ತು ಎನರ್ಜೆನ್ಸಿ ಕ್ರೆಡಿಟ್ ಲೈನ್ ಫೆಸಿಲಿಟಿ ಸಂ. 4522681 ರಲ್ಲಿ ಇವರು ನೋಟೀಸಿನಲ್ಲಿ ತಿಳಿಸಿರುವ ಮೊತ್ತ 31.12.2022ರವರೆಗೆ ರೂ.5,85,47,102.24 (ಐದು ಕೋಟಿ ಎಂಭತ್ತೈದು ಲಕ್ಷ ನಲವತ್ತೇಳು ಸಾವಿರದ ನೂರ ಎರಡು ರೂಪಾಯಿಗಳು ಹಾಗು ಪೈಸೆ ಇಪ್ಪತ್ತನಾಲ್ಕು ಮಾತ್ರ) ವನ್ನು ಹಾಗೂ ಸೇರಿರುವ ಬಡ್ಡಿ/ವಸೂಲಾಗದ ಬಡ್ಡಿಯನ್ನು ಒಪ್ಪಂದದ ದರದಲ್ಲಿ ಒಟ್ಟಾಗಿ ಹಣ ಸಂಪೂರ್ಣ ಮರುಪಾವತಿಯಾಗುವವರೆಗೆ ಮೂಲವೆಚ್ಚಗಳು, ಖರ್ಚುಗಳು, ದರಗಳು ಇತ್ಯಾದಿಯನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗೆ ಮರುಪಾವತಿಸುವಂತೆ ಸೂಚನೆ ನೀಡಲಾಗಿತ್ತು.
ಸಾಲಗಾರ/ನಿರ್ದೇಶಕರು/ಜಾಮೀನುದಾರರು/ಅಡಮಾನದಾರರು ಹಣವನ್ನು ಮರುಪಾವತಿಸಲು ವಿಫಲರಾದುದರಿಂದ ಸಾಲಗಾರ/ ನಿರ್ದೇಶಕರು/ ಜಾಮೀನುದಾರರು/ಅಡಮಾನದಾರರು ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡುವುದೇನೆಂದರೆ, ಕೆಳಸಹಿದಾರರು ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್‌ನ ಅಧಿಕೃತ ಅಧಿಕಾರಿಯಾಗಿ ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್‌ರೀಟೈಲ್ ಕಲೆಕ್ಷನ್ಸ್, 2ನೇ ಮಹಡಿ, ಈಸ್ಟ್ ವಿಂಗ್ ರಹೇಜ ಟವರ್ಸ್, ಎಂ ಜಿ ರಸ್ತೆ, ಬೆಂಗಳೂರು –560001 ಬ್ಯಾಂಕ್‌ಗೆ ಅಡಮಾನ ಮಾಡಿರುವ ಈ ಕೆಳಗಿನ ಸ್ಥಿರಾಸ್ತಿಯನ್ನು ಸಾಲಗಾರ/ನಿರ್ದೇಶಕರು/ಜಾಮೀನುದಾರರು/ಅಡಮಾನದಾರರು ಇವರಿಂದ ಬರಬೇಕಾದ ಬಾಕಿ ಹಣಕ್ಕಾಗಿ ಭದ್ರತಾ ಸ್ವತ್ತುಗಳನ್ನು 16.04.2025 ರಂದು ಸೆಕ್ಷನ್ 13 ರ ಸಬ್ ಸೆಕ್ಷನ್ (4)ರ ಕಾಯಿದೆ ನಿಯಮ 8ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002 ರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಭೌತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ.
ಇದೀಗ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ಹೇಳಲಾಗುವ ಆಸ್ತಿಯ ಇ–ಹರಾಜು ಮೂಲಕ "ಎಲ್ಲಿ ಹೇಗಿದೆಯೋ ಹಾಗೆ", "ಎಲ್ಲಿ ಯಾವುದು ಇದೆಯೋ ಹಾಗಿನ ಆಧಾರದ ಮೇಲೆ", ಮಾರಾಟ ಮಾಡಲು ಇ–ಟೆಂಡರ್‌ಗಳನ್ನು ಆಹ್ವಾನಿಸಿದೆ.
ಸಾಲಗಾರರು, ಜಾಮೀನುದಾರರು ಮತ್ತು ಅಡಮಾನದಾರರಿಗೆ ಈ ಮೂಲಕ ಸೂಚನೆ ನೀಡುವುದೇನೆಂದರೆ ನಿಯಮ 8(6) ಮತ್ತು 9(1)ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರಂತೆ ಕೋಷ್ಠಕದಲ್ಲಿ ನಮೂದಿಸಿರುವ ಬಾಕಿ ಮೊತ್ತವನ್ನು ಈ ನೋಟೀಸ್ ನೀಡಿದ 15 ದಿನಗಳ ಒಳಗಾಗಿ ಪಾವತಿ ಮಾಡಬೇಕು, ತಪ್ಪಿದಲ್ಲಿ ಭದ್ರತಾ ಸ್ವತ್ತುಗಳ ಹರಾಜನ್ನು ನಡೆಸಲಾಗುವುದು.

ಸ್ಥಿರ ಆಸ್ತಿಯ ವಿವರ

ವಸ್ತು ಸಂಖ್ಯೆ 1:
ವಾಸಯೋಗ್ಯ ಆಸ್ತಿ : ಅಂದರೆ ಫ್ಲ್ಯಾಟ್ ನಂ. 501, 5ನೇ ಮಹಡಿ, ಬ್ರಿಗೇಡ್ ಮಿಲೇನಿಯಂ, ಸರ್ವೆ ನಂ. 44, 45 ಮತ್ತು 51/1, ಪುಟ್ಟೇನಹಳ್ಳಿ ಗ್ರಾಮ, ಉತ್ತರಹಳ್ಳಿ ಹೋಬಳಿ, ಜೆ ಪಿ ನಗರ 7ನೇ ಹಂತ, ಬೆಂಗಳೂರು–560078, ಆಸ್ತಿಯ ಶ್ರೀ ರೂಪೇಶ್ ಕೆಡಿಯ ಮತ್ತು ಶ್ರೀಮತಿ ಕಾನುಪ್ರಿಯ ಕೆಡಿಯ ರವರ ಮಾಲೀಕತ್ವದಲ್ಲಿದೆ.

ಮೀಸಲು ಬೆಲೆ	ಇಎಂಡಿ (ಮೀಸಲು ಬೆಲೆಯ 10%)	ಬಿಡ್ ಮೊತ್ತ ಹೆಚ್ಚಳ
₹. 3,61,80,000/-	₹. 36,18,000/-	₹. 100,000/-

ಸ್ವತ್ತುಗಳ ಪರಿವೀಕ್ಷಣೆ	13.08.2025 ರಂದು ಮಧ್ಯಾಹ್ನ 12.00 ರಿಂದ ಸಂಜೆ 4.00 ಗಂಟೆ
ಟೆಂಡರ್ ಮತ್ತು ಅರ್ಜಿ ನಮೂನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ : 19.08.2025 ಸಮಯ : ಸಂಜೆ 5.00 ಗಂಟೆ
ಇ–ಹರಾಜು ದಿನಾಂಕ ಮತ್ತು ಸಮಯ	ಇ–ಹರಾಜು (ಜಾಲತಾಣ) assets.matexauctions.com ರಲ್ಲಿ 20.08.2025 ರಂದು ಮಧ್ಯಾಹ್ನ 12.00 ಗಂಟೆಯಿಂದ 2.00 ಗಂಟೆಯವರೆಗೆ ಪ್ರತೀ ಮಾರಾಟಕ್ಕೆ ಮಾರಾಟ ಮುಕ್ತಾಯವಾಗುವವರೆಗೆ 10 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ ನಡೆಯಲಿದೆ.
ಸಂಪರ್ಕಿಸಬೇಕಾದ ವ್ಯಕ್ತಿ ಮತ್ತು ಸಂಪರ್ಕ ಸಂಖ್ಯೆ	ಶ್ರೀ ರಾಜೇಶ್ ಕುಮಾರ್ ಬತಿನ, ದೂ: 9985799277/ ಶ್ರೀ ಅರ್ವಿಂದರ್ ಸಿಂಗ್ , ಮೊ. ಸಂ. 9873382900

ಇ– ಹರಾಜಿನ ನಿಯಮ ಮತ್ತು ನಿಬಂಧನೆಗಳು ಈ ಕೆಳಗಿನಂತಿದೆ.

1. ನಿಯಮ ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಟೆಂಡರ್/ಬಿಡ್ ಅರ್ಜಿಗಳನ್ನು ಆನ್‌ಲೈನ್ ಜಾಲತಾಣ assets.matexauctions.com ನಿಂದ ಪಡೆದುಕೊಳ್ಳಬಹುದು. ಇ–ಹರಾಜು assets.matexauctions.com ರಲ್ಲಿ 20 ಆಗಸ್ಟ್ 2025 ರಂದು ಮಧ್ಯಾಹ್ನ 12.00 ಗಂಟೆಯಿಂದ 2.00 ಗಂಟೆಯವರೆಗೆ ಪ್ರತೀ ಮಾರಾಟಕ್ಕೆ ಮಾರಾಟ ಮುಕ್ತಾಯವಾಗುವವರೆಗೆ 10 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ ನಡೆಯಲಿದೆ.
2. ಇ–ಟೆಂಡರ್ ಅರ್ಜಿಗಳನ್ನು www.matexauctions.com ರಲ್ಲಿ ಕೊನೆಯ ದಿನಾಂಕದ ಒಳಗಾಗಿ ಸಲ್ಲಿಸಬೇಕು. ಇ–ಟೆಂಡರ್‌ಗಳೊಂದಿಗೆ ಇಎಂಡಿ ಪಾವತಿಸಿದ ವಿವರಗಳನ್ನು ಲಗತ್ತಿಸಿರಬೇಕು, ತಪ್ಪಿದಲ್ಲಿ ಟೆಂಡರ್‌ಗಳು ಅನೂರ್ಜಿತಗೊಳ್ಳುವುದು. ಇ–ಹರಾಜು ಪ್ರಕ್ರಿಯೆಗಾಗಿ ಸಂಪರ್ಕ ವಿವರಗಳು ಈ ರೀತಿಯಾಗಿದೆ. ಶ್ರೀ ವಿಜಯ್ ಕುಮಾರ್, ಮೊ. ಸಂ. 7200538774, ಲ್ಯಾಂಡ್‌ಲೈನ್: 044 43437474, ಇ–ಮೇಲ್: solutions@matexnet.com
3. ಆನ್‌ಲೈನ್ ಟೆಂಡರ್ ಮತ್ತು ಅರ್ನೆಸ್ಟ್ ಠೇವಣಿ ಹಣವನ್ನು ಸಲ್ಲಿಸಲು ಕೊನೆಯ ದಿನಾಂಕ ಮತುತ ಸಮಯ 19ನೇ ಆಗಸ್ಟ್ 2025ರಂದು ಸಂಜೆ 5.00 ಗಂಟೆಯ ಮೊದಲು.ಇಎಂಡಿಯನ್ನು ಪೇ ಆರ್ಡರ್/ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ಪರವಾಗಿ ಬೆಂಗಳೂರಿನಲ್ಲಿ ಪಾವತಿಯಾಗುವಂತೆ ಪಡೆದು ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್, ರೀಟೈಲ್ ಕಲೆಕ್ಷನ್ಸ್, 2ನೇ ಮಹಡಿ, ಈಸ್ಟ್ ವಿಂಗ್ ರಹೇಜ ಟವರ್ಸ್, ಎಂ ಜಿ ರಸ್ತೆ, ಬೆಂಗಳೂರು –560001 ಇಲ್ಲಿಗೆ ಸಲ್ಲಿಸಬೇಕು.
4. ಹೆಚ್ಚಿನ ಮಾಹಿತಿಗಾಗಿ ಆಸಕ್ತ ಪಾರ್ಟಿಗಳು ಅಧಿಕೃತ ಅಧಿಕಾರಿಯವರನ್ನು +9985799277 / 9873382900ರಲ್ಲಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
5. ಯಶಸ್ವಿ ಬಿಡ್‌ದಾರರು ಅಧಿಕೃತ ಅಧಿಕಾರಿಯವರು ಮಾರಾಟ ದೃಢೀಕರಿಸಿದ ಮೇಲೆ ಇಎಂಡಿಗೆ ಹೊಂದಿಕೆಯಾಗುವಂತೆ ಖರೀದಿದಾರರು 25% ಮಾರಾಟ ಬೆಲೆಯನ್ನು ಕೂಡಲೇ ಕೆಳಸಹಿದಾರರಿಗೆ ಪಾವತಿಸಬೇಕು. ಬಾಕಿ ಉಳಿದ ಮೊತ್ತವನ್ನು ಖರೀದಿದಾರರು ಕೆಳಸಹಿದಾರರಿಗೆ ಮಾರಾಟ ದೃಢೀಕರಣಗೊಂಡ 15 ದಿನಗಳ ಒಳಗಾಗಿ ಪಾವತಿಸಬೇಕು ಅಥವಾ ಒಂದು ವೇಳೆ ಸಮಯಾವಕಾಶ ವಿಸ್ತರಿಸಬೇಕಾದಲ್ಲಿ ಅದು ಅಧಿಕೃತ ಅಧಿಕಾರಿಯವರ ವಿವೇಚನೆಗೆ ಒಳಪಟ್ಟಿರುತ್ತದೆ.
6. ಎಲ್ಲಾ ಶಾಸನಬದ್ಧ ಬಾಕಿಗಳು/ತೆರಿಗೆಗಳು/ನಿರ್ವಹಣಾ ವೆಚ್ಚಗಳು/ಆಸ್ತಿತೆರಿಗೆ/ವಿದ್ಯುತ್/ನೀರಿನ ದರಗಳು/ಟಿಡಿಎಸ್ ಇತ್ಯಾದಿಗಳನ್ನು ಬಾಕಿ ಇರುವ ದಿನಾಂಕದಿಂದ ಇಲ್ಲಿಯವರಗೆ ಬಿಡ್‌ದಾರರೇ ಪಾವತಿಸಬೇಕು. ಅಧಿಕೃತ ಅಧಿಕಾರಿ / ಬ್ಯಾಂಕ್ ಈ ಬಗ್ಗೆ ಮಾಹಿತಿ ನೀಡುವ ಬಗ್ಗೆ ಅಥವಾ ಯಾವುದೇ ಪರಭಾರೆ ನಂತರದ ಮಾರಾಟದ ಬಗ್ಗೆ ಜವಾಬ್ದಾರಿಯಾಗಿರುವುದಿಲ್ಲ.
7. ಈ ಹರಾಜು ಬಗ್ಗೆ ಇತರೆ ವಿವರವಾದ ನಿಯಮ ಮತ್ತು ನಿಬಂಧನೆಗಳನ್ನು assets.matexauctions.com ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸರ್ಫೇಸಿ ಕಾಯಿದೆ, 2002 ನಿಯಮ 9 (1)ರ ಅಡಿ 15 ದಿನಗಳ ಶಾಸನಬದ್ಧ ಸೂಚನೆ

ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಮೇಲೆ ನಮೂದಿಸಲಾದ ಬಾಕಿ ಮೊತ್ತ ಜೊತೆಗೆ ಆಯಾ ದಿನಾಂಕದವರೆಗಿನ ಬಡ್ಡಿ ಮತ್ತು ಇತರೆ ವೆಚ್ಚಗಳನ್ನು ಇ–ಹರಾಜಿಗೆ ಮೊದಲು ಪಾವತಿಸಲು ವಿಫಲರಾದರೆ, ಷೆಡ್ಯೂಲ್ ಆಸ್ತಿಯ ಹರಾಜು ನಡೆಸಿ/ಮಾರಾಟ ಮಾಡಿ ಬಾಕಿ ಯಾವುದಾದರೂ ಇದ್ದಲ್ಲಿ ಅದನ್ನು ಸಹ ಬಡ್ಡಿ ಮತ್ತು ವೆಚ್ಚಗಳೊಂದಿಗೆ ವಸೂಲು ಮಾಡಿಕೊಳ್ಳಲಾಗುವುದು.

ದಿನಾಂಕ: 26.07.2025
ಸ್ಥಳ: ಬೆಂಗಳೂರು
ಅಧಿಕೃತ ಅಧಿಕಾರಿ
ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್

ಪಾನಿಪುರಿ ತಿನ್ನಲು ಹೋದವನ ಹತ್ಯೆ

ಬೆಂಗಳೂರು: ಪಾನಿಪುರಿ ತಿನ್ನಲು ಹೋದಾಗ ಹಲ್ಲೆಗೊಳಗಾಗಿದ್ದ ಯುವಕ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ ಘಟನೆ ಬೆಳಕಿಗೆ ಬಂದಿದೆ.

ನಂದಿನಿ ಲೇಔಟ್ ನಿವಾಸಿಯಾಗಿದ್ದ ಅರುಣ್ ಕುಮಾರ್ (24) ಮೃತ ಯುವಕ. ಜುಲೈ 19ರಂದು ಐದಾರು ಯುವಕರು ಮಾರಕಾಸ್ತ್ರಗಳಿಂದ ನಡೆಸಿದ್ದ ಹಲ್ಲೆಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಅರುಣ್ ಕುಮಾರ್, ಚಿಕಿತ್ಸೆ ಫಲಕಾರಿಯಾಗದೇ ಶುಕ್ರವಾರ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಕ್ಯಾಬ್ ಚಾಲಕನಾಗಿ ಕೆಲಸ ಮಾಡುತ್ತಿದ್ದ ಅರುಣ್ ಕುಮಾರ್, ಜುಲೈ 19ರಂದು ರಾತ್ರಿ 10 ಗಂಟೆಗೆ ಪಾನಿಪುರಿ ತಿಂದು ಬರುವುದಾಗಿ ಮನೆಯಲ್ಲಿ ಹೇಳಿ ತೆರಳಿದ್ದ. ಲವಕುಶ ನಗರದ ಜ್ಞಾನವರ್ಧಕ ಶಾಲೆಯ ಬಳಿ ಸ್ನೇಹಿತರೊಂದಿಗೆ ನಿಂತಿದ್ದ ಅರುಣ್ ಕುಮಾರ್ ಬಳಿ ಬಂದಿದ್ದ ಆರೋಪಿಗಳು, ಏರಿಯಾದಲ್ಲಿ ನಿನ್ನದು ಜಾಸ್ತಿಯಾಗಿದೆ ಎನ್ನುತ್ತಾ ಅವಾಚ್ಯವಾಗಿ ನಿಂದಿಸಿದ್ದರು. ನೋಡನೋಡುತ್ತಿದ್ದಂತೆ ಅರುಣ್ ಕುಮಾರ್ ಹಾಗೂ ಆತನ ಸ್ನೇಹಿತ ರೋಹಿತ್‌ನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿದ್ದರು. ತೀವ್ರವಾಗಿ ಗಾಯಗೊಂಡಿದ್ದ ಅರುಣ್ ಕುಮಾರ್‌ನನ್ನು ಆತನ ಸ್ನೇಹಿತರು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ, ಚಿಕಿತ್ಸೆ ಫಲಕಾರಿಯಾಗದೇ ಅರುಣ್ ಕುಮಾರ್ ಮೃತಪಟ್ಟಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ಬಿಕ್ಲು ಶಿವ ಹಂತಕರ ಮೇಲೆ ರೌಡಿಶೀಟ್

ಬೆಂಗಳೂರು: ರೌಡಿಶೀಟರ್ ಬಿಕ್ಲು ಶಿವ ಕೊಲೆ ಮಾಡಿ ಬಂಧನವಾಗಿರುವ ಹಂತಕರ ವಿರುದ್ಧ ಪೊಲೀಸರು ರೌಡಿಶೀಟ್ ತೆರೆದಿದ್ದಾರೆ.

- ಕಿರಣ್, ಮದನ್, ವಿಮಲ್, ಪ್ರದೀಪ್, ಪ್ಯಾಟ್ರಿಕ್, ಸ್ಯಾಮ್ಯುಯೆಲ್, ಸೇರಿ 9 ಮಂದಿಯ ವಿರುದ್ಧ ರೌಡಿ ಪಟ್ಟಿ ತೆರೆದ ಭಾರತಿ ನಗರ ಪೊಲೀಸರು

ಬಂಧಿತ 17 ಮಂದಿ ಆರೋಪಿಗಳಲ್ಲಿ 9 ಮಂದಿ ವಿರುದ್ಧ ರೌಡಿಶೀಟ್ ತೆರೆಯಲಾಗಿದೆ. ಕಿಂಗ್‌ಪಿನ್ ಕಿರಣ್, ಮದನ್, ವಿಮಲ್, ಪ್ರದೀಪ್, ಪ್ಯಾಟ್ರಿಕ್, ಸ್ಯಾಮ್ಯುಯೆಲ್, ಸೇರಿ 9 ಮಂದಿಯ ವಿರುದ್ಧ ರೌಡಿ ಪಟ್ಟಿಯನ್ನು ಭಾರತಿ ನಗರ ಪೊಲೀಸರು ತೆರೆದಿದ್ದಾರೆ. ಕೊಲೆ ಪ್ರಕರಣ ಸೇರಿದಂತೆ ಬಂಧಿತರ ಮೇಲೆ ಹಲವು ಪ್ರಕರಣಗಳಿರುವುದು ತನಿಖೆಯ ವೇಳೆ ಪತ್ತೆಯಾಗಿದ್ದರಿಂದ ಆರೋಪಿಗಳ ವಿರುದ್ಧ ರೌಡಿಶೀಟ್ ತೆರೆಯಲಾಗಿದೆ. ಸದ್ಯ ಪ್ರಕರಣದ ಪ್ರಮುಖ ಆರೋಪಿಯಾಗಿರುವ ಜಗ್ಗ ಅಲಿಯಾಸ್ ಜಗದೀಶ್, ಬಿಕ್ಲು ಶಿವನ ಕೊಲೆ ಬಳಿಕ ತಲೆಮರಿಸಿಕೊಂಡಿದ್ದಾನೆ. ಆತನಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ. ಆತ ಬಂಧನವಾದ ಬಳಿಕ ಆತನ ಮೇಲೆಯು ಕೂಡ ರೌಡಿ ಪಟ್ಟಿ ತೆರೆಯಲು ಪೊಲೀಸರು ತಯಾರಿ ಮಾಡಿಕೊಂಡಿದ್ದಾರೆ. ಆರೋಪಿ ವಿರುದ್ಧ ನಗರದ ಇಂದಿರಾನಗರ, ಜೆಬಿ ನಗರ, ಜೆಪಿ ನಗರ, ಕೆ.ಆರ್. ಪುರ ಸೇರಿದಂತೆ ಹಲವು ಕಡೆ ಪ್ರಕರಣಗಳಿದ್ದು, ಕೆಲವೊಂದು ಪ್ರಕರಣಗಳು ಟ್ರಯಲ್‌ನಲ್ಲಿರುವ ಕಾರಣ ಕೊಲೆ ಪ್ರಕರಣದಲ್ಲಿ ಎ1 ಆರೋಪಿಯಾಗಿರುವ ಜಗ್ಗನ ಮೇಲೆ ಮತ್ತೆ ರೌಡಿ ಪಟ್ಟಿ ತೆರೆಯಲು ಪೊಲೀಸರು ಮುಂದಾಗಿದ್ದಾರೆ.

ಸಮಾಚಾರ ಸಣ್ಣದಲ್ಲ

ಶಾಲಾ ಮಕ್ಕಳಿಗೆ ನೋಟ್‌ಬುಕ್ ವಿತರಣೆ

ಬೆಂಗಳೂರು: ಬಡವರ ಸೇವೆಯಲ್ಲಿ ಸಿಗುವ ತೃಪ್ತಿ ಬೇರೆ ಯಾವ ಸೇವೆಯಲ್ಲೂ ಸಿಗುವುದಿಲ್ಲ ಇರುವ ಅಲ್ಪ ಸಮಯವನ್ನು ಬಡವರಿಗೆ ಮೀಸಲಿಡಬೇಕು ಎಂದು ಬಿಜೆಪಿ ಮುಖಂಡ ವರ್ತೂರು ಶ್ರೀಧರ್ ಹೇಳಿದರು. ಮಹದೇವಪುರ ಕ್ಷೇತ್ರದ ವರ್ತೂರಿನಲ್ಲಿ ಸರಕಾರಿ ಶಾಲೆ ಮಕ್ಕಳಿಗೆ ನೋಟ್ ಬುಕ್ ವಿತರಣೆ, ಪೌರ ಕಾರ್ಮಿಕರಿಗೆ ದಿನ ಕಿಟ್ ವಿತರಣೆ, ಸೀರೆ ವಿತರಿಸುವ ಸೇವಾ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದರು. ಕಳೆದ ಹಲವಾರು ವರ್ಷಗಳಿಂದ ನೂರಾರು ಮಹಿಳೆಯರಿಗೆ ಸೀರೆ ವಿತರಣೆ, ಪೌರ ಕಾರ್ಮಿಕರಿಗೆ ದಿನಸಿ ಕಿಟ್ ವಿತರಣೆ, ಶಾಲಾ ಮಕ್ಕಳಿಗೆ ಶಾಲಾ ಸಾಮಾಗ್ರಿಗಳನ್ನು ವಿತರಿಸುವ ಮಹತ್ವದ ಕಾರ್ಯವನ್ನು ಮಾಡುತ್ತ ಬರುತ್ತಿದ್ದ ಇನ್. ಮಾಜಿ ಶಾಸಕ ಅರವಿಂದ ಲಿಂಬಾವಳಿ ಮಾರ್ಗದರ್ಶನದಂತೆ ಸಾಮಾಜಿಕ ಸೇವೆಯನ್ನು ರೂಢಿಸಿಕೊಂಡಿದ್ದೇನೆ. ಎಂಟು ನೂರಕ್ಕೂ ಹೆಚ್ಚು ಜನರಿಗೆ ದಿನಸಿ ಕಿಟ್, ಶಾಲಾ ಮಕ್ಕಳಿಗೆ ಸಾವಿರ ನೋಟ್ ಬುಕ್, ಭಗವದ್ಗೀತಾ ಪುಸ್ತಕ, ಮಹಿಳಾ ಕಾರ್ಯಕರ್ತರಿಗೆ ಸೀರೆ, ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದ್ದೇನೆ ಎಂದರು.

ಇಂದು ಕಾರ್ಗಿಲ್ ವಿಜಯ ದಿವಸ್

ಬೆಂಗಳೂರು: ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ವತಿಯಿಂದ ಬೆಂಗಳೂರಿನ ಚೌಡಯ್ಯ ರಸ್ತೆಯಲ್ಲಿರುವ ಇಂದಿರಾಗಾಂಧಿ ಸಂಗೀತ ಕಾರಂಜಿ ಉದ್ಯಾನವನದ ಹತ್ತಿರದ ರಾಷ್ಟ್ರೀಯ ಮಿಲಿಟರಿ ಸ್ಮಾರಕದಲ್ಲಿ ಜುಲೈ 26 ರಂದು ವೀರಗಲ್ಲು ಲೋಕಾರ್ಪಣೆ ಮತ್ತು ಕಾರ್ಗಿಲ್ ವಿಜಯ ದಿವಸದ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಬೆ.9.30 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಖ್ಯ ಅತಿಥಿಗಳಾಗಿ ಹಾಗೂ ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರು ಗೌರವ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಈ ಸಮಾರಂಭದಲ್ಲಿ ಸೈನ್ಯದ ವರಿಷ್ಠ ನಿವೃತ್ತ ಅಧಿಕಾರಿಗಳು, ಮಾಜಿ ಸೈನಿಕರು ಮತ್ತು ಅವರ ಅವಲಂಬಿತರು, ಉಚ್ಚ ಮಟ್ಟದ ನಾಗರೀಕ ಸೇವೆಯ ಮತ್ತು ಸೈನ್ಯದ ಅಧಿಕಾರಿಗಳು, ಶಾಲಾ/ಕಾಲೇಜು ಮಕ್ಕಳು ಹಾಗೂ ಗಣ್ಯರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಸರಕಾರಿ ಉಪಕರಣ ಗಾರ ಮತ್ತು ತರಬೇತಿ ಕೇಂದ್ರದಲ್ಲಿ ಕರ್ನಾಟಕ ರಾಜ್ಯ ಸರಕಾರದಿಂದ ಅನುಮೋದನೆಗೊಂಡ 2025-26ನೇ ಸಾಲಿನ ಪೋಸ್ಟ್ ಡಿಪ್ಲೊಮೊ ಇನ್ ಟೂಲ್ ಡಿಸೈನ್ ಕೋರ್ಸಿಗೆ ತೇರ್ಗಡೆಯಾದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಮತ್ತು ಆಸಕ್ತ ವಿದ್ಯಾರ್ಥಿ, ವಿದ್ಯಾರ್ಥಿನಿ ಯರು ಅರ್ಜಿ ಸಲ್ಲಿಸಲು ಹಾಗೂ ಮಾಹಿತಿಗಾಗಿ ಪ್ರಾಂಶುಪಾಲರು ಪಿಜಿ/ಪಿಡಿ ಸ್ಟಡೀಸ್ ಕೇಂದ್ರ, ರಾಜಾಜಿನಗರ, ಬೆಂಗಳೂರು ಮೊಬೈಲ್ ಸಂ: 9141629584/ 9880217473/ 8310987353 ವೆಬ್‌ಸೈಟ್: https://gttc.karnataka.gov.inಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕೌನ್ಸೆಲಿಂಗ್ ಮೂಲಕ ವರ್ಗಾವಣೆ

ಬೆಂಗಳೂರು: 2025-26ರ ಬಜೆಟ್‌ನಲ್ಲಿ ಘೋಷಿಸಿದಂತೆ, ಇನ್‌ಪೆಕ್ಟರ್, ಸಬ್ ಇನ್‌ಪೆಕ್ಟರ್, ಮುಖ್ಯ ಪೇದೆ, ಪೇದೆ ಹುದ್ದೆಗಳಿಗೆ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮತ್ತು ನಿಯೋಜನೆ ವ್ಯವಸ್ಥೆಯನ್ನು ಅಬಕಾರಿ ಇಲಾಖೆ ಪರಿಚಯಿಸಿದ್ದು, ಈ ಸಂಬಂಧ ಕರ್ನಾಟಕ ನಾಗರಿಕ ಸೇವೆಗಳ (ಅಬಕಾರಿ ಇಲಾಖೆ ಅಧಿಕಾರಿಗಳು ಮತ್ತು ಅಧಿಕಾರಿಗೆ ವರ್ಗಾವಣೆ) ನಿಯಮಗಳನ್ನು 2025 ರಲ್ಲಿ ಜಾರಿಗೆ ತಂದಿದ್ದು, ಅದನ್ನು 14-05-2025 ರಂದು ಪ್ರಕಟಿಸಲಾಯಿತು. ಈ ನಿಯಮಗಳ ಪ್ರಕಾರ, ಕರ್ನಾಟಕ ಸರ್ಕಾರವು 08-07-2025 ರಂದು ವರ್ಗಾವಣೆ ಮಾರ್ಗಸೂಚಿ ಹೊರಡಿಸಲಾಯಿತು. ಆನ್‌ಲೈನ್ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಲು, ವರ್ಗಾವಣೆಗೆ ನೌಕರರ ಕರಡು ಪಟ್ಟಿಯನ್ನು 17-07-2025 ರಂದು ಪ್ರಕಟಿಸಲಾಯಿತು ಮತ್ತು ಅನ್ನೈನ್ನಲ್ಲಿ ಆಕ್ಷೇಪಣೆಗೆ ಆಹ್ವಾನಿಸಲಾಯಿತು. ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ, ಅರ್ಹ ನೌಕರರ ಅಂತಿಮ ಪಟ್ಟಿಯನ್ನು 23-07-2025 ಪ್ರಕಟಿಸಲಾಯಿತು. ಕೌನ್ಸೆಲಿಂಗ್‌ನಲ್ಲಿ ಅವರ ಆಯ್ಕೆಯ ಸ್ಥಳದ ಪ್ರಕಾರ ಅಬಕಾರಿ ನಿರೀಕ್ಷಕರು - 151, ಅಬಕಾರಿ ಉಪ ನಿರೀಕ್ಷಕರು - 114, ಹೆಡ್ ಕಾನ್‌ಸ್ಟೇಬಲ್‌ಗಳು-07, ಕಾನ್‌ಸ್ಟೇಬಲ್‌ಗಳು-415 ಒಟ್ಟು-687 ನೌಕರರನ್ನು ವರ್ಗಾಯಿಸಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸರಳ ಕಾವೇರಿಯಲ್ಲಿ ಹೆಚ್ಚಿದ ಆಸಕ್ತಿ

3 ತಿಂಗಳಲ್ಲಿ 4.5 ಸಾವಿರಕ್ಕೂ ಹೆಚ್ಚು ಅರ್ಜಿ | ಒಟ್ಟು 80,20,380 ರು. ಮೊತ್ತ ಸಂಗ್ರಹಿಸಿರುವ ಜಲಮಂಡಳಿ

ಅಪರ್ಣಾ ಎ.ಎಸ್. ಬೆಂಗಳೂರು

ಲಕ್ಷ ಲಕ್ಷ ಪಡೆದು ಕಾವೇರಿ ಸಂಪರ್ಕ ಪಡೆಯಲು ಹೆಣಗಾಡುತ್ತಿದ್ದ ರಾಜಧಾನಿ ಮಂದಿಗೆ ರಾಜ್ಯ ಸರಕಾರ ಪರಿಚಯಿಸಿದ 'ಸರಳ ಕಾವೇರಿ' ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು ಮೂರ್‍ನಾಲ್ಕು ತಿಂಗಳಲ್ಲಿ 4798 ಮಂದಿ ಅರ್ಜಿ ಸಲ್ಲಿಸಿ, ಕಾವೇರಿ ನೀರಿನ ಸಂಪರ್ಕ ಪಡೆದುಕೊಂಡಿದ್ದಾರೆ.

ಮೇ ತಿಂಗಳಲ್ಲಿ ಉದ್ಘಾಟನೆಗೊಂಡ ಸರಳ ಕಾವೇರಿ ಯೋಜನೆಯು ಆರಂಭದಲ್ಲಿ ಹೆಚ್ಚಿನ ಪ್ರತಿಕ್ರಿಯೆ ವ್ಯಕ್ತವಾಗಿರಲಿಲ್ಲ. ಆದರೆ ದಿನದಿಂದ ದಿನಕ್ಕೆ ಯೋಜನೆಗೆ ಸಂಬಂಧಿಸಿದಂತೆ ಹಲವು ಆಸಕ್ತಿ ತೋರುತ್ತಿದ್ದು, ಅರ್ಜಿಗಳ ಸಲ್ಲಿಕೆಯ ಸಂಖ್ಯೆ ಹೆಚ್ಚುತ್ತಿದೆ ಎನ್ನುವ ಮಾತುಗಳನ್ನು ಅಧಿಕಾರಿಗಳು ಹೇಳಿದ್ದಾರೆ. ಬೆಂಗಳೂರಿನಲ್ಲಿ ಕಾವೇರಿ ನೀರಿನ ಸಂಪರ್ಕವನ್ನು ಸಣ್ಣ, ಮಧ್ಯಮ ಪ್ರಮಾಣದ ಅಪಾರ್ಟ್‌ಮೆಂಟ್‌ಗಳಿಗೆ ಪಡೆಯಲು ಏಕ ಕಾಲಕ್ಕೆ ಭಾರಿ ಪ್ರಮಾಣದ ಶುಲ್ಕ ಪಾವತಿಸುವುದು ಹಲವು ಅಪಾರ್ಟ್‌ಮೆಂಟ್ ಸಂಘಗಳಿಗೆ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಮೇ ತಿಂಗಳಲ್ಲಿ ಜಲಮಂಡಳಿ ಸರಳ ಕಾವೇರಿ ಯೋಜನೆಯನ್ನು ಆರಂಭಿಸಿತ್ತು.

ಇದೀಗ ಯೋಜನೆ ಜಾರಿಗೊಂಡು ಮೂರು ತಿಂಗಳು ಕಳೆದಿದ್ದು ಈವರೆಗೆ 4700ಕ್ಕೂ ಸಂಪರ್ಕಕ್ಕೆ ಸರಳ ಕಾವೇರಿ ಯೋಜನೆಯಲ್ಲಿ ಅರ್ಜಿ ಸಲ್ಲಿಸಲಾಗಿದೆ. ಈ ಯೋಜನೆಯಲ್ಲಿ ಶೇ.20ರಷ್ಟು ಶುಲ್ಕ ಅಥವಾ ಸಾವಿರ ರುಪಾಯಿ ಪಾವತಿಸಿದರೂ ನೀರಿನ ಸಂಪರ್ಕ ನೀಡಲು ತೀರ್ಮಾನಿಸಲಾಗಿತ್ತು. ಜು.22ರ ಅಂತ್ಯಕ್ಕೆ ನಾಲ್ಕು ಝೋನ್‌ಗಳಿಂದ ಒಟ್ಟು 4925 ಸಂಪರ್ಕಕ್ಕೆ ಅರ್ಜಿಗಳು ಬಂದಿದ್ದು, ಇದರಲ್ಲಿ 4798 ಸಂಪರ್ಕ ಕಾರ್ಯ ಪೂರ್ಣಗೊಳಿಸಲಾಗಿದೆ. ಇನ್ನುಳಿದಿರುವ ಅರ್ಜಿಗಳ ಸಂಪರ್ಕವನ್ನೂ ಶೀಘ್ರದಲ್ಲಿಯೇ ನೀಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯಾವ ಝೋನ್‌ನಲ್ಲಿ ಎಷ್ಟು ನೊಂದಣಿ

ಝೋನ್	ಸಲ್ಲಿಕೆ ಆಗಿರುವ ಅರ್ಜಿ	ಪೂರ್ಣಗೊಂಡಿರುವ ಅರ್ಜಿ	ಬಲ್ಕ್ ಆರ್ಡರ್ (ಗುಂಪು ಅರ್ಜಿ)	ಸಂಗ್ರಹಿಸಿರುವ ಒಟ್ಟು ಮೊತ್ತ
ಪೂರ್ವ	2139	2052	1505	39,47,300
ಪಶ್ಚಿಮ	416	394	30	3,53,890
ದಕ್ಷಿಣ	1621	1614	1238	24,09,320
ಉತ್ತರ	749	738	1056	13,09,870
ಒಟ್ಟು	4925	4798	3829	80,20,380

ಷರತ್ತುಗಳೇನಿವೆ?

- ಡಿಮ್ಯಾಂಡ್ ನೋಟಿಸ್‌ನ ಶೇ.20 ರಷ್ಟು ಹಣವನ್ನು 30 ದಿನದೊಳಗಾಗಿ ಪಾವತಿಸಬೇಕು
- ಇನ್ನುಳಿದ ಶೇ.80 ರಷ್ಟು ಶುಲ್ಕವನ್ನು ಪಾವತಿಸಲು 12 ತಿಂಗಳ ಅವಕಾಶ
- ಇಎಂಐ ಮೇಲೆ ಪ್ರತಿ ತಿಂಗಳು ಶೇ.0.35 ರಷ್ಟು ಬಡ್ಡಿ ವಿಧಿಸಲಾಗುವುದು
- ವರ್ಷದೊಳಗೆ ಶುಲ್ಕವನ್ನು ಪಾವತಿಸದಿದ್ದರೆ 15 ದಿನಗಳ ಅಂತರದಲ್ಲಿ ನೋಟಿಸ್ ನೀಡಲಾಗುವುದು
- ನೋಟಿಸ್ ಬಳಿಕವೂ ಯಾವುದೇ ಕ್ರಮವಹಿಸದಿದ್ದರೆ ಒಳಚರಂಡಿ ಹಾಗೂ ನೀರಿನ ಸಂಪರ್ಕ ಕಟ್

- ಸರಳ ಕಾವೇರಿ ಯೋಜನೆಯಲ್ಲಿ ಸ್ವೀಕರಿಸಿರುವ ಅರ್ಜಿಗಳು : 2511
- ಸರಳ ಕಾವೇರಿ ಯೋಜನೆಯಲ್ಲಿ ಅನುಮೋದನೆಗೊಂಡ ಅರ್ಜಿ : 1158
- ಸಾವಿರ ರುಪಾಯಿ ಇಎಂಐ ಯೋಜನೆಯಲ್ಲಿ ಸ್ವೀಕರಿಸಿರುವ ಅರ್ಜಿ : 2249
- ಸಾವಿರ ರುಪಾಯಿ ಇಎಂಐ ಯೋಜನೆಯಲ್ಲಿ ಅನುಮೋದನೆಗೊಂಡ ಅರ್ಜಿ : 1849

ಏನಿದು ಸರಳ ಕಾವೇರಿ ಯೋಜನೆ?: ಸಣ್ಣ ಮತ್ತು ಮಧ್ಯಮ ವರ್ಗದ ಗ್ರಾಹಕರಿಗೆ ಒಂದೇ ಬಾರಿ ಭಾರಿ ಶುಲ್ಕ ತುಂಬಲು ಕಷ್ಟವಾಗುತ್ತದೆ ಎನ್ನುವ ಕಾರಣಕ್ಕೆ, ಸರಳ ಕಾವೇರಿ ಯೋಜನೆಯಲ್ಲಿ ಇಎಂಐ ಮೂಲಕ ಶುಲ್ಕ ಪಾವತಿಗೆ ಅವಕಾಶ ನೀಡಲಾಗಿತ್ತು. ಈ ಯೋಜನೆಯಲ್ಲಿ ಸಂಪರ್ಕಕ್ಕೆ ಅಗತ್ಯವಿರುವ ಶುಲ್ಕದ ಶೇ.20ರಷ್ಟು ಮಾತ್ರ ಆರಂಭದಲ್ಲಿ ಭರ್ತಿ ಮಾಡಿದರೆ, ಉಳಿದ ಶೇ.80ರಷ್ಟು ಶುಲ್ಕವನ್ನು ಅಲ್ಪ ಪ್ರಮಾಣದ ಬಡ್ಡಿಯೊಂದಿಗೆ 12 ಕಂತುಗಳಲ್ಲಿ ನೀರಿನ ಬಿಲ್‌ನೊಂದಿಗೆ ಕಟ್ಟಲು ಅವಕಾಶ ನೀಡಲಾಗಿತ್ತು.

ಕೈನ 9 ಲೋಕಸಭಾ ಸೀಟ್ ಗೆಲುವಿನಲ್ಲಿ ಷಡ್ಯಂತ್ರ: ಸಿ.ಟಿ.ರವಿ

ಬೆಂಗಳೂರು: ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವು ಒಂಭತ್ತು ಲೋಕಸಭಾ ಸೀಟ್ ಗೆಲ್ಲುವಲ್ಲಿ ಷಡ್ಯಂತ್ರ ನಡೆದಿದೆ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಆರೋಪಿಸಿದ್ದಾರೆ.

ಕರ್ನಾಟಕ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸಿನ ಷಡ್ಯಂತ್ರ ಮೀರಿ ಎನ್‌ಡಿಎ 19 ಸೀಟ್ ಗೆದ್ದಿದ್ದು ಅದು ಪ್ರಜಾಪ್ರಭುತ್ವದ ಗೆಲುವು. ಇಲ್ಲದೇ ಇದ್ದರೆ, ಕಲಬುರಗಿಯಲ್ಲಿ ಮಲ್ಲಿಕಾರ್ಜುನ ಖರ್ಗೆಯವರ ಅಳಿಯ ಗೆಲ್ಲಲು ಹೇಗೆ ಸಾಧ್ಯವಾಗುತ್ತಿತ್ತು ಎಂದು ಪ್ರಶ್ನಿಸಿದರು.

ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ಚಿಕ್ಕೋಡಿ, ದಾವಣಗೆರೆ, ಚಾಮರಾಜನಗರ, ಹಾಸನದಲ್ಲಿ ಕಾಂಗ್ರೆಸ್ ಗೆಲ್ಲಬೇಕಾದರೆ ಚುನಾವಣಾ ಅಕ್ರಮ ನಡೆಸಿಯೇ ಗೆದ್ದಿದ್ದಾರೆ ಅನಿಸುತ್ತದೆ. ಕಾಂಗ್ರೆಸಿನವರೇ ಚುನಾವಣಾ ಅಕ್ರಮ ನಡೆಸಿದ್ದಾರೆಂಬ ಅನುಮಾನವಿದ್ದು ಈ ಬಗ್ಗೆ ಸಮಗ್ರ ತನಿಖೆ ಆಗಬೇಕೆಂದು ಒತ್ತಾಯಿಸಿದರು.

ಮುಖ್ಯಮಂತ್ರಿ, ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಚುನಾವಣಾ ಮತದಾರರ ಪಟ್ಟಿಯಲ್ಲಿ ಕರ್ನಾಟಕದಲ್ಲೂ ಅಕ್ರಮ ಆಗಿದೆ ಎಂದು ಹೇಳಿದ್ದಾರೆ. ನನಗೂ ಅನುಮಾನ ಬಂದಿತ್ತು. ಕಾಂಗ್ರೆಸ್- ಜೆಡಿಎಸ್ ಒಟ್ಟಾಗಿ ಇದ್ದಾಗಲೇ 2019ರಲ್ಲಿ ಒಂದೊಂದು ಸೀಟ್ ಗೆದ್ದಿದ್ದವು. 2024ರಲ್ಲಿ ಕಾಂಗ್ರೆಸಿನವರು ಹೇಗೆ 9 ಲೋಕಸಭಾ ಸೀಟ್ ಗೆದ್ದರು ಎಂದು ಪ್ರಶ್ನಿಸಿದರು. ಚುನಾವಣಾ ಆಯೋಗಕ್ಕೆ ಅವರದೇ ಆದ ಅಧಿಕೃತ ಅಧಿಕಾರಿಗಳ ಜಾಲ ಇರುವುದಿಲ್ಲ. ಕಂದಾಯ ಇಲಾಖೆ ಅಧಿಕಾರಿಗಳು, ಶಾಲಾ ಶಿಕ್ಷಕರನ್ನು ಬಳಸಿಕೊಂಡು ಮತದಾರರ ಪಟ್ಟಿ ಪರಿಷ್ಕರಣೆ ಮಾಡುತ್ತಾರೆ. ಬಹುತೇಕ ಜನರು ಸರಕಾರದ ಮರ್ಜಿಗೆ ಒಳಪಟ್ಟಿರುತ್ತಾರೆ ಎಂದು ಭಾವಿಸುವುದಾದರೆ, ರಾಜ್ಯದಲ್ಲಿ ಆಗ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿತ್ತು. ಅಕ್ರಮ ನಡೆಸುವ ಹೆಚ್ಚು ಅವಕಾಶ ಯಾರಿಗೆ ಇರುತ್ತದೆ ಎಂದು ಪ್ರಶ್ನಿಸಿದರು.

ಅಬುಧಾಬಿ ಕಂಪೆನಿಯಿಂದ 20 ಕೋಟಿ ರು. ಹೂಡಿಕೆ

ಬೆಂಗಳೂರು: ಅಬುಧಾಬಿ ಹೂಡಿಕೆ ಪ್ರಾಧಿಕಾರದ (ಎಡಿಐಎ) ಸಂಪೂರ್ಣ ಸ್ವಾಮ್ಯದ ಅಂಗಸಂಸ್ಥೆಯು ಭಾರತದ ಪ್ರಮುಖ ವೈದ್ಯಕೀಯ ಸಾಧನ ಕಂಪೆನಿಗಳಲ್ಲಿ ಒಂದಾದ ಮೈಕ್ರೋ ಲೈಫ್ ಸೈನ್ಸ್‌ನಲ್ಲಿ ಶೇ.3 ರಷ್ಟು ಪಾಲನ್ನು ಪಡೆಯಲು 200 ಮಿಲಿಯನ್ ಹೂಡಿಕೆ ಮಾಡಲು ನಿರ್ಣಾಯಕ ಒಪ್ಪಂದಗಳನ್ನು ಮಾಡಿಕೊಂಡಿದೆ.

ಈ ಹೂಡಿಕೆಯು ಮೆರಿಲ್‌ನ ಉದ್ಯಮ ಮೌಲ್ಯವನ್ನು 6.6 ಬಿಲಿಯನ್ ಯುಎಸ್ ಡಾಲರ್‌ಗಳು ಎಂದು ಹೇಳುತ್ತದೆ. ಈ ವಹಿವಾಟು ಭಾರತದ ಸ್ಪರ್ಧಾ ಆಯೋಗದ ನಿಯಂತ್ರಕ ಅನುಮೋದನೆಗೆ ಒಳಪಟ್ಟಿರುತ್ತದೆ. ಈ ಹೂಡಿಕೆಯ ನಂತರ, ಮೆರಿಲ್‌ಗೆ ಜಾಗತಿಕವಾಗಿ ಗುರುತಿಸಲ್ಪಟ್ಟ ಎರಡು ಹೂಡಿಕೆದಾರರಾದ ಎಡಿಐಎ ಮತ್ತು ವಾರ್ಬರ್ಗ್ ಪಿಂಕಸ್ ಬೆಂಬಲ ನೀಡುತ್ತಾರೆ. ಈ ಹೂಡಿಕೆಯು ಬೆಳವಣಿಗೆಯನ್ನು ವೇಗಗೊಳಿಸಲು, ವಿಶ್ವ ದರ್ಜೆಯ ಪ್ರತಿಭೆಗಳನ್ನು ಆಕರ್ಷಿಸಲು ಮತ್ತು ಸುಧಾರಿತ ಆರೋಗ್ಯ ಪರಿಹಾರಗಳ ಮೂಲಕ ಮಾನವ ಜೀವನದ ಗುಣಮಟ್ಟವನ್ನು ಸುಧಾರಿಸುವತ್ತ ನಾವು ಕೆಲಸ ಮಾಡುವಾಗ ನಮ್ಮ ಈ ಮತ್ತು ಕ್ಲಿನಿಕಲ್ ಸಂಶೋಧನಾ ಸಂಸ್ಥೆಗಳನ್ನು ಮತ್ತಷ್ಟು ಬಲಪಡಿಸಲು ನಮಗೆ ಅನುವು ಮಾಡಿಕೊಡುತ್ತದೆ.

ಬ್ಯಾಂಕ್ ಆಫ್ ಬರೋಡಾ ಜತೆ ಬಿಎಂಟಿಸಿ ಒಪ್ಪಂದ

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ಒಪ್ಪಂದಕ್ಕೆ ಸಹಿ

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರ ಸಮ್ಮುಖದಲ್ಲಿ ಬ್ಯಾಂಕ್ ಆಫ್ ಬರೋಡಾದ ಜತೆ ಬಿಎಂಟಿಸಿ ನೂತನ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್.ಆರ್., ಬ್ಯಾಂಕ್ ಆಫ್ ಬರೋಡಾ ವಲಯ ಮುಖ್ಯಸ್ಥ ಮನೋಜ್ ಚಯಾನಿ ಸೇರಿದಂತೆ ಮತ್ತಿತರರು ಇದ್ದರು.

ಬೆಂಗಳೂರು: ಭಾರತದ ಪ್ರಮುಖ ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿ ಒಂದಾದ ಬ್ಯಾಂಕ್ ಆಫ್ ಬರೋಡಾ, ಬಿಎಂಟಿಸಿ ಉದ್ಯೋಗಿಗಳಿಗೆ ವೇತನ ಖಾತೆ ಸೇವೆ ಒದಗಿಸಲು ಬೆಂಗಳೂರು ಮಹಾನಗರ ಸಾರಿಗೆ ನಿಗಮ ಜತೆ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಒಪ್ಪಂದದ ಬಳಿಕ ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್. ಆರ್ ಮಾತನಾಡಿ, ನಮ್ಮ ಉದ್ಯೋಗಿಗಳಿಗೆ ವರ್ಧಿತ ಬ್ಯಾಂಕಿಂಗ್ ಅನುಕೂಲತೆ ಮತ್ತು ಹಣಕಾಸು ಸೇವೆ ನೀಡಲು ಬ್ಯಾಂಕ್ ಆಫ್ ಬರೋಡಾದೊಂದಿಗೆ ಸಹಯೋಗಿಸಲು ನಾವು ಸಂತೋಷ ಪಡುತ್ತೇವೆ. ಈ ಒಪ್ಪಂದವು ತನ್ನ ಉದ್ಯೋಗಿಗಳ ಕಲ್ಯಾಣಕ್ಕೆ ಬಿಎಂಟಿಸಿಯ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದರು.

ಕರ್ನಾಟಕ ಸಾರಿಗೆ ಸಚಿವ ರಾಮಲಿಂಗ ರೆಡ್ಡಿ ಅವರ ಸಮ್ಮುಖದಲ್ಲಿ ಬೆಂಗಳೂರಿನ ಬಿಎಂಟಿಸಿ ಪ್ರಧಾನ ಕಚೇರಿಯಲ್ಲಿ ಈ ಒಪ್ಪಂದಕ್ಕೆ ಔಪಚಾರಿಕವಾಗಿ ಸಹಿ ಹಾಕಲಾಯಿತು. ಬಿಎಂಟಿಸಿಯ ಮುಖ್ಯ ಕಾರ್ಮಿಕ ಮತ್ತು ಕಲ್ಯಾಣ ಅಧಿಕಾರಿ .ಜಿ.ಎಸ್.ಸುಧೀರ್, ಉಪ ಪ್ರಧಾನ ವ್ಯವಸ್ಥಾಪಕ ಶೈಲೇಂದ್ರ ಕುಮಾರ್ ಸಿಂಗ್, ಬೆಂಗಳೂರು ವಲಯದ ವ್ಯವಹಾರ ಮತ್ತು ಅಭಿವೃದ್ಧಿ ಉಪ ಪ್ರಧಾನ ವ್ಯವಸ್ಥಾಪಕ ಸುಮಿ ಕುಮಾರ್ ಮಿಶ್ರಾ ಮತ್ತು ಬೆಂಗಳೂರು ವಲಯದ ಕ್ಲಸ್ಟರ್ ಸಮನ್ವಯ ಮತ್ತು ಬೆಂಬಲದ ಉಪ ಪ್ರಧಾನ ವ್ಯವಸ್ಥಾಪಕಿ ವೆಂಕಟರಮಣಿ ಶ್ರೀಪೂರ್ಣ ಉಪಸ್ಥಿತರಿದ್ದರು.

ಬಿಎಂಟಿಸಿ ಉದ್ಯೋಗಿಗಳ ಸೇವೆ ಗೌರವದ ಸಂಗತಿ

ಬಿಎಂಟಿಸಿ ಉದ್ಯೋಗಿಗಳಿಗೆ ಸೇವೆ ಸಲ್ಲಿಸುವುದು ಗೌರವದ ಸಂಗತಿ. ಈ ಪಾಲುದಾರಿಕೆಯ ಮೂಲಕ ದಕ್ಷ, ತಂತ್ರಜ್ಞಾನ-ಚಾಲಿತ ಮತ್ತು ಉದ್ಯೋಗಿ-ಕೇಂದ್ರಿತ ಬ್ಯಾಂಕಿಂಗ್ ಪರಿಹಾರ ಒದಗಿಸಲು ನಾವು ಬದ್ಧರಾಗಿದ್ದೇವೆ. ಈ ಒಪ್ಪಂದವು ಸಾರ್ವಜನಿಕ ವಲಯದ ಪ್ರಮುಖ ಸಾರಿಗೆ ಸಂಸ್ಥೆ ಮತ್ತು ಪ್ರಮುಖ ಬ್ಯಾಂಕಿಂಗ್ ಸಂಸ್ಥೆಯ ನಡುವಿನ ಬಲವಾದ ಸಹಯೋಗವನ್ನು ಸೂಚಿಸುತ್ತದೆ, ಇದು ಉದ್ಯೋಗಿ-ಕೇಂದ್ರಿತ ಸೇವಾ ವಿತರಣೆ ಮತ್ತು ಆರ್ಥಿಕ ಸೇರ್ಪಡೆಯ ಹಂಚಿಕೆಯ ಗುರಿ ಬಲಪಡಿಸುತ್ತದೆ ಎಂದು ಬ್ಯಾಂಕ್ ಆಫ್ ಬರೋಡಾದ ವಲಯ ಮುಖ್ಯಸ್ಥ ಮನೋಜ್ ಚಯಾನಿ ಹೇಳಿದರು.

ಅಭಿವೃದ್ಧಿ ಕಾರ್ಯ ತ್ವರಿತಗೊಳಿಸಲು ಸಚಿವ ಕೆ.ಜೆ. ಜಾರ್ಜ್ ಸೂಚನೆ

ವಿವಿಧ ಅಭಿವೃದ್ಧಿ ಕಾರ್ಯಗಳ ಪರಿಶೀಲನೆ: ಅಧಿಕಾರಿಗಳ ಜತೆ ಸಭೆ

ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ತಮ್ಮ ಸ್ವಕ್ಷೇತ್ರ ಸರ್ವಜ್ಞನಗರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದರು. ಭೇಟಿ ವೇಳೆ ಸ್ಥಳೀಯ ಕಾಂಗ್ರೆಸ್ ಮುಖಂಡರು, ಅಧಿಕಾರಿಗಳು ಇದ್ದರು.

ಬೆಂಗಳೂರು: ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಬುಧವಾರ ತಮ್ಮ ಸ್ವಕ್ಷೇತ್ರ ಸರ್ವಜ್ಞನಗರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿ, ಕೆಲಸ ತ್ವರಿತಗೊಳಿಸಿ ಕಾಲಮಿತಿಯಲ್ಲಿ ಪೂರ್ಣಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸರ್ವಜ್ಞನಗರ ಕ್ಷೇತ್ರದಲ್ಲಿ ನವೀಕೃತ ಸ್ಮಶಾನ ಉದ್ಘಾಟಿಸಿದ ಬಳಿಕ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಸಚಿವರು, ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಅದರಲ್ಲೂ ಮೂಲ ಸೌಕರ್ಯ ಕಲ್ಪಿಸುವ ಯೋಜನೆಗಳಿಗೆ ಆದ್ಯತೆ ನೀಡಲಾಗುತ್ತಿದೆ. ಈ ಎಲ್ಲಾ ಕೆಲಸಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು. ಸರ್ವಜ್ಞನಗರ ಕ್ಷೇತ್ರದಲ್ಲಿ ಎಲ್ಲಾ ಸಮುದಾಯದ ಜನರಿದ್ದು, ಎಲ್ಲರಿಗೂ ಅಗತ್ಯ ಸೌಲಭ್ಯ ಕೊಡಿಸಲು ಶಕ್ತಿ ಮೀರಿ ಪ್ರಯತ್ನಿಸುತ್ತಿದ್ದೇನೆ. ಕಾಂಗ್ರೆಸ್ ಪಕ್ಷ ಮತ್ತು ಸರಕಾರ ಎಲ್ಲಾ ಸಮುದಾಯಗಳನ್ನು ಒಂದೇ ರೀತಿ ಕಾಣುತ್ತಿದೆ. ಆದರೆ, ಕೆಲವರು ಜಾತಿ, ಧರ್ಮಗಳ ಮಧ್ಯೆ ವೈಷಮ್ಯ ಮೂಡಿಸುವ ಕೆಲಸ ಮಾಡುತ್ತಿದ್ದಾರೆ. ಅಂಥವರಿಗೆ ಅವಕಾಶ ಮಾಡಿಕೊಡದೆ ಎಲ್ಲರಿಗೂ ಅಗತ್ಯ ಸೌಲಭ್ಯ ಕಲ್ಪಿಸುವ ಮೂಲಕ ಕ್ಷೇತ್ರವನ್ನು ಸರ್ವ ಜನಾಂಗದ ಶಾಂತಿಯ ತೋಟವಾಗಿ ರೂಪಿಸುವುದು ನಮ್ಮ ಉದ್ದೇಶ ಎಂದರು.

ವೈಟ್ ಟ್ಯಾಪಿಂಗ್ ಕಾಮಗಾರಿಗಳ ಪರಿಶೀಲನೆ: ಸಚಿವರು ನಾಗವಾರ ಮುಖ್ಯ ರಸ್ತೆ, ಗೋವಿಂದಪುರ ರಸ್ತೆ, ಹೆಣ್ಣೂರು ಮುಖ್ಯ ರಸ್ತೆ, ನೆಹರೂ ರಸ್ತೆಗಳಲ್ಲಿ ಕೈಗೊಂಡಿರುವ ಫುಟ್ ಪಾತ್, ವೈಟ್ ಟ್ಯಾಪಿಂಗ್ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಿದರು. ಅಲ್ಲದೆ, ಎಚ್‌ಬಿಆರ್ ಲೇಔಟ್‌ನಲ್ಲಿರುವ ತ್ಯಾಜ್ಯ ಸಾಗಣಾ ಕೇಂದ್ರವನ್ನು ವೀಕ್ಷಿಸಿದರು. ಸಚಿವರ ಭೇಟಿ ವೇಳೆ ಆ ಭಾಗದ ನಾಗರಿಕರು ತಮ್ಮ ಪ್ರದೇಶದ ಸಮಸ್ಯೆ ಹೇಳಿಕೊಂಡರಲ್ಲದೆ, ಅವುಗಳನ್ನು ಬಗೆಹರಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಮನವಿ ಮಾಡಿದರು. ಸ್ಥಳೀಯ ಕಾಂಗ್ರೆಸ್ ಮುಖಂಡರು, ಅಧಿಕಾರಿಗಳು ಹಾಜರಿದ್ದರು.

ಆ.18ರಂದು ಒಳ ಮೀಸಲಾತಿಗೆ ಆಗ್ರಹಿಸಿ ಪ್ರತಿಭಟನೆ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಜಾರಿ ಮಾಡುವಂತೆ ಆಗ್ರಹಿಸಿ ರಾಜ್ಯ ಮಾದಿಗ ದಂಡೋರ ಸಂಘಟನೆ ಆ.18 ರಂದು ಬೆಳಗ್ಗೆ 11 ಗಂಟೆಗೆ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಿದೆ ಎಂದು ರಾಜ್ಯ ಮಾದಿಗ ದಂಡೋರ ಸಂಘಟನೆ ಅಧ್ಯಕ್ಷ ಬಿ.ನರಸಪ್ಪ ದಂಡೋರ ಹೇಳಿದರು.

ಈ ಕುರಿತ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳ ಮೀಸಲಾತಿ ಜಾರಿಗೊಳಿಸುವಂತೆ ಸುಪ್ರೀಂಕೋರ್ಟ್ ತೀರ್ಪು ನೀಡಿ ಆ.1ಕ್ಕೆ ಒಂದು ವರ್ಷ ಪೂರ್ಣಗೊಳ್ಳುತ್ತದೆ. ಆದರೆ ರಾಜ್ಯ ಸರಕಾರ ವಿನಾಕಾರಣ ಒಳಮೀಸಲಾತಿ ಜಾರಿಗೆ ವಿಳಂಬ ಮಾಡುತ್ತಿದೆ. ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್‌ದಾಸ್ ಅವರ ನೇತೃತ್ವದ ಆಯೋಗವು ಮಂದಗತಿಯಲ್ಲಿ ವರದಿ ತಯಾರಿಸುತ್ತಿದೆ. ಈಗಾಗಲೇ ಹರಿಯಾಣ, ತೆಲಂಗಾಣ ಮತ್ತು ಆಂಧ್ರಪ್ರದೇಶದಲ್ಲಿ ಒಳಮೀಸಲಾತಿ ಜಾರಿಗೊಳಿಸಲಾಗಿದೆ. ಆದರೆ ರಾಜ್ಯದಲ್ಲಿ ಈವರೆಗೂ ಒಳಮೀಸಲಾತಿ ಜಾರಿ ಮಾಡಿಲ್ಲ, ಹೀಗಾಗಿ ಆ.18 ರಂದು ಸ್ವತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ಸಂಘಟನೆಯ ರಾಜ್ಯ ಘಟಕ ಪ್ರಧಾನ ಕಾರ್ಯದರ್ಶಿ ಜೆ.ಎಂ.ದೇವರಾಜ್, ರಾಜ್ಯ ಘಟಕದ ಉಪಾಧ್ಯಕ್ಷ ಎಸ್. ರಾಮಕೃಷ್ಣ ಮಾದಿಗ, ವೆಂಕಟೇಶ್ ಕತ್ತಿ ಉಪಸ್ಥಿತರಿದ್ದರು.

ರಾಜ್ಯ ಸರಕಾರದ ಸಮಾಲೋಚನೆ ಸಭೆಯಲ್ಲಿ ಮಧುಮಿತಾ ದಾಸ್ ಅಭಿಮತ

ಉದ್ಯೋಗ ಒದಗಿಸುವಲ್ಲಿ ಕರ್ನಾಟಕ ಮುಂಚೂಣಿ

ಬೆಂಗಳೂರು: ಹೊಸ ಉದ್ಯೋಗಗಳನ್ನು ಒದಗಿಸುವಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ ಎಂದು ಭಾರತ ಸರಕಾರದ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಮಧುಮಿತಾ ದಾಸ್ ಅಭಿಪ್ರಾಯಪಟ್ಟರು.

ವಿಕಾಸಸೌಧದಲ್ಲಿ ನಡೆದ ಉನ್ನತ ಮಟ್ಟದ ರಾಜ್ಯ ಸರಕಾರದ ಸಮಾಲೋಚನೆ ಸಭೆಯಲ್ಲಿ ಮಾತನಾಡಿದ ಅವರು, ಪ್ರಧಾನ ಮಂತ್ರಿ ರೋಜ್‌ಗಾರ್ ಯೋಜನೆ ಅನುಷ್ಠಾನಗೊಳಿಸುವಲ್ಲಿ ರಾಜ್ಯವು ಉಪಕ್ರಮ ತೆಗೆದುಕೊಳ್ಳುವುದು ಮತ್ತು ಯೋಜನೆಯಲ್ಲಿ ಕಲ್ಪಿಸಲಾದ ಪ್ರಯೋಜನಗಳನ್ನು ತಲುಪಿಸುವಲ್ಲಿ ಅಗ್ರ ರಾಜ್ಯವಾಗುವುದು ಕಡ್ಡಾಯವಾಗಿದೆ. ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಮತ್ತು ಹೊಸದಾಗಿ ಸೇರ್ಪಡೆಗೊಳ್ಳುವವರಿಗೆ ಮತ್ತು ಅವರ ಉದ್ಯೋಗದಾತರಿಗೆ ಗರಿಷ್ಠ ಪ್ರಯೋಜನ ವಿಸ್ತರಿಸುವ ಸಾಮರ್ಥ್ಯ ಹೊಂದಿರುವ ಎಂಎಸ್‌ಎಂಇ ವಲಯದ ಮೇಲೆ ಗಮನಹರಿಸಬೇಕಾಗಿದೆ ಎಂದು ಸೂಚಿಸಿದರು.

ಸಭೆಯಲ್ಲಿ ಬೆಂಗಳೂರಿನ ಇಪಿಎಫ್‌ಒದ ಹೆಚ್ಚುವರಿ ಕೇಂದ್ರ ಭವಿಷ್ಯ ನಿಧಿ ಆಯುಕ್ತೆ ಅನಿತಾ ಸಿನ್ಹಾ ದೀಕ್ಷಿತ್, ಕಾರ್ಮಿಕ ಇಲಾಖೆ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಕೌಶಲ್ಯ ಅಭಿವೃದ್ಧಿ ಇಲಾಖೆ ಸೇರಿದಂತೆ ಕರ್ನಾಟಕ ಸರಕಾರದ ವಿವಿಧ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

ಭಾರತ ಸರಕಾರದ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಮಧುಮಿತಾ ದಾಸ್ ನೇತೃತ್ವದಲ್ಲಿ ಉನ್ನತ ಮಟ್ಟದ ರಾಜ್ಯ ಸರಕಾರದ ಸಮಾಲೋಚನೆ ಸಭೆ ನಡೆಯಿತು. ಬೆಂಗಳೂರಿನ ಇಪಿಎಫ್‌ಒದ ಹೆಚ್ಚುವರಿ ಕೇಂದ್ರ ಭವಿಷ್ಯ ನಿಧಿ ಆಯುಕ್ತೆ ಅನಿತಾ ಸಿನ್ಹಾ ದೀಕ್ಷಿತ್, ಕಾರ್ಮಿಕ ಇಲಾಖೆ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಕೌಶಲ್ಯ ಅಭಿವೃದ್ಧಿ ಇಲಾಖೆ ಸೇರಿ ಕರ್ನಾಟಕ ಸರಕಾರದ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

2 ವರ್ಷಗಳಲ್ಲಿ 3.5 ಕೋಟಿಗೂ ಹೆಚ್ಚು ಉದ್ಯೋಗಾವಕಾಶ: ಕೇಂದ್ರ ಸಚಿವ ಸಂಪುಟವು ಅನುಮೋದಿಸಿದ ಪ್ರಧಾನಮಂತ್ರಿ ರೋಜ್ಗಾರ್ ಯೋಜನೆಯು, 2025ರ ಆ.1 ರಿಂದ 2027ರ ಜು.31ರ ವರೆಗಿನ ಎರಡು ವರ್ಷಗಳ ಅವಧಿಯಲ್ಲಿ 3.5 ಕೋಟಿಗೂ ಹೆಚ್ಚು ಉದ್ಯೋಗಾವಕಾಶ ಸೃಷ್ಟಿಸುವ ಗುರಿ ಹೊಂದಿರುವ ಒಂದು ಪರಿವರ್ತಕ ಕೇಂದ್ರ ವಲಯದ ಉಪಕ್ರಮವಾಗಿದ್ದು, ಉತ್ಪಾದನಾ ವಲಯದ ಮೇಲೆ ವಿಶೇಷ ಗಮನ ಹರಿಸಲಾಗಿದೆ. 99,446 ಕೋಟಿ ಆರ್ಥಿಕ ವೆಚ್ಚದ ಬೆಂಬಲದೊಂದಿಗೆ, ಯೋಜನೆಯನ್ನು ಎರಡು ಉತ್ತಮವಾಗಿ ವ್ಯಾಖ್ಯಾನಿಸಲಾದ ಘಟಕಗಳ ಮೂಲಕ ಉದ್ಯೋಗಿಗಳು ಮತ್ತು ಉದ್ಯೋಗದಾತರು ಇಬ್ಬರನ್ನೂ ಪ್ರೋತ್ಸಾಹಿಸಲು ವಿನ್ಯಾಸಗೊಳಿಸಲಾಗಿದೆ. ಈ ಯೋಜನೆಯು ಎರಡು ಭಾಗಗಳನ್ನು ಒಳಗೊಂಡಿದೆ, ಭಾಗ ಎ ಮೊದಲ ಬಾರಿಗೆ ಕೆಲಸ ಮಾಡುವವರ ಮೇಲೆ ಕೇಂದ್ರೀಕೃತವಾಗಿದೆ ಮತ್ತು ಭಾಗ ಬಿ ಉದ್ಯೋಗದಾತರ ಮೇಲೆ ಕೇಂದ್ರೀಕೃತವಾಗಿದೆ ಎಂದು ಮಧುಮಿತಾ ದಾಸ್ ಮಾಹಿತಿ ನೀಡಿದರು.

ಕಾರ್ಮಿಕ ಮುಖಂಡ ಮೈಕೆಲ್ ಆರೋಗ್ಯ ವಿಚಾರಿಸಿದ ಸಚಿವ ಸಂತೋಷ್ ಲಾಡ್

ಇತ್ತೀಚೆಗೆ ಅಪಘಾತಕೀಡಾಗಿದ್ದ ಕಾರ್ಮಿಕ ಮುಖಂಡ ಮೈಕೆಲ್.ವಿ.ಫರ್ನಾಂಡಿಸ್ ಅವರನ್ನು ಕಾರ್ಮಿಕ ಸಚಿವ ಸಂತೋಷ್ ಲಾಡ್ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು. ಹು-ಧಾ ಕಾರ್ಪೊರೇಟರ್ ಮಯೂರ್ ಮೋರೆ ಇದ್ದರು.

ಬೆಂಗಳೂರು: ಇತ್ತೀಚೆಗೆ ಅಪಘಾತಕೀಡಾಗಿದ್ದ ಜಾರ್ಜ್ ಫರ್ನಾಂಡೀಸ್ ಅವರ ಸಹೋದರ ಕಾರ್ಮಿಕ ಮುಖಂಡ ಮೈಕೆಲ್ .ವಿ.ಫರ್ನಾಂಡಿಸ್ ಅವರನ್ನು ಕಾರ್ಮಿಕ ಸಚಿವ ಸಂತೋಷ್ ಲಾಡ್ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು.

ಕಳೆದ 60 ವರ್ಷಗಳಿಂದ ಕಾರ್ಮಿಕ ಸಂಘಟನೆಯಲ್ಲಿ ಹಲವಾರು ಸಾರ್ವಜನಿಕ ಉದ್ದಿಮೆಗಳ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದ ಮೈಖಲ್ ಅವರನ್ನು ಭೇಟಿ ಮಾಡಿದ ಸಂತೋಷ್ ಲಾಡ್, ಕಾರ್ಮಿಕ ಸಂಘಟನೆಯಲ್ಲಿ ತೊಡಗಿಸಿಕೊಂಡು ಕಾರ್ಮಿಕರ ಏಳಿಗೆಗಾಗಿ ಶ್ರಮಿಸಿದ್ದ ಅವರ ಸೇವೆಯನ್ನು ಸ್ಮರಿಸಿ, ಕಾರ್ಮಿಕರ ಆಗುಹೋಗುಗಳ ಬಗ್ಗೆ ಚರ್ಚಿಸಿ, ಮೈಖಲ್ ಅವರನ್ನು ಬೇಗ ಗುಣಮುಖರಾಗುವಂತೆ ಹಾರೈಸಿದರು. ಕಾರ್ಮಿಕ ಇಲಾಖೆ ಸಚಿವರಾಗಿ ಕಾರ್ಮಿಕರಿಗೆ ಸ್ಪಂದಿಸಿ ಕೆಲಸ ಮಾಡುತ್ತಿರುವುದಕ್ಕೆ ಮೈಕೆಲ್ ಅವರು ಸಂತೋಷ್ ಲಾಡ್ ಅವರ ಸೇವಾಕಾರ್ಯ ಮೆಚ್ಚಿ ಹರ್ಷ ವ್ಯಕ್ತಪಡಿಸಿ ಆಶೀರ್ವದಿಸಿದರು.

ಭೇಟಿ ಸಂದರ್ಭದಲ್ಲಿ ಫರ್ನಾಂಡಿಸ್ ಅವರ ಪತ್ನಿ ಡೂನ ಫರ್ನಾಂಡಿಸ್, ಹು-ಧಾ ಕಾರ್ಪೊರೇಟರ್ ಮಯೂರ್ ಮೋರೆ, ಸಂಘಟನಾಕಾರ ಲಕ್ಷ್ಮಯ್ಯ ಕಾಳಪ್ಪ ಸೇರಿ ಇತರರು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ವಿದ್ಯಾರ್ಥಿ ಸಾವು

ಹಾವೇರಿ: ಶಾಲಾ ಆವರಣದಲ್ಲಿ ತುಂಡಾಗಿ ಬಿದ್ದ ವಿದ್ಯುತ್ ತಂತಿ ತುಳಿದು ವಿದ್ಯಾರ್ಥಿ ಸಾವನ್ನಪ್ಪಿದ ಘಟನೆ ಹಾವೇರಿ ಜಿಲ್ಲೆ ಹಿರೇಕೆರೂರು ತಾಲೂಕು ಹಂಸಭಾವಿ ಗ್ರಾಮದಲ್ಲಿ ನಡೆದಿದೆ. ತೆಂಗಿನಮರದ ಬಳಿ ಹಾಯ್ದು ಹೋಗಿದ್ದ ವಿದ್ಯುತ್ ತಂತಿ ಬಿದ್ದು ಅವಘಡ ಸಂಭವಿಸಿದ್ದು, ಇನ್ನಿಬ್ಬರು ವಿದ್ಯಾರ್ಥಿಗಳು ಗಂಭೀರ ಗಾಯಗೊಂಡಿದ್ದಾರೆ. ಮಹಮ್ಮದ್ ಶಾ ಗೌಸ್ ರಟ್ಟಿಹಳ್ಳಿ (12) ವಿದ್ಯುತ್ ಶಾಕ್‌ಗೆ ಸಾವನ್ನಪ್ಪಿ ಬಾಲಕ. ಇಬ್ಬರನ್ನು ಹಾವೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಹೆಸ್ಕಾಂ ಅಧಿಕಾರಿಗಳ ವಿರುದ್ಧ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸ್ಥಳಕ್ಕೆ ಪೊಲೀಸರು. ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಹಂಸಭಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವತಿ ಆತ್ಮಹತ್ಯೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 4ನೇ ಬಾರಿಗೆ ಫೇಲ್ ಆಗಿದ್ದಕ್ಕೆ ಮನನೊಂದ 17 ವರ್ಷದ ಬಾಲಕಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೆಂಗಳೂರು ಉತ್ತರ ತಾಲೂಕಿನ ಕಾಚೋಹಳ್ಳಿ ಗ್ರಾಮದಲ್ಲಿ ನಡೆದಿದೆ. ಮೃತ ಯುವತಿಯನ್ನು ತನುಶ್ರೀ (17) ಎಂದು ಗುರುತಿಸಲಾಗಿದೆ. ರವಿ ಮತ್ತು ಶ್ವೇತಾ ದಂಪತಿ ಪುತ್ರಿಯಾದ ತನುಶ್ರೀ ನಗರದ ಮಾಗಡಿ ರಸ್ತೆಯ ಬ್ಯಾಡರಹಳ್ಳಿಯ ಸರಕಾರಿ ಶಾಲೆಯಲ್ಲಿ ಓದುತ್ತಿದ್ದಳು. ಈ ಬಾರಿಯ ಸಪ್ಲಿಮೆಂಟ್ರಿ ಪರೀಕ್ಷೆಯಲ್ಲಿ 3 ವಿಷಯಗಳಿಗೆ ಪರೀಕ್ಷೆ ಬರೆದಿದ್ದಳು. ಆದರೆ, ಗುರುವಾರ ಪ್ರಕಟವಾದ ಫಲಿತಾಂಶದಲ್ಲಿ (ಜು.24) ಮತ್ತೆ ಫೇಲ್ ಆಗಿದ್ದರು. ಮೊಬೈಲ್‌ನಲ್ಲಿ ಫಲಿತಾಂಶ ನೋಡಿ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಪೋಷಕರು ಮನೆಯಲ್ಲಿಲ್ಲದ ವೇಳೆ ಅಡುಗೆ ಮನೆಯಲ್ಲಿದ್ದ ಫ್ಯಾನಿಗೆ ನೇಣು ಬಿಗಿದುಕೊಂಡಿದ್ದಾಳೆ. ಘಟನೆ ಬೆಳಕಿಗೆ ಬಂದ ತಕ್ಷಣವೇ ಕುಟುಂಬಸ್ಥರು ಆಕೆಯನ್ನು ನೇಣು ಹಗ್ಗದಿಂದ ಕೆಳಗಿಳಿಸಿ ಪರೀಕ್ಷೆ ಮಾಡಿದ್ದಾರೆ. ಆ ವೇಳೆಗಾಗಲೇ ಪ್ರಾಣ ಹೋಗಿತ್ತು. ನೆಲಮಂಗಲ ಸರಕಾರಿ ಆಸ್ಪತ್ರೆಗೆ ಶವವನ್ನು ರವಾನಿಸಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಈ ಬಗ್ಗೆ ಮಾದನಾಯಕನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೃದಯಾಘಾತ: ಸಾವು

ಶಿವಮೊಗ್ಗ: ಕಾರು ಚಲಾಯಿಸುತ್ತಿದ್ದಾಗಲೇ ತೀವ್ರ ಹೃದಯಾಘಾತದಿಂದ ವ್ಯಕ್ತಿಯೊಬ್ಬರು ಮೃತಪಟ್ಟ ಘಟನೆ ಶಿವಮೊಗ್ಗ ಜಿಲ್ಲೆಯ ಆಯನೂರು ಪಟ್ಟಣದ ಸರ್ಕಲ್ ನಲ್ಲಿ ಶುಕ್ರವಾರ ನಡೆದಿದೆ. ರಿಪ್ಪನ್ ಪೇಟೆ ಪಟ್ಟಣದ ಹೊಸನಗರ ರಸ್ತೆಯ ನಿವಾಸಿ ಕಬೀರ್ (54) ಮೃತಪಟ್ಟ ದುರ್ದೈವಿಯಾಗಿದ್ದಾರೆ. ರಿಪ್ಪನ್ ಪೇಟೆಯಿಂದ ಶಿವಮೊಗ್ಗಕ್ಕೆ ಕಾರ್ಯನಿಮಿತ್ತ ಕಾರಿನಲ್ಲಿ ತೆರಳುತಿದ್ದಾಗ ಆಯನೂರು ಸರ್ಕಲ್ ನಲ್ಲಿ ಕಾರು ಚಾಲನೆಯಲ್ಲಿದ್ದಾಗಲೇ ಏಕಾಏಕಿ ಎದೆ ನೋವು ಎಂದು ಪಕ್ಕದಲ್ಲಿದ್ದ ವ್ಯಕ್ತಿಯ ಬಳಿ ಹೇಳಿ ಕೂಡಲೇ ಮೂರ್ಛೆ ಹೋಗಿದ್ದಾರೆ.ತತ್ ಕ್ಷಣ ಸಹಸವಾರ ಕಾರಿನ ಬ್ರೇಕ್ ಹಾಕಿ ನಿಲ್ಲಿಸಿ ಏನಾಗಿದೆ ಎಂದು ವಿಚಾರಿಸಿದ್ದಾರೆ. ನಂತರ ಸ್ಥಳೀಯರ ನೆರವಿನಿಂದ ಆಯನೂರು ಸಮುದಾಯ ಆಸ್ಪತ್ರೆಗೆ ಕರೆತಂದು ಕೂಡಲೇ ಆಂಬುಲೆನ್ಸ್ ಮೂಲಕ ಶಿವಮೊಗ್ಗದ ನಂಜಪ್ಪ ಲೈಫ ಕೇರ್ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಆದರೆ ಅಷ್ಟರಲ್ಲಾಗಲೇ ಪ್ರಾಣ ಪಕ್ಷಿ ಹಾರಿಹೋಗಿದೆ.

ನವಜಾತ ಶಿಶುಗಳಿಗೆ ಆಸರೆಯಾದ ಅಮೃತಧಾರೆ

ಇಂದಿರಾಗಾಂಧಿ, ವಾಣಿ ವಿಲಾಸ ಆಸ್ಪತ್ರೆಯಲ್ಲಿ ಎದೆ ಹಾಲು ಸಂಸ್ಕರಣಾ ಘಟಕ | ಇಡೀ ರಾಜ್ಯಕ್ಕೆ 2 ಸಂಸ್ಥೆಗಳು ಮಾದರಿ

ವಿಶ್ವವಾಣಿ ವಿಶೇಷ

ಬೆಂಗಳೂರು: ರಾಜ್ಯದಲ್ಲಿ ನವಜಾತ ಶಿಶುಗಳ ಪ್ರಮಾಣ ತಗ್ಗಿಸಲು ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ 'ಆಸರೆ' ಹಾಗೂ ವಾಣಿ ವಿಲಾಸ ಆಸ್ಪತ್ರೆಯ 'ಅಮೃತಧಾರೆ' ಘಟಕ ಯಶಸ್ವಿಯಾಗಿ ನಡೆಯುತ್ತಿದೆ. ರಾಜ್ಯದಲ್ಲಿ ಸ್ಥಾಪನೆಗೊಂಡ ಮೊದಲ ಎದೆ ಹಾಲಿನ ಕೇಂದ್ರ ಎನ್ನುವ ಹೆಗ್ಗಳಿಕೆಗೆ ವಾಣಿವಿಲಾಸ ಪಾತ್ರವಾಗಿದೆ.

ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ಮಕ್ಕಳ ಚಿಕಿತ್ಸೆಗೆ ಇದು ಹೆಸರಾಗಿದ್ದು, ರಾಜ್ಯದ ವಿವಿಧೆಡೆಯಿಂದ ಚಿಕಿತ್ಸೆಗೆ ಇಲ್ಲಿ ಬರುತ್ತಾರೆ. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಸಂಸ್ಥೆಯಲ್ಲಿ ಎದೆಹಾಲು ಸಂಸ್ಕರಣಾ ಕೇಂದ್ರ ನಿರ್ಮಿಸಲಾಗಿದೆ. ಚಿಕಿತ್ಸೆಗಾಗಿ ಮಕ್ಕಳನ್ನು ಕರೆತರುವ ತಾಯಂದಿರಿಂದಲೇ ಹೆಚ್ಚುವರಿ ಎದೆಹಾಲನ್ನು ದಾನವಾಗಿ ಪಡೆದು ಸಂಸ್ಥೆಯಲ್ಲಿ ಅಗತ್ಯವಿರುವ ಮಕ್ಕಳಿಗೆ ವೈದ್ಯರ ಶಿಫಾರಸು ಅನುಸಾರ ಒದಗಿಸಲಾಗುತ್ತದೆ. ಆದ್ದರಿಂದ ಸಂಸ್ಥೆಯ ಆಸರೆ ಎದೆಹಾಲು ಸಂಸ್ಕರಣಾ ಕೇಂದ್ರ ನೆರವಾಗಿದೆ.

ಈ ಕೇಂದ್ರವು ಒಂದೂವರೆ ವರ್ಷದಿಂದ ಕಾರ್ಯನಿರ್ವಹಿಸುತ್ತಿದ್ದು, ಈವರೆಗೆ 54 ಲೀ. ಎದೆಹಾಲು ಸಂಗ್ರಹಿಸಿ, ವಿತರಿಸಲಾಗಿದೆ. ನೂರಕ್ಕೂ ಅಧಿಕ ಮಕ್ಕಳು ಈ ಕೇಂದ್ರದ ನೆರವಿನಿಂದ ನಿಯಮಿತವಾಗಿ ಎದೆಹಾಲು ಪಡೆದು, ಚೇತರಿಸಿಕೊಂಡಿದ್ದಾರೆ. ಮಕ್ಕಳ ಚಿಕಿತ್ಸೆಗಾಗಿ ಸಂಸ್ಥೆಗೆ ಭೇಟಿ ನೀಡುವ ತಾಯಂದಿರಲ್ಲಿ ನಿತ್ಯ ಸರಾಸರಿ 10 ರಿಂದ 15 ತಾಯಂದಿರುವ ಈ ಕೇಂದ್ರಕ್ಕೆ ಭೇಟಿ ನೀಡುತ್ತಾರೆ. ಎದೆಹಾಲು ಪಂಪ್ ಮಾಡುವ ಐದು ಯಂತ್ರಗಳು ಇಲ್ಲಿದ್ದು, ಇದರ ಸಹಾಯದಿಂದ ಎದೆಹಾಲು ಪಡೆಯಲಾಗುತ್ತದೆ. ನಿತ್ಯ ಸರಾಸರಿ ನಾಲ್ವರಿಂದ ಐದು ತಾಯಂದಿರು ಮಾತ್ರ ಹೆಚ್ಚುವರಿ ಎದೆಹಾಲು ದಾನವಾಗಿ ನೀಡಿದರೆ, ಉಳಿದ ತಾಯಂದಿರು ಯಂತ್ರದ ಸಹಾಯದಿಂದ ಸಂಗ್ರಹಿಸಿದ ಹಾಲನ್ನು ತಮ್ಮ ಮಗುವಿಗೆ ಕೊಂಡೊಯ್ಯುತ್ತಿದ್ದಾರೆ.

ಅವಧಿ ಪೂರ್ವ ಜನನ, ಕಡಿಮೆ ತೂಕ ಅಥವಾ ತಾಯಿಯ ಅನಾರೋಗ್ಯದಿಂದಾಗಿ ಎದೆಹಾಲಿನಿಂದ ವಂಚಿತರಾಗುವ ಶಿಶುಗಳಿಗೆ 'ಅಮೃತ ಪಾನ' ಉಣಿಸುತ್ತಿರುವ ಬೆಂಗಳೂರಿನ ವಾಣಿ ವಿಲಾಸ ಆಸತ್ರೆಯ ತಾಯಂದಿರ ಎದೆ ಹಾಲಿನ ಬ್ಯಾಂಕ್, ಕಳೆದ ಮೂರ್ನಾಲ್ಕು ವರ್ಷಗಳಿಂದ ಶಿಶು ಮರಣ ಪ್ರಮಾಣ ತಗ್ಗಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿದೆ. ರಾಜ್ಯದಲ್ಲಿ ಮೊದಲ ಬಾರಿಗೆ ತಾಯಂದಿರ ಎದೆ ಹಾಲಿನ ಬ್ಯಾಂಕ್ ಅಮೃತಧಾರೆ ಸ್ಥಾಪಿಸುವ ಮೂಲಕ ನವಜಾತ ಶಿಶುಗಳ ಅಪೌಷ್ಟಿಕತೆ ನನ್ನ ದೂರ ಮಾಡುತ್ತಿದೆ.

ಮಾರ್ಚ್ 8, 2022 ರಲ್ಲಿ ಮಹಿಳಾ ದಿನಾಚರಣೆ ದಿನದಂದೇ, ರಾಜ್ಯದಲ್ಲಿ ಮೊದಲ ಬಾರಿಗೆ ಸರಕಾರಿ ಆಸ್ಪತ್ರೆ ವಾಣಿವಿಲಾಸದಲ್ಲಿ ತಾಯಿ ಎದೆಹಾಲು ಬ್ಯಾಂಕ್ ಯೋಜನೆ ಆರಂಭಗೊಂಡಿದ್ದು, ನೂರಾರು ನವಜಾತ ಶಿಶುಗಳಿಗೆ ಅನುಕೂಲವಾಗಿದೆ. ಒಂದು ಕೋಟಿ ರೂ. ವೆಚ್ಚದಲ್ಲಿ 'ತಾಯಂದಿರ ಎದೆ ಹಾಲಿನ ಬ್ಯಾಂಕ್' ನಿರ್ಮಾಣ ಮಾಡಲಾಗಿದ್ದು, ಪ್ರತಿ ದಿನ 20–30 ತಾಯಂದಿರು ಎದೆ ಹಾಲು ನೀಡುತ್ತಿದ್ದಾರೆ. ಈ ತಾಯಂದಿರ ಎದೆ ಹಾಲಿನ ಬ್ಯಾಂಕ್‌ಗೆ 'ಅಮೃತಧಾರೆ' ಎಂದು ಹೆಸರಿಡಲಾಗಿದೆ.

ವಾಣಿವಿಲಾಸ ಆಸ್ಪತ್ರೆಯಲ್ಲಿ ಪ್ರತಿ ತಿಂಗಳು 1000 ದಿಂದ 1,500ಕ್ಕೂ ಅಧಿಕ ಹೆರಿಗೆಗಳಾಗುತ್ತವೆ. ಪ್ರತಿ ತಿಂಗಳು ಜನಿಸುವ ಮಕ್ಕಳಲ್ಲಿ ಕನಿಷ್ಠ 150 ಶಿಶುಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಎದೆ ಹಾಲು ಅಗತ್ಯವಿದೆ. ಈ ಬ್ಯಾಂಕ್ ಆರಂಭದ ಬಳಿಕ ನಮ್ಮಲ್ಲಿ ಜನಿಸಿದ ಯಾವ ಮಗುವೂ ಎದೆ ಹಾಲಿನಿಂದ ವಂಚಿತವಾಗುತ್ತಿಲ್ಲ. ಈ ಎದೆಹಾಲಿನಿಂದಾಗಿ ಶಿಶು ಮರಣ ಪ್ರಮಾಣವು ಕಡಿಮೆಯಾಗಿದೆ ಎಂದು ಹೇಳುತ್ತಾರೆ ವಾಣಿವಿಲಾಸ ಆಸ್ಪತ್ರೆಯ ಮುಖ್ಯಸ್ಥರು.

ಪರೀಕ್ಷೆ ಬಳಿಕ ಹಾಲು ಸ್ವೀಕಾರ

ಅಗತ್ಯಕ್ಕಿಂತ ಹೆಚ್ಚು ಎದೆಹಾಲು ಹೊಂದಿರುವ ತಾಯಂದಿರೆಲ್ಲ ಹಾಲನ್ನು ದಾನ ಮಾಡಲು ಸಾಧ್ಯವಾಗುವುದಿಲ್ಲ. ಎಚ್‌ಐವಿ ಸೋಂಕು, ಜ್ವರ ಅಥವಾ ಇನ್ನಿತರ ಗಂಭೀರ ಸಮಸ್ಯೆಗೆ ಒಳಗಾಗಿದ್ದರೆ ಹಾಲನ್ನು ದಾನವಾಗಿ ಕೊಡುವಂತಿಲ್ಲ. ತಜ್ಞರಿಂದ ಪರೀಕ್ಷೆಗೆ ಒಳಗಾದ ಬಳಿಕವಷ್ಟೆ ಇನ್ನೊಂದು ಶಿಶುವಿಗೆ ಹಾಲನ್ನು ನೀಡಬಹುದು.

ಉತ್ತರ ಕರ್ನಾಟಕದಲ್ಲೂ ಸರಕಾರಿ ಎದೆಹಾಲು ಬ್ಯಾಂಕ್ ಸ್ಥಾಪನೆ

ಇದಲ್ಲದೆ ರಾಜ್ಯದ ಸರಕಾರಿ ಹಾಜಿ ಸರ್ ಇಸ್ಮಾಯಿಲ್ ಸೇಠ್ ಘೋಷ ಆಸ್ಪತ್ರೆಯಲ್ಲೂ ಇನ್ನೊಂದು ಹಾಲು ಬ್ಯಾಂಕ್ ಪ್ರಾರಂಭವಾಗಿದೆ. ಮಂಗಳೂರಿನ ಲೇಡಿ ಗೋಷೆನ್ ಆಸ್ಪತ್ರೆಯಲ್ಲಿ 'ಅಮೃತ ಘಟಕ', ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹಾಗೂ ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ, ಬೆಂಗಳೂರಿನಲ್ಲಿ ಆರಂಭವಾಗಿದೆ. ಉತ್ತರ ಕರ್ನಾಟಕ ವಿಜಯಪುರದಲಿ ಮೊದಲ ಸರಕಾರಿ ಎದೆಹಾಲು ಬ್ಯಾಂಕ್ ವಿಜಯಪುರ ಸರಕಾರಿ ಆಸ್ಪತ್ರೆಯಲ್ಲಿ ಸ್ಥಾಪನೆಯಾಗುತ್ತಿದೆ. ಇದಲ್ಲದೆ ಬೆಂಗಳೂರು, ಬೆಳಗಾವಿ, ಕಲಬುರಗಿ ಮತ್ತು ಮೈಸೂರು ಈ ನಾಲ್ಕು ಕಂದಾಯ ವಿಭಾಗಗಳಲ್ಲಿ ತಾಯಿ ಎದೆಹಾಲು ಬ್ಯಾಂಕ್‌ಗಳನ್ನು ಸ್ಥಾಪಿಸಲು ಸರಕಾರ ಯೋಜನೆ ರೂಪಿಸುತ್ತಿದೆ.

ಎದೆಹಾಲು ದಾನದ ಬಗ್ಗೆ ತಾಯಂದಿರಲ್ಲಿ ಜಾಗೃತಿ ಮೂಡಿಸಲಾಗುತ್ತದೆ. ಅವಧಿ ಪೂರ್ವ ಜನಿಸಿದ ಶಿಶುಗಳು, ಅಸ್ವಸ್ಥ ಶಿಶುಗಳು, ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವ ಶಿಶುಗಳು, ಎದೆಹಾಲು ಉತ್ಪಾದನೆ ಆಗದಿರುವ ತಾಯಂದಿರ ಶಿಶುಗಳಿಗೆ ಆಸರೆ ಎದೆಹಾಲು ಸಂಸ್ಕರಣಾ ಕೇಂದ್ರ ನೆರವಾಗಿದೆ.

-ಡಾ.ಕೆ.ಎಸ್.ಸಂಜಯ್
ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ನಿರ್ದೇಶಕ

ಧರ್ಮಸ್ಥಳ: ಅಪಪ್ರಚಾರ ಖಂಡಿಸಿ ಉರುಳು ಸೇವೆ

ಉಜಿರೆ: ನಾಡಿನ ಪವಿತ್ರ ಕ್ಷೇತ್ರ ಧರ್ಮಸ್ಥಳದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಇತರ ಸಮೂಹ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವ ವದಂತಿ ಹಾಗೂ ಅಪಪ್ರಚಾರ ತಡೆಯಲು ಮತ್ತು ಎಲ್ಲಾ ಪ್ರಕರಣಗಳು ಶೀಘ್ರ ಇತ್ಯರ್ಥವಾಗಲಿ ಎಂದು ಪ್ರಾರ್ಥಿಸಿ ಬೆಂಗಳೂರಿನಿಂದ ಬಂದ ಕನ್ನಡಿಗರ ರಕ್ಷಣಾ ವೇದಿಕೆಯ ಅಧ್ಯಕ್ಷರಾದ ಕನ್ನಡ ಪ್ರಕಾಶ್ ಅವರ ನೇತೃತ್ವದಲ್ಲಿ ಶುಕ್ರವಾರ ಧರ್ಮಸ್ಥಳಕ್ಕೆ ಭಕ್ತರು ಬಂದು ದೇವಸ್ಥಾನದಲ್ಲಿ ಉರುಳು ಸೇವೆ ಸಲ್ಲಿಸಿ ಶ್ರೀ ಮಂಜುನಾಥ ಸ್ವಾಮಿ ಸನ್ನಿಧಿಯಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಎಂಟು ಶತಮಾನಗಳ ಭವ್ಯ ಇತಿಹಾಸ ಮತ್ತು ಪರಂಪರೆಯನ್ನು ಹೊಂದಿರುವ ಧರ್ಮಸ್ಥಳವು ಸತ್ಯ, ಧರ್ಮ, ನ್ಯಾಯ, ನೀತಿ ನೆಲೆ ನಿಂತ ಪುಣ್ಯಸ್ಥಳವಾಗಿದೆ. ದೇಶ-ವಿದೇಶಗಳಲ್ಲಿ ಧರ್ಮಸ್ಥಳದ ಲಕ್ಷಾಂತರ ಮಂದಿ ಭಕ್ತರಿದ್ದಾರೆ.

ಇಂತಹ ಪವಿತ್ರ ಕ್ಷೇತ್ರಕ್ಕೆ ಅಪಪ್ರಚಾರ ಸಲ್ಲದು. ಈಗಾಗಲೆ ಸರಕಾರ ವಿಶೇಷ ತನಿಖಾ ತಂಡ ರಚಿಸಿದ್ದು, ಪ್ರಕರಣ ಶೀಘ್ರ ನ್ಯಾಯಯುತವಾಗಿ ಇತ್ಯರ್ಥವಾಗಲಿ ಎಂದು ಅವರು ದೇವರಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದ್ದಾರೆ.

ಬೆಳ್ತಂಗಡಿಯಲ್ಲಿ ಎಸ್‌ಐಟಿ ಕಚೇರಿ: ಅಪರಾಧ ಕೃತ್ಯಗಳ ತನಿಖೆಗೆ ರಾಜ್ಯ ಸರಕಾರ ರಚಿಸಿರುವ ಎಸ್ ಐಟಿ ತಂಡ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿ ಕಚೇರಿ ತೆರೆದಿದೆ.

ವಿಶೇಷ ತನಿಖಾ ತಂಡ ಶುಕ್ರವಾರ ಸಂಜೆ ಬೆಳ್ತಂಗಡಿ ತಲುಪಿದೆ. ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಮಹಾನಿರ್ದೇಶಕ ಪ್ರಣವ್ ಮೊಹಾಂತಿ ನೇತೃತ್ವದಲ್ಲಿ ತಂಡ ರಚಿಸಲಾಗಿದೆ. ಸದ್ಯ ನೇಮಕಾತಿ ವಿಭಾಗದ ಡಿಐಜಿ ಎಂ.ಎನ್. ಅನುಚೇತ್ ಅವರ ನೇತೃತ್ವದಲ್ಲಿ ತಂಡವು ದಕ್ಷಿಣ ಕನ್ನಡಕ್ಕೆ ತೆರಳಿದೆ. ಎಸ್‌ಪಿ ಜಿತೇಂದ್ರ ಕುಮಾರ್ ದಯಾಮ ಅವರನ್ನು ತನಿಖಾಧಿಕಾರಿಯಾಗಿ ನೇಮಿಸಲಾಗಿದೆ. ದಕ್ಷಿಣ ಕನ್ನಡ, ಉಡುಪಿ ಹಾಗೂ ಚಿಕ್ಕಮಗಳೂರು ಭಾಗದ 20 ಮಂದಿ ಅಧಿಕಾರಿಗಳನ್ನು ವಿಶೇಷ ತನಿಖಾ ತಂಡಕ್ಕೆ ಸೇರಿಸಿಕೊಳ್ಳಲಾಗಿದೆ. ಬೆಳ್ತಂಗಡಿಯ ಎಸ್‌ಐಟಿ ಕಚೇರಿಗೆ ಕಂಪ್ಯೂಟರ್ ಸೇರಿದಂತೆ ತನಿಖೆಗೆ ಅನುಕೂಲವಾಗುವ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಆಗಸ್ಟ್ 11ರ ಒಳಗೆ ಒಳ ಮೀಸಲು ಜಾರಿಗೆ ಆಗ್ರಹ

ಬಾಗಲಕೋಟೆ: ಸುಪ್ರೀಂ ಕೋರ್ಟ್ ನೀಡಿರುವ ಆದೇಶದಂತೆ ರಾಜ್ಯದಲ್ಲಿ ಒಳ ಮೀಸಲಾತಿಯನ್ನು ಆ.11 ಒಳಗಾಗಿ ಜಾರಿ ಮಾಡದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ ಎಚ್ಚರಿಕೆ ನೀಡಿದರು.

ರಾಜ್ಯಾದ್ಯಂತ ಉಗ್ರ ಹೋರಾಟ

ಸಂಸದ ಗೋವಿಂದ ಕಾರಜೋಳ ಎಚ್ಚರಿಕೆ

ನಗರದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳ ಮೀಸಲಾತಿಯನ್ನು ಜಾರಿ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಆದೇಶ ಮಾಡಿ ಆ.1ಕ್ಕೆ ಒಂದು ವರ್ಷ ಪೂರ್ಣಗೊಳ್ಳಲಿದ್ದು, ಈ ಹಿನ್ನೆಲೆಯಲ್ಲಿ ಸಾಂಕೇತಿಕವಾಗಿ ಆ.1 ರಂದು ಹೋರಾಟ ನಡೆಯಲಿದೆ ಎಂದು ಹೇಳಿದರು.

ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮೀಸಲಾತಿ ಶೇ.15 ರಿಂದ 17ಕ್ಕೆ ಹೆಚ್ಚಿಸಲಾಗಿದೆ. ಎಸ್ಟಿಯನ್ನು ಶೇ.3 ರಿಂದ 7ಕ್ಕೆ ಏರಿಸಲಾಗಿದೆ. ಈಗಾಗಲೇ ಇದು ಅನುಷ್ಠಾನದಲ್ಲಿಯೂ ಕೂಡ ಇದೆ. ಈ ಮೀಸಲಾತಿ ಹೆಚ್ಚಳ ಅನುಷ್ಠಾನಗೊಂಡಿಲ್ಲವೆಂದು ಕಾಂಗ್ರೆಸ್‌ನವರು ಹೇಳುತ್ತಿದ್ದು ಇದನ್ನು ಸಾಬೀತು ಪಡಿಸಿದರೆ ಸಂಸದ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವೆ ಎಂದು ಕಾಂಗ್ರೆಸ್ ನಾಯಕರಿಗೆ ಸವಾಲು ಹಾಕಿದರು.

ಮಾಜಿ ಸಚಿವ ನಾರಾಯಣಸ್ವಾಮಿ ಮಾತನಾಡಿ, ದೇಶದಲ್ಲಿ ಒಳ ಮೀಸಲಾತಿ ನೀಡುವುದೇ ಮೊದಲಲ್ಲ. ಪಂಜಾಬ್ ಸರಕಾರ ವಾಲ್ಮೀಕಿ ಜನಾಂಗಕ್ಕೆ ಒಳ ಮೀಸಲಾತಿ ನೀಡಿದೆ. ಹೀಗಿದ್ದಾಗ ಒಳಮೀಸಲಾತಿ ಜಾರಿಯಾಗುವುದರಲ್ಲಿ ಯಾವುದೇ ತೊಂದರೆಯಾಗುವುದಿಲ್ಲ ಎಂದರು.

ಸಚಿವರಾದ ಕೆ.ಎಚ್.ಮುನಿಯಪ್ಪ ಮತ್ತು ಆರ್.ಬಿ.ತಿಮ್ಮಾಪುರ ಪಕ್ಷದಲ್ಲಿ ಮತ್ತು ಸರಕಾರದಲ್ಲಿ ನಡೆಯದ ನಾಣ್ಯದಂತೆ ಇದ್ದಾರೆ. ಇವರಿಗೆ ಯಾವೂರ ದಾಸಯ್ಯ ಎನ್ನುವವರೂ ಕೂಡ ಇಲ್ಲ. ಹೀಗಿದ್ದಾಗ ಸಮುದಾಯವನ್ನು ದಾರಿ ತಪ್ಪಿಸುವ ಕೆಲಸ ಇವರಿಂದಲೇ ನಡೆಯುತ್ತಿದೆ.

-ಗೋವಿಂದ ಕಾರಜೋಳ ಚಿತ್ರದುರ್ಗ ಸಂಸದ

ಕರ್ನಾಟಕ ಭವನದಲ್ಲಿ ಅಧಿಕಾರಿಗಳ ಜಟಾಪಟಿ

← ಮೊದಲಪುಟದಿಂದ

ನಿವಾಸಿ ಆಯುಕ್ತರಿಗೆ ಬರೆದ ಪತ್ರದಲ್ಲಿ ಎಚ್.ಆಂಜನೇಯ ಅವರು, 'ಮೋಹನ್ ಕುಮಾರ್ ಸಹಾಯಕ ನಿವಾಸಿ ಆಯುಕ್ತರಾಗಿ ವರದಿ ಮಾಡಿಕೊಂಡ ದಿನಾಂಕದಿಂದ ಈ ದಿನಾಂಕದವರೆವಿಗೂ ನನ್ನ ಕರ್ತವ್ಯಕ್ಕೆ ಅಡ್ಡಿಮಾಡಿಕೊಂಡು ಬಂದಿದ್ದಾರೆ. ಇಂದು ಬೂಟು ಕಳಚಿಕೊಂಡು ಹೊಡೆಯುತ್ತೇನೆ ಅಂತ ಅವರ ಚೇಂಬರ್‌ನಲ್ಲಿ ಹೇಳಿದ್ದಾರೆ. ಕಚೇರಿಯ ಹೊರ ಆವರಣದಲ್ಲಿ ಎಲ್ಲರ ಎದುರಿಗೆ ಹಾಗೂ ಪ್ರಮೀಳಾ ಎಂಬುವವರ ಸಮ್ಮುಖದಲ್ಲಿ ಹೊಡೆಯಲು ಬಂದಿರುತ್ತಾರೆ. ನಾನು ಒಬ್ಬ ಗ್ರೂಪ್ ಬಿ ಅಧಿಕಾರಿಯಾಗಿದ್ದು ಹಾಗೂ ಉಪ ಮುಖ್ಯಮಂತ್ರಿಗಳ ವಿಶೇಷ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಾ ಬಂದಿರುತ್ತೇನೆ. ಈ ಹಿನ್ನೆಲೆಯಲ್ಲಿ ನನಗೆ ಏನಾದರೂ ಅಪಘಾತ ಆದರೆ ಮೋಹನ್ ಕುಮಾರ್ ಅವರೇ ಕಾರಣ' ಎಂದು ದೂರಿದ್ದಾರೆ.

ಮೋಹನ್ ಕುಮಾರ್ ಅವರ ಸೇವಾ ಪುಸ್ತಕವನ್ನು ಕೂಲಂಕುಷವಾಗಿ ಪರಿಶೀಲಿಸಿದರೆ ಈ ಹಿಂದೆ ಎಂ.ಎಂ.ಜೋಷಿಗೆ ಹೊಡೆದಿರುವುದು ಹಾಗೂ ಮೇಲಾಧಿಕಾರಿಗಳಿಗೆ ಯಾವ ರೀತಿ ಮರ್ಯಾದೆ ಇಲ್ಲದೇ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ ಎನ್ನುವ ಅಹಂನಲ್ಲಿ ಆಡಳಿತ ತಾನು ಹೇಳಿದ ರೀತಿಯಲ್ಲಿಯೇ ನಡೆಯಬೇಕೆಂಬಂತೆ ವರ್ತಿಸುತ್ತಿದ್ದಾರೆ ಎಂಬುದು ತಿಳಿಯುತ್ತದೆ. ಇದೇ ವಿಷಯಕ್ಕೋಸ್ಕರ ನಾನು ಕಚೇರಿ ಅಧೀಕ್ಷಕ-ಆಡಳಿತ (ಕರ್ನಾಟಕ ಭವನ) ದಿಂದ ವರ್ಗಾವಣೆ ಮಾಡಿಸಿ ನಿವಾಸಿ ಆಯುಕ್ತರವರ ಕಚೇರಿಯ ಅಧೀಕ್ಷಕನಾಗಿ ಕರ್ತವ್ಯ ನಿರ್ವಹಿಸಲು ಹಾಗೂ ಉಪ ಸಮನ್ವಯ ಅಧಿಕಾರಿ ಹುದ್ದೆಯ ಸೇವಾ ಹಿರಿತನದಲ್ಲಿ ಹಿರಿಯನಾದರೂ ಇವರ ಆಡಳಿತ ಅವಧಿಯಲ್ಲಿ ನಾನು ಲೆಕ್ಕಾಧಿಕಾರಿ (ಪ್ರಭಾರ) ನಾಗಿ ಕರ್ತವ್ಯ ನಿರ್ವಹಿಸದಿರುವಂತೆ ನನ್ನನ್ನು ಆ ಹುದ್ದೆಗೆ ವರ್ಗಾವಣೆ ಮಾಡದೇ ಇರಲು ಮೂಲ ಕಾರಣಕರ್ತರಾದವರು ಎಂದು ಆರೋಪಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ನಾನು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಮೋಹನ್ ಕುಮಾರ್ ಸೇವಾ ಅವಧಿಯಲ್ಲಿ ಅವರ ಮೇಲೆ ನಡೆದಿರುವ ಇಲಾಖಾ ವಿಚಾರಣೆ, ಮುಂಬಡ್ತಿ ಹಾಗೂ ನನಗೆ ಏಕ ವಚನದಲ್ಲಿ ಬೂಟು ಕಳಚಿಕೊಂಡು ಹೊಡೆಯುತ್ತೇನೆ ಎಂದು ನನ್ನ ಮಾನ ಮರ್ಯಾದೆ ಕಳೆದಿರುವ ಇವರ ಮೇಲೆ ಇಲಾಖಾ ವಿಚಾರಣೆ ನಡೆಸಿ ನನಗೆ ನ್ಯಾಯ ದೊರಕಿಸಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳತ್ತೇನೆ ಎಂದು ಕೋರಿದ್ದಾರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಅಇಂ(ವಿ)/ಪ್ರ(ಕಾ)/ದ-ವೃತ್ತ/ಕಾಇಂ(ಕ)/ಸ.ಕಾ.ಇಂ-2/25-26/ಇಪಿಆರ್-11/1763-65 ದಿನಾಂಕ:24.07.2025
ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)
ಕವಿಪ್ರನಿನಿ ವಿಚಾರಣೆ ಸಂಖ್ಯೆ: **ಕವಿಪ್ರನಿನಿ/ಅಇಂವಿ/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ-4/25-26/ಇಪಿಆರ್-11 ದಿನಾಂಕ 21.07.2025** ರ ಅನ್ವಯ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರಿನ ಅಡಿಯಲ್ಲಿ ಬರುವ **"220ಕೆವಿ ಸ್ಟೇಷನ್, ತಾತಗುಣಿ, ಕನಕಪುರ ರಸ್ತೆ, ಬೆಂಗಳೂರಿನಲ್ಲಿ ಹಾಲಿ ಇರುವ ಸಂರಕ್ಷಣಾ ವ್ಯವಸ್ಥೆಯನ್ನು ನವೀಕರಿಸುವ ಕಾಮಗಾರಿಗೆ"** ಬಿಡ್‌ನ್ನು ಆಹ್ವಾನಿಸಲಾಗಿದೆ.
ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರವೇ ಸ್ವೀಕರಿಸಲಾಗುತ್ತದೆ. ಮೇಲ್ಕಂಡ ಟೆಂಡರ್‌ನ ವಿವರವಾದ ಪ್ರಕಟಣೆಯನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ **ದಿನಾಂಕ: 25.07.2025** ರಂದು ಅಥವಾ ನಂತರ ಲಾಗಿನ್ ಆಗುವ ಮೂಲಕ ಪಡೆಯಬಹುದು.
ಸಹಿ/- ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ(ಕಾರ್ಯಾಚರಣೆ), ವೃತ್ತ-ದಕ್ಷಿಣ, ಕ.ವಿ.ಪ್ರ.ನಿ.ನಿ, ಕಛೇರಿ ಸಂಕೀರ್ಣ, ನೆಲಮಹಡಿ, ಆನಂದರಾವ್ ವೃತ್ತ, ಬೆಂಗಳೂರು-09.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕ.ನೀ.ನಿ.ನಿ., ಮ.ಎ.ಕಾ.ನಿ., ವಿಭಾಗ ನಂ. 1, ರಾಮದುರ್ಗ – 591 123,
ದೂ.: 08335-242143, ಇ-ಮೇಲ್: ee.knnlmlbc1rmd@gmail.com
ಟೆಂಡರ್ ಪ್ರಕಟಣೆ ಸಂಖ್ಯೆ : 1) ಕಾ.ಇಂ/ಕನೀನಿನಿ/ಮಎಕಾನಿ, ವಿ-1/ಪಿ.ಬಿ/ಟೆಂಡರ್/ಎಸ್.ಎಲ್.ಆಯ್.ಎಸ್/ಕೆ.ಆರ್.ಬಿ.ಸಿ ಪ್ರಕಟಣೆ ಸಂಖ್ಯೆ : 1110 ದಿನಾಂಕ : 06-11-2024 2) ಕಾ.ಇಂ/ಕನೀನಿನಿ/ಮಎಕಾನಿ, ವಿ-1/ಡಿ.ಬಿ/ಟೆಂಡರ್/ಎಸ್.ಎಲ್.ಆಯ್.ಎಸ್/ಎರಡನೇಕರೆ/ಅ.ಪ್ರಕಟಣೆ ಸಂಖ್ಯೆ : 2301, ದಿನಾಂಕ : 19-03-2025 3) ಕಾ.ಇಂ/ಕನೀನಿನಿ/ಮಎಕಾನಿ, ವಿ-1/ಡಿ.ಬಿ/ಟೆಂಡರ್/ಎಸ್.ಎಲ್.ಆಯ್.ಎಸ್/ಎರಡನೇಕರೆ/ಮೊದಲನೇಯ/ಅ.ಪ್ರಕಟಣೆ ಸಂಖ್ಯೆ : 359, ದಿನಾಂಕ : 13-06-2025 4) ಕಾ.ಇಂ/ಕನೀನಿನಿ/ಮಎಕಾನಿ, ವಿ-1/ಡಿ.ಬಿ/ಟೆಂಡರ್/ಎಸ್.ಎಲ್.ಆಯ್.ಎಸ್/ಎಂಎಲ್‌ಬಿಸಿ/ಮೊದಲನೇಯ/ಎರಡನೇಕರೆ/ಮೂರನೇಕರೆ/ಅ.ಪ್ರಕಟಣೆ ಸಂಖ್ಯೆ : 718, ದಿನಾಂಕ : 24-07-2025
ಅಲ್ಪಾವಧಿ ಟೆಂಡರ್ ಪ್ರಕಟಣೆ ಕರೆ
ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿದವರಿಂದ **ಮಲಪ್ರಭಾ ಎಡದಂಡೆ ಕಾಲುವೆ ವಿಭಾಗ ನಂ 1, ರಾಮದುರ್ಗ** ಲೆಕ್ಕ ಶೀರ್ಷಿಕೆ 4701 ಅಡಿಯಲ್ಲಿ ಬರುವ **07 ಕಾಮಗಾರಿಗಳಿಗೆ** ಕೆ.ಡಬ್ಲ್ಯೂ – 2, 3 & 4 ರ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ದ್ವಿ-ಲಕೋಟೆ ಮೂಲಕ ಟೆಂಡರ್ ಕರೆಯಲಾಗಿದ್ದು, **ಈ ಕಾಮಗಾರಿಗಳ ಅಂದಾಜು ಮೊತ್ತವು ರೂ. 41.36 ಲಕ್ಷಗಳಿಂದ 906.31 ಲಕ್ಷಗಳವರೆಗೆ ಇದ್ದು ಇ.ಎಂ.ಡಿ. ಮೊತ್ತ ರೂ. 82,750/- ರಿಂದ 13,59,500/- ಇರುತ್ತದೆ.** ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ.ಎಂ.ಡಿ. ಮೊತ್ತವು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿರುತ್ತದೆ.
1) ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ದಿನಾಂಕ : 25-07-2025 ರಿಂದ 02-08-2025 ರ ಸಂಜೆ 4.00 ಗಂಟೆವರೆಗೆ, 2) ಪ್ರೀ ಬಿಡ್ ಮೀಟಿಂಗ್/ಟೆಂಡರ್ ಪ್ರಶ್ನೆಗಳು / ಸ್ಪಷ್ಟೀಕರಣಗಳಿಗೆ ದಿನಾಂಕ : (ಕಾ.ನಿ.ಇಂ. ಕ.ನೀ.ನಿ.ನಿ., ಮ.ಎ.ಕಾ.ನಿ. ವಿಭಾಗ ನಂ. 1, ರಾಮದುರ್ಗ) : 28-07-2025 ರ ಅಪರಾಹ್ನ 12.00 ಗಂಟೆವರೆಗೆ & 28-07-2025 ರ ಸಂಜೆ 4.00 ಗಂಟೆವರೆಗೆ, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 04-08-2025 ರ ಬೆಳಿಗ್ಗೆ 11.00 ಗಂಟೆಯ ನಂತರ, 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : 06-08-2025 ತಾಂತ್ರಿಕ ಬಿಡ್ ಅನುಮೋದನೆ ದೊರೆತ ನಂತರ, 5) ಕಾಲಾವಧಿ : 06 ರಿಂದ 11 ತಿಂಗಳು (ಮಳೆಗಾಲ ಸಹಿತ), 6) ಇ.ಎಂ.ಡಿ. ಮೊತ್ತ ರೂ. 82,750/- ರಿಂದ 13,59,500/-.
ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ : 08335- 242143.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ., ಮ.ಎ.ಕಾ.ನಿ, ವಿಭಾಗ ನಂ. 1, ರಾಮದುರ್ಗ.
ಡಿಐಪಿಆರ್/ಬೆಳಗಾವಿ/724/ಮಣಿಪಾಲ್/2025-26

ಕೆಎಸ್‌ಆರ್‌ಟಿಸಿ ಯಾತ್ರಾ ಪ್ಯಾಕೇಜ್

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬೆಂಗಳೂರು ಕೇಂದ್ರೀಯ ವಿಭಾಗದ ವತಿಯಿಂದ ಸಾರ್ವಜನಿಕ ಪ್ರಯಾಣಿಕರ ಅನುಕೂಲ ಕ್ಕಾಗಿ ಬೆಂಗಳೂರು -ಶಿವಗಂಗೆ-ಸಿದ್ಧಗಂಗಾಮಠ-ದೇವರಾಯನದುರ್ಗ- ಗೊರವನಹಳ್ಳಿ - ವಿದುರಾಶ್ವಥ - ಘಾಟಿ ಸುಬ್ರಹ್ಮಣ್ಯ ಮಾರ್ಗದಲ್ಲಿ ಅಶ್ವಮೇಧ ಕ್ಲಾಸಿಕ್ ಸಾರಿಗೆಯನ್ನು ವಾರಾಂತ್ಯದ ಶನಿವಾರ ಮತ್ತು ಭಾನುವಾರ ದಿನಗಳಲ್ಲಿ ಪ್ಯಾಕೇಜ್ ಪ್ರವಾಸ ಪ್ರಾರಂಭಿಸಲಾಗಿದೆ. ಈ ಪ್ರವಾಸ ಬೆಳಗ್ಗೆ 6.30ಕ್ಕೆ ಪ್ರಾರಂಭ ಗೊಂಡು ರಾತ್ರಿ 8 ಗಂಟೆಗೆ ಮುಕ್ತಾಯಗೊಳ್ಳಲಿದೆ. ಈ ಪ್ರವಾಸ ಇದೇ ಜುಲೈ 26 ರಿಂದ ಪ್ರಾರಂಭಗೊಳ್ಳುತ್ತದೆ. ಪ್ರವೇಶ ಶುಲ್ಕ, ಉಪಹಾರ, ಮಧ್ಯಾಹ್ನ/ ರಾತ್ರಿ ಊಟ ಹೊರತುಪಡಿಸಿ, ಅಶ್ವಮೇಧ ಕ್ಲಾಸಿಕ್ ಸಾರಿಗೆ ಪ್ರಯಾಣ ಮುಂಗಡ ಬುಕಿಂಗ್ ಸೇರಿ ವಯಸ್ಕರರಿಗೆ 650, 6 ರಿಂದ 12 ವರ್ಷ ದೊಳಗಿನ ಮಕ್ಕಳಿಗೆ 500 ರು. ದರ ನಿಗದಿಪಡಿಸಿದೆ. ಮಾಹಿತಿಗೆ: 080-26252625 / 7760990100 / 7760990560 / 7760990287 ಅನ್ನು ಸಂಪರ್ಕಿಸಬಹುದು.

ಕರ್ನಾಟಕ ಸರ್ಕಾರ
ನಗರಸಭೆ ಕಾರ್ಯಾಲಯ ಹಾವೇರಿ, ಜಿಲ್ಲಾ: ಹಾವೇರಿ
ವೆಬ್ ಸೈಟ್: www.havericity.mrc.gov.in ಇ-ಮೇಲ್:itstaff_ulb_haveri@yahoo.com
ದೂರವಾಣಿ ಕಛೇರಿ 08375-233444 ದೂರವಾಣಿ:08375-232444
ಸಹಾಯವಾಣಿ:080-23108108
ಕ್ರ.ಸ:ನಸಹಾ/ತಾ.ವಿ/ವಹಿ/ /2025-26 ದಿನಾಂಕ:22-07-2025
ಟೆಂಡರ್ ಪ್ರಕಟಣೆ
ಈ ಮೂಲಕ ಯಾವತ್ತೂ ಗುತ್ತಿಗೆದಾರರಿಗೆ/ಪೂರೈಕೆದಾರರಿಗೆ ತಿಳಿಯಪಡಿಸುವುದೇನೆಂದರೆ, ಇ-ಪ್ರಕ್ಯೂರಮೆಂಟ್ ಮೂಲಕ ಸನ್ 2025-26 ನೇ ಸಾಲಿನ ನಗರಸಭೆ ನಿಧಿಯಲ್ಲಿ ರೂ. 50.00 ಲಕ್ಷ ವಾರ್ಷಿಕ ನೀರು ಸರಬರಾಜು ಸಾಮಗ್ರಿ ಖರೀದಿ ಕುರಿತು ಹಾಗೂ ಎಸ್.ಎಫ್.ಸಿ ಕುಡಿಯುವ ನೀರಿನ ಯೋಜನೆಯಡಿ ರೂ.2.82, ರೂ.3.25 ಹಾಗೂ ರೂ.3.25 ಲಕ್ಷದ ಒಟ್ಟು ನಾಲ್ಕು ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಕರೆಯಲಾಗಿದೆ. ಆಸಕ್ತವುಳ್ಳ ಗುತ್ತಿಗೆದಾರರು/ಪೂರೈಕೆದಾರರು ತಮ್ಮ-ತಮ್ಮ ದರಗಳನ್ನು ಈ ಕೆಳಕಾಣಿಸಿದ ವೆಬ್ ಸೈಟ್ ಮೂಲಕ ನಮೂದಿಸಬಹುದಾಗಿದೆ. kppp.karnataka.gov.in ನಲ್ಲಿ ನೋಡಿ ತಿಳಿದುಕೊಳ್ಳಬಹುದಾಗಿದೆ.
ಸಹಿ/- ಪೌರಾಯುಕ್ತರು, ನಗರಸಭೆ, ಹಾವೇರಿ,
ಸಹಿ/- ಅಧ್ಯಕ್ಷರು. ನಗರಸಭೆ, ಹಾವೇರಿ.

ಕರ್ನಾಟಕ ಸರ್ಕಾರ (ಜಿಲ್ಲಾ ಪಂಚಾಯತ್, ಗದಗ)
ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರವರ ಕಛೇರಿ, ಕೆ.ಎಚ್. ಪಾಟೀಲ ಕ್ರೀಡಾಂಗಣ, ಗದಗ-582101
E-mail dyssogadag@gmail.com Phone/Tel fax : 08372- 238345
ಕಡತ ಸಂಖ್ಯೆ: DYES-ADMN0HOST/1/2025-ADYSE ದಿನಾಂಕ:25-07-2025
ಅಲ್ಪಾವಧಿ ಟೆಂಡರ ಪ್ರಕಟಣೆ
2025-26 ನೇ ಸಾಲಿಗೆ ಅಗಸ್ಟ 2025 ರಿಂದ 325 ದಿನಗಳವರೆಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳಿಗೆ ಊಟೋಪಹಾರ ಪೂರೈಕೆಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮಗಳು 2000 ಅನ್ವಯ ಅರ್ಹ ಪೂರೈಕೆದಾರರಿಂದ ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ನಲ್ಲಿ ಹಾಗೂ ಕಛೇರಿಯ ದೂರವಾಣಿ ಸಂಖ್ಯೆ 08372-238345 ಅಥವಾ 9480886556ಗೆ ಸಂಪರ್ಕಿಸಲು ಕೋರಲಾಗಿದೆ. (1) ಅರ್ಜಿ ಆಹ್ವಾನಿಸುವ ದಿನಾಂಕ : **25-07-2025** (ಮುಂಜಾನೆ 11-00 ಗಂಟೆಗೆ) (2) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **11-08-2025** ಸಂಜೆ 5.00 ಗಂಟೆಗೆ (3) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **13-08-2025** ಬೆಳಿಗ್ಗೆ 11.00 ಗಂಟೆ (4) ಆರ್ಥಿಕ ಬಿಡ್ ತೆರೆಯುವ ದಿನಾಂಕ : **20-08-2025** ಬೆಳಿಗ್ಗೆ 11.00 ಗಂಟೆಗೆ (5) ಟೆಂಡರಿನ ಒಟ್ಟು ಮೊತ್ತ ರೂ. **73,12,500-00** (6) ಇ.ಎಂ.ಡಿ. ಮೊತ್ತ ರೂ. **1,46,250-00**
ಸಹಿ/- ಸಹಾಯಕ ನಿರ್ದೇಶಕರು, ಯುವಸಬಲೀಕರಣ ಹಾಗೂ ಕ್ರೀಡಾ ಇಲಾಖೆ, ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/196/2025-26

ಚಿಕ್ಕಮಗಳೂರಲ್ಲಿ ಮಳೆ: ಶಾಲೆಗಳಿಗೆ ಇಂದು ರಜೆ

ಚಿಕ್ಕಮಗಳೂರು: ಜಿಲ್ಲೆಯ ಮಲೆನಾಡು ಭಾಗದಲ್ಲಿ ಧಾರಾಕಾರ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಅಂಗನವಾಡಿ, ಪ್ರಾಥಮಿಕ ,ಪ್ರೌಢ ಶಾಲೆಗಳಿಗೆ ಜಿಲ್ಲಾಡಳಿತ ಶನಿವಾರ (ಜು26) ರಜೆ ಘೋಷಣೆ ಮಾಡಿದೆ.

ಹೆಚ್ಚಾಗಿ ಮಳೆಯಾಗುತ್ತಿರುವ ಜಿಲ್ಲೆಯ ಮಲೆನಾಡಿನ ತಾಲೂಕುಗಳಲ್ಲಿ ರಜೆ ಘೋಷಣೆ ಮಾಡಲಾಗಿದೆ. ಕಳಸ ,ಮೂಡಿಗೆರೆ, ಶೃಂಗೇರಿ ,ಕೊಪ್ಪ,ಎನ್ ಆರ್ ಪುರ ತಾಲೂಕು ಮತ್ತು ಚಿಕ್ಕಮಗಳೂರು ತಾಲೂಕಿನ ಜಾಗರ, ಖಾಂಡ್ಯ,ಆಲ್ದೂರು, ವಸ್ತಾರೆ, ಆವತಿ ಹೋಬಳಿ ಗಳಿಗೆ ರಜೆ ಘೋಷಣೆ ಮಾಡಿ ಜಿಲ್ಲಾಧಿಕಾರಿ ಮೀನಾ ನಾಗರಾಜ್ ಆದೇಶ ಹೊರಡಿಸಿದ್ದಾರೆ. ಮಲೆನಾಡು ,ಪಶ್ಚಿಮ ಘಟ್ಟಗಳ ಸಾಲಿನಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆ ಸುರಿಯುತ್ತಿದ್ದು ಜನಜೀವನ ಅಸ್ತವ್ಯಸ್ತವಾಗಿದೆ. ಕೆಲವೆಡೆ ಹಾನಿ ಸಂಭವಿಸಿದ ಬಗ್ಗೆಯೂ ವರದಿಯಾಗಿದೆ.

ನಗರಸಭಾ ಕಾರ್ಯಾಲಯ ಚನ್ನಪಟ್ಟಣ
ಬೆಂಗಳೂರು ದಕ್ಷಿಣ ಜಿಲ್ಲೆ, ದೂರವಾಣಿ : 080-27251235.
ಇಮೇಲ್ : itstaff_ulb_channapatna@yahoo.co.in
ವೆಬ್‌ಸೈಟ್ : www.channapatnacity.mrc.gov.in
ಸಂಖ್ಯೆ: ನ.ಸ.ಚ./ಕಾ.ವಿ./ಟೆಂಡರ್/ಸಿಆರ್/07/2025-26 ದಿನಾಂಕ: 23-07-2025
ಅಲ್ಪಾವಧಿ ಟೆಂಡರ್ ಪ್ರಕಟಣೆ
2024-25 ನೇ ಸಾಲಿನ ಎಸ್.ಎಫ್.ಸಿ. ವಿಶೇಷ ಅನುದಾನದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999 ಮತ್ತು ನಿಯಮಗಳು 2000 ದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆ ಮತ್ತು ಕೆ.ಪಿ.ಪಿ.ಪಿ. ಬೆಂಗಳೂರುರವರಲ್ಲಿ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ದ್ವಿ-ಲಕೋಟೆಯಲ್ಲಿ (2 Cover) **www.kppp.karnataka.gov.in** ಮೂಲಕ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು.
ಗುತ್ತಿಗೆದಾರರು ತಮ್ಮ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ.-3 ರ ಪ್ರಮಾಣಿತ ಟೆಂಡರ್ ದಸ್ತಾವೇಜಿನ ನಿಯಮಗಳಂತೆ ದಿನಾಂಕ : 31-07-2025 ರ ಸಂಜೆ 5.30 ಗಂಟೆಯೊಳಗೆ ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು. ಇ.ಎಂ.ಡಿ. ಮೊತ್ತ ಕೆ.ಪಿ.ಪಿ. ಪೋರ್ಟಲ್ ರೀತ್ಯಾ ಇರುತ್ತದೆ. ಪೋರ್ಟಲ್‌ನಲ್ಲಿ ಸ್ವೀಕೃತಿಯಾಗಿರುವ ಟೆಂಡರ್‌ಗಳನ್ನು ದಿನಾಂಕ : 02-08-2025 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಇಂಡೆಂಟ್ ಸಂಖ್ಯೆ : 1) 34382/ಕರೆ-3, 2) 34425/ಕರೆ-3.
ಹೆಚ್ಚಿನ ವಿವರಗಳಿಗೆ ಚನ್ನಪಟ್ಟಣ ನಗರಸಭೆಯ ತಾಂತ್ರಿಕ ಶಾಖೆಯಲ್ಲಿ ಹಾಗೂ ನಗರಸಭೆಯ **ವೆಬ್‌ಸೈಟ್ : www.channapatnacity.mrc.gov.in** ರ ಟೆಂಡರ್ ವಿಭಾಗದಲ್ಲಿ ವಿವರವಾದ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿದೆ.
ಸಹಿ/- ಪೌರಾಯುಕ್ತರು, ನಗರಸಭೆ, ಚನ್ನಪಟ್ಟಣ.
ಡಿಐಪಿಆರ್/ರಾಮನಗರ/254/ಮಣಿಪಾಲ್/2025-26

ನರ್ಸ್‌ಗೆ ಗಲ್ಲು ಶಿಕ್ಷೆ ತಪ್ಪಿಸಿದ್ದು ಕನ್ನಡಿಗ ಮೌಲಾ ಷರೀಫ್

ತುಮಕೂರು : ಯೆಮನ್ ದೇಶದಲ್ಲಿ ಗಲ್ಲು ಶಿಕ್ಷೆಗೆ ಗುರಿಯಾಗಿದ್ದ ಕೇರಳ ಮೂಲದ ನರ್ಸ್‌ಗೆ ಗಲ್ಲು ಶಿಕ್ಷೆ ತಪ್ಪಿಸಿದ ಕನ್ನಡಿಗ ಡಾ.ಮೌಲಾ ಷರೀಫ್ ಸೇವೆ ಸುಪ್ರೀಂ ಕೋರ್ಟ್ ವಕೀಲರ ಸೇವೆಗೆ ಸಮ ಎಂದು ಸಿದ್ಧಗಂಗಾ ಮಠಾಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ ಬಣ್ಣಿಸಿದರು.

ಸಿದ್ಧಗಂಗಾ ಮಠದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಡಾ.ಮೌಲಾ ಷರೀಫ್ ಅವರನ್ನು ಅಭಿನಂದಿಸಿ ಮಾತನಾಡಿದರು.

ಡಾ.ಮೌಲಾ ಷರೀಫ್ ಅವರದ್ದು ಮಾತೃ ಹೃದಯ. ಎಲ್ಲರೂ ಸಮಾಜದಲ್ಲಿ ಶಾಂತಿ, ನೆಮ್ಮದಿಯಿಂದ ಬದುಕುಬೇಕೆಂಬ ಕನಸು ಹೊತ್ತಿರುವ ಈ ಗುಣ ಇತರರಿಗೆ ಮಾದರಿ ಎಂದು ತಿಳಿಸಿದರು.

ಯೆಮನ್ ದೇಶದಲ್ಲಿ ಗಲ್ಲುಶಿಕ್ಷೆಗೆ ಗುರಿಯಾಗಿದ್ದ ನಿಮಿಷ ಎಂಬ ನರ್ಸ್ ಅವರ ಗಲ್ಲು ಶಿಕ್ಷೆ ರದ್ದು ಪಡಿಸಲು ಕೇಂದ್ರ ಸರಕಾರ ಸೇರಿದಂತೆ ಹಲವಾರು ಸಂಘ ಸಂಸ್ಥೆಗಳು ಮನವಿ ಮಾಡಿದ್ದವು. ಆದರೆ ಡಾ.ಮೌಲಾ ಷರೀಫ್ ಅವರು ಖುದ್ದು ಯಮನ್ ದೇಶದಲ್ಲಿ ಸಂತ್ರಸ್ತ ಕುಟುಂಬವನ್ನು ಭೇಟಿಯಾಗಿ, ಅವರು ಪ್ರಕರಣವನ್ನು ಕ್ಷಮಿಸುವಂತೆ ಮನವೊಲಿಸಿದ್ದಾರೆ. ಇದರಿಂದಾಗಿ ಅವರ ಮರಣದಂಡನೆ ಮುಂದೂಡಲಾಗಿದೆ. ಇದು ಎರಡು ದೇಶಗಳ ನಡುವಿನ ಬಾಂಧವ್ಯವನ್ನು ಮತ್ತಷ್ಟು ಹೆಚ್ಚಿಸಿದೆ ಎಂದು ನುಡಿದರು.



ಸಿದ್ಧಗಂಗಾ ಮಠಕ್ಕೆ ಭೇಟಿ ನೀಡಿದ ಡಾ.ಮೌಲಾ ಷರೀಫ್ ಅವರನ್ನು ಸಿದ್ದಲಿಂಗ ಸ್ವಾಮೀಜಿ ಅಭಿನಂದಿಸಿದರು.

ಡಾ.ಮೌಲಾ ಷರೀಫ್ ಅವರು ಹಿಂದೂಸ್ತಾನ್ ಗೋಲ್ಡ್ ಕಂಪನಿಯ ಮಾಲೀಕರಾಗಿ ಸಮಾಜದಲ್ಲಿರುವ ಬಡವರು, ಅಶಕ್ತರು, ನಿರ್ಗತಿಕರಿಗೆ ಸಾಕಷ್ಟು ಸೇವೆಯನ್ನು ಒದಗಿಸುತ್ತಾ ಬಂದಿರುವುದು ಪ್ರಶಂಸನೀಯ ಎಂದರು.

ಕಳೆದ ನಾಲ್ಕು ವರ್ಷಗಳ ಹಿಂದೆ ಲಿಂ.ಡಾ.ಶಿವಕುಮಾರಸ್ವಾಮಿಗಳ ಗದ್ದುಗೆಗೆ ಅವರ ಪುಣ್ಯ ಸ್ಮರಣೆಯ ದಿನದಂದು ಹೆಲಿಕಾಪ್ಟರ್ ಮೂಲಕ ಹೂವಿನ ಮಳೆ ಸುರಿಸುವ ಮೂಲಕ ಶ್ರೀಮಠದ ಭಕ್ತರ ಮೆಚ್ಚುಗೆ ಪಾತ್ರರಾದವರು ಡಾ.ಮೌಲಾ ಷರೀಫ್ ಎಂದರು.

ಡಾ.ಮೌಲಾ ಷರೀಫ್ ಮಾತನಾಡಿ, ಸಿದ್ದಗಂಗಾ ಮಠದಲ್ಲಿ ಒಂದು ದಿವ್ಯ ಶಕ್ತಿ ಇದೆ. ಇಲ್ಲಿಗೆ ಬರುವ ವ್ಯಕ್ತಿ ಹೂವಾಗಿ ಮರುಳುವುದನ್ನು ಕಾಣಬಹುದು ಎಂದು ನುಡಿದರು.

ರೈತರಿಗೆ ಸಮಸ್ಯೆಯಾಗದಂತೆ ಸರಕಾರ ಕ್ರಮ | 6,80,655 ಮೆಟ್ರಿಕ್ ಟನ್ ಯೂರಿಯಾಗೆ ಬೇಡಿಕೆ, 6,82,500 ಮೆ.ಟನ್ ಹಂಚಿಕೆ

ರಸಗೊಬ್ಬರ ಪೂರೈಕೆಯಲ್ಲಿ ಕೊರತೆಯಿಲ್ಲ: ಕೃಷಿ ಸಚಿವ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಯಾವುದೇ ಜಿಲ್ಲೆಯಲ್ಲಿಯೂ ರಸಗೊಬ್ಬರ ಪೂರೈಕೆಯಲ್ಲಿ ಕೊರತೆಯಿಲ್ಲ. ರೈತರು ಆತಂಕಕ್ಕೆ ಒಳಗಾಗಬಾರದು, ಅಲ್ಲದೇ ಬೇಡಿಕೆ ಹೆಚ್ಚಿರುವ ಪ್ರದೇಶಗಳಿಗೆ ಹೆಚ್ಚುವರಿ ಉಳಿಕೆ ಇರುವ ಇತರೆಡೆಗಳಿಂದ ವರ್ಗಾವಣೆ ಮಾಡಿ ಸರಿದೂಗಿಸಲಾಗುವುದು ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೈತರಿಗೆ ಯಾವುದೇ ರೀತಿ ತೊಂದರೆಗಳಾಗದಂತೆ ನಿಗಾ ವಹಿಸಲು ಇಲಾಖೆಯ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಈ ವರ್ಷ ಮುಂಗಾರು ಬೇಗ ಆರಂಭವಾದ ಕಾರಣ ಹಾಗೂ ಸುಮಾರು 2 ಲಕ್ಷ ಹೆಕ್ಟೇರ್ ಮುಸಿಕನ ಜೋಳ ಪ್ರದೇಶ ವಿಸ್ತರಣೆಯಾದ ಹಿನ್ನೆಲೆಯಲ್ಲಿ ಯೂರಿಯಾ ಗೊಬ್ಬರಕ್ಕೆ ಬೇಡಿಕೆ ಹೆಚ್ಚಿದೆ. ಕೆಲವು ರೈತರು ಆತಂಕದಿಂದ ಆಗಸ್ಟ್ - ಸೆಪ್ಟೆಂಬರ್‌ಗೆ ಬೇಕಾದ ಗೊಬ್ಬರವನ್ನು ಈಗಲೇ ಖರೀದಿಸಲು ಮುಂದಾಗಿರುವುದು ಬೇಡಿಕೆ ಹೆಚ್ಚಲು ಕಾರಣವಾಗಿರಬಹುದು ಎಂದು ಹೇಳಿದರು.

ರಾಜ್ಯದಲ್ಲಿ ನಮ್ಮ ಗುರಿಗಿಂತ ಹೆಚ್ಚಿನ ದಾಸ್ತಾನು ಲಭ್ಯವಿದೆ. ಜುಲೈ ತಿಂಗಳ ಬೇಡಿಕೆಯಂತೆ ವಿತರಣೆಯ ನಂತರವೂ ದಾಸ್ತಾನು ಉಳಿಕೆ ಇದೆ. ಒಂದು ವೇಳೆ ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ಯೂರಿಯಾ ಸೇರಿದಂತೆ ರಸಗೊಬ್ಬರದ ಕೊರತೆ ಕಂಡು ಬಂದಲ್ಲಿ ಹೆಚ್ಚುವರಿಯಾಗಿ ಉಳಿಕೆಯಾಗಿರುವ ಜಿಲ್ಲೆಗಳಿಂದ ಮರು ವಿಂಗಡಣೆ ಮಾಡಿ, ಸರಬರಾಜು ಮಾಡಲಾಗುವುದು. ಕೃಷಿಕರು ಯಾವುದೇ ಗೊಂದಲಕ್ಕೆ ಒಳಗಾಗಬಾರದು ಎಂದು ಮನವಿ ಮಾಡಿದರು.

ಜುಲೈ ತಿಂಗಳವರೆಗೆ ರಾಜ್ಯಕ್ಕೆ ಕೇಂದ್ರ ಸರಕಾರದಿಂದ 5,34,009 ಮೆ.ಟನ್ ರಸಗೊಬ್ಬರ (ಎಲ್ಲ ವಿಧದ ರಸಗೊಬ್ಬರ ಸೇರಿ) ಹಂಚಿಕೆಯಾಗಿದೆ. ಇದರಲ್ಲಿ ಈವರೆಗೆ 4,30,633 ಮೆ.ಟನ್ ಸರಬರಾಜಾಗಿದೆ. ಏಪ್ರಿಲ್‌ನಿಂದ ಜುಲೈವರೆಗೆ ರಾಜ್ಯದಲ್ಲಿ 6,80,655 ಮೆಟ್ರಿಕ್ ಟನ್ ಯೂರಿಯಾ ಬೇಡಿಕೆ ಇದ್ದು, ಕೇಂದ್ರ ಸರಕಾರದಿಂದ 6,82,500 ಮೆ.ಟನ್ ಹಂಚಿಕೆಯಾಗಿದೆ. ಇದರಲ್ಲಿ 5,26,817 ಮೆಟ್ರಿಕ್ ಟನ್ ಸರಬರಾಜಾಗಿದೆ ಎಂದು ವಿವರಿಸಿದರು.

3.46 ಲಕ್ಷ ಮೆ.ಟನ್ ಹಳೆ ಯೂರಿಯಾ ದಾಸ್ತಾನು: ರಾಜ್ಯದಲ್ಲಿ 3,46,499 ಮೆ. ಟನ್ ಹಳೆ ಯೂರಿಯಾ ದಾಸ್ತಾನು ಉಳಿಕೆ ಇದ್ದು, ಕೇಂದ್ರದಿಂದ ಸರಬರಾಜಾದ ಯೂರಿಯಾ ಸೇರಿದಂತೆ ಒಟ್ಟು 8,73,315 ಮೆಟ್ರಿಕ್ ಟನ್ ಲಭ್ಯತೆ ಇತ್ತು, ಇದರಲ್ಲಿ 7,08,859 ಮೆಟ್ರಿಕ್ ಟನ್ ಯೂರಿಯಾವನ್ನು ವಿವಿಧ ಜಿಲ್ಲೆಗಳಿಗೆ ವಿತರಿಸಿದ್ದು, ರೈತರಿಗೂ ಮಾರಾಟ ಮಾಡಲಾಗಿದೆ. ಇನ್ನು 1,64,567 ಮೆಟ್ರಿಕ್ ಟನ್ ಯೂರಿಯ ದಾಸ್ತಾನು ಉಳಿಕೆಯಿದೆ. ಅಲ್ಲದೇ ಕೇಂದ್ರದಿಂದ ಹಂತ ಹಂತವಾಗಿ ಪೂರೈಕೆಯಾಗುವ ರಸಗೊಬ್ಬರವನ್ನು ಆಗಿಂದಾಗಲೇ ಹಂಚಿಕೆ ಮಾಡಿ ವರ್ಗಾವಣೆ ಮಾಡಲಾಗುವುದು ಎಂದರು. ರಾಜ್ಯ ಸರಕಾರ ನಿರಂತರವಾಗಿ ಕೇಂದ್ರ ಸರಕಾರದೊಂದಿಗೆ ಸಂಪರ್ಕದಲ್ಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಹ ಯೂರಿಯಾ ಶೀಘ್ರ ಪೂರೈಕೆಗೆ ಪತ್ರ ಬರೆದು ಮನವಿ ಮಾಡಿದ್ದಾರೆ. ಯಾವುದೇ ಸಮಸ್ಯೆಗಳಿಲ್ಲದಂತೆ ರಸಗೊಬ್ಬರ ಪೂರೈಕೆ ನಿವಾರಿಸಲು ಅಧಿಕಾರಿಗಳ ತಂಡಕ್ಕೆ ಸೂಚಿಸಲಾಗಿದೆ ಎಂದು ಸೂಚನೆ ನೀಡಿದರು.

ಸಿಎಂ ಪತ್ರದಲ್ಲೇನಿದೆ?

- ರಾಜ್ಯದಲ್ಲಿ ರಸಗೊಬ್ಬರ ಕೊರತೆ ಎಂದು ಕೇಂದ್ರ ರಸಗೊಬ್ಬರ ಸಚಿವ ಜೆ.ಪಿ.ನಡ್ಡಾಗೆ ಪತ್ರ ಬರೆದಿರುವ ಸಿಎಂ
- 2025ರ ಖಾರಿಫ್ ಬೆಳೆಗೆ ರಾಜ್ಯಕ್ಕೆ ಕೇಂದ್ರ 11,17,000 ಮೆಟ್ರಿಕ್ ಟನ್ ಯೂರಿಯಾ ಹಂಚಿಕೆ ಆಗಿದೆ.
- ಈವರೆಗೆ ಕೇವಲ 5,16,959 ಮೆಟ್ರಿಕ್ ಟನ್ ರಸಗೊಬ್ಬರ ಮಾತ್ರ ಸರಬರಾಜು
- ಏ.ನಿಂದ ಜುಲೈವರೆಗೆ ರಾಜ್ಯಕ್ಕೆ 6,80,655 ಮೆಟ್ರಿಕ್ ಟನ್ ಯೂರಿಯಾ ಬೇಕು
- ಬಾಕಿ 1,65,541 ಮೆಟ್ರಿಕ್ ಟನ್ ಯೂರಿಯಾ ಪೂರೈಕೆ ತ್ವರಿತಗೊಳಿಸಲು ನಡ್ಡಾಗೆ ಪತ್ರ

ರಾಜ್ಯದಲ್ಲಿ ಅಧಿಕ ಪ್ರಮಾಣದಲ್ಲಿ ನ್ಯಾನೋ ಯೂರಿಯಾ ಕೂಡ ಲಭ್ಯವಿದೆ. ಇದು ಸಹ ಹೆಚ್ಚು ಪರಿಣಾಮಕಾರಿ ಮತ್ತು ಲಾಭದಾಯಕ ಎಂಬುದು ಕೃಷಿ ಇಲಾಖೆ, ಕೃಷಿ ವಿಶ್ವವಿದ್ಯಾಲಯಗಳು, ರೈತರು ನಡೆಸಿದ ಪ್ರಯೋಗಗಳಲ್ಲಿ ದೃಢಪಟ್ಟಿದೆ. ಆದ್ದರಿಂದ ಕೃಷಿಕರು ಈ ಬಗ್ಗೆಯೂ ಗಮನಹರಿಸಬೇಕು. ಅತಿಯಾದ ರಸಗೊಬ್ಬರ ಬಳಕೆ ಭೂಮಿಯ ಫಲವತ್ತತೆ ಹಾಗೂ ಮಾನವನ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಮುಂದಿನ ಭವಿಷ್ಯದ ದೃಷ್ಟಿಯಿಂದ ರಸಗೊಬ್ಬರಗಳ ಬಳಕೆ ಹಸಿರು ಗೊಬ್ಬರ, ಜೈವಿಕ ಗೊಬ್ಬರಗಳ ಬಳಕೆ ಹೆಚ್ಚಿಸುವುದು ಅಗತ್ಯವಿದೆ.

- ಚಲುವರಾಯಸ್ವಾಮಿ, ಕೃಷಿ ಸಚಿವ

ಜೆಪಿ ನಡ್ಡಾಗೆ ಪತ್ರ ಬರೆದ ಸಿಎಂ ಸಿದ್ದರಾಮಯ್ಯ

ರಾಜ್ಯದಲ್ಲಿ ರಸಗೊಬ್ಬರ ಕೊರತೆಯುಂಟಾಗಿದ್ದು, ಕೆಲವು ರಸಗೊಬ್ಬರ ಕಂಪನಿಗಳು ಕೇಂದ್ರ ಸರಕಾರವು ಹಂಚಿಕೆ ಮಾಡಿದ ಪ್ರಕಾರ ಯೂರಿಯಾ ಗೊಬ್ಬರ ಪೂರೈಸಲು ಅಸಮರ್ಥತೆಯನ್ನು ವ್ಯಕ್ತಪಡಿಸಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಈ ಸಂಬಂಧ ಕೇಂದ್ರ ರಸಗೊಬ್ಬರ ಸಚಿವ ಜೆ.ಪಿ.ನಡ್ಡಾಗೆ ಪತ್ರ ಬರೆದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸರಕಾರವು 2025ರ ಖಾರಿಫ್ ಬೆಳೆಗೆ ರಾಜ್ಯಕ್ಕೆ 11,17,000 ಮೆಟ್ರಿಕ್ ಟನ್ ಯೂರಿಯಾ ಹಂಚಿಕೆ ಮಾಡಿದೆ. ಈವರೆಗೆ ಕೇವಲ 5,16,959 ಮೆಟ್ರಿಕ್ ಟನ್ ರಸಗೊಬ್ಬರ ಸರಬರಾಜು ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಏಪ್ರಿಲ್‌ನಿಂದ ಜುಲೈವರೆಗೆ ರಾಜ್ಯಕ್ಕೆ 6,80,655 ಮೆಟ್ರಿಕ್ ಟನ್ ಯೂರಿಯಾದ ಅವಶ್ಯಕತೆ ಇದೆ. ರಾಜ್ಯದಲ್ಲಿ ಯೂರಿಯಾ ಪೂರೈಕೆಯ ತುರ್ತು ಅವಶ್ಯಕತೆಯಿದೆ. ಏಕೆಂದರೆ ಕರ್ನಾಟಕಕ್ಕೆ ಈ ವರ್ಷದ ಆರಂಭದಲ್ಲಿಯೇ ಮುಂಗಾರು ಪ್ರವೇಶ ಮಾಡಿದೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ವಿವಿಧ ಬೆಳೆಗಳ ವ್ಯಾಪ್ತಿಯು ಹೆಚ್ಚಾಗಿದೆ. ತುಂಗಭದ್ರಾ, ಕಾವೇರಿ ಮತ್ತು ಕೃಷ್ಣಾ ನದಿಗಳ ಆಯಕಟ್ಟಿನ ಪ್ರದೇಶಗಳಲ್ಲಿ ನೀರನ್ನು ಮೊದಲೇ ಬಿಡುಗಡೆ ಮಾಡಲಾಗಿದೆ. ಆದ್ದರಿಂದ ರೈತರ ಹಿತದೃಷ್ಟಿಯಿಂದ ರಾಜ್ಯ ಹಂಚಿಕೆ ಪ್ರಕಾರ ರಸಗೊಬ್ಬರ ಪೂರೈಸಿ. ಬಾಕಿ ಕೊರತೆ ಇರುವ 1,65,541 ಮೆಟ್ರಿಕ್ ಟನ್ ಯೂರಿಯಾದ ಪೂರೈಕೆಯನ್ನು ತ್ವರಿತಗೊಳಿಸಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವಂತೆ ಮುಖ್ಯಮಂತ್ರಿ ಮನವಿ ಮಾಡಿದ್ದಾರೆ.

ಒಬ್ಬರೇ ನಾಮಪತ್ರ ಸಲ್ಲಿಕೆ, ಅವಿರೋಧ ಆಯ್ಕೆ | ಭೀಮಾ ನಾಯ್ಕ್‌ಗೆ ಮುಖಭಂಗ

ರಾಬಕೊವಿಗೆ ರಾಘವೇಂದ್ರ ಹಿಟ್ನಾಳ್ ನೂತನ ಅಧ್ಯಕ್ಷ

ಬಳ್ಳಾರಿ: ರಾಯಚೂರು, ಬಳ್ಳಾರಿ, ಕೊಪ್ಪಳ, ವಿಜಯನಗರ (ರಾಬಕೊವಿ) ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಸ್ಥಾನಕ್ಕೆ ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ್ ಒಬ್ಬರೇ ನಾಮಪತ್ರ ಸಲ್ಲಿಸಿದ್ದು, ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಒಕ್ಕೂಟದ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ಇಂದು ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ರಾಘವೇಂದ್ರ ಹಿಟ್ನಾಳ್, ಉಪಾಧ್ಯಕ್ಷ ಸ್ಥಾನಕ್ಕೆ ಎನ್.ಸತ್ಯನಾರಾಯಣ ಮಾತ್ರವೇ ನಾಮಪತ್ರ ಸಲ್ಲಿಸಿದರು. ಇವರಿಬ್ಬರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಯೂ ಆದ, ಬಳ್ಳಾರಿ ಉಪವಿಭಾಗಾಧಿಕಾರಿ ಪ್ರಮೋದ್ ಘೋಷಿಸಿದರು. ಕೆಎಂಎಫ್‌ನ ಮಾಜಿ ಅಧ್ಯಕ್ಷ ಭೀಮ ನಾಯ್ಕ ಚುನಾವಣೆಯಿಂದ ದೂರ ಉಳಿದರು. ಒಕ್ಕೂಟದ ಒಟ್ಟು 12 ನಿರ್ದೇಶಕ ಸ್ಥಾನಗಳಲ್ಲಿ ಹಿಟ್ನಾಳ್ 7 ಮತ್ತು ಭೀಮ ನಾಯ್ಕ 5 ನಿರ್ದೇಶಕರ ಬಲ ಹೊಂದಿದ್ದರು. ಇದರ ಜತೆಗೆ ಸರಕಾರ ಹಿಟ್ನಾಳ್ ಅವರನ್ನು ಒಕ್ಕೂಟಕ್ಕೆ ಎರಡು ದಿನಗಳ ಹಿಂದಷ್ಟೇ ನಾಮನಿರ್ದೇಶನ ಮಾಡಿತ್ತು. ಹೀಗಾಗಿ ಹಿಟ್ನಾಳ್ ಸಂಖ್ಯಾ ಬಲ 8ಕ್ಕೆ ಏರಿತ್ತು.

ಕೆಎಂಎಫ್ ಗಾದಿ ಮೇಲೆ ಹಿಟ್ನಾಳ್ ಕಣ್ಣು?

ಶಾಸಕ ರಾಘವೇಂದ್ರ ಹಿಟ್ನಾಳ ಆರಂಭಿಕ ಹೆಜ್ಜೆಯಾಗಿ ರಾಬಕೊವಿ ಒಕ್ಕೂಟದ ಅಧ್ಯಕ್ಷರಾಗಿದಾರೆ. ಮುಂದೆ ಕೆಎಂಎಫ್ ಗಾದಿಯ ಮೇಲೆ ಕಣ್ಣಿಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ. ಅದಕ್ಕೆ ಬೇಕಾದ ವೇದಿಕೆಯನ್ನು ಸಿದ್ಧಪಡಿಸಿಕೊಳ್ಳುವ ಭಾಗವಾಗಿಯೇ ರಾಜ್ಯದ ವಿವಿಧ ಹಾಲು ಒಕ್ಕೂಟಗಳಲ್ಲಿರುವ ಆಪ್ತರನ್ನು ಕೆಎಂಎಫ್‌ಗೆ ನಾಮನಿರ್ದೇಶಿತ ಸದಸ್ಯರನ್ನಾಗಿ ಮಾಡಲಾಗುತ್ತಿದೆ ಎಂದು ತಿಳಿದು ಬಂದಿದೆ.

ಮುಡಾದ 14 ಸೈಟ್‌ಗಳನ್ನು ವಾಪಸ್ ಕೇಳಲ್ಲ

ಸುಪ್ರೀಂ ತೀರ್ಪಿನಿಂದ ತಾಯಿಗೆ ಸಮಾಧಾನ: ಡಾ.ಯತೀಂದ್ರ

ಮೈಸೂರು: ಕೊನೆಗೂ ನಮಗೆ ಕಾನೂನು ಹೋರಾಟದಲ್ಲಿ ಜಯ ಸಿಕ್ಕಿದೆ. ಈ ತೀರ್ಪಿನಿಂದ ನಮ್ಮ ತಾಯಿಗೆ ಸಮಾಧಾನ ತಂದಿದೆ ಎಂದು ಎಂಎಲ್ಸಿ ಡಾ.ಯತೀಂದ್ರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸತ್ಯ ಮೇವ ಜಯತೆ. ಮೊದಲಿನಂದಲೂ ನಾವು ಇದನ್ನೇ ಹೇಳುತ್ತಿದ್ದೆವು. ಇಡಿ ರಾಜಕೀಯ ಕಾರಣಕ್ಕೆ ತನಿಖೆ ಮಾಡುತ್ತಿದೆ ಎಂಬುದು ನಮಗೆ ಗೊತ್ತಿತ್ತು. ಈಗ ನ್ಯಾಯಾಲಯ ಸಹ ಅದನ್ನೇ ಹೇಳಿದೆ. ವಿನಾಕಾರಣ ನಮ್ಮ ತಾಯಿಯ ವಿಚಾರವನ್ನು ರಾಜಕೀಯವಾಗಿ ಎಳೆದು ತರಲಾಯಿತು. ಕೊನೆಗೂ ನಮಗೆ ಕಾನೂನು ಹೋರಾಟದಲ್ಲಿ ಜಯ ಸಿಕ್ಕಿದೆ. ಈ ತೀರ್ಪಿನಿಂದ ನಮ್ಮ ತಾಯಿಗೆ ಸಮಾಧಾನ ತಂದಿದೆ ಎಂದರು.

14 ಸೈಟ್ ವಾಪಸ್ ಕೇಳುವುದಿಲ್ಲ. ಇನ್ನೂ ಕೂಡ ಈ ವಿಚಾರದ ಬಗ್ಗೆ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ವಿಚಾರಣೆ ಮುಗಿಯಲಿ, ಆ ತೀರ್ಪು ಹೊರಬರಲಿ. ಆ ನಂತರ ಇದರ ಬಗ್ಗೆ ಚರ್ಚೆ ಮಾಡಿ ಇದರ ಬಗ್ಗೆ ಸೂಕ್ತ ನಿರ್ಧಾರ ಮಾಡುತ್ತೇವೆ. ಸದ್ಯಕ್ಕೆ ಮುಡಾಗೆ ವಾಪಸ್ ನೀಡಿರುವ ಸೈಟ್ ಗಳನ್ನು ಮತ್ತೆ ವಾಪಸ್ ಕೇಳುವುದಿಲ್ಲ ಎಂದು ಹೇಳಿದರು.

ತಂದೆಗೆ ಕಪ್ಪು ಚುಕ್ಕೆ: ನೊಂದಿರುವ ಅಮ್ಮ

ಆ ಸೈಟ್ ಗಳಿಂದಲೇ ತಂದೆಯ ರಾಜಕೀಯಕ್ಕೆ ಕಪ್ಪು ಚುಕ್ಕೆ ಬಂತು ಎಂಬ ನೋವು ನಮ್ಮ ತಾಯಿಗೆ ಇದೆ. ಹೀಗಾಗಿ ಅದನ್ನು ವಾಪಸ್ ಕೊಟ್ಟರು. ಸುಪ್ರೀಂ ಕೋರ್ಟ್ ರಿಲೀಫ್ ಕೊಟ್ಟಿದ್ದರೂ ಕೂಡ ನಾವು ಅದನ್ನು ವಾಪಸ್ ಕೇಳುವುದಿಲ್ಲ. ಈ ಸೈಟ್ ಗಳಲ್ಲಿ ಮನಿ ಲಾಂಡರಿಂಗ್ ಪ್ರಶ್ನೆಯೇ ಇಲ್ಲ. ಆದರೂ ಮನಿ ಲಾಂಡರಿಂಗ್ ಕೇಸ್ ಹಾಕಿದ್ದಾರೆ. ಇದರಿಂದ ತಾಯಿ ಮನನೊಂದು ಸೈಟ್ ಗಳನ್ನು ವಾಪಸ್ ಕೊಟ್ಟರು. ಕಾನೂನು ಪ್ರಕ್ರಿಯೆ ಮುಗಿಯಲಿ ಆಮೇಲೆ ನೋಡೋಣ ಎಂದು ಮೊದಲ ಬಾರಿಗೆ ತಾಯಿ ನೋವಿನ ಬಗ್ಗೆ ಹೇಳಿಕೊಂಡ ಪುತ್ರ ಡಾ. ಯತೀಂದ್ರ ಹೇಳಿದರು.

ನದಿಗೆ ಪಿಕಪ್ ಬಿದ್ದು ಚಾಲಕ ಸಾವು | ಶವಕ್ಕೆ ಶೋಧ

ಮಗನ ಶವ ಸಿಗುವ ಮುನ್ನ ಕೆರೆಗೆ ಹಾರಿ ತಾಯಿ ಸಾವು

ಚಿಕ್ಕಮಗಳೂರು: ಮಗನ ಸಾವಿನಿಂದ ಮನನೊಂದ ತಾಯಿ, ಮೃತದೇಹ ಸಿಗುವ ಮುನ್ನವೇ ಕೆರೆಗೆ ಹಾರಿ ಆತ್ಮಹತ್ಯೆಗೆ ಶರಣಾಗಿರುವ ಘಟನೆ ಚಿಕ್ಕಮಗಳೂರು ಜಿಲ್ಲೆಯ ಕಳಸ ತಾಲೂಕಿನ ಕೊಳಮಾಗೆ ಗ್ರಾಮದಲ್ಲಿ ನಡೆದಿದೆ.

ಮೃತರನ್ನು ರವಿಕಲಾ (48) ಎಂದು ಗುರುತಿಸಲಾಗಿದೆ. ಗುರುವಾರ ಸಂಜೆ ಚಾಲಕನ ನಿಯಂತ್ರಣ ತಪ್ಪಿ ಪಿಕಪ್ ಭದ್ರಾ ನದಿಗೆ ಬಿದ್ದ ಪರಿಣಾಮ ರವಿಕಲಾ ಪುತ್ರ ಶಮಂತ್ (23) ಸಾವನ್ನಪ್ಪಿದ್ದ.

ಮಲೆನಾಡಲ್ಲಿ ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯಿಂದಾಗಿ ಪಿಕಪ್ ನಿಯಂತ್ರಣ ತಪ್ಪಿ ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿಯೊಡೆದು ಭದ್ರಾ ನದಿಗೆ ಉರುಳಿ ಬಿದ್ದಿತ್ತು. ಚಾಲಕ ಶಮಂತ್ ಸಾವನ್ನಪ್ಪಿದ್ದ. ಗುರುವಾರ ಸಂಜೆ ಬಾಡಿಗೆ ಇದೆ ಎಂದು ಕಳಸಕ್ಕೆ ಬಂದು ವಾಪಸ್ ಗ್ರಾಮಕ್ಕೆ ಹೋಗುವಾಗ ಈ ಅವಘಡ ಸಂಭವಿಸಿತ್ತು. ನಿರಂತರ ಮಳೆ ಸುರಿಯುತ್ತಿದ್ದರಿಂದ ಭದ್ರಾ ನದಿಯಿಂದ ಜೀಪ್ ಮೇಲೆತ್ತುವ ಕಾರ್ಯಾಚರಣೆಗೂ ತೊಂದರೆಯಾಗಿತ್ತು. ಭದ್ರಾ ನದಿ ಬಳಿ ಬಂದಿದ್ದ ಶಮಂತ್ ತಾಯಿ ಮಗನ ನೆನೆದು ಕಣ್ಣೀರಿಟ್ಟಿದ್ದರು. ಆದರೆ, ಮಗನ ಮೃತದೇಹ ಸಿಗುವ ಮುನ್ನವೇ ರಾತ್ರಿ ವೇಳೆ ಮನೆಯ ಹಿಂದಿನ ಕೆರೆಗೆ ಹಾರಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

ನಯನ ಮೋಟಮ್ಮ ವಿರುದ್ಧ ಆಕ್ರೋಶ

ಘಟನೆ ನಡೆದು ಒಂದು ದಿನ ಕಳೆದರೂ ಇದುವರೆಗೆ ಯಾವುದೇ ಒಬ್ಬ ಜನಪ್ರತಿನಿಧಿ ಕೂಡ ಸ್ಥಳಕ್ಕೆ ಬಾರದೇ ಇದ್ದುದನ್ನು ಕಂಡು ಸ್ಥಳೀಯರು ಶಾಸಕಿ ನಯನ ಮೋಟಮ್ಮ ಹಾಗೂ ಸಂಸದರ ವಿರುದ್ಧ ಕಿಡಿಕಾರಿದ್ದಾರೆ. ಒಂದೇ ದಿನ, ಒಂದೇ ಮನೆಯಲ್ಲಿ ಇಬ್ಬರು ಸತ್ತಿದ್ದಾರೆ, ಸೌಜನ್ಯಕ್ಕಾದರೂ ಯಾವೊಬ್ಬ ಪ್ರತಿನಿಧಿಯೂ ಬಂದಿಲ್ಲ ಅದೇ ಶ್ರೀಮಂತರಾಗಿದ್ದರೆ ಇಷ್ಟು ಹೊತ್ತಿಗೆ ಜನಪ್ರತಿನಿಧಿಗಳು ಘಟನಾ ಸ್ಥಳದಲ್ಲೇ ಮೊಕ್ಕಾಂ ಹೆಲಿಕಾಪ್ಟರ್ ಮೂಲಕ ಮೃತದೇಹ ಹೂಡುತ್ತಿದ್ದರು ಆದರೆ ಇವರು ಪಾಪ ಬಡವರಲ್ವಾ ಎಂದು ಕಿಡಿಕಾರಿದ್ದಾರೆ.

ಅಧಿಕಾರಿಗಳ ಜತೆ ಸುರ್ಜೆವಾಲಾ ಸಭೆ ನಡೆಸಿಲ್ಲ: ಲಕ್ಷ್ಮೀ ಹೆಬ್ಬಾಳಕರ್

ಮಹದಾಯಿ ಬಗ್ಗೆ ಬಿಜೆಪಿ ಮಾತನಾಡಲಿ

ಬೆಳಗಾವಿ: ಮಹಾದಾಯಿ ಯೋಜನೆಗೆ ಗೋವಾ ಸರಕಾರ ಅನುಮತಿ ನೀಡುವುದಿಲ್ಲ ಎಂದು ಹೇಳಿರುವುದು ಸರಿಯಾದ ಕ್ರಮವಲ್ಲ. ಈ ಬಗ್ಗೆ ಬಿಜೆಪಿ ನಾಯಕರು ಮಾತನಾಡಬೇಕು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಮಹಾದಾಯಿ ಯೋಜನೆಗೆ ಗೋವಾ ಸರಕಾರ ಅನುಮತಿ ನೀಡದೆ ಎಂತ ಹೇಳಿಕೊಂಡು, ಲೋಕಸಭೆ ಚುನಾವಣೆ ವೇಳೆ ಇದನ್ನೆ ಬಿಜೆಪಿ ನಾಯಕರು ಅಸ್ತ್ರವಾಗಿ ಬಳಿಸಿಕೊಂಡು ಸಿಹಿ ಹಂಚಿಕೆ ಮಾಡಿ ದ್ದರು. ಇದೀಗ ಅವರಿಂದಲೇ ಉತ್ತರ ನಿರೀಕ್ಷಿಸಲಾಗುತ್ತಿದೆ ಎಂದರು. ಮಹಾದಾಯಿ ವಿಚಾರವಾಗಿ ರಾಜ್ಯ ಸರಕಾರ ರಾಜಕೀಯ ಮಾಡುತ್ತಿದೆ ಎಂಬ ಗೋವಾ ಮುಖ್ಯಮಂತ್ರಿ ಅವರ ಆರೋಪವನ್ನು ತಳ್ಳಿಹಾಕಿದ ಸಚಿವರು, ರಾಜ್ಯ ಸರಕಾರಕ್ಕೆ ಕುಡಿಯುವ ನೀರು, ಆರೋಗ್ಯ, ಶಿಕ್ಷಣ ವಿಚಾರದಲ್ಲಿ ರಾಜಕಾರಣ ಮಾಡುವ ಅನಿವಾರ್ಯತೆ ಇಲ್ಲ ಎಂದು ಸ್ಪಷ್ಟಪಡಿಸಿದರು.

ಗೋವಾದಲ್ಲಿ ಕನ್ನಡಿಗರ ಮೇಲೆ ಹಲ್ಲೆ ನಡೆಸಿರುವ ಕುರಿತು ಪ್ರತಿಕ್ರಿಯಿಸಿದ ಸಚಿವರು, ಕರ್ನಾಟಕವೇ ಆಗಲಿ, ಗೋವಾ ರಾಜ್ಯವೇ ಆಗಲಿ ಎರಡೂ ರಾಜ್ಯಗಳು ಕೂಡ ಭಾರತ ದೇಶದ ಅವಿಭಾಜ್ಯ ಅಂಗ. ಕನ್ನಡಿಗರ ಮೇಲೆ ಹಲ್ಲೆ ಮಾಡಿರುವ ವಿಚಾರವನ್ನು ಖಂಡಿಸುತ್ತೇನೆ. ಹಲ್ಲೆ ಮಾಡಿರುವುದು ಖಂಡಿತವಾಗಿಯೂ ತಪ್ಪು. ಕನ್ನಡಿಗರ ಮೇಲೆ ಹಲ್ಲೆ ನಡೆದಿರುವ ಬಗ್ಗೆ ಅಲ್ಲಿನ ಸರಕಾರ ಮೌನ ವಹಿಸಬಾರದು. ಗಡಿ ಉಸ್ತುವಾರಿ ಸಚಿವರಾದ ಎಚ್.ಕೆ ಪಾಟೀಲ್ ಅವರ ಗಮನಕ್ಕೆ ಈ ವಿಚಾರ ತರುತ್ತೇನೆ ಎಂದರು.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೆವಾಲಾ ಅವರು ಯಾವ ಇಲಾಖೆಯ ಅಧಿಕಾರಿಗಳ ಜತೆ ಸಭೆ ನಡೆಸಿಲ್ಲ. ಎಲ್ಲಾ ಸಚಿವರನ್ನು ಕರೆದು ಚರ್ಚೆ ಮಾಡಿದ್ದಾರೆ. ಸಚಿವರ ಜನಪರ ಕಾಳಜಿ, ಹೇಗೆ ಕೆಲಸ ಮಾಡುತ್ತಿದ್ದಾರೆ ಎಂಬ ಬಗ್ಗೆಯಷ್ಟೇ ಕೇಳಿದ್ದಾರೆ.

-ಲಕ್ಷ್ಮೀ ಹೆಬ್ಬಾಳ್ಕರ್, ಸಚಿವೆ

ಜಲ ನೀತಿಯಡಿ ಕುಡಿಯುವ ನೀರಿಗೆ ಮೊದಲ ಆದ್ಯತೆ: ಡಿಕೆಸು

ಗೋವಾದಿಂದ ವಿನಾಕಾರಣ ಮಹದಾಯಿ ತಗಾದೆ

ದೊಡ್ಡಬಳ್ಳಾಪುರ: ಕುಡಿಯುವ ನೀರಿನ ಯೋಜನೆಗೆ ಪ್ರಥಮ ಆದ್ಯತೆ ಎಂಬುದು ರಾಷ್ಟ್ರೀಯ ಜಲ ನೀತಿಯ ಮೂಲ ಉದ್ದೇಶವಾಗಿದೆ. ಕನ್ನಡಿಗರ ಕುಡಿಯುವ ನೀರಿನ ಯೋಜನೆಗೆ ಅವಕಾಶ ಕಲ್ಪಿಸಬೇಕು ಎಂದು ಬಮುಲ್ ಅಧ್ಯಕ್ಷ ಡಿ.ಕೆ. ಸುರೇಶ್ ತಿಳಿಸಿದರು.

ದೊಡ್ಡಬಳ್ಳಾಪುರದ ಬಮುಲ್ ಕಚೇರಿ ಬಳಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಅವರು, ಮಹದಾಯಿ ವಿಚಾರವಾಗಿ ಗೋವಾ ತಗಾದೆ ತೆಗೆದಿರುವ ಬಗ್ಗೆ ಕೇಳಿದಾಗ, ಮಹದಾಯಿ ವಿಚಾರ ಈಗಾಗಲೇ ನ್ಯಾಯಾಧಿಕರಣದಲ್ಲಿ ತೀರ್ಮಾನವಾಗಿದ್ದು, ನಮ್ಮ ಪಾಲಿನ ನೀರು ಎಷ್ಟು ಎಂದು ಸ್ಪಷ್ಟವಾಗಿದೆ. ಗೋವಾದವರು ಅನಗತ್ಯವಾಗಿ ನಮ್ಮ ಕುಡಿಯುವ ನೀರಿನ ಯೋಜನೆ ತಡೆಯುತ್ತಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಪ್ರಧಾನಮಂತ್ರಿಗಳು ಹಾಗೂ ಕೇಂದ್ರ ಜಲಶಕ್ತಿ ಸಚಿವರು ಸಂಬಂಧಪಟ್ಟ ಮುಖ್ಯಮಂತ್ರಿಗಳ ಜತೆ ಚರ್ಚಿಸಿ, ನ್ಯಾಯಾಧಿಕರಣದ ತೀರ್ಪಿನಂತೆ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಲು ಅನುವು ಮಾಡಿಕೊಡಬೇಕು. ಕನ್ನಡಿಗರಿಗೆ ಗೋವಾ ಜತೆ ಉತ್ತಮ ಬಾಂಧವ್ಯವಿದೆ. ಅನಗತ್ಯವಾಗಿ ಈ ರೀತಿ ಗೊಂದಲ ಸೃಷ್ಟಿಸಿ ಈ ಬಾಂಧವ್ಯವನ್ನು ಹಾಳುಮಾಡುವುದು ಒಳ್ಳೆಯದಲ್ಲ. ಉತ್ತರ ಕರ್ನಾಟಕ ಭಾಗದ ಜನರ ಕುಡಿಯುವ ನೀರಿನ ಯೋಜನೆ ಅನುಷ್ಠಾನಕ್ಕೆ ನಮ್ಮ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳು ಬದ್ಧರಾಗಿದ್ದಾರೆ. ಇದಕ್ಕೆ ಸಹಕಾರ ನೀಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ ಎಂದು ತಿಳಿಸಿದರು.

ಗುಣಮಟ್ಟದಲ್ಲಿ ನಂದಿನಿ ರಾಜಿಯಾಗುವುದಿಲ್ಲ

ಮೂರು ಜಿಲ್ಲೆಯ ನಾಯಕರು ನನಗೆ ಬಮುಲ್ ಜವಾಬ್ದಾರಿಯನ್ನು ವಹಿಸಿದ ನಂತರ ಹಾಲು ಉತ್ಪಾಕರ ಸಮಸ್ಯೆಗಳ ಬಗ್ಗೆ ಸಾಕಷ್ಟು ಚಿಂತನೆ ನಡೆಸಿದ್ದೇನೆ. ಬಮುಲ್ ನಲ್ಲಿ ನಿತ್ಯ 17-18 ಲಕ್ಷ ಲೀಟರ್ ಹಾಲು ಉತ್ಪಾದಿಸುತ್ತಿದ್ದು, ಹಾಲಿನ ಗುಣಮಟ್ಟ ನಿರ್ವಹಣೆ, ರೈತರಿಗೆ ಉತ್ತಮ ಬೆಲೆ ನೀಡುವುದು, ಗ್ರಾಹಕರ ಹಿತ ಕಾಯುವ ಜವಾಬ್ದಾರಿ ನಮ್ಮ ಮೇಲಿದೆ. ಮಾರುಕಟ್ಟೆಯಲ್ಲಿ ಸ್ಪರ್ಧೆ ನೀಡಲು ಅನೇಕ ಮಾರ್ಗಗಳಿವೆ. ಆದರೆ ನಾವು ಗುಣಮಟ್ಟ, ಆರೋಗ್ಯ ವಿಚಾರದಲ್ಲಿ ರಾಜಿಯಾಗದೇ ಕೆಲಸ ಮಾಡುತ್ತಿದ್ದೇವೆ. ನಂದಿನಿ ಮೂಲಕ 160ಕ್ಕೂ ಹೆಚ್ಚು ಉತ್ಪನ್ನಗಳನ್ನು ಮಾರುಕಟ್ಟೆಗೆ ಪರಿಚಯಿಸಲಾಗಿದೆ ಎಂದು ಬಮುಲ್ ಅಧ್ಯಕ್ಷ ಡಿಕೆ ಸುರೇಶ್ ಅವರು ಹೇಳಿದರು.

ಸುರಕ್ಷಿತವಾಗಿ ಜಪಾನ್ ತಲುಪಿದ ನಾಲ್ಕು ಆನೆಗಳು

ಬೆಂಗಳೂರು: ಬನ್ನೇರುಘಟ್ಟ ಜೈವಿಕ ಉದ್ಯಾನದಿಂದ ಕಳುಹಿಸಿಕೊಟ್ಟ ನಾಲ್ಕು ಆನೆಗಳು ಸುರಕ್ಷಿತವಾಗಿ ಜಪಾನ್ ಹಿಮೇಜಿ ಸೆಂಟ್ರಲ್ ಪಾರ್ಕ್ ತಲುಪಿವೆ.

ಆನೆಗಳನ್ನು ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಒಸಾಕಾದ ಕಾನ್ಸೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕತಾರ್ ಏರ್‌ವೇಸ್‌ನ ಸರಕು ವಿಮಾನ ಬಿ 777-200 ಎಫ್‌ನಲ್ಲಿ ಸಾಗಿಸಲಾಗಿತ್ತು. ಬನ್ನೇರುಘಟ್ಟ ಜೈವಿಕ ಉದ್ಯಾನದಿಂದ ಹಿಮೇಜಿ ಸೆಂಟ್ರಲ್ ಪಾರ್ಕ್-ಸಫಾರಿ ಪಾರ್ಕ್‌ಗೆ ಒಟ್ಟು ಸಾಗಣೆ ಸಮಯ ಸುಮಾರು 20 ಗಂಟೆಗಳು. ಕಳೆದ 6 ತಿಂಗಳುಗಳಿಂದ ಈ ಸಾಗಣೆಗಾಗಿ ಪ್ರಾಣಿಗಳಿಗೆ ತರಬೇತಿ ನೀಡಲಾಗಿತ್ತು, ಆನೆಗಳು ಉತ್ತಮ ಆರೋಗ್ಯದಿಂದಿದ್ದು ಪ್ರಯಾಣ ಮಾಡಬಹುದಾಗಿರುತ್ತದೆ ಎಂದು ಖಾತರಿ ಪಡಿಸಿಕೊಳ್ಳಲಾಗಿತ್ತು. ಜಪಾನ್‌ಗೆ ತೆರಳಿರುವ ಬನ್ನೇರುಘಟ್ಟ ಜೈವಿಕ ಉದ್ಯಾನದ ಪ್ರಾಣಿಪಾಲಕರು, ವೈದ್ಯಾಧಿಕಾರಿಗಳು, ಸಿಬ್ಬಂದಿ ಪ್ರಾಣಿಗಳು ಅಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳುವವರೆಗೂ ನಿಗಾ ವಹಿಸಲಿದ್ದಾರೆ. ಅದಾದ ನಂತರ ಅಲ್ಲಿಂದ ಬನ್ನೇರುಘಟ್ಟ ಉದ್ಯಾನಕ್ಕೆ ಯಾವ ಪ್ರಾಣಿಗಳನ್ನು ಕರೆ ತರ ಬಹುದು ಮತ್ತು ಅವುಗಳನ್ನು ಹಂತ ಹಂತವಾಗಿ ಇಲ್ಲಿಗೆ ಕರೆಸುವ ಸಂಬಂಧ ಮಾಹಿತಿ ವಿನಿಯೋಗ ನಡೆಯುತ್ತಿದೆ. ಪ್ರಾಣಿಗಳ ವಿನಿಮಯದಂತೆ ಜಪಾನ್‌ನಿಂದ ಇನ್ನೆರಡು 3 ತಿಂಗಳಲ್ಲಿ ಕ್ಯಾಪುಚಿನ್ ಕೋತಿ ಗಳು ಮೊದಲಿಗೆ ಬರಲಿವೆ. ಅನಂತರ ಉಳಿದ ಪ್ರಾಣಿಗಳನ್ನು ಇಲ್ಲಿಗೆ ರವಾನಿಸುವ ಯೋಜನೆ ಸಿದ್ಧಗೊಳ್ಳುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಮಸೂದೆಗೆ ಅಂಕಿತ ಹಾಕುತ್ತಿಲ್ಲ: ದಿನೇಶ್ ಗುಂಡೂರಾವ್

ದೇಗುಲಗಳ ಬಗ್ಗೆ ಗವರ್ನರ್ ಅಸಡ್ಡೆ

ಮಂಗಳೂರು: ರಾಜ್ಯದಲ್ಲಿ ಸಿ ದರ್ಜೆಯ ದೇವಸ್ಥಾನಗಳ ಅಭಿವೃದ್ಧಿಗೆ ಶ್ರೀಮಂತ ದೇವಸ್ಥಾನಗಳ ಆದಾಯದ ಶೇ 10ರಷ್ಟು ಮೊತ್ತವನ್ನು ಬಳಸುವ ಕುರಿತ ಮಸೂದೆಗೆ ವಿಧಾನಮಂಡಲದಲ್ಲಿ ಅಂಗೀಕಾರ ಲಭಿಸಿದೆ. ಆದರೆ ರಾಜ್ಯಪಾಲರು ಅದರ ಬಗ್ಗೆ ಅಸಡ್ಡೆ ಹೊಂದಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಆರೋಪಿಸಿದರು.



ಹಿಂದು ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ದೇವಸ್ಥಾನಗಳ ವ್ಯವಸ್ಥಾಪನಾ ಸಮಿತಿಗಳ ಸಮಾಲೋಚನಾ ಸಭೆಯಲ್ಲಿ ಮಾತನಾಡಿದ ಅವರು, ಮಸೂದೆಗೆ ರಾಜ್ಯ ಪಾಲರು ಸಹಿ ಮಾಡಿದ್ದರೆ ಸಿ ದರ್ಜೆಯ ದೇವಸ್ಥಾನಗಳ ಅಭಿ ವೃದ್ಧಿಗೂ ಅಲ್ಲಿ ಕೆಲಸ ಮಾಡುತ್ತಿರುವವರ ಜೀವನ ಮಟ್ಟ ಸುಧಾರಿಸುವುದಕ್ಕೂ ಅನುಕೂಲ ಆಗುತ್ತಿತ್ತು. ಆದರೆ ಅವರು ಅದನ್ನು ಅನಗತ್ಯವಾಗಿ ರಾಷ್ಟ್ರಪತಿಗಳಿಗೆ ಕಳುಹಿಸಿದ್ದಾರೆ ಎಂದರು.

ಆದಾಯ ದುರ್ಬಳಕೆ ಆರೋಪ: ಧಾರ್ಮಿಕ ದತ್ತಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ದೇವಸ್ಥಾನಗಳ ಕಾಣಿಕೆ ಹುಂಡಿಯಲ್ಲಿ ಸಂಗ್ರಹವಾಗುವ ಹಣವನ್ನು ಸರಕಾರ ದುರ್ಬಳಕೆ ಮಾಡಿಕೊಳ್ಳುತ್ತಿದೆ ಮತ್ತು ಅನ್ಯಧರ್ಮದ ಅಭಿವೃದ್ಧಿಗೆ ಬಳಸುತ್ತಿದೆ ಎಂಬ ಆರೋಪದ ಕುರಿತು ಸಭೆಯಲ್ಲಿ ಗಂಭೀರ ಚರ್ಚೆಯಾಯಿತು.ಧಾರ್ಮಿಕ ದತ್ತಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ದೇವಸ್ಥಾನಗಳ ಬಗ್ಗೆ ರಾಜಕೀಯ ಲಾಭಕ್ಕಾಗಿ ಅಪಪ್ರಚಾರ ಮಾಡಲಾಗುತ್ತಿದೆ. ಅದು ರಾಷ್ಟ್ರಮಟ್ಟದಲ್ಲೂ ಚರ್ಚೆ ಆಗುತ್ತಿದೆ. ಕಾಂಗ್ರೆಸ್ ಮತ್ತು ಸಿದ್ದರಾಮಯ್ಯ ಅವರು ಹಿಂದೂ ವಿರೋಧಿಗಳು ಎಂಬ ಆರೋಪವೂ ಆಗಾಗ ಕೇಳಬರುತ್ತಿದೆ. ಆದರೆ ದೇವಸ್ಥಾನಗಳಲ್ಲಿ ಅರ್ಚಕರಿಗೆ ತಸ್ತೀಕ್ ನೀಡುವ ಪದ್ಧತಿಯನ್ನು ಆರಂಭಿಸಿದ್ದೇ ಕಾಂಗ್ರೆಸ್‌ನ ಗುಂಡೂರಾವ್ ಅವರು. ಈಗ ಮೂರು ಬಾರಿ ತಸ್ತೀಕ್ ಮೊತ್ತ ಹೆಚ್ಚಳ ಮಾಡಿರುವುದು ಸಿದ್ದರಾಮಯ್ಯ ಸರಕಾರ ಎಂದು ದಿನೇಶ್ ಗುಂಡೂರಾವ್ ಹೇಳಿದರು.

ಹಿಂದು ದೇವಸ್ಥಾನಗಳ ಹಣ ಅನ್ಯಧರ್ಮದ ಏಳಿಗೆಗಾಗಿ ಬಳಸಲಾಗುತ್ತಿದೆ ಎಂಬ ಸುಳ್ಳು ಆರೋಪ ಆಗಾಗ ಕೇಳಿಬರು ತ್ತಿದೆ. ಇದನ್ನು ಗಂಭೀರವಾಗಿ ಪರಿಗ ಣಿಸಿ, ಹಣ ದುರುಪಯೋಗ ಆಗುತ್ತಿಲ್ಲ ಎಂಬ ಮಾಹಿತಿ ಇರುವ ಫಲಕವನ್ನು ದೇವಸ್ಥಾನಗಳ ಎದುರು ಅಳವಡಿಸಬೇಕು.

-ಮಂಜುನಾಥ ಭಂಡಾರಿ, ಶಾಸಕ

ಬಲ್ಡೋಟ ಹೋರಾಟಗಾರರ ಮೇಲೆ ಎಫ್‌ಐಆರ್ ದಾಖಲು

ಕೊಪ್ಪಳ: ನಗರಕ್ಕೆ ಹೊಂದಿಕೊಂಡಿರುವ ಬಿಎಸ್ಪಿಎಲ್ ಕಾರ್ಖಾನೆಯ ಉದ್ದೇಶಿತ ಜಾಗದಲ್ಲಿ ಜಾನುವಾರು ಸಮೇತ ಕಳೆದ ಎರಡು ದಿನಗಳ ಹಿಂದೆ ಪ್ರತಿಭಟಿಸಿದ್ದ 9 ಜನ ಹೋರಾಟಗಾರರ ಮೇಲೆ ಪ್ರಕರಣ ದಾಖಲಾಗಿದೆ.

ಬಿಎಸ್‌ಪಿಎಲ್ ಕಂಪನಿ ಬಸಾಪೂರ ಕೆರೆ ಒಳಗೊಂಡು ಕಾಂಪೌಂಡ್ ನಿರ್ಮಾಣ ಮಾಡಿದ್ದನ್ನು ವಿರೋಧಿಸಿ, ಬಸಾಪುರ ಕೆರೆಗೆ ಜಾನುವಾರು ನುಗ್ಗಿಸಿದ್ದಕ್ಕೆ ಸಂಬಂಧಿಸಿದಂತೆ ಕಂಪನಿ ಭದ್ರತಾ ಸಿಬ್ಬಂದಿ ದೂರು ನೀಡಿದೆ. ಭದ್ರತಾ ಸಿಬ್ಬಂದಿ ದೂರು ಆಧರಿಸಿ 9 ಹೋರಾಟಗಾರರ ವಿರುದ್ಧ ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಲ್ಲಮಪ್ರಭು ಬೆಟ್ಟದೂರು, ಹನುಮಂತಪ್ಪ ಕಲಕೇರಿ, ಮುದುಕಪ್ಪ ಹೊಸಮನಿ, ಯಮನೂರಪ್ಪ ಪೂಜಾರ, ಮಂಜು ನಾಥ ಗೊಂಡಬಾಳ, ಭೀಮೇಶ ಕಲಕೇರಿ ಹಾಗೂ ಎಸ್.ಎ.ಗ ಫಾರ್ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ. ಬಿಎಸ್‌ಪಿಎಲ್ ಸೆಕ್ಯೂರಿಟಿ ಮ್ಯಾನೇಜರ್ ಮಹೇಶ ದೂರು ನೀಡಿದ್ದಾರೆ. ಕಳೆದ ಜು.23ರಂದು ಹೋರಾಟಗಾರರು ಕಂಪನಿ ಬಳಿ ಜಾನುವಾರುಗಳೊಂದಿಗೆ ತೆರಳಿದ್ದರು. ಜಾನುವಾರುಗಳಿಗೆ ನೀರು ಕುಡಿಯಲು ಕೆರೆಗೆ ಪ್ರವೇಶ ನೀಡುವಂತೆ ಕೇಳಿದಾಗ ಕಂಪನಿ ಅಧಿಕಾರಿಗಳು ಅಡ್ಡಿಪಡಿಸಿದರು. ಈ ವೇಳೆ ಹೋರಾಟಗಾರರು ಜಾನು ವಾರು ಮತ್ತು ಕುರಿಗಳನ್ನು ಮುಖ್ಯ ದ್ವಾರದ ಮೂಲಕ ನುಗ್ಗಿಸಿದ್ದರು.

ಸಮಾಚಾರ ಸಣ್ಣದಲ್ಲ

ವಿಷ ಆಹಾರ ಸೇವಿಸಿ 20 ಮಕ್ಕಳು ಅಸ್ವಸ್ಥ

ಮಂಡ್ಯ: ವಿಷ ಆಹಾರ ಸೇವನೆ ಹಿನ್ನೆಲೆ 20ಕ್ಕೂ ಹೆಚ್ಚು ಮಕ್ಕಳು ಅಸ್ವಸ್ಥಗೊಂಡಿರುವ ಘಟನೆ ಮದ್ದೂರು ತಾಲೂಕಿನ ಕೆ.ಎಂ. ದೊಡ್ಡಿಯಲ್ಲಿ ನಡೆದಿದೆ. ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಆಹಾರದಲ್ಲಿ ವ್ಯತ್ಯಾಸ ಉಂಟಾಗಿ ಹೊಟ್ಟೆ ನೋವು ಹಾಗೂ ಇನ್ನಿತರ ಅನಾರೋಗ್ಯ ಲಕ್ಷಣಗಳು ಕಂಡುಬಂದಿದ್ದು 20 ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ವಿದ್ಯಾರ್ಥಿಗಳು ಆಸ್ಪತ್ರೆಗೆ ದಾಖಲಾದ ಬಗ್ಗೆ ನಮಗೆ ಯಾವುದೇ ದೂರು ಬಂದಿಲ್ಲ. ಸಮಸ್ಯೆಯ ಗಂಭೀರತೆಯನ್ನು ಗಮನಿಸಿ ಮುಂದಿನ ಕ್ರಮ ಕೈಗೊಳ್ಳುವ ಬಗ್ಗೆ ನಾವು ನಿರ್ಧಾರಿ ಸುತ್ತೇವೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಾಡಬಾಂಬ್ ಸ್ಫೋಟಿಸಿ ಮಹಿಳೆಗೆ ಗಾಯ

ಮೈಸೂರು: ಅಡಿಕೆಕಾಯಿ ಎಂದು ಭಾವಿಸಿ ಮಹಿಳೆಯೊಬ್ಬರು ನಾಡ ಬಾಂಬ್ ಚಚ್ಚಿದ ವೇಳೆ ಗಂಭೀರ ಗಾಯಗೊಂಡಿರುವ ಘಟನೆ ಹುಣಸೂರು ತಾಲೂಕಿನ ಹುಳಲಾಲು ಗ್ರಾಮದಲ್ಲಿ ನಡೆದಿದೆ. ಗ್ರಾಮದ ಕಮಲಮ್ಮ (55) ಎಂಬವರೇ ಗಂಭೀರ ಗಾಯಗೊಂಡ ಮಹಿಳೆಯಾಗಿದ್ದು, ನಾಡ ಬಾಂಬ್ ಸ್ಫೋಟಗೊಂಡು ಮುಖದ ಭಾಗಕ್ಕೆ ತೀವ್ರ ಸ್ವರೂಪದ ಗಾಯಗಳಾಗಿದೆ.ಮನೆಯ ಮುಂಭಾಗದಲ್ಲಿರುವ ತೋಟದಲ್ಲಿ ಅಡಿಕೆಕಾಯಿ ಬಿದ್ದಿರಬಹುದು ಎಂದು ತಿಳಿದುಕೊಂಡಿದ್ದ ಮಹಿಳೆ ಅಡಿಕೆಕಾಯಿ ಎಂದು ಚಚ್ಚಿದ್ದಾರೆ. ಕಾಡು ಹಂದಿಗಳ ಹಾವಳಿ ತಪ್ಪಿಸಲು ರೈತರು ನಾಡ ಬಾಂಬ್ ಇಟ್ಟಿದ್ದರು ಎನ್ನಲಾಗಿದೆ. ಅದನ್ನು ಅಡಿಕೆಕಾಯಿ ಎಂದು ಕಮಲಮ್ಮ ಮನೆಗೆ ತಂದಿದ್ದರು ಎನ್ನಲಾಗಿದೆ. ಸುತ್ತಿಗೆಯಿಂದ ಚಚ್ಚಿದ ವೇಳೆ ಮುಖ ಕೈಕಾಲು ಹೊಟ್ಟೆ ಭಾಗಕ್ಕೆ ಗಂಭೀರ ಗಾಯಗಳಾಗಿದ್ದು ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಗಾಯಾಳು ಕಮಲಮ್ಮಗೆ ಚಿಕಿತ್ಸೆ ನೀಡಲಾಗುತ್ತಿದೆ.

ತಾತಪ್ಪ ಸೇರಿ 10 ಜನರ ವಿರುದ್ಧ ಪೋಕ್ಸೊ ಕೇಸ್

ರಾಯಚೂರು: ಜಿಲ್ಲೆಯ ಗುರ್ಜಾಪುರ ಬ್ಯಾರೇಜ್ ಬಳಿ ಫೋಟೋ ತೆಗೆಯುವ ನೆಪದಲ್ಲಿ ಪತಿಯನ್ನು ಪತ್ನಿ ನದಿಗೆ ತಳ್ಳಿದ ಆರೋಪ ಪ್ರಕರಣಕ್ಕೆ ಮತ್ತೊಂದು ಟ್ವಿಸ್ಟ್ ಸಿಕ್ಕಿದೆ. ಅಪ್ರಾಪ್ತೆಯನ್ನು ವಿವಾಹವಾಗಿದ್ದ ಹಿನ್ನೆಲೆ ಬಾಲ್ಯವಿವಾಹ ನಿಷೇಧ ಕಾಯಿದೆ ಅಡಿ ಪ್ರಕರಣದಲ್ಲಿ ಸಿಲುಕಿದ್ದ ಪತಿ ತಾತಪ್ಪ ವಿರುದ್ಧ ಲೈಂಗಿಕ ದೌರ್ಜನ್ಯ ಹಾಗೂ 10 ಮಂದಿ ವಿರುದ್ಧ ಪೋಕ್ಸೊ ಕಾಯಿದೆ ಅಡಿ ಪ್ರಕರಣ ದಾಖಲಾಗಿದೆ. ರಾಯಚೂರು ಮಹಿಳಾ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಈಗ ಹೆಚ್ಚುವರಿಯಾಗಿ ಬಿಎನ್‌ಎಸ್, ಪೋಕ್ಸೊ ಕಾಯಿದೆ ಅಡಿ ಪ್ರಕರಣ ದಾಖಲಾಗಿದೆ. ಅಪ್ರಾಪ್ತೆಗೆ ಮದುವೆ ಮಾಡಿಸಿ, ಮೊದಲ ರಾತ್ರಿಗೆ ಬಾಲಕಿಯನ್ನು ಕಳುಹಿಸಿರುವ ಆರೋಪದ ಹಿನ್ನೆಲೆ ಹೆಚ್ಚುವರಿ ಏಳು ಜನರ ವಿರುದ್ಧ ಪ್ರಕರಣ ದಾಖಲಾಗಿದೆ.

56 ಲಕ್ಷ ವಂಚನೆ ಆರೋಪಿಗಳ ಬಂಧನ

ಮಂಡ್ಯ: ಆನ್‌ಲೈನ್ ದೋಖಾ ಪ್ರಕರಣಗಳು ಹೆಚ್ಚಾಗುತ್ತಿವೆ. ಇದೀಗ ಆನ್‌ಲೈನ್ ದೋಖಾದ ಲಿಸ್ಟ್‌ಗೆ ಡಿಜಿಟಲ್ ಅರೆಸ್ಟ್ ಎಂಬ ವಂಚನೆ ಜಾಲವೊಂದು ಸೇರಿಕೊಂಡಿದೆ. ಈ ಜಾಲಕ್ಕೆ ಸಿಲುಕಿದ ಬ್ಯಾಂಕ್ ಅಧಿಕಾರಿ ಒಬ್ಬರು ಲಕ್ಷ ಲಕ್ಷ ಹಣ ಕಳೆದುಕೊಂಡಿರೋದು ಮಂಡ್ಯದಲ್ಲಿ ಬೆಳಕಿಗೆ ಬಂದಿದೆ. ಮಂಡ್ಯ ಜಿಲ್ಲೆಯಲ್ಲಿ ಬ್ಯಾಂಕ್‌ನ ರೀಜನಲ್ ಮ್ಯಾನೇಜರ್ ಡಿಜಿಟಲ್ ಅರೆಸ್ಟ್ ಜಾಲಕ್ಕೆ ಸಿಲುಕಿ 56 ಲಕ್ಷಕ್ಕೂ ಅಧಿಕ ಹಣ ಕಳೆದುಕೊಂಡಿರೋದು ಬೆಳಕಿಗೆ ಬಂದಿದೆ. ಬ್ಯಾಂಕ್ ಮ್ಯಾನೇಜರ್‌ಗೆ ಕಳೆದ ತಿಂಗಳು ವಾಟ್ಸಪ್ ಮೂಲಕ ಸಿಬಿಐ ಅಧಿಕಾರಿ ಎಂದು ಕರೆ ಮಾಡಿ ನಿಮ್ಮ ಅಕೌಂಟ್‌ಗೆ ಮನಿ ಲ್ಯಾಂಡ್ರಿಂಗ್, ಹವಾಲ ದಂಧೆ ಮೂಲಕ ಲಕ್ಷಾಂತರ ರು. ಹಣ ಬಂದಿದೆ ಎಂದು ಬೆದರಿಸಿದ್ದಾನೆ. ನಕಲಿ ಅರೆಸ್ಟ್ ವಾರಂಟ್ ಕಳುಹಿಸಿ ಅಧಿಕಾರಿಯ ಅಕೌಂಟ್‌ನಲ್ಲಿದ್ದ 56 ಲಕ್ಷಕ್ಕೂ ಅಧಿಕ ಹಣ ಪಡೆದು ವಂಚಿಸಿದ್ದಾನೆ. ಬ್ಯಾಂಕ್ ಅಧಿಕಾರಿ ಮಂಡ್ಯ ಸೆನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ತನಿಖೆ ನಡೆಸಿದ ಪೊಲೀಸರು ದೆಹಲಿಯಲ್ಲಿ ಗೋಪಾಲ್ ಬಿಷ್ಣೋಯಿ ಎಂಬ ಆರೋಪಿಯನ್ನು ಬಂಧಿಸಿತು. ಬಳಿಕ ರಾಜಸ್ಥಾನ ಮೂಲದ ಮಹಿಪಾಲ್, ಬಿಷ್ಣೋಯಿ, ಜಿತೇಂದ್ರ ಸಿಂಗ್ ಎಂಬ ಆರೋಪಿಗಳನ್ನ ಬಂಧಿಸಿದ್ದಾರೆ. ಬಂಧಿತರು ಬ್ಯಾಂಕ್ ರಿಜನಲ್ ಮ್ಯಾನೇಜರ್ ಅಕೌಂಟ್‌ನಿಂದ ಬಂದ ಹಣವನ್ನು 29 ಖಾತೆಗೆ ವರ್ಗಾವಣೆ ಮಾಡಿಕೊಂಡಿರುವುದರಿಂದ ಕೇವಲ ಒಂದೂವರೆ ಲಕ್ಷ ರುಪಾಯಿ ಅಷ್ಟೇ ರಿಕವರಿ ಆಗಿದೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಕಲಬುರಗಿ**

ಸಮಸ್ಯೆಯೇನು..? : ಕಲಬುರಗಿ ನಗರದ ವಾರ್ಡ್ 6 ರಲ್ಲಿ ವಿದ್ಯುತ್ ಕಂಬ ಸ್ಥಳಾಂತರಿಸುವ ಬಗ್ಗೆ.

- **ಪರಿಹಾರ:** ವಿದ್ಯುತ್ ಕಂಬ ಸ್ಥಳಾಂತರಿಸುವ ಬಗ್ಗೆ ಸಿಎಂ ವಿಶೇಷ ಕರ್ತವ್ಯಾಧಿಕಾರಿ ಕಚೇರಿಗೆ ಪತ್ರ ಬಂದಿದ್ದು, ಸಮಸ್ಯೆ ಪರಿಹರಿಸಲು ಕಾರ್ಯಪಾಲಕ ಅಭಿಯಂತರರು ಕಲಬುರಗಿ ಮಹಾನಗರ ಪಾಲಿಕೆಗೆ ತಿಳಿಸಲಾಗಿದೆ. ಈ ಬಗ್ಗೆ ಜೆಸ್ಕಾಂ ಅಧಿಕಾರಿಗಳಿಗೆ ಪತ್ರ ಬರೆದು ಸ್ಥಳ ಪರಿಶೀಲನೆ ನಡೆಸಿ ಸಮಸ್ಯೆ ಪರಿಹರಿಸಲು ತಿಳಿಸಲಾಗಿದೆ.

ವಿಶ್ವವಾಣಿ

ಸಂಪಾದಕೀಯ

ನಿರ್ವಾತವನ್ನು ತುಂಬುವವರಾರು?

ರಂಗಭೂಮಿ, ಚಲನಚಿತ್ರ, ಸಾಹಿತ್ಯ, ಯಕ್ಷಗಾನ, ಹಿನ್ನೆಲೆ ಗಾಯನ, ಉದ್ಯಮ ಹೀಗೆ ನಮ್ಮ ನಾಡಿನ ವಿವಿಧ ಕ್ಷೇತ್ರಗಳು 'ಧ್ರುವತಾರೆಗಳು' ಎನ್ನಬಹುದಾದ ಮಹಾನ್ ಸಾಧಕರನ್ನು ಕಂಡಿವೆ. ಆದರೆ ಇಂಥ ಮಹಾನ್ ಚೇತನಗಳು ಕಣ್ಮರೆಯಾದ ನಂತರ, ಅವರು ಪ್ರತಿನಿಧಿಸುತ್ತಿದ್ದ ಜಾಗವನ್ನು ತುಂಬುವವರೇ ಇಲ್ಲವಾಗಿ 'ನಿರ್ವಾತ ಸ್ಥಿತಿ' ರೂಪುಗೊಂಡಿದೆ ಎಂಬುದು ಒಪ್ಪುವಂಥ ಮಾತು. ಚಿತ್ರರಂಗದ ವಿಷಯಕ್ಕೆ ಬರುವುದಾದರೆ, 'ಅಣ್ಣಾವ್ರು' ಎಂದೇ ಕರೆಸಿಕೊಳ್ಳುತ್ತಿದ್ದ ಜನಪ್ರಿಯ ನಟ ಪದ್ಮಭೂಷಣ ಡಾ.ರಾಜ್‌ಕುಮಾರ್ ಅವರು ಅಭಿಮಾನಿಗಳನ್ನು ಅಗಲಿದ ನಂತರ ಇಂಥದೊಂದು ಖಾಲಿತನ ಬಹುತೇಕರ ಅನುಭವಕ್ಕೆ ಬಂದಿದೆ. ಕಾರಣ, 'ಅಣ್ಣಾವ್ರು' ಬರಿಯ ಚಿತ್ರನಟರಾಗಿರದೆ ನಾಡಿನ ಕಲೆ-ಸಂಸ್ಕೃತಿ-ಕನ್ನಡತನ-ಕನ್ನಡಿಗರ ಅಸ್ಮಿತೆ ಗಳಿಗೆ ಪರ್ಯಾಯ ಪದವೇ ಆಗಿದ್ದರು. ಗೋಕಾಕ್ ಚಳವಳಿಯು ಏರುಗತಿಯನ್ನು ಕಂಡಿದ್ದು 'ಅಣ್ಣಾವ್ರ' ಪ್ರವೇಶವಾದ ನಂತರವೇ ಎಂಬುದು ನಿರ್ವಿವಾದಿತ ಸಂಗತಿ. ಕನ್ನಡ ಚಿತ್ರರಂಗವಿಂದು 'ನಾಯಕನಾರೋ ನಡೆಸುವನೆಲ್ಲೋ?' ಎಂಬ ಗೊಣಗಾಟದಲ್ಲೇ ಮರುಗುತ್ತಿದೆ ಎಂದರೆ ಡಾ.ರಾಜ್ ಅವರಂಥ ನಾಯಕ ಇಲ್ಲದಿರುವುದೇ ಅದಕ್ಕೆ ಕಾರಣ. ಇನ್ನು, ಪ್ರತಿಭೆಗೂ ಸಹೃದಯತೆಗೂ ಮೃದುಮಾತಿಗೂ 'ಪರ್ಯಾಯರೂಪ'ವೇ ಆಗಿದ್ದ ಹಿನ್ನೆಲೆ ಗಾಯಕ ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರು ಕರೋನಾ ಮಹಾಮಾರಿಗೆ ತುತ್ತಾಗಿ ಇಲ್ಲವಾದರು. ಸಹೃದಯತೆ-ಪ್ರತಿಭೆ-ಮೃದುಮಾತಿನ ಆಯಾಮದಲ್ಲಿ ಅವರು ಬಿಟ್ಟುಹೋದ 'ಖಾಲಿಜಾಗ' ಇನ್ನೂ ಭರ್ತಿ ಯಾಗಿಲ್ಲ ಎಂದರೆ ಅತಿಶಯೋಕ್ತಿ ಆಗಲಾರದು. ಇಲ್ಲಿ ನೀಡಿರುವುದು ಎರಡು ಉದಾಹರಣೆಗಳಷ್ಟೇ, ಹುಡುಕುತ್ತ ಹೋದರೆ ವಿವಿಧ ಕ್ಷೇತ್ರಗಳಲ್ಲಿನ ಇಂಥ ಮೇರುಸಾಧಕರು (ಮಾಸ್ಟರ್ ಹಿರಣ್ಣಯ್ಯ, ಕೆ.ಎಸ್.ನಿಸಾರ್ ಅಹಮದ್, ಎಚ್.ಎಸ್.ವೆಂಕಟೇಶಮೂರ್ತಿ ಇತ್ಯಾದಿ) ಸಾಕಷ್ಟು ಸಿಕ್ಕಾರು, ಅವರ ಅಗಲುವಿಕೆಯಿಂದಾಗಿ ರೂಪುಗೊಂಡ 'ಖಾಲಿತನ' ಅನುಭವಕ್ಕೆ ಬಂದೀತು. ಇವರೆಲ್ಲರೂ ಶುರುವಿನಲ್ಲೇ ಪ್ರಚಾರಕ್ಕಾಗಿ ಹಾತೊರೆಯದೆ, ಸಾಧನೆಯ ಕಡೆಗಷ್ಟೇ ಗಮನ ನೆಟ್ಟವರು ಎಂಬುದನ್ನು ಗಮನಿಸಬೇಕು ಮತ್ತು ಇಂದಿನ ಪೀಳಿಗೆಯವರಿಗೆ ಅದು ಮೇಲ್ಪಂಕ್ತಿಯಾಗಬೇಕು.

ಸೊಂಪಾದಕೀಯ

ಮಾಲಲ್ಲೂ ಮಾಲು ಸಿಗುತ್ತೆ!

ಹೆಡ್ಡಿಂಗ್ ನೋಡಿ ಗಾಬರಿ ಆಗ್ಬೇಡಿ. ಅದರ ಅರ್ಥ ಮಾಲಲ್ಲೂ ಇನ್ಮೇಲೆ ಸರಕು ಸಿಗುತ್ತೆ. ಅದೇ ಕಣ್ರೀ, ಹೆಂಡ, ಡ್ರಿಂಕ್ಸ್ ಅಂತಾರಲ್ಲ ಅದು ಇನ್ನು ಮುಂದೆ ಮಾಲ್, ಸೂಪರ್ ಮಾರ್ಕೆಟ್‌ಗಳಲ್ಲೂ ಸಿಗುತ್ತಂತೆ. ಗ್ಯಾರಂಟಿಗಳ ಭರಾಟೆಯಲ್ಲಿ ಆರ್ಥಿಕವಾಗಿ ಹಿಂಜರಿತ ಅನುಭವಿಸುತ್ತಿರೋ ರಾಜ್ಯ ಸರಕಾರ ಈಗ ಆದಾಯ ಜಾಸ್ತಿ ಮಾಡಿಕೊಳ್ಳಲು ಆಪದ್ಬಾಂಧವ ಅಬಕಾರಿ ಇಲಾಖೆಯ ಮೊರೆಹೋಗಿದೆ. ಪರಿಣಾಮವಾಗಿ ಇನ್ನು ಮುಂದೆ ಹೆಂಡತಿಯ ಜತೆ ಶಾಪಿಂಗ್ ಹೋದಾಗ ಗಂಡಸರು ಹೆಂಡವನ್ನೂ ತರಬಹುದಾಗಿದೆ. ಅದರ ಜತೆಗೆ ಬಾರ್‌ಗಳ ಸನ್ನದು ವರ್ಗಾವಣೆ ಶುಲ್ಕ ಇನ್ನು ಮುಂದೆ ಸಣ್ಣದು ಎನ್ನುವಷ್ಟು ಕಡಿಮೆ ಇರದೆ, ಸ್ಮಾಲ್ ಇದ್ದಿದ್ದು ಲಾರ್ಜ್ ಆಗಲಿದೆ. ಅಷ್ಟೇ ಅಲ್ಲ, ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಮಯದಲ್ಲಿ ಹೊಸ ಸ್ವತಂತ್ರ ಪಬ್‌ಗಳನ್ನು ತೆರೆದು ಜೀವ ಕಳೆಯೋ ಅಮೃತದ ಪರವಾನಗಿ ಕೊಡುವ ಬಗ್ಗೆ ಗುಂಡು ಮೇಜಿನ ಪರಿಷತ್ತಿನಲ್ಲಿ ಯೋಜನೆ ನಡೆಯುತ್ತಿದೆ. ಕಾಂಗ್ರೆಸ್ ಗ್ಯಾರಂಟಿಗಳಿಗೆ ಬಹಳಷ್ಟು ಅಡ್ಡಗಾಲು ಬಿದ್ದಿದ್ದು ಗೊತ್ತೇ ಇದೆ. ಅಕ್ಕಿ ಕೊಡೋಣ ಅಂದ್ರೆ ಕೇಂದ್ರ ಸರಕಾರ 'ಅಕ್ಕಿ ಇಲ್ಲ, ಬೇಳೆ ಇಲ್ಲ' ಅಂತ ರಾಗ ಹಾಡಿತು. ಹಾಗಾಗಿ ಅಕ್ಕಿ ಬದಲು ಹಣ ಕೊಟ್ಟು ರಾಜ್ಯ ಸರಕಾರಕ್ಕೆ ಒಂದಷ್ಟು ಲಾಸ್ ಆಯ್ತು. ಜತೆಗೆ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಜನರಿಗೆ ಉಚಿತ ಕರೆಂಟ್ ಕೊಟ್ಟು ಈಗ ರಾಜ್ಯ ಸರಕಾರ ಆರ್ಥಿಕ ಶಾಕ್‌ಗೆ ಒಳಗಾಗಿದೆ. ಹೆಂಡದ ಬೆಲೆ ಏರಿಕೆ ಮಾಡಿದಾಗಿನಿಂದ ಜನ ಕುಡಿಯೋದು ಕಡಿಮೆ ಮಾಡಿರೋದು ನೋಡಿ, ಈಗ ಕುಡುಕರನ್ನು ಎನ್‌ಕರೇಜ್ ಮಾಡಲು ಹೊರಟಿದೆ ಸರಕಾರ. ಆದರೆ, ಮಾಲ್‌ಗಳಲ್ಲಿ ಹೆಂಡ ಸಿಗೋ ಈ ಹೊಸ ಸೌಲಭ್ಯದಿಂದಾಗಿ ಹೆಂಡ್ತಿ ಶಾಪಿಂಗಿಗೆ ಹೋಗೋಣ ಅಂದಾಗ ಗಂಡ ಖುಷಿಯಾಗಿ ನಡಿಯೇ ಅಂತಾನೋ ಅಥವಾ ಗಂಡ ಹೆಂಡ ತಗೋತಾನೆ ಅಂತ ಹೆಣ್ಣುಮಕ್ಕಳು ಶಾಪಿಂಗ್ ಮಾಡೋದು ಕಡಿಮೆ ಮಾಡ್ತಾರೋ ಅನ್ನೋದು ಮುಂದಿನ ಹೆಂಡದ ಅತಿವೃಷ್ಟಿಯ ದಿನಗಳಲ್ಲಿ ಗೊತ್ತಾಗಲಿದೆ.

ಸಂಪಾದಕರ ಸದ್ಯಶೋಧನೆ

ವಿಮಾನದಲ್ಲಿ ಆನೆ ಸಾಗಾಟ ಹೇಗೆ?

ಪ್ರಾಣಿ ವಿನಿಮಯ ಕಾರ್ಯಕ್ರಮದಡಿ ಬನ್ನೇರುಘಟ್ಟ ಜೈವಿಕ ಉದ್ಯಾನದ ನಾಲ್ಕು ಆನೆಗಳನ್ನು ವಿಮಾನದ ಮೂಲಕ ಜಪಾನಿಗೆ ಕಳುಹಿಸಿದ ಸುದ್ದಿ ಮಾಧ್ಯಮಗಳಲ್ಲಿ ವರದಿಯಾಗಿದೆಯಷ್ಟೆ. ಆನೆಯಂಥ ಬೃಹತ್ ಪ್ರಾಣಿಗಳನ್ನು ವಿಮಾನದಲ್ಲಿ ಹೇಗೆ ಸಾಗಿಸುತ್ತಾರೆ? ಇದು ನಿಜಕ್ಕೂ ಕುತೂಹಲಕಾರಿ. ಆನೆಯಂಥ ದೈತ್ಯ ಪ್ರಾಣಿಯನ್ನು ಸುಮಾರು ಎಂಟು ಗಂಟೆಗಳ ಕಾಲ ವಿಮಾನದಲ್ಲಿ ಸಾಗಿಸುವುದು ಅತ್ಯಂತ ಸಂಕೀರ್ಣ ಪ್ರಕ್ರಿಯೆ. ಇದಕ್ಕೆ ಅಪಾರ ಯೋಜನೆ, ವಿಶೇಷ ಉಪಕರಣಗಳು ಮತ್ತು ಪ್ರಾಣಿಗಳ ಆರೈಕೆಗೆ ಆದ್ಯತೆ ನೀಡುವ ವೈದ್ಯಕೀಯ ಹಾಗೂ ನಿರ್ವಹಣಾ ಸಿಬ್ಬಂದಿಯ ತಂಡದ ಅಗತ್ಯವಿದೆ. ಈ ಪ್ರಕ್ರಿಯೆಯು ಸಾಮಾನ್ಯವಾಗಿ ವೈಜ್ಞಾನಿಕ ಅಧ್ಯಯನಗಳು, ಸಂರಕ್ಷಣಾ ಪ್ರಯತ್ನಗಳು ಅಥವಾ ಪ್ರಾಣಿ ಸಂಗ್ರಹಾಲಯಗಳ ನಡುವೆ ಪ್ರಾಣಿಗಳನ್ನು ಸ್ಥಳಾಂತರಿಸುವಾಗ ನಡೆಯುತ್ತದೆ. ಆನೆಗಳನ್ನು ವಿಮಾನದಲ್ಲಿ ಸಾಗಿಸುವುದು ಅಷ್ಟು ಸುಲಭವಲ್ಲ. ಅದಕ್ಕೆ ಹಲವು ಹಂತಗಳಲ್ಲಿ ಸಾಕಷ್ಟು ತಯಾರಿ ಅತ್ಯಗತ್ಯ. ವಿದೇಶಗಳಿಗೆ ಕಳುಹಿಸಲು ಆರಿಸಿದ ಆನೆಯು ಉತ್ತಮ ಆರೋಗ್ಯದಲ್ಲಿದೆಯೇ ಎಂದು ಪಶುವೈದ್ಯರು ಸಂಪೂರ್ಣವಾಗಿ ಪರಿಶೀಲಿಸುತ್ತಾರೆ. ಯಾವುದೇ ಆರೋಗ್ಯ ಸಮಸ್ಯೆಗಳು ಸಾರಿಗೆಯ ಸಮಯದಲ್ಲಿ ಅಪಾಯಕಾರಿ ಆಗಬಹುದು. ಆನೆಯ ನಿಖರವಾದ ತೂಕ ಮತ್ತು ಅಳತೆಗಳನ್ನು ತೆಗೆದುಕೊಳ್ಳಲಾಗುತ್ತದೆ. ಇದರಿಂದ ಸಾಗಿಸಲು ಸೂಕ್ತವಾದ ಗಾತ್ರದ ಕ್ರೇಟ್ (ಪ್ರಾಣಿಗಳನ್ನು ಇಡಲು ಬಳಸುವ ಪೆಟ್ಟಿಗೆ) ಮತ್ತು ವಿಮಾನವನ್ನು ಆಯ್ಕೆ ಮಾಡಲು ಸಹಾಯವಾಗುತ್ತದೆ. ಸಾಧ್ಯವಾದರೆ, ಆನೆಯು ಸಾರಿಗೆಯ ಒತ್ತಡವನ್ನು ನಿಭಾಯಿಸಲು ಸಹಾಯವಾಗುವಂತೆ ಟ್ರ್ಯಾಂಕ್ವಿಲೈಸರ್‌ಗಳನ್ನು (ಅರಿವಳಿಕೆ) ಸ್ವೀಕರಿಸಲು ತರಬೇತಿ ನೀಡಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ, ಪ್ರಾಣಿಗಳಿಗೆ ಸಾರಿಗೆ ಕ್ರೇಟ್‌ಗಳೊಂದಿಗೆ ಪರಿಚಯ ಮಾಡಿಕೊಡಲು ತಿಂಗಳುಗಟ್ಟಲೆ ತರಬೇತಿ ನೀಡಲಾಗುತ್ತದೆ. ಪ್ರಾಣಿಗಳನ್ನು ಸಾಗಿಸುವ ದೇಶಗಳು ಮತ್ತು ತಲುಪುವ ದೇಶಗಳೆರಡರ ಎಲ್ಲ ಅಂತಾರಾಷ್ಟ್ರೀಯ ವಾಯು ಸಾರಿಗೆ ಸಂಸ್ಥೆ (IATA) ಮತ್ತು ಸ್ಥಳೀಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ. ಆರೋಗ್ಯ ಪ್ರಮಾಣಪತ್ರಗಳು, ಅನುಮತಿಗಳು ಮತ್ತು ಇತರ ದಾಖಲೆಗಳು ಅಗತ್ಯ. ಆನೆಗೆ ತಜ್ಞ ಪಶುವೈದ್ಯರಿಂದ ಸೌಮ್ಯವಾದ ನಿದ್ರಾಜನಕ (sedative) ನೀಡಲಾಗುತ್ತದೆ. ಇದು ಆನೆಯನ್ನು ಶಾಂತವಾಗಿಡಲು ಮತ್ತು ಸಾರಿಗೆ ಸಮಯದಲ್ಲಿ ಒತ್ತಡವನ್ನು ಕಡಿಮೆ ಮಾಡಲು ಸಹಾಯಕ. ಪ್ರಯಾಣ ಕಾಲದಲ್ಲಿ ಆನೆಗಳು ಸಂಪೂರ್ಣವಾಗಿ ನಿದ್ರಿಸುವುದಿಲ್ಲ, ಬದಲಿಗೆ ಶಾಂತ ಸ್ಥಿತಿಯಲ್ಲಿರುತ್ತದೆ. ಆನೆಗಳನ್ನು ಸಾಗಿಸಲು ವಿಶೇಷವಾಗಿ ವಿನ್ಯಾಸಗೊಳಿಸಿದ, ಗಟ್ಟಿಮುಟ್ಟಾದ ಮತ್ತು ಸುರಕ್ಷಿತ ಕ್ರೇಟ್‌ಗಳನ್ನು ಬಳಸಲಾಗುತ್ತದೆ. ಈ ಕ್ರೇಟ್‌ಗಳು ಇಂಟರ್‌ನ್ಯಾಷನಲ್ ಏರ್ ಟ್ರಾನ್ಸ್‌ಪೋರ್ಟ್ ಅಸೋಸಿಯೇಷನ್ (IATA) ನಿಗದಿಪಡಿಸಿದ ಮಾನದಂಡಗಳನ್ನು ಪಾಲಿಸುತ್ತವೆ ಮತ್ತು ಆನೆಗೆ ನಿಲ್ಲಲು, ತಿರುಗಲು ಮತ್ತು ನೈಸರ್ಗಿಕ ಚಲನೆಯನ್ನು ಮಾಡಲು ಸಾಕಷ್ಟು ಸ್ಥಳಾವಕಾಶವನ್ನು ಹೊಂದಿರುತ್ತವೆ. ಇವು ಸಾಮಾನ್ಯವಾಗಿ ಗಟ್ಟಿ ಮರ ಮತ್ತು ಲೋಹದ ಚೌಕಟ್ಟುಗಳಿಂದ ನಿರ್ಮಿತವಾಗಿದ್ದು, ಗಾಳಿಯಾಡಲು ಸಾಕಷ್ಟು ರಂಧ್ರಗಳನ್ನು ಹೊಂದಿರುತ್ತವೆ. ಆನೆಯು ಕ್ರೇಟ್ ಒಳಗೆ ಜಾರಿ ಬೀಳುವು ದನ್ನು ತಡೆಯಲು ನೆಲಹಾಸನ್ನು ಜಾರದಿರುವಂತೆ ವಿನ್ಯಾಸಗೊಳಿಸಲಾಗಿರುತ್ತದೆ. ಕೆಲವು ಕ್ರೇಟ್‌ಗಳಲ್ಲಿ ಆನೆಯ ಕಾಲುಗಳನ್ನು ಸರಪಳಿಗಳಿಂದ ಭದ್ರಪಡಿಸಲಾಗುತ್ತದೆ. ಇದರಿಂದ ವಿಮಾನದಲ್ಲಿ ಅನಿಯಂತ್ರಿತ ಚಲನೆಯನ್ನು ತಡೆಯಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ, ಆನೆಯನ್ನು ಅರಿವಳಿಕೆ ನೀಡಿದ ನಂತರ 'ವೇಕ್-ಅಪ್ ಬಾಕ್ಸ್' ಎಂದು ಕರೆಯಲಾಗುವ ದೊಡ್ಡ ಕ್ರೇಟ್‌ಗೆ ಹಗ್ಗಗಳ ಸಹಾಯದಿಂದ ಎತ್ತಲಾಗುತ್ತದೆ. ಈ ಕ್ರೇಟ್‌ಗಳನ್ನು ವಿಮಾನಕ್ಕೆ ಸಾಗಿಸುವ ಮೊದಲು ಆನೆಗೆ ಎಚ್ಚರಗೊಳ್ಳಲು ಮತ್ತು ತನ್ನ ಕಾಲುಗಳ ಮೇಲೆ ನಿಲ್ಲಲು ಅವಕಾಶ ನೀಡಲಾಗುತ್ತದೆ. ಆನೆಗಳನ್ನು ಸಾಗಿಸಲು ಹೆಚ್ಚಾಗಿ ದೊಡ್ಡ ಮಿಲಿಟರಿ ಕಾರ್ಗೋ ವಿಮಾನಗಳು (ಉದಾಹರಣೆಗೆ ಸಿ-17 ಗ್ಲೋಬ್‌ಮಾಸ್ಟರ್ III, ಸಿ-130 ಹರ್ಕ್ಯುಲಸ್) ಅಥವಾ ವಿಶೇ ಷವಾಗಿ ಮಾರ್ಪಡಿಸಿದ ವಾಣಿಜ್ಯ ಕಾರ್ಗೋ ವಿಮಾನಗಳನ್ನು ಬಳಸಲಾ ಗುತ್ತದೆ. ಇವು ದೊಡ್ಡ ಹಾರಾಟದ ಹ್ಯಾಚ್‌ಗಳು ಮತ್ತು ವಿಶಾಲ ನೆಲಹಾಸನ್ನು ಹೊಂದಿರುತ್ತವೆ. ಆನೆ ಇರುವ ಕ್ರೇಟ್ ಅನ್ನು ವಿಮಾನದೊಳಗೆ ಲೋಡ್ ಮಾಡಲು ಕ್ರೇನ್‌ಗಳು ಅಥವಾ ಹೆವಿ-ಡ್ಯೂಟಿ ಫೋರ್ಕ್‌ಲಿಫ್ಟ್‌ಗಳನ್ನು ಬಳಸಲಾಗುತ್ತದೆ. ಈ ಪ್ರಕ್ರಿಯೆಯು ಬಹಳ ಎಚ್ಚರಿಕೆಯಿಂದ ಮತ್ತು ನಿಧಾನವಾಗಿ ನಡೆಯುತ್ತದೆ. ಪ್ರಯಾಣದುದ್ದಕ್ಕೂ ಆನೆಯನ್ನು ನೋಡಿಕೊಳ್ಳಲು ಪಶುವೈದ್ಯರು ಮತ್ತು ಅನುಭವಿ ನಿರ್ವಹಣಾ ಸಿಬ್ಬಂದಿ ಜತೆಯಲ್ಲಿರುತ್ತಾರೆ. ಇವರು ಆನೆಯ ಸ್ಥಿತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಾರೆ, ಅಗತ್ಯವಿದ್ದರೆ ಟ್ರ್ಯಾಂಕ್ವಿಲೈಸರ್‌ಗಳನ್ನು ನೀಡುತ್ತಾರೆ.

ಜಿಎಸ್‌ಟಿ ನೋಟಿಸ್ ತಕರಾರಿನ ಸುತ್ತಮುತ್ತ!

ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
camohanbn@gmail.com

ನೋಟು ಅಮಾನ್ಯೀಕರಣವಾದ ನಂತರ, ಡಿಜಿಟಲ್ ಇಂಡಿಯಾ ಭಾರತದಲ್ಲಿ ದೊಡ್ಡದೊಂದು ಕ್ರಾಂತಿಯನ್ನೇ ಮಾಡಿದೆ. ಜಗತ್ತಿನ ಅನೇಕ ದೇಶಗಳು ಭಾರತದ ಡಿಜಿಟಲ್ ಕ್ರಾಂತಿಯನ್ನು ಕಂಡು ಬೆಚ್ಚಿಬಿದ್ದಿವೆ. ದೇವಸ್ಥಾನದ ಮುಂದೆ ಕೂತು ಭಿಕ್ಷೆ ಬೇಡುವ ವ್ಯಕ್ತಿ- ಫೋನ್ ಪೇ, ಗೂಗಲ್ ಪೇ ಮತ್ತು ಪೇಟಿಎಂ ಬಳಸುತ್ತಾನೆ. ಹಣ್ಣು, ತರಕಾರಿ ಮಾರುವ ಸಣ್ಣ ವ್ಯಾಪಾರಿಗಳು ಡಿಜಿಟಲ್ ಇಂಡಿಯಾ ಅಡಿಯಲ್ಲಿ ಕ್ರಾಂತಿಯನ್ನೇ ಮಾಡಿದ್ದಾರೆ. ಮನೆಯಿಂದ ಹೊರಗೆ ಹೋದರೆ ಜೇಬಿನಲ್ಲಿ ಹಣ ತೆಗೆದುಕೊಂಡು ಹೋಗಬೇಕಿಲ್ಲ, ಮೊಬೈಲ್ ಇದ್ದರೆ ಸಾಕು ವ್ಯಾಪಾರ ಮಾಡಬಹುದು. ಎಟಿಎಂ ಕಾರ್ಡುಗಳ ಬಳಕೆ ನಿಂತುಹೋಗಿದೆ. ಡಿಜಿಟಲ್ ಇಂಡಿಯಾ ಮೂಲಕ ಭಾರತದ ಆರ್ಥಿಕತೆಯಲ್ಲಿ ದೊಡ್ಡಮಟ್ಟದ ಪಾರದರ್ಶಕತೆ ಕಂಡುಬಂದಿದೆ. ಇಂಥ ಸಂದರ್ಭದಲ್ಲಿ ಕರ್ನಾಟಕದ ಜಿಎಸ್‌ಟಿ ಅಧಿಕಾರಿಗಳು ಫೋನ್ ಪೇ, ಗೂಗಲ್ ಪೇ ಮತ್ತು ಪೇಟಿಎಂ ಕಂಪನಿಗಳಿಂದ ಮಾಹಿತಿ ಸಂಗ್ರಹ ಮಾಡಿ ಸಣ್ಣ ವ್ಯಾಪಾರಿಗಳಿಗೆ ಸುಖಾಸುಮ್ಮನೆ ನೋಟಿಸ್ ಜಾರಿ ಮಾಡಿ ಲಕ್ಷಾಂತರ ರುಪಾಯಿ ತೆರಿಗೆ ಕಟ್ಟುವಂತೆ ತಾಕೀತು ಮಾಡಿದರು. ನೋಟಿಸ್ ಜಾರಿ ಮಾಡಿರುವುದು ಕರ್ನಾಟಕ ಸರಕಾರ, ಆದರೆ ಕಾಂಗ್ರೆಸ್ಸಿಗರು ಯಥಾಪ್ರಕಾರ ಕೇಂದ್ರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡಿದರು. 2017ರಲ್ಲಿ ಜಿಎಸ್‌ಟಿ ಕಾಯ್ದೆ ಅನುಷ್ಠಾನಕ್ಕೆ ಬಂದ ನಂತರ ಸ್ವತಂತ್ರ ಭಾರತದ ಇತಿಹಾಸದಲ್ಲಿ ಮೊದಲ ಬಾರಿಗೆ ತೆರಿಗೆ ನೀತಿ ಜಾರಿಗೆ ಬಂತೆಂಬಂತೆ ರಾಹುಲ್ ಗಾಂಧಿ ಸುಳ್ಳನ್ನು ಹೇಳಿದ್ದರು. ಅವರು ಹೇಳಿದ ಸುಳ್ಳನ್ನು ಕಾಂಗ್ರೆಸ್ಸಿಗರು ಸತತವಾಗಿ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

ತೆರಿಗೆ ಎಂಬುದು ಬ್ರಿಟಿಷರ ಕಾಲದಿಂದಲೂ ಭಾರತದಲ್ಲಿದೆ. ಸ್ವಾತಂತ್ರ್ಯನಂತರ ತೆರಿಗೆಗೆ ಸಂಬಂಧಪಟ್ಟ ಕಾನೂನುಗಳನ್ನು ಮೊಟ್ಟಮೊದಲ ಬಾರಿಗೆ ಜಾರಿಗೆ ತಂದದ್ದು ಕಾಂಗ್ರೆಸ್ ಪಕ್ಷ. 2017ರಲ್ಲಿ ಜಿಎಸ್‌ಟಿ ಕಾಯ್ದೆ ಜಾರಿಗೆ ಬರುವ ಮುಂಚೆ ಒಂದು ವಸ್ತುವಿನ ಮೇಲೆ ಅಬಕಾರಿ ತೆರಿಗೆ, ಸೇವಾ ತೆರಿಗೆ, ರಾಜ್ಯ ಸರಕು ಮಾರಾಟ ತೆರಿಗೆ, ಕೇಂದ್ರ ಸರಕು ಮಾರಾಟ ತೆರಿಗೆ, ಪ್ರವೇಶ ತೆರಿಗೆ, ಮನರಂಜನಾ ತೆರಿಗೆ, ಆಮದು ಸುಂಕ, ಐಷಾರಾಮಿ ತೆರಿಗೆ, ಜಾಹೀರಾತು ತೆರಿಗೆ, ಖರೀದಿ ತೆರಿಗೆ, ಲಾಟರಿ ತೆರಿಗೆ ಸೇರಿ 16 ಮಾದರಿಯ ತೆರಿಗೆಗಳನ್ನು ವಿವಿಧ ಹಂತಗಳಲ್ಲಿ ಕಟ್ಟಬೇಕಿತ್ತು. ನಾವು ಖರೀದಿಸುವ ವಸ್ತುಗಳ ಮೇಲೆ ಕಡಿಮೆ ಎಂದರೂ 10 ರೀತಿಯ ತೆರಿಗೆಗಳನ್ನು ಕಟ್ಟಬೇಕಿತ್ತು. ಕಾಂಗ್ರೆಸ್ ಅವಧಿಯಲ್ಲಿ ಹೇರುತ್ತಿದ್ದಂಥ 16 ಮಾದರಿಯ ತೆರಿಗೆಗಳನ್ನು ರದ್ದುಗೊಳಿಸಿ 2017ರಲ್ಲಿ ಜಿಎಸ್‌ಟಿಯನ್ನು ಜಾರಿಗೆ ತರಲಾಯಿತು.

ಸಮಾಜದಲ್ಲಿ ಜಿಎಸ್‌ಟಿ ಬಗ್ಗೆ ಕಾಂಗ್ರೆಸ್ಸಿಗರು ಎಬ್ಬಿಸಿರುವ ಗೊಂದಲಗಳು ಒಂದೊಂದಲ್ಲ. ಜನಸಾಮಾನ್ಯರಿಗೆ ಹೆಚ್ಚಿನ ತೆರಿಗೆಜ್ಞಾನ ಇಲ್ಲವೆಂದುಕೊಂಡಿರುವ ಕಾಂಗ್ರೆಸ್ ಪಕ್ಷ ಇಲ್ಲಸಲ್ಲದ ಸುಳ್ಳುಗಳನ್ನು ಹಬ್ಬಿಸುತ್ತಾ ಬಂದಿದೆ. ಜಿಎಸ್‌ಟಿಯನ್ನು 2010ರ ಏಪ್ರಿಲ್ ತಿಂಗಳಿಂದ ಜಾರಿಗೆ ತರುತ್ತೇವೆಂದು 2006ರ ಬಜೆಟ್‌ನಲ್ಲಿ ಮೊಟ್ಟಮೊದಲ ಬಾರಿಗೆ ಹೇಳಿದ್ದು ಕಾಂಗ್ರೆಸ್ಸಿನ ವಿತ್ತಸಚಿವರಾಗಿದ್ದ ಪಿ. ಚಿದಂಬರಂ. ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಜಿಎಸ್‌ಟಿ ಜಾರಿಗೆ ತರಲು ಕಸರತ್ತು ನಡೆಸಿತ್ತು. ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳ ಪಾತ್ರ ಮಹತ್ವದ್ದಾಗಿದೆ. ಜಿಎಸ್‌ಟಿ ಕಾಯ್ದೆ ಅಡಿಯಲ್ಲಿ ತೆಗೆದುಕೊಳ್ಳುವ ನಿರ್ಧಾರಗಳಲ್ಲಿ ರಾಜ್ಯಗಳದ್ದು ಪ್ರಮುಖ ಪಾತ್ರವಾಗಿದೆ. ಜಿಎಸ್‌ಟಿ ಕಾಯ್ದೆಗೆ ಸಂಬಂಧಪಟ್ಟಿರುವ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ರಾಜ್ಯಗಳ ಪ್ರಾತಿನಿಧ್ಯ 2/3 ರಷ್ಟಿದ್ದರೆ ಕೇಂದ್ರದ ಪ್ರಾತಿನಿಧ್ಯ 1/3ಗೆ ಮಾತ್ರ ಸೀಮಿತ. ಜಿಎಸ್‌ಟಿಗೆ ಸಂಬಂಧಪಟ್ಟಿರುವ ನಿರ್ಧಾರಗಳನ್ನು ಜಿಎಸ್‌ಟಿ ಮಂಡಳಿ ತೆಗೆದುಕೊಳ್ಳುತ್ತದೆ. ಮಂಡಳಿಯಲ್ಲಿ ಎಲ್ಲಾ ರಾಜ್ಯದ ಪ್ರತಿನಿಧಿಗಳೂ ಭಾಗವಹಿಸುತ್ತಾರೆ. ಮಂಡಳಿಯಲ್ಲಿ ತೆಗೆದುಕೊಳ್ಳುವ ನಿರ್ಧಾರಗಳನ್ನು ಮತಕ್ಕೆ ಹಾಕಿ ನಂತರವಷ್ಟೇ ಕಾಯ್ದೆಗೆ ತಿದ್ದುಪಡಿ ಮಾಡಲಾಗುತ್ತದೆ. ವಸ್ತುವಿನ ಮೇಲಿನ ಜಿಎಸ್‌ಟಿಯನ್ನು ಏರಿಸುವ ಅಥವಾ ಇಳಿಸುವ ಅಧಿಕಾರ ಜಿಎಸ್‌ಟಿ ಮಂಡಳಿಗೆ ಮಾತ್ರವೇ ಇದೆ. ಈ ನಿರ್ಧಾರವನ್ನು ಕೇಂದ್ರ ಸರಕಾರ ಏಕಪಕ್ಷೀಯವಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲ.

ಜಿಎಸ್‌ಟಿಗೆ ಸಂಬಂಧಿಸಿದ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರ ಮಂಡಳಿಗಿದೆ. ಆದರೆ ಆಯಾ ರಾಜ್ಯಗಳ ಒಳಗೆ ನಡೆಯುವ, ಜಿಎಸ್‌ಟಿ ಆಡಳಿತಕ್ಕೆ ಸಂಬಂಧಪಟ್ಟ ದಿನನಿತ್ಯದ ವಿಷಯಗಳ ಬಗೆಗಿನ ನಿರ್ಧಾರ ತೆಗೆದುಕೊಳ್ಳುವ ಹೆಚ್ಚಿನ ಅಧಿಕಾರ ರಾಜ್ಯ ಸರಕಾರದ ಅಧಿಕಾರಿಗಳಿಗಿರುತ್ತದೆ. ರಾಜ್ಯದ ಒಳಗಿರುವ ವ್ಯಾಪಾರಿಗಳ ಮೇಲಿನ ನಿಯಂತ್ರಣದಲ್ಲಿ ಪ್ರಮುಖ ಪಾತ್ರ ವಹಿಸುವುದು ಆಯಾ ರಾಜ್ಯಗಳು. ಕರ್ನಾಟಕದಲ್ಲಿರುವ ವರ್ತಕರಿಗೆ ನೋಟಿಸ್ ನೀಡಿರುವುದು ರಾಜ್ಯ ಸರಕಾರ. ನೋಟಿಸ್‌ನ ಮೇಲ್ಭಾಗವನ್ನು ನೋಡಿದರೆ ರಾಜ್ಯ ಸರಕಾರದ ಹೆಸರು ಕಣ್ಣಿಗೆ ರಾಚುತ್ತದೆ.

2025-26ರ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು ಹೇಳಿರುವಂತೆ ಮಾರಾಟ ತೆರಿಗೆಯಿಂದ ಅಂದಾಜು 1,20,000 ಕೋಟಿ ರು. ತೆರಿಗೆ ಸಂಗ್ರಹದ ಗುರಿಯನ್ನು ಹೊಂದಲಾಗಿದೆ. ಅಂದರೆ ತಿಂಗಳಿಗೆ ಅಂದಾಜು 10,000 ಕೋಟಿ ರು. ತೆರಿಗೆ ಸಂಗ್ರಹದ ಗುರಿಯನ್ನು ಅಧಿಕಾರಿಗಳಿಗೆ ನೀಡಲಾಗಿದೆ. ಈ ವರ್ಷದ ಮೊದಲ ಮೂರು ತಿಂಗಳಲ್ಲಿ 30,000 ಕೋಟಿ ರು. ಸಂಗ್ರಹವಾಗಬೇಕಿತ್ತು. ಆದರೆ ಮೂರೂ ತಿಂಗಳಲ್ಲಿ ಶೇ. 87ರಷ್ಟು ಮಾತ್ರ ಸಂಗ್ರಹವಾಗಿದೆ. ಮೊದಲ ತ್ರೈಮಾಸಿಕದಲ್ಲಿ ರಾಜ್ಯ ಸರಕಾರ ಅಂದಾಜಿಸಿದಂತೆ ತೆರಿಗೆ ಸಂಗ್ರಹದ ಗುರಿಯನ್ನು ಮುಟ್ಟದ ಕಾರಣ, ಹೊಸ ವರ್ತಕರನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವ ಸಲುವಾಗಿ 13,000ಕ್ಕೂ ಅಧಿಕ ನೋಟಿಸ್‌ಗಳನ್ನು ನೀಡಲಾಗಿದೆ. ಈ ನೋಟಿಸ್‌ಗಳ ಮೂಲ ಗೂಗಲ್ ಪೇ, ಫೋನ್ ಪೇ ಮತ್ತು ಪೇಟಿಎಂ. ನೋಟಿಸ್ ನೀಡುವ ಮೊದಲು ಸಣ್ಣ ವರ್ತಕರ ಆದಾಯದ ಮೂಲದ ಬಗ್ಗೆ ಚಿಂತಿಸದೆ, ತೆರಿಗೆ ಸಂಗ್ರಹದ ಏಕೈಕ ಗುರಿಯಿಂದ ರಾಜ್ಯ ಸರಕಾರ ಸಿಕ್ಕಸಿಕ್ಕವರಿಗೆ ನೋಟಿಸ್ ಜಾರಿ ಮಾಡಿದೆ. ಸಣ್ಣ ವ್ಯಾಪಾರಿಗಳ ಬ್ಯಾಂಕಿನಲ್ಲಿ ಅವರ ದಿನನಿತ್ಯದ ವ್ಯವಹಾರದ ಹಣದ ಜತೆಗೆ ಸಾಲ ಪಡೆದುಕೊಂಡ ಹಣವೂ ಸಂಗ್ರಹವಾಗುತ್ತದೆಯೆಂಬ ಸಾಮಾನ್ಯಜ್ಞಾನ ರಾಜ್ಯಸರಕಾರಕ್ಕಿಲ್ಲ. ಸಣ್ಣ ವ್ಯಾಪಾರಿಗಳಿಗೆ ನೋಟಿಸ್ ನೀಡುವ ಮುನ್ನ, ತೆರಿಗೆಗೆ ಸಂಬಂಧಪಟ್ಟಿರುವ ಕಾನೂನಿನ ಬಗ್ಗೆ ಅರಿವು ಮೂಡಿಸುವ ಕೆಲಸವನ್ನು ಸರಕಾರ ಮಾಡಬೇಕಿತ್ತು. ವ್ಯಾಪಾರಿಗಳಿಗೆ ಅರಿವು ಮೂಡಿಸದೆ ಏಕಾಏಕಿ ನೋಟಿಸ್ ನೀಡಿ ಲಕ್ಷಗಟ್ಟಲೆ ತೆರಿಗೆಯನ್ನು ಕಟ್ಟಬೇಕೆಂದು ಹೇಳಿರುವುದನ್ನು ಒಪ್ಪಲು ಸಾಧ್ಯವಿಲ್ಲ.

ದೇಶದಲ್ಲಿ ಜಿಎಸ್‌ಟಿ ಜಾರಿಗೆ ಬಂದ ನಂತರ ಅಂತಾರಾಜ್ಯ ಸರಕು ಸಾಗಾಟಕ್ಕೆ ಹಿಡಿಯುವ ಸಮಯದಲ್ಲಿ ಬಹಳ ಉಳಿತಾಯವಾಗಿದೆ. ಹಿಂದಿನ ತೆರಿಗೆ ಪದ್ಧತಿಗಳಲ್ಲಿ ಸರಕುಗಳನ್ನು ಹೊತ್ತ ಲಾರಿಗಳು ರಾಜ್ಯಗಳ ಚೆಕ್‌ಪೋಸ್ಟ್‌ಗಳಲ್ಲಿ ದಿನಗಟ್ಟಲೆ ನಿಲ್ಲುತ್ತಿದ್ದವು. ಜಿಎಸ್‌ಟಿ ಜಾರಿಗೆ ಬಂದ ನಂತರ ಸರಕು ಸಾಗಾಟಕ್ಕೆ ಹಿಡಿಯುವ ಸಮಯದಲ್ಲಿ ಉಳಿತಾಯವಾಗಿರುವ ಪರಿಣಾಮ, ಲಾರಿಗಳ ತಿರುಗಿ ಬರುವಿಕೆ ಸಮಯ ಕಡಿಮೆಯಾಗಿದೆ. ಸರಕನ್ನು ಲಾರಿಗೆ ಲೋಡ್ ಮಾಡುವ ಮುನ್ನವೇ ಅದರ ಸಂಖ್ಯೆ, ಸರಕಿನ ವಿವರವನ್ನು ಆನ್‌ಲೈನ್ ಪೋರ್ಟಲ್‌ನಲ್ಲಿ ದಾಖಲಿಸಬೇಕು.

ಮದ್ಯಗಳ ಮೇಲಿನ ಅಬಕಾರಿ ಸುಂಕ ಅನೇಕ ರಾಜ್ಯಗಳ ಪ್ರಮುಖ ಆದಾಯವಾಗಿದೆ. ಮಾರಾಟ ತೆರಿಗೆಯ ನಂತರ ಮದ್ಯದ ಮೇಲಿನ ಸುಂಕ ಕರ್ನಾಟಕದ ಪ್ರಮುಖ ಆದಾಯವಾಗಿದೆ. ಮದ್ಯದ ಮೇಲಿನ ತೆರಿಗೆ ಹಕ್ಕನ್ನು ರಾಜ್ಯ ಸರಕಾರಗಳು ಹೊಂದಿರುವ ಕಾರಣಕ್ಕೆ, ಮದ್ಯದ ಮೇಲೆ ಶೇ.100ರಿಂದ 200ರವರೆಗೂ ಅಬಕಾರಿ ಸುಂಕ ವಿಧಿಸಲಾಗುತ್ತದೆ. ಇನ್ನು ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ತೆರಿಗೆ ಹಾಕುವ ಹಕ್ಕನ್ನು ರಾಜ್ಯಗಳಿಗೆ ನೀಡಲಾಗಿದೆ. ಆಯಾ ರಾಜ್ಯಗಳು ತಮ್ಮ ಆದಾಯಕ್ಕೆ ತಕ್ಕಂತೆ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಮಾರಾಟ ತೆರಿಗೆಯನ್ನು ಹಾಕುತ್ತವೆ. ಸಾಮಾನ್ಯವಾಗಿ ಹೆಚ್ಚಿನ ಸಾಲವಿರುವ ರಾಜ್ಯಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಮಾರಾಟ ತೆರಿಗೆ ಅಧಿಕವಾಗಿರುತ್ತದೆ. ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಯನ್ನು ಜಿಎಸ್‌ಟಿ ವ್ಯಾಪ್ತಿಗೆ ತರಬೇಕೆನ್ನುವ ಚರ್ಚೆ ಬಹಳ ವರ್ಷಗಳಿಂದ ನಡೆಯುತ್ತಿದೆ. 2017ರಲ್ಲಿ ಜಿಎಸ್‌ಟಿ ಜಾರಿಯಾದ ಸಂದರ್ಭದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆ ಹಕ್ಕನ್ನು ಆಯಾ ರಾಜ್ಯಗಳು ಉಳಿಸಿಕೊಂಡಿದ್ದವು. ಪೆಟ್ರೋಲ್ ಮತ್ತು ಡೀಸೆಲ್ ಎರಡನ್ನೂ ಜಿಎಸ್‌ಟಿ ವ್ಯಾಪ್ತಿಗೆ ತರಬೇಕಾದರೆ ದೇಶದ ಅಷ್ಟೂ ರಾಜ್ಯಗಳು ಜಿಎಸ್‌ಟಿ ಮಂಡಳಿಯಲ್ಲಿ ಒಪ್ಪಿಗೆ ನೀಡಬೇಕು. ಸದ್ಯದ ಪರಿಸ್ಥಿತಿಯಲ್ಲಿ ಒಂದೊಂದು ರಾಜ್ಯದಲ್ಲಿ ಒಂದು ತೆರಿಗೆಯ ದರವಿದೆ. ಜಿಎಸ್‌ಟಿಗೆ ಸಂಬಂಧಿಸಿದ ಮತ್ತೊಂದು ಪ್ರಮುಖ ವಿಷಯದ ಬಗ್ಗೆ ಪ್ರಸ್ತಾಪಿಸಲೇಬೇಕು. ಫೆಬ್ರವರಿ ತಿಂಗಳಲ್ಲಿ ಕೇಂದ್ರ ಸರಕಾರ ಮಂಡಿಸುವ ಬಜೆಟ್‌ನಲ್ಲಿ ಜಿಎಸ್‌ಟಿಗೆ ಸಂಬಂಧಿಸಿದ ನಿರ್ಣಯಗಳು ಕಾಣಿಸುವುದಿಲ್ಲ. ಜಿಎಸ್‌ಟಿ ಸಂಬಂಧಿತ ವಿಷಯಗಳನ್ನು ಕೇವಲ ಜಿಎಸ್‌ಟಿ ಮಂಡಳಿಯಲ್ಲಿ ನಿರ್ಧರಿಸಲಾಗುತ್ತದೆ. ಫೆಬ್ರವರಿ ತಿಂಗಳ ಬಜೆಟ್ ಕೇವಲ ಕೇಂದ್ರ ಸರಕಾರದ ಬಜೆಟ್ ಆಗಿರುವ ಕಾರಣಕ್ಕೆ ಏಕಪಕ್ಷೀಯವಾಗಿ ಕೇಂದ್ರ ಸರಕಾರ ನಿರ್ಣಯ ತೆಗೆದುಕೊಳ್ಳಲು ಸಾಧ್ಯವಿಲ್ಲ. ಜಿಎಸ್‌ಟಿ ಸಂಬಂಧಿತ ವಿಷಯಗಳನ್ನು ಮಂಡಳಿಯಲ್ಲಿ ಎಲ್ಲಾ ರಾಜ್ಯಗಳ ಪ್ರತಿನಿಧಿಗಳ ಸಮ್ಮುಖದಲ್ಲಿಯೇ ಚರ್ಚಿಸಿ ಮತಕ್ಕೆ ಹಾಕಿ ನಿರ್ಣಯ ಕೈಗೊಳ್ಳಬೇಕು. ವರ್ಷದಲ್ಲಿ ಅನೇಕ ಬಾರಿ ಮಂಡಳಿ ಸಭೆ ನಡೆಸಿ ನಿರ್ಣಯವನ್ನು ಕೈಗೊಳ್ಳಲಾಗುತ್ತದೆ.

ದೇಶದಲ್ಲಿ ಜಿಎಸ್‌ಟಿ ಜಾರಿಗೆ ಬಂದ ನಂತರ ವ್ಯಾಪಾರ ವಹಿವಾಟಿನಲ್ಲಿ ಪಾರದರ್ಶಕತೆ ಹೆಚ್ಚಾಗಿದೆ. ತೆರಿಗೆ ವ್ಯಾಪ್ತಿ ಹೆಚ್ಚಾಗಿರುವ ಕಾರಣಕ್ಕೆ ಅನೇಕ ವಸ್ತುಗಳ ಮೇಲಿನ ತೆರಿಗೆ ದರವನ್ನು ಇಳಿಸಲಾಗಿದೆ. ಒಂದು ಕಾಲದಲ್ಲಿ ಅಮೆರಿಕದ ವೀಸಾ ಮತ್ತು ಮಾಸ್ಟರ್ ಕಾರ್ಡುಗಳು ಭಾರತದೊಳಗೆ ನಡೆಯುವ ಲಕ್ಷಾಂತರ ಕೋಟಿ ರುಪಾಯಿ ವಹಿವಾಟಿನ ಮೇಲೆ ಶೇ.ರಷ್ಟು ಶುಲ್ಕ ವಿಧಿಸಿ ಸಾವಿರಾರು ಕೋಟಿ ಹಣ ಗಳಿಸಿದ್ದವು. ಯುಪಿಐ ಜಾರಿಗೆ ಬಂದ ನಂತರ ಅವರಿಗೆ ನೀಡುತ್ತಿದ್ದ ಶುಲ್ಕ ಕಡಿಮೆಯಾಗಿದೆ. ಸಣ್ಣಪುಟ್ಟ ವ್ಯಾಪಾರಿಗಳ ವಹಿವಾಟಿನ ಮೇಲೆ ಅನೇಕ ಬ್ಯಾಂಕುಗಳು ಸಾಲ ನೀಡುತ್ತಿವೆ. 'ಡಿಜಿಟಲ್ ಇಂಡಿಯಾ' ಮೂಲಕ ಮನೆ ಮನೆಗೆ ತಲುಪಿರುವ ಯುಪಿಐ ವ್ಯವಸ್ಥೆಯನ್ನು ಇಡೀ ಜಗತ್ತು ಮೆಚ್ಚಿಕೊಂಡಿದೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅಸುರಕ್ಷಿತತೆಯ ಭಾವ

ಕಾಲಚಕ್ರ ಉರುಳಿದಂತೆ ಮನುಷ್ಯ ಹೆಚ್ಚೆಚ್ಚು ಅಸುರಕ್ಷಿತತೆಯ ಭಾವವನ್ನು ಹೊಂದುತ್ತಿರಬಹುದೇ? ಯಾಕೀ ಅನುಮಾನವೆಂದರೆ, ಸ್ವಲ್ಪ ಮಳೆಯ ಮುನ್ಸೂಚನೆ ಬಂದರೂ ಶಾಲೆಗಳಿಗೆ ರಜೆ ಘೋಷಿಸಿಬಿಡುವ ಪರಿಪಾಠ ಹೆಚ್ಚಾಗುತ್ತಿದೆ. ಒಂದು ರೀತಿಯಲ್ಲಿದು ಜವಾಬ್ದಾರಿಯಿಂದ ನುಣುಚಿಕೊಳ್ಳುವ ಪರಿ ಎನ್ನಬಹುದೇ? ಕರಾವಳಿ ಮತ್ತು ಮಲೆನಾಡು ಪ್ರದೇಶದಲ್ಲಿ ಮಳೆ ತುಸು ಜಾಸ್ತಿಯೇ ಇರುತ್ತದೆ. ಆದರೂ, ನಾವು ಚಿಕ್ಕವರಿರುವಾಗಿನಷ್ಟು ಮಳೆ ಈಗಿಲ್ಲ (ಅದಕ್ಕೆ ಕಾರಣಗಳು ಹಲವು). ಹಾಗಂತ ಅಂದು ಮಳೆಗಾಗಿ ರಜೆ ಎಂಬುದು ಇರಲೇ ಇಲ್ಲ. ಅಂದು ಸರಿಯಾದ ರಸ್ತೆಗಳೂ ಇರಲಿಲ್ಲ. ಪ್ರಾಥಮಿಕ ಶಾಲೆಗೆ ಹೋಗುವಾಗ ಕನಿಷ್ಠ 4-5 ಹಳ್ಳಗಳನ್ನು ದಾಟಿಯೇ ಹೋಗಬೇಕಿತ್ತು. ಇನ್ನು, ಮಾಧ್ಯಮಿಕ, ಪ್ರೌಢಶಾಲೆ ಮತ್ತು ಕಾಲೇಜು ದಿನಗಳಲ್ಲಂತೂ ನೀರಿನ ಪ್ರವಾಹದ ಮಧ್ಯೆ, ಸಣ್ಣ ನಾವೆಯಲ್ಲೇ ಹೋಗಿ ರಸ್ತೆ ತಲುಪಿ, ಅಲ್ಲಿಂದ ಮುಂದಕ್ಕೆ ಬಸ್‌ನಲ್ಲಿ ಪ್ರಯಾಣಿಸಬೇಕಿತ್ತು. ಇಷ್ಟೊಂದು ಕ್ಲಿಷ್ಟವಾದರೂ ಮಳೆ ಹೆಚ್ಚಾಯಿತೆಂದು ನಾವೆಲ್ಲ ರಜೆ ಪಡೆದ ನೆನಪಿಲ್ಲ. ಆದರೆ ಇಂದು? ಉತ್ತಮ ರಸ್ತೆಗಳು, ಹತ್ತಿರದಲ್ಲೇ ಶಾಲೆಗಳು, ಅಲ್ಲಿಗೆ ಹೋಗಲೂ 'ಸ್ಕೂಲ್ ಬಸ್' ವ್ಯವಸ್ಥೆಯಿದೆ. ಇಷ್ಟಾಗಿಯೂ ಸ್ವಲ್ಪ ಹೆಚ್ಚು ಮಳೆಯ ಸೂಚನೆ ಬಂದ ಕೂಡಲೇ ರಜಾ! ಈ ವರ್ಷ ಮಳೆಯ ಕಾರಣದಿಂದಾಗಿ ಈಗಾಗಲೇ 5 ರಜೆಗಳನ್ನು ಘೋಷಿಸಲಾಗಿದೆ. ಕಳೆದ ಮಳೆಗಾಲದಲ್ಲಿ 17 ರಜೆಗಳನ್ನು ಘೋಷಿಸಲಾಗಿತ್ತು. ಅದಕ್ಕೆ ಪರ್ಯಾಯವಾಗಿ ಶನಿವಾರ ಪೂರ್ಣದಿನ ಶಾಲೆ ನಡೆದರೂ, ಉಳಿದ ದಿನಗಳಲ್ಲಿ ನಡೆದಂತೆ ಅದು ಇರುವುದಿಲ್ಲ, ಏಕೆಂದರೆ, ಮಕ್ಕಳು ಮತ್ತು ಕೆಲ ಶಿಕ್ಷಕರ ಮನದಲ್ಲಿ 'ನಾವು ರಜಾದಿನದಂದು ಕೆಲಸ ಮಾಡುತ್ತಿದ್ದೇವೆ' ಎಂಬ ಭಾವ ಬಂದು, ಕಲಿಕೆಯ ತೀವ್ರತೆಯೂ ಕಡಿಮೆಯಾಗುತ್ತದೆ. ಇದು ಮಾನವಸಹಜ ಗುಣ. ಇದರರ್ಥ, ಅಂದು ನಾವು ಬದುಕಿದ್ದು ಬದುಕೇ ಅಲ್ಲವಾಗಿತ್ತೇ? ಅಂದು ಬದುಕಿನ ಸುರಕ್ಷಿತತೆಯ ಬಗ್ಗೆ ಕಾಳಜಿ ಇರಲಿಲ್ಲವೇ? ಇರಲಿಲ್ಲ ಎಂದೇನಲ್ಲ, ಆದರೆ ಅದನ್ನು ಸಮರ್ಥವಾಗಿ ಎದುರಿಸುವ ಇಚ್ಛಾಶಕ್ತಿ ಇತ್ತು. ಪಾಲಕರು ಕೂಡ ಅಂಥ ಅತಿರೇಕದ ಕಾಳಜಿ ವಹಿಸುತ್ತಿರಲಿಲ್ಲ. ಆ ಪರಿಸ್ಥಿತಿಗೆ ಮಕ್ಕಳೂ ಒಗ್ಗಿಕೊಂಡಿದ್ದರು.

ಆದರೆ, ಶಿಕ್ಷಣ ಇಲಾಖೆಯವರಿಗೆ ಅದೇನೋ ಅಳುಕು, ಅಂಜಿಕೆ. 'ಪಾಲಕರಿಂದ ಪುಕಾರು ಬಂದರೆ ಏನು ಮಾಡುವುದು?' ಎಂಬ ಗೊಂದಲ. ಹೀಗಾಗಿ ಈ ಥರ 'ಮಳೆರಜೆ'ಯ ಘೋಷಣೆಯಾಗುತ್ತಿರಬಹುದು! ಜತೆಗೆ, ಇಂದು ಶಿಕ್ಷಣ ಪದ್ಧತಿಯೇ ಬದಲಾಗಿದೆ, 'ಶಿಕ್ಷೆಯಿಲ್ಲದ ಶಿಕ್ಷಣ' ಎಂಬಂತಾಗಿದೆ. ತರಗತಿಯಲ್ಲಿ ಮಕ್ಕಳನ್ನು ತಿದ್ದಲೆಂದು ಶಿಕ್ಷಕರು ಕೊಂಚ ಏರುದನಿಯಲ್ಲಿ ಮಾತನಾಡಿದರೂ ಅದನ್ನೇ ಪಾಲಕರಿಗೆ ಮುಟ್ಟಿಸಿ ರಾದ್ಧಾಂತ ಎಬ್ಬಿಸುವ ಅದೆಷ್ಟೋ ಸಂದರ್ಭಗಳನ್ನು ಕಂಡಿದ್ದೇವೆ. ಹೀಗಾಗಿ, 'ಯಾರಿಗೆ ಬೇಕು ಈ ಎಲ್ಲ ಉಸಾಬರಿ..' ಎಂಬ ಗ್ರಹಿಕೆಯಲ್ಲಿ ತೆಪ್ಪಗೆ ರಜೆಯನ್ನು ಘೋಷಿಸಿಬಿಡುತ್ತಿದ್ದಾರೇನೋ..! ಇದು ನಿಜವಾದ ಪರಿಹಾರವೇ ಅಂತ ಯೋಚಿಸಬೇಕು. ಮಕ್ಕಳಲ್ಲಿ ಹೆಚ್ಚೆಚ್ಚು ಆತ್ಮಬಲ, ವಿಶ್ವಾಸವನ್ನು ಮೂಡಿಸಬೇಕೆಂದರೆ, ಸವಾಲುಗಳನ್ನು ಎದುರಿಸಿ ಪಕ್ವವಾಗಲು ಅವರಿಗೆ ಅನುವುಮಾಡಿಕೊಡಬೇಕು. ಆದರೆ, ಅದಕ್ಕೆಲ್ಲಿದೆ ಅವಕಾಶ ಈ ಕಾಲದಲ್ಲಿ?

- ಶಂಕರನಾರಾಯಣ ಭಟ್, ಮಾಡಗೇರಿ

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ದಂಡಕ್ಕೆ ದಾಳಿಗೆ ಹೆದರದ ರಣತುಂಗ ಎಂಬ ರಣಧೀರ!

ಪದಸಾಗರ
ನವೀನ್ ಸಾಗರ್
vveditoped@gmail.com

ಬೆಳ್ಳ ತಲೆಗೂದಲಿನ ತೆಳ್ಳನೆಯ ವ್ಯಕ್ತಿಯ ಫೋಟೋವೊಂದನ್ನು ಇತ್ತೀಚೆಗೆ ಕ್ರೀಡಾಪುಟದಲ್ಲಿ ನೋಡಿ ಒಂದು ಬಾರಿ ಕಣ್ಣುಜ್ಜಿಕೊಳ್ಳುವ ಹಾಗಾಯ್ತು. ಅದು ಶ್ರೀಲಂಕಾ ಕ್ರಿಕೆಟ್ ತಂಡದ ಮಾಜಿ ನಾಯಕ ಅರ್ಜುನ ರಣತುಂಗ ಎಂದು ನಂಬಲು ನನಗೆ ಬಹಳ ಹೊತ್ತೇ ಬೇಕಾಯ್ತು. ಅರ್ಜುನ ರಣತುಂಗ ಅಂದರೆ ನೆನಪಿಗೆ ಬರ್ತಾ ಇದ್ದದ್ದು ದಢೂತಿ ದೇಹದ ಗುಂಡುಗುಂಡು ಮೈಕಟ್ಟಿನ ನೀಳಕೇಶದ ಡೋಂಟ್ ಕೇರ್ ವ್ಯಕ್ತಿತ್ವದ ಚಿತ್ರ.

ನಾನು ಅರ್ಜುನ ರಣತುಂಗನನ್ನು ಮೊಟ್ಟಮೊದಲು ನೋಡಿದ್ದು ಷಾರ್ಜಾದಲ್ಲಿ ನಡೆದ ಪಂದ್ಯವೊಂದರಲ್ಲಿ. ಪಾಕ್ ವಿರುದ್ಧ ಆಡಿದ ಪಂದ್ಯದಲ್ಲಿ ಸೀದಾ ಸ್ಟೇಡಿಯಮ್ಮಿನ ಆಚೆಗೆ ಹೋಗುವಂತೆ ಸಿಕ್ಸರ್ ಬಾರಿಸಿದ್ದ. ಬಾಲ್ ಕಳೆದುಹೋಗಿತ್ತು. ಪರ್ಯಾಯ ಚೆಂಡು ತಂದು ಆಡಿಸಲು ಹೊರಟಾಗ, 'ನನಗೆ ಅದೇ ಬಾಲ್ ಹುಡುಕಿ ತರಿಸಿ' ಅಂತ ಅಂಪೈರ್ ಜತೆಗೆ ಮಾತಿಗಿಳಿದಿದ್ದ. ಅವತ್ತಿಗೆ ಬಹಳ ಥ್ರಿಲ್ ಆಗಿತ್ತು. ಅಂದಿನಿಂದ ಅರ್ಜುನ ರಣತುಂಗ ಅನ್ನೋ ಹೆಸರು, ಆತನ ಆಟ, ವ್ಯಕ್ತಿತ್ವ, ನಾಯಕತ್ವ ಗುಣ ಎಲ್ಲವೂ ಬಹಳ ಆಸಕ್ತಿದಾಯಕ ಅನಿಸುತ್ತಲೇ ಹೋಯ್ತು. ಆತ ಧರಿಸುತ್ತಿದ್ದ ನಾಮ್-ಕೆ-ವಾಸ್ತೆ ಹೆಲ್ಮೆಟ್, ಆತ ಅಂಗಣದ ಮಧ್ಯ ಓಡುವ ಬದಲು ನಡೆದೇ ಗಿಟ್ಟಿಸಿಕೊಳ್ಳುತ್ತಿದ್ದ ರನ್, ಲೀಲಾಜಾಲ ಸಿಕ್ಸರ್, ಹೊಟ್ಟೆ ಹೊತ್ತುಕೊಂಡು ಓಡಿ ಬಂದು ಬೌಲ್ ಮಾಡುತ್ತಿದ್ದ ಶೈಲಿ ಎಲ್ಲವೂ ಇಷ್ಟವಾಗುತ್ತಿತ್ತು. ಆಗಿನ ಕಾಲದಲ್ಲಿ ಡೇವಿಡ್ ಬೂನ್ ಮತ್ತು ಈ ರಣತುಂಗ ಇಬ್ಬರೇ ಬಹುಶಃ ಈ ರೀತಿ ಡುಮ್ಮಗಿದ್ದ ಆಟಗಾರರು. ಆದರೆ ಅದು ಅವರ ಆಟದ ಮೇಲೆ ಯಾವ ಪರಿಣಾಮವನ್ನೂ ಬೀರಿರಲಿಲ್ಲ.

ರಣತುಂಗನ ಮಿಕ್ಕೆಲ್ಲ ಗುಣಗಳ ತೂಕ ಒಂದಾದರೆ, ನಾಯಕತ್ವದ ತೂಕವೇ ಇನ್ನೊಂದು. ಅದು ಭರ್ಜರಿಯಾಗಿಯೇ ತೂಗುತ್ತಿತ್ತು.ನನ್ನ ಪ್ರಕಾರ ರಣತುಂಗ ಅಂತಾರಾಷ್ಟ್ರೀಯ ಕ್ರಿಕೆಟ್ ರಂಗದ ಗ್ರೇಟೆಸ್ಟ್ ಕ್ಯಾಪ್ಟನ್. ಕ್ಲೈವ್ ಲಾಯ್ಡ್ ಎರಡು ವಿಶ್ವಕಪ್ ಗೆದ್ದಿರಬಹುದು, ಪಾಂಟಿಂಗ್, ಸ್ಟೀವ್ ವಾ, ಬಾರ್ಡರ್ ಕೂಡ ಆಸ್ಟ್ರೇಲಿಯಾದ ದಿಗ್ಗಜ ನಾಯಕರಿರಬಹುದು, ಧೋನಿ ಮತ್ತು ಗಂಗೂಲಿಯನ್ನೂ ನಾವು ಕೊಂಡಾಡಬಹುದು. ಆದರೆ ಅರ್ಜುನ ರಣತುಂಗ ಎಂಬ ನಾಯಕ ನಿಜಕ್ಕೂ ಅಸಾಮಾನ್ಯ. ಭಾರತದ ಎದುರು ಶ್ರೀಲಂಕಾ ಎಂಬುದು ಲೆಕ್ಕಕ್ಕೇ ಇಲ್ಲದಷ್ಟು ಚಿಕ್ಕ ದ್ವೀಪ. ವಿಶ್ವದ ಇತರ ದೇಶಗಳೆದುರು ಶ್ರೀಲಂಕಾ ಒಂದು ದೇಶವಾಗಿಯೇ ನಗಣ್ಯ. ಕ್ರಿಕೆಟ್‌ನಲ್ಲಂತೂ ಅದು ಸೋಲಲೆಂದೇ ಇರುವ ತಂಡದಂತಿತ್ತು. 1987ರ ವಿಶ್ವಕಪ್‌ನಲ್ಲಿ ಶ್ರೀಲಂಕಾ ಮತ್ತು ಜಿಂಬಾಬ್ವೆ ಒಂದೇಒಂದು ಪಂದ್ಯವನ್ನೂ ಗೆಲ್ಲಲಾರದೇ ತಮ್ಮ ವ್ಯವಹಾರ ಮುಗಿಸಿ ಹೊರಬಿದ್ದಿದ್ದವು. ಆ ಸೋಲುಗಳಲ್ಲೂ ಮಿಂಚಿದ್ದು ರಣತುಂಗ ಎಂಬ ರಣಧೀರನೇ.

ಅಂಥ ಒಂದು ದುರ್ಬಲವೆನಿಸುವ ತಂಡವನ್ನು ಕೇವಲ ನಾಲ್ಕೇ ವರ್ಷಗಳಲ್ಲಿ ಚಾಂಪಿಯನ್ ಆಗುವ ಲೆವೆಲ್ಲಿಗೆ ರೆಡಿ ಮಾಡಿದ್ದು ರಣತುಂಗ. 1992ರ ನಂತರದ ಶ್ರೀಲಂಕಾ ತಂಡ ಪವಾಡ ನಡೆಯಿತೆಂಬಂತೆ ಭಯಂಕರ ತಂಡವಾಗಿಬಿಟ್ಟಿತ್ತು. ಅಲ್ಲಿದ್ದದ್ದು ರಣತುಂಗನ ಆಕ್ರಮಣಕಾರಿ ಪ್ರಯೋಗಶೀಲತೆ ಮತ್ತು ತಂಡವನ್ನು ಮುನ್ನಡೆಸುವ ನಾಯಕತ್ವ ಗುಣ. ಎಡಗೈ ಸ್ಪಿನ್ ಮಾಡಿಕೊಂಡು ಕೆಳಕ್ರಮಾಂಕದಲ್ಲಿ ಬ್ಯಾಟ್ ಮಾಡುತ್ತಿದ್ದ ಜಯಸೂರ್ಯನನ್ನು ಕರೆದು ಇನ್ನಿಂಗ್ಸ್ ಆರಂಭಿಸುವ ಜವಾಬ್ದಾರಿ ಕೊಡುತ್ತಾನೆ. ಅವನ ಜತೆಗೆ ರೊಮೇಶ್ ಕಳುವಿತರಣ ಎಂಬ ಕೀಪರ್‌ಗೂ ಬಡ್ತಿ ನೀಡುತ್ತಾನೆ. 'ಹದಿನೈದು ಓವರ್‌ಗಳಲ್ಲಿ ನೂರು ರನ್ ಚಚ್ಚಿ ಬನ್ನಿ. ಒಂಬತ್ತು ಫೀಲ್ಡರ್‌ಗಳು ಮೂವತ್ತಡಿ ಸರ್ಕಲ್ ಒಳಗಿರುತ್ತಾರೆ. ಅವರ ತಲೆ ಮೇಲೆ ಹೋಗುವಂತೆ ಹೊಡೆಯಿರಿ. ಔಟಾದ್ರೂ ಓಕೆ ನಾನಿದ್ದೇನೆ' ಅಂದುಬಿಡ್ತಾನೆ. ಏಕದಿನ ಕ್ರಿಕೆಟ್‌ನ ಭಾಷ್ಯವನ್ನೇ ಬದಲಿಸಿಬಿಡುತ್ತಾರೆ ಈ ಓಪನರ್‌ಗಳು.

ಆಸ್ಟ್ರೇಲಿಯಾ ತಂಡವನ್ನೂ ಗಡಗಡ ನಡುಗಿಸಿಬಿಡುತ್ತೆ ರಣತುಂಗಾ ಪಡೆ. ಅಲ್ಲಿಂದ ಮುಂದೆ 1996ರ ವಿಶ್ವಕಪ್! ಶ್ರೀಲಂಕನ್ನರ ಆಟ ನೋಡಲೆಂದೇ ಕ್ರಿಕೆಟ್ ಪ್ರೇಮಿಗಳು ಟಿವಿ ಮುಂದೆ ಕೂರುವಂತಾಯ್ತು. ಸಿಂಹಳಿ ಪಡೆ ನಿರಾಸೆಗೊಳಿಸಲಿಲ್ಲ. ಒಂದಕ್ಕಿಂತ ಒಂದು ಅದ್ಭುತ ಇನ್ನಿಂಗ್ಸ್ ಬಂದವು. ಭಾರತೀಯ ಕ್ರಿಕೆಟ್ ಪ್ರೇಮಿಗಳೂ ಶ್ರೀಲಂಕಾದ ಅಬ್ಬರವನ್ನು ಸಂಭ್ರಮಿಸಿ ಬೆಂಬಲಿಸಿದರು. ಆದರೆ ಸೆಮಿಫೈನಲ್‌ನಲ್ಲಿ ಶ್ರೀಲಂಕಾ ಭಾರತವನ್ನೂ ಬಿಡಲಿಲ್ಲ, ಹೀನಾಯವಾಗಿ ಬಗ್ಗು ಬಡಿಯಿತು. ಭಾರತೀಯ ಕ್ರಿಕೆಟ್ ಇತಿಹಾಸದಲ್ಲಿ ಕರಾಳ ದಿನವಾಯ್ತು ಅದು. ಕೊಲ್ಕತಾದಲ್ಲಿ ಶ್ರೀಲಂಕಾ ಎದುರು ಕುಸಿದ ಭಾರತ ಪೂರ್ತಿ ಆಟವನ್ನೂ ಮುಗಿಸದೇ ಪ್ರೇಕ್ಷಕರ ಆಕ್ರೋಶಕ್ಕೆ ಮಣಿದು ಪೆವಿಲಿಯನ್ ಸೇರಬೇಕಾಯ್ತು. ಕಾಂಬ್ಳಿ ನಾಟೌಟ್ ಬ್ಯಾಟರ್ ಆಗಿ ಕಣ್ಣೀರು ಸುರಿಸುತ್ತಾ ನಡೆದದ್ದು ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ. ಶ್ರೀಲಂಕಾ ಆ ಪಂದ್ಯವನ್ನು ಗೆದ್ದ ನಂತರ ಫೈನಲ್‌ನಲ್ಲಿಯೂ ಅದ್ಭುತ ಆಟ ಪ್ರದರ್ಶಿಸಿ ಕಪ್ ಎತ್ತಿ ಹಿಡಿಯಿತು.

ರಣತುಂಗಾ ಶ್ರೀಲಂಕಾದ ಕ್ರಿಕೆಟನ್ನು ಏರಿಸಿದ ಎತ್ತರ ಇದು. ಇಡೀ ಕ್ರಿಕೆಟ್ ಜಗತ್ತು ಶ್ರೀಲಂಕಾವನ್ನು ಗಂಭೀರವಾಗಿ ನೋಡಲು ಶುರು ಮಾಡಿದ್ದು ರಣತುಂಗಾ ನಾಯಕತ್ವ ವಹಿಸಿದ ನಂತರವೇ. ಆ ತಂಡದಲ್ಲಿ ಒಬ್ಬರಿಗಿಂತ ಒಬ್ಬ ಅದ್ಭುತ ಆಟಗಾರ ಬಂದದ್ದು, ಅವರ ಟ್ಯಾಲೆಂಟ್ ಬಳಕೆಯಾದದ್ದು ರಣತುಂಗಾ ಶಕೆಯಿಂದಲೇ.

ರಣತುಂಗಾ ನನ್ನ ನೆನಪಲ್ಲಿ ಉಳಿದಿರುವುದು ಆ ಒಂದು ಘಟನೆಯಿಂದ. ಒಬ್ಬ ನಾಯಕನ ಕೆಲಸ ಕೇವಲ ಬೆಸ್ಟ್ ರಿಸಲ್ಟ್ ಕೊಡುವುದಷ್ಟೇ ಅಲ್ಲ. ತನ್ನ ತಂಡದವರನ್ನು ಹೇಗೆ ಕಾಯ್ದುಕೊಳ್ಳುತ್ತಾನೆ ಎಂಬುದೂ ಆತನ ನಾಯಕತ್ವ ಗುಣವನ್ನು ಪರೀಕ್ಷಿಸುತ್ತದೆ. ಇದರರ್ಥ ತಂಡದವನು ತಪ್ಪು ಮಾಡಿದರೂ ರಕ್ಷಿಸಬೇಕು ಅಂತಲ್ಲ, ಸತತ ವೈಫಲ್ಯ ಅನುಭವಿಸಿದರೂ ಅವನ ಪರ ನಿಲ್ಲಬೇಕು ಎಂದಲ್ಲ. ತಪ್ಪಿಲ್ಲದೆಯೂ, ತನ್ನ ಆಟಗಾರ ಷಡ್ಯಂತ್ರಕ್ಕೆ, ಅನ್ಯಾಯಕ್ಕೆ, ದಬ್ಬಾಳಿಕೆಗೆ ಬಲಿಯಾಗ್ತಿದ್ದಾನೆ ಎಂದಾಗ ಪ್ರಾಣ-ಸ್ಥಾನಮಾನ ಎಲ್ಲವನ್ನೂ ಪಣಕ್ಕಿಟ್ಟಾದರೂ ಸರಿ ಕಾಪಾಡಿಕೊಳ್ತೀನಿ ಅಂತ ನಿಲ್ತಾನಲ್ಲ, ಅವನು ನಿಜವಾದ ನಾಯಕ.

ಮುತ್ತಯ್ಯ ಮುರಳೀಧರನ್ ಜಗತ್ತು ಕಂಡ ಸರ್ವಶ್ರೇಷ್ಠ ಆಫ್ ಸ್ಪಿನ್ನರ್. 800 ಟೆಸ್ಟ್ ವಿಕೆಟ್ ಪಡೆದು ಯಾರಿಂದಲೂ ಮುರಿಯಲಾಗದ ದಾಖಲೆ ಬರೆದು ನಿವೃತ್ತನಾಗಿರುವ ದಂತಕಥೆ. ಭಾರತ ತಂಡವನ್ನೂ ಸೇರಿಸಿ, ಜಗತ್ತಿನ ಎಲ್ಲ ಬ್ಯಾಟರ್‌ಗಳಿಗೂ ನಡುಕ ಹುಟ್ಟಿಸಿದ ಅಪ್ರತಿಮ ಸ್ಪಿನ್ನರ್ ಮುರಳಿ. ಮುರಳೀಧರನ್ ಎಂಬ ಅಸ್ತ್ರವನ್ನು ಶ್ರೀಲಂಕಾದ ಬತ್ತಳಿಕೆಗೆ ತಂದು ಸೇರಿಸಿದ್ದು ಅರ್ಜುನ ರಣತುಂಗ. ಮುರಳೀಧರನ್ ಎಸೆಯುತ್ತಿದ್ದ ಆಫ್ ಸ್ಪಿನ್ನರ್ ಮತ್ತು ಗೂಗ್ಲಿ, ದೂಸ್ರಾಗಳು ವಿಶ್ವಕ್ರಿಕೆಟ್‌ಮ ಕಂಗೆಡಿಸಿದ್ದವು. ಆಸ್ಟ್ರೇಲಿಯಾ ತಂಡ ಶುರುವಿನಲ್ಲೇ ಮುರಳೀಧರನ್‌ನ ಪ್ರಚಂಡ ಪ್ರತಿಭೆಯನ್ನು ಅಳೆದುಬಿಟ್ಟಿತು. ಈತನನ್ನು ಆಡಲು ಬಿಟ್ಟರೆ ವಿಶ್ವಶ್ರೇಷ್ಠ ಆಗುತ್ತಾನೆ, ನಮ್ಮವನೇ ಆದ ಶೇನ್ ವಾರ್ನ್‌ನನ್ನೂ ಮೀರಿ ಬೆಳೆಯುತ್ತಾನೆ ಎಂಬುದನ್ನು ಮೊದಲ ಕೆಲವು ಪಂದ್ಯಗಳಲ್ಲೇ ಗುರುತಿಸಿಬಿಟ್ಟಿತು. ಈತನನ್ನು ಮುಗಿಸಬೇಕು ಎಂದು ತೀರ್ಮಾನಿಸಿತು. ಆಸ್ಟ್ರೇಲಿಯಾದಂಥ ದುರಹಂಕಾರಿ, ಕ್ರೀಡಾಸ್ಫೂರ್ತಿರಹಿತ, ಮೋಸಗಾರ ತಂಡ ಇನ್ನೊಂದು ಇರಲು ಸಾಧ್ಯವೇ ಇಲ್ಲ. ತಾವು ಸರ್ವಶ್ರೇಷ್ಠರು, ಕ್ರಿಕೆಟ್‌ನ ಕಿಂಗುಗಳು ಎಂಬ ದರ್ಪದ ಪಿತ್ತ ಇಂದಿಗೂ ಇದೆ. ಆಸ್ಟ್ರೇಲಿಯಾ ನಿಜಕ್ಕೂ ಚಾಂಪಿಯನ್ ತಂಡವೇ. ಆದರೆ ಅವರ ವರ್ತನೆಯನ್ನು ಕ್ರೀಡಾಪ್ರೇಮಿಗಳು ಎಂದಿಗೂ ಸಹಿಸಲು ಸಾಧ್ಯವೇ ಇಲ್ಲ.

ಇಂಥ ಆಸ್ಟ್ರೇಲಿಯಾ, ಇಪ್ಪತ್ತು ವರ್ಷ ವಯಸ್ಸಿನ ಮುರಳಿಯ ಕೆರಿಯರ್ ಮುಗಿಸಲು ಮಹಾನ್ ವ್ಯೂಹವನ್ನೇ ಸಿದ್ಧಪಡಿಸುತ್ತದೆ. ಆಸ್ಟ್ರೇಲಿಯಾ ವಿರುದ್ಧದ 1995ರ ಸರಣಿಯಲ್ಲಿ, ಮುರಳಿ ಬೌಲ್ ಮಾಡುತ್ತಿಲ್ಲ, ಚಕ್ ಮಾಡುತ್ತಿದ್ದಾನೆ ಅಂದರೆ ಎಸೆಯುತ್ತಿದ್ದಾನೆ ಎಂದು ಅಂಪೈರ್ ಮೂಲಕವೇ ಆರೋಪ ಹೊರಿಸಲಾಗುತ್ತದೆ. ಮುರಳೀಧರನ್ ಅವರನ್ನು ಮೈದಾನದಿಂದ ಹೊರಕಳಿಸಲಾಗುತ್ತೆ. ಆತನ ಬೌಲಿಂಗನ್ನು ವಿಧವಿಧ ಪರೀಕ್ಷೆಗೆ ಒಳಪಡಿಸಲಾಗುತ್ತೆ. ಶೈಲಿಯ ಬಗ್ಗೆ ತನಿಖೆ ನಡೆಯುತ್ತೆ. ಕೊನೆಗೆ ಐಸಿಸಿ ಮುರಳಿಯ ಬೌಲಿಂಗ್ ಕ್ರಮಬದ್ಧವಾಗಿದೆ ಎಂದು ತೀರ್ಪು ಕೊಟ್ಟು ಮುರಳಿಗೆ ಗೆಲುವು ಸಿಗುತ್ತದೆ. ಇಷ್ಟೇ ಆಗಿದ್ದಿದ್ರೆ ಇದೊಂದು ಮಹಾನ್ ಸ್ಟೋರಿ ಆಗುತ್ತಿರಲಿಲ್ಲ. ರಣತುಂಗ ಪಾತ್ರಕ್ಕೆ ಮಹತ್ವವೂ ಸಿಗುತ್ತಿರಲಿಲ್ಲ.

ಇಷ್ಟಕ್ಕೂ ಮುರಳಿ ಬೌಲಿಂಗನ್ನು ಥ್ರೋ ಅಂದಿದ್ದು ಯಾಕೆ? ಬೌಲಿಂಗ್ ವೇಳೆ ಮುರಳಿ ಕೈ ತಿರುಗಿಸುವಾಗ ಬಾಗುವ ತೋಳು ಕೊನೆಯಲ್ಲಿ ಎಸೆಯುವ ಹೊತ್ತಿಗೆ ನೇರವಾಗುತ್ತಿದೆ. ಇದು ಐಸಿಸಿ ನಿಯಮದ ಪ್ರಕಾರ ಅಕ್ರಮ ಅಂತ ಆಸ್ಟ್ರೇಲಿಯನ್ ಅಂಪೈರ್‌ಗಳು ನೋಬಾಲ್ ಕೊಡುತ್ತಾರೆ. ಹೀಗೆ ನೋಬಾಲ್ ಕೊಡೋದಕ್ಕೆ, ಥ್ರೋ ಎಂದು ಘೋಷಿಸೋದಕ್ಕೆ ಆಸ್ಟ್ರೇಲಿಯನ್ ಕ್ರಿಕೆಟ್ ಮಂಡಳಿಯಿಂದ ಅಂಪೈರ್‌ಗೆ ಸಂದೇಶ ರವಾನೆ ಆಗಿರುತ್ತದೆ.

ಡ್ಯಾರೆಲ್ ಹೇರ್ ಎಂಬ ಆಸೀಸ್ ಅಂಪೈರ್ 1995ರ ಟೆಸ್ಟ್ ಪಂದ್ಯದಲ್ಲಿ ಮುರಳಿಯ ಪ್ರತಿ ಚೆಂಡನ್ನೂ ನೋಬಾಲ್ ಎಂದು ಘೋಷಿಸಿ ಕೈ ಅಡ್ಡಹಿಡಿಯಲಾರಂಭಿಸುತ್ತಾನೆ. ಮೊದಲು ಮುರಳಿಗೆ ಇದ್ಯಾಕೆ ನೋಬಾಲ್ ಕೊಡ್ತಿದಾರೆಂದೂ ಅರ್ಥವಾಗುವುದಿಲ್ಲ. ಕೊನೆಗೆ ಇದು ಡ್ಯಾರೆಲ್ ಹೇರ್‌ನ ಕಳ್ಳಾಟ ಎಂದು ಅರ್ಥ ಆದಕೂಡಲೇ ರಣತುಂಗ ಅವನನ್ನು ಅವಾಯ್ಡ್ ಮಾಡಲು ಮುರಳಿಗೆ ಇನ್ನೊಂದು ತುದಿಯಿಂದ ಬೌಲಿಂಗ್ ಹಾಕಿಸುತ್ತಾನೆ. ಆದರೆ ಆಗಲೂ ಡ್ಯಾರೆಲ್ ಹೇರ್ ಸುಮ್ಮನಿರುವುದಿಲ್ಲ. ಲೆಗ್ ಅಂಪೈರ್ ಜಾಗದಿಂದಲೇ ನೋಬಾಲ್ ಕೂಗುತ್ತಾನೆ. ರಣತುಂಗ ತಾಳ್ಮೆಯಿಂದ ಡ್ಯಾರೆಲ್ ಹೇರ್ ಜತೆ ಚರ್ಚಿಸಿ ಪರಿಸ್ಥಿತಿ ನಿಭಾಯಿಸಲು ಪ್ರಯತ್ನಿಸಿ ಸೋಲುತ್ತಾನೆ. ಐಸಿಸಿ ರೆಫ್ರೀ ಎದುರು ದೂರು ಹೋಗುತ್ತದೆ. 'ಇದನ್ನು ಅಂಪೈರ್ ಜತೆ ಚರ್ಚಿಸಿ ಸರಿಪಡಿಸಿಕೊಳ್ಳಿ' ಎನ್ನುತ್ತಾರೆ ರೆಫ್ರೀ. ಆದರೆ ಆಸ್ಟ್ರೇಲಿಯಾ ರೆಫ್ರೀ ಮಾತನ್ನೂ ಧಿಕ್ಕರಿಸಿ ತನ್ನ ಅಂಪೈರ್ ಡ್ಯಾರೆಲ್ ಹೇರ್‌ನನ್ನು ಎತ್ತಿಕಟ್ಟುತ್ತದೆ. ಆ ಪಂದ್ಯವನ್ನು ಶ್ರೀಲಂಕಾ ಸೋಲುತ್ತದೆ.

ಎರಡನೇ ಪಂದ್ಯದಲ್ಲಿ ರಾಸ್ ಎಮರ್ಸನ್ ಎಂಬ ಇನ್ನೊಬ್ಬ ಆಸ್ಟ್ರೇಲಿಯನ್ ಅಂಪೈರ್. ಆತನೂ ಆಸ್ಟ್ರೇಲಿಯಾ ಕ್ರಿಕೆಟ್ ಬೋರ್ಡ್‌ನ ಆದೇಶಕ್ಕೆ ಬದ್ಧನಾಗಿ ಬಂದೇ ನಿಂತಿರುತ್ತಾನೆ. ಮುರಳಿ ಎಸೆಯುವ ಎಲ್ಲ ಎಸೆತಕ್ಕೂ ನೋಬಾಲ್ ಎಂದು ಕೂಗುತ್ತಾನೆ. ಮುರಳಿಯ ಶೈಲಿಯ ಬಗ್ಗೆ ಅನುಮಾನ ಇದ್ದದ್ದು ಆತ ಆಫ್ ಸ್ಪಿನ್ ಎಸೆಯುವಾಗ ಮಾತ್ರ. ಲೆಗ್ ಸ್ಪಿನ್ ಎಸೆಯುವಾಗಿನ ಶೈಲಿಯಲ್ಲಿ ಚಿಕ್ಕ ಕೊರೆಯೂ ಇರುವುದಿಲ್ಲ. ಬಲಗೈಯಿಂದ ಲೆಗ್ ಸ್ಪಿನ್ ಎಸೆಯುವಾಗ ಚಕಿಂಗ್ ಸಾಧ್ಯವೇ ಇರುವುದಿಲ್ಲ. ಆದರೂ ನೋ ಬಾಲ್ ಕೊಟ್ಟಾಗ ಮುರಳಿಗೆ ಆಘಾತ. ರಣತುಂಗನಿಗೆ ಅಚ್ಚರಿ. ಕ್ರಿಕೆಟ್ ಪ್ರೇಮಿಗಳಿಗೆ, ಕಮೆಂಟೇಟರ್‌ಗಳಿಗೆ, ವಿಶ್ಲೇಷಕರಿಗೆ ಎಲ್ಲರಿಗೂ ಗೊತ್ತಾಗುತ್ತಿದೆ ಇದು ಕಾಂಗರೂ ಷಡ್ಯಂತ್ರ ಎಂದು. ಇಡೀ ಕ್ರೀಡಾ ಜಗತ್ತು ಆಸ್ಟ್ರೇಲಿಯಾ ಅಂಪೈರ್‌ಗಳನ್ನು ಟೀಕಿಸುತ್ತದೆ. ಇದರ ನಂತರ ಮುರಳಿಗೆ ಐಸಿಸಿಯಲ್ಲಿ ಇನ್ನಿಲ್ಲದ ಪರೀಕ್ಷೆ ನಡೆಯುತ್ತದೆ. ಮುರಳಿಯ ಬೌಲಿಂಗ್ ಕ್ರಮಬದ್ಧ ಎಂದು ಸಾಬೀತಾಗುತ್ತದೆ. ಐಸಿಸಿ ಕ್ಲಿಯರ್ ಮಾಡಿದರೂ ಆಸ್ಟ್ರೇಲಿಯಾ ಐಸಿಸಿಯನ್ನೂ ಧಿಕ್ಕರಿಸಿ 'ನಾವು ಆಡುವ ಸೀರೀಸಲ್ಲಿ ಇದು ಮೈದಾನದಲ್ಲೇ ನಿರ್ಧಾರ ಆಗಬೇಕಿರೋ ವಿಷಯ' ಎನ್ನುತ್ತದೆ.

1999ರಲ್ಲಿ ಇಂಗ್ಲೆಂಡ್ ವಿರುದ್ಧ ಶ್ರೀಲಂಕಾ ಆಡುತ್ತಿರುತ್ತದೆ. ಮುರಳಿ ಬೌಲಿಂಗ್. ರಾಸ್ ಎಮರ್ಸನ್ ಅಂಪೈರ್. ಅದಾಗಲೇ ಶ್ರೀಲಂಕಾದ ಆತ್ಮಸ್ಥೈರ್ಯಕ್ಕೆ ಹೊಡೆಯಲು ಆಸ್ಟ್ರೇಲಿಯಾ ಎಲ್ಲೆಡೆ ತನ್ನ ಪತ್ರಿಕೆಗಳಲ್ಲಿ ಇತರ ಮೀಡಿಯಾಗಳಲ್ಲಿ ಮುರಳಿಯನ್ನು ಚಕ್ಕರ್ ಎಂದು ಹೀಯಾಳಿಸಿರುತ್ತದೆ. ಮುರಳಿಯನ್ನು ವಹಿಸಿಕೊಂಡು ಬಂದಿರುವ ರಣತುಂಗ ಒಬ್ಬ ಅನಾಗರಿಕ ಎಂದು ಒಂದು ಪತ್ರಿಕೆ ಬರೆಯುತ್ತದೆ.

ರಾಸ್ ಎಮರ್ಸನ್‌ಗೆ ಆಸ್ಟ್ರೇಲಿಯನ್ ಕ್ರಿಕೆಟ್ ಬೋರ್ಡ್‌ನಿಂದ ಬಂದಿರೋ ಸಂದೇಶ ಇಷ್ಟೇ- 'ಮುರಳಿ ಬೌಲಿಂಗ್‌ಗೆ ಬಂದರೆ ನೋ ಬಾಲ್ ಕೊಡು' ಅಂತ. ಆತ ಅದನ್ನು ಚಾಚೂ ತಪ್ಪದೆ ಪಾಲಿಸುತ್ತಾನೆ. ತಾನು ಅಂಪೈರ್ ಇದ್ದರೂ ಲೆಗ್ ಅಂಪೈರ್ ಇದ್ದರೂ ನೋ ಬಾಲ್ ಕೂಗುವುದನ್ನು ಮಾತ್ರ ನಿಲ್ಲಿಸೋದಿಲ್ಲ. ಆಗ ರಣತುಂಗನ ಕೋಪದ ಕಟ್ಟೆ ಒಡೆಯುತ್ತದೆ. ಸೀದಾ ಬಂದು ಎಮರ್ಸನ್ ಜತೆ ಕೈಕೈ ಮಿಲಾಯಿಸುವ ಹಂತಕ್ಕೆ ಹೋಗಿ ವಾಗ್ಯುದ್ಧ ನಡೆಸುತ್ತಾನೆ. 'ಐಸಿಸಿಯೇ ಕ್ಲೀನ್ ಚಿಟ್ ಕೊಟ್ಟಿದೆ. ನೋಬಾಲ್ ಕೊಡೋಕೆ ನೀನ್ಯಾರು?' ಎಂದು ಕೇಳುತ್ತಾನೆ. ಆದರೂ ಎಮರ್ಸನ್‌ನ ದುರುಳತನ ಬದಲಾಗುವುದಿಲ್ಲ. ಆತ ತನ್ನ ಬೋರ್ಡ್‌ಗೆ ನಿಷ್ಠ, ಆಟಕ್ಕಲ್ಲ. ಇಂಥ ಹೊತ್ತಿನಲ್ಲಿ ರಣತುಂಗ ದಿಟ್ಟ ನಿರ್ಧಾರ ಕೈಗೊಳ್ಳುತ್ತಾನೆ. ತಂಡವನ್ನು ಕರೆದುಕೊಂಡು ಮೈದಾನದಿಂದ ಹೊರನಡೆದುಬಿಡುತ್ತಾನೆ. ಬ್ಯಾಟ್ ಮಾಡುತ್ತಿದ್ದ ಇಂಗ್ಲೆಂಡ್‌ಗೂ ಎಮರ್ಸನ್‌ನ ಈ ಕಚಡಾ ಬುದ್ಧಿಗೂ ಯಾವ ಸಂಬಂಧವೂ ಇರುವುದಿಲ್ಲ. ಆದರೆ ರಣತುಂಗ ಈ ಪಂದ್ಯವನ್ನು ಬಾಯ್ಕಾಟ್ ಮಾಡಿ ಹೊರಡುತ್ತಾನೆ. ಬೌಂಡರಿ ಅಂಗಣದಲ್ಲಿ ಫೋನ್ ಕಾಲ್ ಮೂಲಕ ಐಸಿಸಿ-ಶ್ರೀಲಂಕನ್ ಬೋರ್ಡ್-ಆಸ್ಟ್ರೇಲಿಯನ್ ಬೋರ್ಡ್ ಮಧ್ಯ ಮಾತುಕತೆ ನಡೆಯುತ್ತದೆ.

ಹಾಗೂ ಹೀಗೂ ರಾಜಿಯಾಗುತ್ತದೆ. ರಣತುಂಗ ಒಂದೇ ಕಂಡಿಷನ್ ಹಾಕ್ತಾನೆ- ಎಮರ್ಸನ್ ಅಂಪೈರಿಂಗ್ ಮಾಡುವ ಹಾಗಿಲ್ಲ ಅಂತ. ಅದಕ್ಕೆ ಪ್ರತಿಯಾಗಿ ಮುರಳೀಧರನ್ ಕೇವಲ ಲೆಗ್ ಬ್ರೇಕ್ ಬೌಲಿಂಗ್ ಮಾತ್ರ ಮಾಡಬೇಕು ಎಂಬ ಕಂಡೀಷನ್ ಬೀಳುತ್ತೆ. ಅದಕ್ಕೆ ಒಪ್ಪಿ ಆಟ ಪುನಾರಾರಂಭವಾಗುತ್ತದೆ. ರಣತುಂಗ ಮುರಳಿಯ ಕಿವಿಯ ಬಳಿ ಬಂದು ಹೇಳ್ತಾನೆ- 'ನೀನು ಯೋಚನೆ ಮಾಡ್ಬೇಡ. ನಿನ್ನ ಬಳಿ ಇರೋ ಎಲ್ಲ ಬೌಲಿಂಗ್ ಅಸ್ತ್ರಗಳನ್ನೂ ಉಪಯೋಗಿಸು. ಆಫ್ ಸ್ಪಿನ್, ಲೆಗ್ ಸ್ಪಿನ್ ಎಲ್ಲವನ್ನೂ ಮಾಡು' ಅಂತಾನೆ. ಎಮರ್ಸನ್ ಮೂಕ ಪ್ರೇಕ್ಷಕನಂತೆ ನೋಡುತ್ತಾ ನಿಲ್ಲುತ್ತಾನೆ. ಎಮರ್ಸನ್‌ಗೆ ಉರಿಸೋಕೆ ಅಂತಾನೇ ರಣತುಂಗ ಆತ ಅಂಪೈರಿಂಗ್ ನಿಂತಾಗ ಬೇಕೆಂದೇ ಮುರಳಿಗೆ ಬೌಲಿಂಗ್ ಕೊಡ್ತಾನೆ. ಎಮರ್ಸನ್ ನೋಬಾಲ್ ಕೊಡಲಾಗದೇ ಚಡಪಡಿಸುತ್ತಾನೆ. ಈತ ಬಹಳ ಹತ್ತಿರದಿಂದ ಬೌಲಿಂಗ್ ಮಾಡ್ತಿದಾನೆ ಅಂತ ಹೊಸ ಕ್ಯಾತೆ ತೆಗೀತಾನೆ ಎಮರ್ಸನ್. ಆಗ ರಣತುಂಗ ಹೇಳ್ತಾನೆ- 'ನೀನು ಅಂಪೈರ್, ನಾನು ಕ್ಯಾಪ್ಟನ್. ಅವ್ನು ಎಲ್ಲಿಂದ ಬೌಲ್ ಮಾಡಬೇಕು ಅನ್ನೋದು ನನಗೆ ಸಂಬಂಧಿಸಿರೋ ವಿಷಯ. ಸುಮ್ನೆ ಅಂಪೈರಿಂಗ್ ಮಾಡು' ಅಂತ.

ಮುರಳಿಯನ್ನು ಮತ್ತು ತನ್ನ ತಂಡವನ್ನು ರಕ್ಷಣೆ ಮಾಡಿಕೊಂಡಿದ್ದಕ್ಕೆ ರಣತುಂಗನಿಗೆ ಸಿಕ್ಕ ಶಿಕ್ಷೆ ಏನು ಗೊತ್ತಾ? ಆರು ಪಂದ್ಯಗಳಿಂದ ಸಸ್ಪೆಂಡ್ ಮತ್ತು ಪ್ರತಿ ಪಂದ್ಯದ 75 ಪರ್ಸೆಂಟ್ ಸಂಬಳ ಕಡಿತ! 'ನನ್ನ ಕ್ರಿಕೆಟ್ ಕೆರಿಯರ್ ಮುಕ್ತಾಯವಾದರೂ ಸರಿ, ನಾನು ಮುರಳಿಯನ್ನು ಬಿಟ್ಟುಕೊಡುವುದಿಲ್ಲ. ಇಡೀ ಜಗತ್ತು ಮತ್ತು ಐಸಿಸಿ ಮುರಳಿಯ ಬೌಲಿಂಗ್ ಒಪ್ಪಿದೆ. ಆಸ್ಟ್ರೇಲಿಯಾದ ಈ ಕುತಂತ್ರಿ ಅಂಪೈರ್‌ಗಳಿಗೆ ಯಾಕೆ ತಲೆಬಾಗಬೇಕು?' ಎಂದು ರಣತುಂಗ ಗಟ್ಟಿಯಾಗಿ ನಿಂತುಬಿಟ್ಟಿದ್ದ. ದಂಡಕ್ಕೂ ಹೆದರಲಿಲ್ಲ ದಾಳಿಗೂ ಹೆದರಲಿಲ್ಲ!

ಇಂದು ಮುರಳಿ ಜಗದ್ವಿಖ್ಯಾತ ಬೌಲರ್ ಮತ್ತು ಕ್ರಿಕೆಟ್ ದಂತಕತೆಯಾಗಿ ಉಳಿದಿದ್ದಾನೆ ಎಂದರೆ ಅದರ ಶ್ರೇಯ ಕೇವಲ ರಣತುಂಗನಿಗೆ ಸಲ್ಲಬೇಕು. ಈ ಮಾತನ್ನು ಮುರಳಿ ಕೂಡ ಹೇಳಿದ್ದಾನೆ.

ಭಟ್ಟರ್ ಸ್ಕಾಚ್

- **ರವಿ ಸುಣಗಾರ, ಬಾಗಲಕೋಟೆ**
ಭಟ್ರೇ, ವಿಶ್ವವಾಣಿ ಭಟ್ಟರು ಗ್ರ್ಯಾಂಡ್ ಆಗಿ ಬರ್ತ್‌ಡೇ ಆಚರಿಸಿಕೊಂಡರೂ ತಮ್ಮ ವಯಸ್ಸನ್ನೇಕೆ ಮರೆಮಾಚಿದರು?
– **ಕತ್ತೆಗೂ ವಯಸ್ಸಾಗುತ್ತದಲ್ಲ!**

- **ಘಂಟಿ ರಾಮಾಚಾರ್ಯ, ಮೈಸೂರು**
ಭಟ್ರೇ, ಮಳೆ ಬಂದು ಕೆರೆ ಕುಂಟೆಗಳು ತುಂಬಿದರೆ ಅದು ಜೀವಕಳೆ. ರಾಜಕಾರಣಿಗಳಿಗೆ ನ್ಯಾಯಾಲಯದಲ್ಲಿ ಹಿನ್ನಡೆ ಆದರೆ?
– **ಮುಖದಲ್ಲಿ ಪ್ರೇತಕಳೆ!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಕ್ರೀಡಾ ಸುದ್ದಿಗೆ ಪತ್ರಿಕೆಗಳಲ್ಲಿ ಕೊನೆ ಪುಟವನ್ನೇ ಏಕೆ ಮೀಸಲಿಡ್ತಾರೆ?
– **ಕೊನೆ ಪುಟದಲ್ಲಿಟ್ಟರೂ ಓದುತ್ತಾರೆ ಎಂಬ ನಂಬಿಕೆ!**

- **ಶ್ರೀನಾಥ್ ಸಾಮವೇದಿ, ಶಂಕರಪುರ**
ಭಟ್ರೇ, ಆರ್‌ಸಿಬಿ ಮುಂದಿನ ವರ್ಷ ತನ್ನ ಅಭಿಮಾನಿಗಳನ್ನು ಮತ್ತೆ ಸೆಳೆದುಕೊಳ್ಳಲು ಏನು ತಂತ್ರ ಮಾಡಬಹುದು?
– **ಏನೂ ಮಾಡಬೇಕಿಲ್ಲ. ಅಷ್ಟೊತ್ತಿಗೆ ನಮ್ಮ ಜನ ಎಲ್ಲ ಮರೆತಿರುತ್ತಾರೆ!**

- **ತ್ರಿಪುರಾಂತಕ ಶಾಸ್ತ್ರೀ, ನಂಜನಗೂಡು**
ಭಟ್ರೇ, ನಂಜನಗೂಡು ಮೋಹನ್ ಅಂಕಣ ಬರೆಯತೊಡಗಿದರೆ ಅದು ಹೇಗಿರುತ್ತೆ?
– **ಬಾಯಿ ಚಪ್ಪರಿಸಿಕೊಂಡು ಓದಬೇಕು, ಹಾಗಿರುತ್ತೆ!**

- **ರಾಜಶೇಖರ ಕಲ್ಯಾಣ, ದಾವಣಗೆರೆ**
ಭಟ್ರೇ, ತೀರಾ ಯಃಕಶ್ಚಿತರೊಂದಿಗೆ ಬಾಳ್ವೆ ಮಾಡಬಾರದು ಅಂತಾರಲ್ಲ?
– **ಅದು ಸೊಳ್ಳೆ ಜತೆ ಒಂದು ರಾತ್ರಿ ಕಳೆದವನ ಅನುಭವದ ನುಡಿ!**

- **ಚಂದ್ರಶೇಖರ ನಾಗೂರ, (ಇಮೇಲ್ ಮೂಲಕ)**
ಭಟ್ರೇ, ಯತ್ನಾಳ್ ಅವರ ಬಾಯಿ ಮುಚ್ಚಿಸೋಕೆ 'ಫೆವಿಕಾಲ್'ನಿಂದ ಸಾಧ್ಯನಾ?
– **ನಾಯಕರ ಕೈಯಿಂದಲೇ ಆಗಿಲ್ಲ, ಇನ್ನು ಕಾಲ್‌ನಿಂದ ಆಗುತ್ತಾ?!**

- **ಕಮ್ಮು, ಇಟ್ಟಮಡು**
ಭಟ್ರೇ, ಜಯವೀರ, ಯೋಗಿ ದುರ್ಲಭಜೀ, ಸುಳ್ಳು ಸುಬ್ಬಣ್ಣರನ್ನು ಒಂದೇ ವೇದಿಕೆಯಲ್ಲಿ ನೋಡಿ ಕಣ್ಣು ತುಂಬಿಕೊಳ್ಳಲು ಸಾಧ್ಯವೇ?
– **ಆಗ ಕಣ್ಣು ಮುಚ್ಚಿಕೊಳ್ಳಬೇಕಷ್ಟೇ!**

- **ರಾಜಿ, (ಇಮೇಲ್ ಮೂಲಕ)**
ಭಟ್ರೇ, ಅವಕಾಶಗಳು ಬಾಗಿಲು ಬಡಿಯದಿದ್ದರೆ ಏನು ಮಾಡಬಹುದು?
– **ಅವಕಾಶವನ್ನು ಬಡಿದರಾಯಿತು!**

- **ಶ್ರೀಧರ ಕೆಳಗಿನಮನೆ, (ಇಮೇಲ್ ಮೂಲಕ)**
ಭಟ್ರೇ, ಏನೂ ಮಾಡದೇ ಸುಮ್ಮನೆ ಕುಳಿತುಕೊಳ್ಳುವುದು ಕಷ್ಟ ಅಂತಾರಲ್ಲ?
– **ಆ ಕೆಲಸ ಯಾವಾಗ ಮುಗಿಯಿತು ಎಂಬುದು ಗೊತ್ತಾಗುವುದಿಲ್ಲ!**

ಸ್ವಾಸ್ಥ್ಯದ ಅಳಿವು ಆಗುವುದು ಈ ಮೂರರಿಂದಲೇ!

ನಾವು ಮಾಡುವ ಪರಿಸರ ನಾಶದಿಂದ ಅಕಾಲದಲ್ಲಿ ಮಳೆ ಬಿಸಿಲು ಕಂಡುಬಂದು, ಋತು ವಿಕೋಪದಿಂದಲೂ ರೋಗಗಳು ಉಂಟಾಗುತ್ತವೆ. ಇವೆಲ್ಲವೂ ಪರಿಣಾಮಜನ್ಯ ವಿಕೃತಿಗಳೆನಿಸುತ್ತವೆ. ಬಾಲ್ಯ, ಕೌಮಾರ್ಯ, ಯೌವನ, ವೃದ್ಧಾಪ್ಯ, ಮರಣ ಜತೆಗೆ ಹಸಿವೆ, ಬಾಯಾರಿಕೆ ಎಂಬ ಕಾಲಜನ್ಯವಾದ ಸ್ವಾಭಾವಿಕ ಪರಿಣಾಮಗಳು. ಇವಲ್ಲದೆ ದೈವವೆಂಬ ಪೂರ್ವದೇಹಕೃತ ಕರ್ಮಗಳೂ ವ್ಯಾಧಿ ರೂಪದಲ್ಲಿ ಬಾಧಿಸಬಹುದು.

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
vveditoped@gmail.com

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯವನ್ನು ಪಡೆಯಲು ಇರುವ ಏಕೈಕ ಮಾರ್ಗವೆಂದರೆ ಸ್ವಾಸ್ಥ್ಯ ಚಿಂತನೆ! ಸ್ವಾಸ್ಥ್ಯ ಚಿಂತನೆಯೆಂಬುದು ಬಹಳ ಬೃಹತ್ತಾದ ಚಿಂತನಾ ವಿಚಾರ. ಇದರಲ್ಲಿ ಮೊಟ್ಟಮೊದಲನೆಯದಾಗಿ ಸ್ವಾಸ್ಥ್ಯ ಎಂದರೇನು ಎಂಬುದರ ತಿಳಿವಳಿಕೆ ಅತ್ಯವಶ್ಯಕ. ಇದು, 'ಸ್ವಾಸ್ಥ್ಯವೆಂದರೆ ಕೇವಲ ಆರೋಗ್ಯವಲ್ಲ' ಎಂಬುದನ್ನು ಮನವರಿಕೆ ಮಾಡಿಕೊಳ್ಳುವಿಕೆ. ಜೀವನದ ಗುರಿ ಮುಟ್ಟಲು ಕೇವಲ ಆರೋಗ್ಯದ ಸ್ಥಿತಿ ಸಾಲದು, ಅದಕ್ಕೆ ಸಮರ್ಥವಾದ ಸ್ವತಂತ್ರ ಪ್ರವೃತ್ತಿಯೂ ಬೇಕು. ವಾಸ್ತವವಾಗಿ ಅರೋಗಾವಸ್ಥೆಯ ಈ ಮುಂದುವರಿದ ಸ್ಥಿತಿಯೇ ಸ್ವಾಸ್ಥ್ಯ. ನಮ್ಮ ಶರೀರ, ಇಂದ್ರಿಯ, ಮನಸ್ಸು ಮತ್ತು ಆತ್ಮಗಳಲ್ಲಿರುವ ಪರಸ್ಪರ ಹೊಂದಾಣಿಕೆ ಮತ್ತು ಸ್ಥಿರತೆಗಳು ಸ್ವಾಸ್ಥ್ಯ ಲಕ್ಷಣವಾಗುತ್ತದೆ. ಸ್ವಕರ್ತವ್ಯ ನಿರ್ವಹಣೆಯಲ್ಲಿ ಯಾವುದೇ ಬಾಧೆಯಿಲ್ಲದೆ ಗುರಿ ಸೇರುವ ಸಾಮರ್ಥ್ಯವಿರುವವನಿಗೆ ಸ್ವಸ್ಥ ಎನ್ನಬಹುದು. ಹಾಗಾದರೆ, ಜ್ವರ, ನೆಗಡಿ, ತಲೆನೋವು, ಮಧುಮೇಹ ಮುಂತಾದ ವ್ಯಾಧಿಗಳಿಲ್ಲವಾದ ಮಾತ್ರಕ್ಕೆ ಅವನು ಸ್ವಸ್ಥನೇ? ಇಂದ್ರಿಯಗಳೆಲ್ಲವೂ ಚೆನ್ನಾಗಿ ಕರ್ತವ್ಯ ನಿರ್ವಹಿಸುತ್ತಿದರೆ ಅವನು ಸ್ವಸ್ಥನಾಗಿಬಿಡುತ್ತಾನಾ? ಕಾಮ, ಕ್ರೋಧಾದಿಗಳಿಲ್ಲದ ಮನಸ್ಸಿದ್ದ ಮಾತ್ರಕ್ಕೆ ಅವನು ಸಂಪೂರ್ಣ ಸ್ವಸ್ಥನೇ?

ಆಯುರ್ವೇದದ ಪ್ರಕಾರ, ಆತ್ಮವು ಜನನ-ಮರಣ ಸಂಕೋಲೆಗಳಿಂದ ಮುಕ್ತವಾಗುವವರೆಗೂ ಸ್ವಾಸ್ಥ್ಯದ ಪಯಣ ಅಪೂರ್ಣ! ಸ್ನೇಹಿತರೆ, ಇಷ್ಟು ಆಳವಾಗಿದೆ ಸ್ವಾಸ್ಥ್ಯದ ವ್ಯಾಪ್ತಿ! ಕೇವಲ ಶಾರೀರಿಕ ಆರೋಗ್ಯವನ್ನು ಗಮನಿಸಿಕೊಂಡು 'ಐ ಯಾಮ್ ಹೆಲ್ದಿ' ಎಂದು ಹೇಳುವವರಿಗೆ ಈ ವಿಚಾರದಿಂದ ಸ್ವಾಸ್ಥ್ಯ ಪರಿಕಲ್ಪನೆಯ ಹೊಸದೃಷ್ಟಿ ಸಿಗಲಿ ಎಂಬುದು ಇಲ್ಲಿನ ಆಶಯ! ಹೌದು ಸ್ವಾಸ್ಥ್ಯವೆಂದರೆ ಮೋಕ್ಷಪ್ರಾಪ್ತಿಯವರೆಗೂ ಮುಗಿಯದ ಕಥೆ. ಆದರೆ ಅದರ ಪ್ರಾರಂಭ ಶರೀರ-ಇಂದ್ರಿಯ-ಮನಸ್ಸುಗಳಿಂದಲೇ ಅಲ್ಲವೇ? ಇವುಗಳ ಸ್ವಾಸ್ಥ್ಯ ನಾಶಮಾಡುವ ಮೊದಲ ವೈರಿಯೆಂದರೆ ವ್ಯಾಧಿ! ಹಲವಾರು ರೋಗಗಳು ನಮ್ಮನ್ನು ಬಾಧಿಸದ ರೀತಿಯಲ್ಲಿ ನಮ್ಮ ಸ್ವಾಸ್ಥ್ಯವನ್ನು ಉಳಿಸಿಕೊಳ್ಳುವುದು ಹೇಗೆ? ಯಾವ ಕಾರಣಗಳಿಂದ ನಮ್ಮ ಸ್ವಾಸ್ಥ್ಯ ಅಳಿಯುತ್ತದೆ ಎಂಬ ವಿಷಯದ ಬಗ್ಗೆ ಇಂದಿನ ಲೇಖನದಲ್ಲಿ ಅವಲೋಕಿಸೋಣ.

ಆಯುರ್ವೇದದ ಪ್ರಕಾರ ಮುಖ್ಯವಾಗಿ 3 ಕಾರಣಗಳಿಂದ ನಮ್ಮ ಸ್ವಾಸ್ಥ್ಯ ಅಳಿಯುತ್ತದೆ. ಅವೆಂದರೆ, 1. ಅಸಾತ್ಮೇಂದ್ರಿಯಾರ್ಥ ಸನ್ನಿಕರ್ಷ, 2. ಪ್ರಜ್ಞಾಪರಾಧ ಮತ್ತು 3. ಪರಿಣಾಮ

1. ಅಸಾತ್ಮೇಂದ್ರಿಯಾರ್ಥ ಸನ್ನಿಕರ್ಷ: 'ಅಸಾತ್ಮ್ಯ' ಅಂದರೆ ನಮಗೆ ಅಭ್ಯಾಸವಿಲ್ಲದ್ದು ಅಥವಾ ನಮಗೆ ಒಗ್ಗದಿರುವುದು ಎಂದರ್ಥ. ಇಂದ್ರಿಯಗಳೆಂದರೆ ಮುಖ್ಯವಾಗಿ ಕಣ್ಣು, ಕಿವಿ, ಮೂಗು, ಚರ್ಮ, ನಾಲಗೆ ಎಂಬ ಐದು ಜ್ಞಾನೇಂದ್ರಿಯಗಳು. ಕೈ, ಕಾಲು, ಮಾತು, ಗುದ, ಜನನೇಂದ್ರಿಯಗಳೆಂಬ ಐದು ಕರ್ಮೇಂದ್ರಿಯಗಳು.

ಈ ಐದು ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳು- ಇವುಗಳನ್ನು ನಿಯಂತ್ರಿಸುವ ಒಂದು ಮನಸ್ಸು. ಒಟ್ಟು ನಮಗಿರುವುದು 11 ಇಂದ್ರಿಯಗಳು. ನಮ್ಮ ಕಣ್ಣು ಹೊರಗಿನ ಜಗತ್ತಿನ ರೂಪವನ್ನು ನೋಡಿದರೆ, ಕಿವಿ ಹಲವು ರೀತಿಯ ಶಬ್ದಗಳನ್ನು ಆಲಿಸುತ್ತದೆ. ಮೂಗು ವಾಸನೆಯನ್ನು ತೆಗೆದುಕೊಂಡರೆ, ಚರ್ಮವು ಸ್ಪರ್ಶವನ್ನು ಮತ್ತು ನಾಲಗೆಯು ರಸಗಳನ್ನು ಗ್ರಹಿಸುತ್ತದೆ. ಹೀಗೆ, ಪ್ರತಿಯೊಂದು ಇಂದ್ರಿಯವು ಸಹ ತನ್ನದೇ ಆದ, ತನಗನುಗುಣವಾದ ಪದಾರ್ಥಗಳನ್ನು ಗ್ರಹಿಸುತ್ತದೆ. ಈ ಪದಾರ್ಥಗಳಿಗೆ 'ಅರ್ಥ' ಎಂದು ಹೇಳಬಹುದು. ಹಾಗೆಯೇ, ಇಂದ್ರಿಯಗಳು ಈ ಅರ್ಥಗಳನ್ನು ಗ್ರಹಿಸುವ ಅಥವಾ ಪಡೆಯುವ ವಿಧಾನಕ್ಕೆ ಸನ್ನಿಕರ್ಷವೆಂದು ಹೆಸರು. ಇದನ್ನು ಒಂದು ಉದಾಹರಣೆಯೊಂದಿಗೆ ವಿವರಿಸಬೇಕಾದರೆ, ನಮ್ಮ ಕಣ್ಣು ರೂಪವನ್ನು ನೋಡಬೇಕಾದರೆ ಪ್ರಪ್ರಥಮವಾಗಿ ಅದು ಸರಿಯಾಗಿರಬೇಕು ಮತ್ತು ನೋಡಲು ಬಯಸುವ ಪದಾರ್ಥವು ಸರಿಯಾದ ಗಾತ್ರ ಮತ್ತು ಪ್ರಮಾಣದಲ್ಲಿರಬೇಕು, ಅಂತರದಲ್ಲಿರಬೇಕು. ಇದರ ಜತೆಗೆ, ಬೆಳಕು ಇತ್ಯಾದಿ ಸಹಕಾರಿ ಸಾಧನಗಳು ಅವಶ್ಯಕ. ಇಂಥ ಪರಿಸ್ಥಿತಿಯಲ್ಲಿ ಮಾತ್ರ ನಮ್ಮ ಕಣ್ಣಿಗೆ ರೂಪವನ್ನು ಗ್ರಹಿಸಲು ಸಾಧ್ಯ. ಈ ರೀತಿಯ ಸಂಪರ್ಕವನ್ನು 'ಇಂದ್ರಿಯಾರ್ಥ ಸನ್ನಿಕರ್ಷ' ಎನ್ನಲಾಗುತ್ತದೆ. ಈ ಸಮಾವೇಶದಲ್ಲಿ ಯಾವುದೇ ಅಂಶದಲ್ಲಿ ಹೆಚ್ಚು ಕಡಿಮೆ ಆಗಿ ಈ ವಿಧಾನವು ಹೇಗೆ ಹೇಗೋ ನಡೆದರೆ/ಸರಿಯಾದ ರೀತಿಯಲ್ಲಿ ನಡೆಯದಿದ್ದರೆ ಅದನ್ನು ಅಸಾತ್ಮೇಂದ್ರಿಯಾರ್ಥ ಸನ್ನಿಕರ್ಷ ಎಂದು ಕರೆಯಲಾಗುತ್ತದೆ. ಈ ವಿಧಾನದಿಂದ ನಮ್ಮ ಸ್ವಾಸ್ಥ್ಯದಲ್ಲಿ ಧಕ್ಕೆ ಉಂಟಾಗಿ ರೋಗವು ಚಿಗುರೊಡೆಯುತ್ತದೆ.

ಸನ್ನಿಕರ್ಷದಲ್ಲಿ ಕ್ರಮ ತಪ್ಪುವುದು ಸಾಮಾನ್ಯವಾಗಿ ಮೂರು ರೀತಿಯಲ್ಲಿ ನಡೆಯುತ್ತದೆ. ಅವೆಂದರೆ ಅತಿಯೋಗ, ಹೀನಯೋಗ ಮತ್ತು ಮಿಥ್ಯಾಯೋಗ. ಸ್ನೇಹಿತರೇ, ನಮ್ಮ ದೈಹಿಕ ಶಕ್ತಿಯನ್ನು ಗಮನಿಸುವುದಾದರೆ, ಅದರ ಪ್ರಮಾಣ ಪ್ರತಿ ವ್ಯಕ್ತಿಯಲ್ಲೂ ಬದಲಾಗುತ್ತದೆ. ಆದರೂ ಸಾಮಾನ್ಯ ಪ್ರಮಾಣವನ್ನು ಗುರುತಿಸಿ ಈ ಸಾಮಾನ್ಯ ಪ್ರಮಾಣಕ್ಕಿಂತ ಕಡಿಮೆ ಕೆಲಸ ಮಾಡಿದವರಿಗೆ 'ಸೋಮಾರಿ' ಎಂದೂ, ಅತಿ ಹೆಚ್ಚು ದುಡಿಯುವವನಿಗೆ 'ಶ್ರಮಜೀವಿ' ಎಂದೂ, ಮಾಡಬೇಕಾದದ್ದನ್ನು ಮಾಡದೆ ಅಥವಾ ವಿಕೃತ ರೀತಿಯಲ್ಲಿ ಮಾಡಿದರೆ ಅವನಿಗೆ 'ಅಧಿಕ ಪ್ರಸಂಗಿ' ಎಂದೂ ಕರೆಯುತ್ತೇವೆ, ಅಲ್ಲವೇ? ಇದೇ ರೀತಿಯಾಗಿ ನಮ್ಮ ಇಂದ್ರಿಯಗಳ ಶಕ್ತಿ ಮತ್ತು ಅವುಗಳ ವಿಷಯಗ್ರಹಣ ಶಕ್ತಿಯೂ ಒಂದೇ ರೀತಿಯಲ್ಲಿ ಇರುವುದಿಲ್ಲ. ಅತ್ಯಂತ ಸಣ್ಣ ಪದಾರ್ಥವನ್ನು ಒಬ್ಬ ವ್ಯಕ್ತಿ ಸುಲಭವಾಗಿ ನೋಡಬಹುದು. ಅಂತೆಯೇ, ಮತ್ತೊಬ್ಬನಿಗೆ ಅದು ಬಹಳ ಕಷ್ಟಕರವೆನಿಸಬಹುದು. ಒಬ್ಬನಿಗೆ ಎರಡು ಮೈಲಿ ನಡೆಯುವ ಸಾಮರ್ಥ್ಯವಿರಬಹುದು, ಮತ್ತೊಬ್ಬನಿಗೆ ಎರಡು ನಿಮಿಷ ನಡೆಯುವುದರಲ್ಲಿ ಸುಸ್ತಾಗಬಹುದು. ಒಟ್ಟಾರೆ, ಪ್ರತಿಯೊಬ್ಬ ವ್ಯಕ್ತಿಯು, ಆಯಾ ಇಂದ್ರಿಯಗಳಿಗೆ ದಣಿವಾಗದಷ್ಟು ಕೆಲಸ ಮಾಡುವುದು ಆಯಾ ಇಂದ್ರಿಯಗಳ ಸಮಯೋಗ ಎನ್ನುತ್ತೇವೆ. ಈ ಸಮ ಪ್ರಮಾಣಕ್ಕಿಂತ ಅತಿಯಾಗಿ ಇಂದ್ರಿಯಗಳನ್ನು ದುಡಿಸಿಕೊಳ್ಳುವುದು ಅತಿಯೋಗವೆನಿಸಿಕೊಂಡರೆ, ಅತಿ ಕಡಿಮೆ ಪ್ರಮಾಣದಲ್ಲಿ ದುಡಿಸಿಕೊಂಡಾಗ ಅದು ಹೀನಯೋಗವಾಗುತ್ತದೆ. ಯಾವ ಇಂದ್ರಿಯದಿಂದ ಯಾವ ರೀತಿಯಲ್ಲಿ ಎಷ್ಟು ಕಾರ್ಯ ನಿರ್ವಹಿಸಬೇಕು ಅದಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುವುದು ಮಿಥ್ಯಾಯೋಗ.

ಉದಾಹರಣೆಗೆ, ಶಬ್ದ ಕೇಳುವುದು ಕಿವಿಯ ಕಾರ್ಯ, ಅಲ್ಲವೇ? ಈ ಶಬ್ದ ಗ್ರಹಣ ಸಾಮರ್ಥ್ಯಕ್ಕೆ ಸರಿಹೊಂದುವ ಪ್ರಮಾಣದ ಶಬ್ದವನ್ನು ಸರಿಯಾದ ಅಂತರದಲ್ಲಿ, ಕಿವಿಗೆ ದಣಿವು ತರದಷ್ಟು ಕೇಳುವುದು ಕಿವಿಯ ಇಂದ್ರಿಯಾರ್ಥ ಸನ್ನಿಕರ್ಷ. ಸಮಯೋಗವಾಗಿ ಕೇಳಬಹುದಾದ ಶಬ್ದವೇ ಇದ್ದರೂ ಕಿವಿಯು ಬಹಳ ಕಷ್ಟಪಟ್ಟು ಕೇಳಬೇಕಾಗುತ್ತದೆ. ಇದನ್ನು ಅಯೋಗ ಎನ್ನಲಾಗುತ್ತದೆ. ಇದಕ್ಕೆ ವಿರುದ್ಧವಾದದ್ದು ಜೋರಾದ ಶಬ್ದ. ಅತಿಯಾದ ಶಬ್ದವನ್ನು ಕೇಳುವುದು ಕಿವಿಯ ಅತಿಯೋಗವಾದರೆ, ಬೇಸರ ತರುವ ಶಬ್ದವನ್ನು ವಕ್ರ ವಕ್ರವಾಗಿ ಕುಳಿತು ಕೇಳುವುದು/ಮಲಗಿ ಕೇಳುವುದು ಸರಿ ಇಲ್ಲದ ಮಾಧ್ಯಮಗಳ ಮೂಲಕ ಕೇಳುವುದು- ಇದು ಶ್ರವಣೇಂದ್ರಿಯದ ಮಿಥ್ಯಾಯೋಗ ಎನಿಸಿಕೊಳ್ಳುತ್ತದೆ. ಒಟ್ಟಾರೆ ಇಂದ್ರಿಯಗಳ ಅತಿಯಾದ ಬಳಕೆ, ಅಲ್ಪಬಳಕೆ ಅಥವಾ ತಪ್ಪಾದ ಬಳಕೆಯಿಂದ ರೋಗಗಳು ಸಂಭವಿಸುತ್ತವೆ. ಇನ್ನು ಜನನೇಂದ್ರಿಯದ ಬಗ್ಗೆ ಹೇಳಬೇಕಾದರೆ, ಸುಖಾನುಭವ ಅದರ ಅರ್ಥ. ಅದರ ಸಂಪೂರ್ಣ ತಡೆ/ನಿಗ್ರಹ ಅದರ ಹೀನಯೋಗ, ಅತಿ ಪ್ರಚೋದನೆ ಅದರ ಅತಿಯೋಗ ಮತ್ತು ಅಕಾಲದಲ್ಲಿ, ಅಕ್ಷೇತ್ರದಲ್ಲಿ ಅಕ್ರಮವಾಗಿ ಪ್ರಚೋದನೆ ಅದರ ಮಿಥ್ಯಾಯೋಗವಾಗುತ್ತದೆ.

2. ಪ್ರಜ್ಞಾಪರಾಧ: ತಿಳಿಯದೇ, ತಿಳಿದದ್ದನ್ನು ಅಳವಡಿಸಲಾಗದೇ ಹಾಗೂ ತಿಳಿದೂ ಮರೆತು ಮಾಡುವ ತಪ್ಪುಗಳನ್ನು 'ಪ್ರಜ್ಞಾಪರಾಧ'ವೆಂದು ಕರೆಯಬಹುದು. ಸರಿಯಾದ ತಿಳಿವಳಿಕೆಯೇ ಪ್ರಜ್ಞೆ. ಇದರಿಂದ ಮಾಡುವ ತಪ್ಪೇ ಪ್ರಜ್ಞಾಪರಾಧ. ಉದಾಹರಣೆಗೆ, ಆಯುರ್ವೇದವು ರಾತ್ರಿ ಸಮಯದಲ್ಲಿ ಮೊಸರು ಸೇವಿಸುವುದನ್ನು ನಿಷೇಧಿಸಿದೆ. ಇದು ಹಲವರಿಗೆ ತಿಳಿಯದ ವಿಷಯ. ಹಾಗಾಗಿ ತಿಳಿಯದೆಯೇ ರಾತ್ರಿ ತಿನ್ನುತ್ತೇವೆ. ಇದರಿಂದ ನೆಗಡಿ, ಕೆಮ್ಮು, ಚರ್ಮವ್ಯಾಧಿಗಳು, ಮಧುಮೇಹ ಮುಂತಾದ ರೋಗಗಳು ಪ್ರಾರಂಭವಾಗುತ್ತವೆ. ಇದು ಸರಿಯಾದ ಜ್ಞಾನವಿಲ್ಲದೆಯೇ ಮಾಡಿದ ತಪ್ಪು. ಕೆಲವೊಮ್ಮೆ ತಿಳಿದೂ ಚಪಲ ತಡೆಯಲಾರದೆ ರಾತ್ರಿ ಮೊಸರು ತಿಂದುಬಿಡುತ್ತೇವೆ. ಇದು ಧಾರಣ ಶಕ್ತಿ ಇಲ್ಲದೆ ಮಾಡಿದ ತಪ್ಪು. ಕೆಲವೊಮ್ಮೆ ಬೇರೆ ಯಾವುದೋ ಕೆಲಸದಲ್ಲಿ ಮಗ್ನರಾಗಿ ಅಥವಾ ಬೇರೆಯವರ ಜತೆ ಹರಟುತ್ತಾ/ಚಿಂತಿಸುತ್ತಾ ಮೊಸರನ್ನು ರಾತ್ರಿ ಸೇವಿಸುತ್ತೇವೆ. ಇದು ಸ್ಮೃತಿ ಭ್ರಷ್ಟರಾಗಿ ಮಾಡುವ ತಪ್ಪು. ಆಗಲೂ ತೊಂದರೆ ತಪ್ಪಿದ್ದಲ್ಲ. ಈ ಪ್ರಜ್ಞಾಪರಾಧದಿಂದ ತ್ರಿದೋಷಗಳೂ ಪ್ರಕೋಪಗೊಳ್ಳಬಹುದು. ಅಂತೆಯೇ ಶಾರೀರಿಕ ವೇಗಗಳನ್ನು ತಡೆಯುವುದು ಅಥವಾ ವಿಕೃತವಾಗಿ ಪ್ರಚೋದಿಸುವುದೂ ಪ್ರಜ್ಞಾಪರಾಧವೇ. ಆದ್ದರಿಂದ ಸದಾ ಪ್ರಜ್ಞಾವಂತನಾಗಿರುವುದು ಸ್ವಾಸ್ಥ್ಯ ರಕ್ಷಣೆಗೆ ಬಹಳ ಅವಶ್ಯಕ.

3. ಪರಿಣಾಮ: ಕಾಲದ ಪರಿಣಾಮಗಳಿಂದ ಕೆಲವು ವ್ಯಾಧಿಗಳು ಉಂಟಾಗುತ್ತವೆ. ಉದಾಹರಣೆಗೆ, ಪ್ರತಿನಿತ್ಯವೂ ಬೆಳಗ್ಗೆ ಕಫ, ಮಧ್ಯಾಹ್ನ ಪಿತ್ತ ಮತ್ತು ರಾತ್ರಿ ವಾತದೋಷದ ವೃದ್ಧಿ ಸಹಜ. ಆ ಕಾಲದಲ್ಲಿ ಸ್ವಲ್ಪವಾದರೂ ಆ ದೋಷಗಳ ವೃದ್ಧಿಲಕ್ಷಣಗಳ ಅನುಭವವಾಗುತ್ತದೆ. ಅದೇ ರೀತಿಯಾಗಿ ಋತುವಿಗೆ ಅನುಗುಣವಾಗಿ ಬೇರೆ ಬೇರೆ ವ್ಯಾಧಿಗಳು ಸಹಜವಾಗಿ ಕಾಣಿಸಿಕೊಳ್ಳಬಹುದು.

ಬೇರೆ ಬೇರೆ ಋತುಗಳಲ್ಲಿ ದೋಷಗಳ ಸ್ಥಿತಿ ಈ ರೀತಿ ಇರುತ್ತದೆ. ಹೇಮಂತದಲ್ಲಿ ಕಫ ಸಂಚಯವಾಗಿ ಪಿತ್ತವು ಪ್ರಶಮನವಾಗುತ್ತದೆ. ಶಿಶಿರದಲ್ಲಿ ಕಫ ಸಂಚಯ, ವಸಂತದಲ್ಲಿ ಕಫ ಪ್ರಕೋಪ, ಗ್ರೀಷ್ಮದಲ್ಲಿ ವಾತ ಸಂಚಯ, ವರ್ಷದಲ್ಲಿ ವಾತ ಪ್ರಕೋಪ ಮತ್ತು ಪಿತ್ತ ಸಂಚಯವಾಗಿ ಶರತ್ ಋತುವಿನಲ್ಲಿ ಪಿತ್ತ ಪ್ರಕೋಪವಾಗುತ್ತದೆ. ಈ ರೀತಿಯಾಗಿ ಋತುವೈಪರೀತ್ಯದಿಂದ ದೋಷಗಳ ಏರುಪೇರಾಗಿ ಅದರಿಂದ ಬೇರೆ ಬೇರೆ ರೀತಿಯ ವ್ಯಾಧಿಗಳು ಕಾಣಿಸಿಕೊಳ್ಳಬಹುದು.

ಇದಲ್ಲದೇ ನಾವು ಮಾಡುವ ಪರಿಸರ ನಾಶದಿಂದ ಅಕಾಲದಲ್ಲಿ ಮಳೆ ಬಿಸಿಲು ಕಂಡುಬಂದು, ಋತು ವಿಕೋಪದಿಂದಲೂ ರೋಗಗಳು ಉಂಟಾಗುತ್ತವೆ. ಇವೆಲ್ಲವೂ ಪರಿಣಾಮಜನ್ಯ ವಿಕೃತಿಗಳೆನಿಸುತ್ತವೆ. ಬಾಲ್ಯ, ಕೌಮಾರ್ಯ, ಯೌವನ, ವೃದ್ಧಾಪ್ಯ, ಮರಣ ಜತೆಗೆ ಹಸಿವೆ, ಬಾಯಾರಿಕೆ ಎಂಬ ಕಾಲಜನ್ಯವಾದ ಸ್ವಾಭಾವಿಕ ಪರಿಣಾಮಗಳು. ಇವಲ್ಲದೆ ದೈವವೆಂಬ ಪೂರ್ವದೇಹಕೃತ ಕರ್ಮಗಳೂ ವ್ಯಾಧಿ ರೂಪದಲ್ಲಿ ಬಾಧಿಸಬಹುದು.

ಒಟ್ಟಾರೆ ನಮ್ಮ ಶಾಸ್ತ್ರಗಳು ಹೇಳುವಂತೆ ಸ್ವಾಸ್ಥ್ಯ ಪ್ರಾಪ್ತಿಗಾಗಿ ಹೀಗೆ ವರ್ತಿಸಬೇಕಾದದ್ದು ಅನಿವಾರ್ಯ: ಪ್ರಜ್ಞಾಪರಾಧಗಳ ತ್ಯಾಗ, ಇಂದ್ರಿಯಗಳ ಉಪಶಮನ, ಸ್ಮೃತಿ, ದೇಶಕಾಲಗಳ ಜ್ಞಾನ, ತನ್ನನ್ನು ಸರಿಯಾಗಿ ಅರಿತುಕೊಳ್ಳುವುದು, ನಿತ್ಯವೂ ಸದ್ವೃತ್ತಗಳ ಆಚರಣೆ. ಇವು ಬಾಹ್ಯ ಕಾರಣಗಳಿಂದ ರೋಗಗಳನ್ನು ತಡೆಯಲು ಮಾರ್ಗಗಳಾಗಿವೆ. ಇದನ್ನು ಮೊದಲಿನಿಂದಲೇ ಆಚರಿಸುತ್ತಾ ಬರಬೇಕು. ಇದರ ಜತೆಗೆ ಆಪ್ತೋಪದೇಶದ ಜ್ಞಾನ, ಗ್ರಹಿಸಿದ ಜ್ಞಾನದ ಸರಿಯಾದ ಆಚರಣೆ- ಇವು ಬಾರದ ರೋಗಗಳನ್ನು ತಡೆಯಲು ಮತ್ತು ಬಂದದ್ದನ್ನು ಶಾಂತಗೊಳಿಸಲು ಇರುವ ಶಾಸ್ತ್ರಸಮ್ಮತವಾದ ಉಪಾಯಗಳು!!

ಕಾರ್ಗಿಲ್ ಯುದ್ಧಕ್ಕೆ ಆಯಿತು 26 ವರ್ಷಗಳು...



ವಿಜಯಸಿಂದೂರ
ರವೀ ಸಜಂಗದ್ದೆ
vveditoped@gmail.com

ಕಾರ್ಗಿಲ್ ವಿಜಯ ದಿವಸ್. ಈ ಮೂರು ಶಬ್ದಗಳೊಳಗೆ ರಾಷ್ಟ್ರದ ಹೆಮ್ಮೆ, ಗೌರವ ಮತ್ತು ಸ್ಮರಣೀಯ ಚರಿತ್ರೆ ದಾಖಲಾಗಿವೆ. ಇದು ಭಾರತದ ಮಿಲಿಟರಿ ಇತಿಹಾಸದ ಅತ್ಯಂತ ಮಹತ್ವದ, ಸಂಕೀರ್ಣ ಮತ್ತು ಕೆಚ್ಚೆದೆಯ ವಿಜಯಗಳಲ್ಲಿ ಒಂದೆನಿಸಿಕೊಂಡಿರುವಂಥದ್ದು. ಇದನ್ನು ಅತ್ಯಂತ ಶ್ರದ್ಧೆಯಿಂದ, ಭಕ್ತಿ-ಭಾವದಿಂದ ಗುರುತಿಸಿ, ಪ್ರತಿವರ್ಷದ ಜುಲೈ 26ರಂದು 'ಕಾರ್ಗಿಲ್ ವಿಜಯ್ ದಿವಸ್' ಹೆಸರಿನಲ್ಲೇ ಆಚರಿಸಲಾಗುತ್ತದೆ.

1999ರಲ್ಲಿ ಪಾಕಿಸ್ತಾನದೊಂದಿಗೆ ನಡೆದ ಕಾರ್ಗಿಲ್ ಯುದ್ಧದಲ್ಲಿ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಸೈನಿಕರನ್ನು ಸ್ಮರಿಸುವ, ಭಾರತೀಯ ಸಶಸ್ತ್ರ ಪಡೆಗಳ ಅಚಲ ಧೈರ್ಯ ಮತ್ತು ತ್ಯಾಗವನ್ನು ಗೌರವಿಸುವ ಮಹತ್ವದ ದಿನವಿದು. ಹಿಮಾಲಯದ ಕಠಿಣ ಮತ್ತು ದುರ್ಗಮ ಭೂಪ್ರದೇಶದ ನಡುವೆ, ಎಲ್ಲ ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸಿ ಸಾಧಿಸಿದ ಮಹತ್ತರ ವಿಜಯದ ಪ್ರಬಲ ಜ್ಞಾಪನೆಯ ಭಾಗವಾಗಿ, ಒಂದಿಡೀ ದೇಶ ಈ ದಿನವನ್ನು ಮತ್ತು ಗೆಲುವನ್ನು ಸ್ಮರಿಸಿ ಸಂಭ್ರಮಿಸುತ್ತದೆ.

ದೇಶದ ಶಿಖರಪ್ರಾಯದಂತಿರುವ ಜಮ್ಮು ಮತ್ತು ಕಾಶ್ಮೀರದಲ್ಲಿನ ನಮ್ಮ 'ವ್ಯೂಹಾತ್ಮಕ ಕಾರ್ಯತಂತ್ರ ಸ್ಥಳಗಳನ್ನು' 1972ರ 'ಶಿಮ್ಲಾ ಕದನವಿರಾಮ ಒಪ್ಪಂದ'ವನ್ನು ಮುರಿದು, ಕಳ್ಳದಾರಿಯ ಮೂಲಕ ನುಸುಳಿ ಆಕ್ರಮಿಸಿಕೊಂಡಿದ್ದ ಪಾಕ್ ಸೇನೆಯೆದುರು ವೀರಾವೇಶದಿಂದ ಹೋರಾಡಿ, ಮತ್ತೆ ಮರಳಿ ಪಡೆದು, ಅಲ್ಲಿ ತ್ರಿವರ್ಣ ಧ್ವಜ ಹಾರಿಸಿದ, ದೇಶವು ಸಡಗರದಿಂದ ಸಂಭ್ರಮಿಸಿದ ಆ ದಿನಕ್ಕೆ ಇದೇ ಜುಲೈ 26ಕ್ಕೆ ಭರ್ತಿ 26 ವರ್ಷಗಳು. ಕಾರ್ಗಿಲ್ ಪ್ರದೇಶದ ಗಡಿ ನಿಯಂತ್ರಣ ರೇಖೆಗುಂಟ ನಡೆದ ಪಾಕಿಸ್ತಾನದ ಶಸ್ತ್ರಸಜ್ಜಿತ ಸೇನೆ ಮತ್ತು ಅರೆಸೇನಾ ಪಡೆಗಳ ಅಪ್ರಚೋದಿತ ಒಳನುಸುಳುವಿಕೆಯನ್ನು ಹತ್ತಿಕ್ಕುವ ನಿಟ್ಟಿನಲ್ಲಿ 'ಆಪರೇಷನ್ ವಿಜಯ್' ಕಾರ್ಯಾಚರಣೆಯನ್ನು ಕೈಗೊಳ್ಳಲಾಯಿತು.

ಒಟ್ಟು 73 ದಿನಗಳ ಕಾಲ ನಡೆದ ಕಾರ್ಗಿಲ್ ಯುದ್ಧದಲ್ಲಿ ಅಪಾರ ಪ್ರಮಾಣದ ಕಷ್ಟ-ನಷ್ಟ ಉಂಟಾಯಿತು. ಭಾರತದ ಸಶಸ್ತ್ರ ಪಡೆಗಳ 527 ಸೈನಿಕರು ದೇಶರಕ್ಷಣೆಯ ಈ ಕೈಂಕರ್ಯದಲ್ಲಿ ಹುತಾತ್ಮರಾದರು. ಪಾಕಿಸ್ತಾನದ ಸೈನಿಕರು ಭಾರತದ ಗಡಿಯೊಳಗೆ ನುಸುಳಿ ಕಾರ್ಗಿಲ್ ಪ್ರದೇಶವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಭಾರತೀಯ ಸೇನೆಯು ಕ್ಲಿಷ್ಟಕರ ಪರ್ವತ ಪ್ರದೇಶ ಮತ್ತು ಕಠಿಣ ಹವಾಮಾನದ ಹೊರತಾಗಿಯೂ ಧೈರ್ಯ ಮತ್ತು ಸಾಹಸದಿಂದ ಹೋರಾಡಿ, ಆ ಪ್ರದೇಶವನ್ನು ಮರಳಿ ಪಡೆದು ಸಂಭ್ರಮಿಸಿತು. ಹೀಗಾಗಿ, ದೇಶದ ಸಾರ್ವಭೌಮತ್ವದ ಸಂರಕ್ಷಣೆಗೆ ಪ್ರಾಣವನ್ನೇ ಪಣವಾಗಿಟ್ಟ ಅಪ್ರತಿಮ ಸೈನಿಕರ ಶಕ್ತಿಯನ್ನು ಸ್ಮರಿಸಲು ಮೀಸಲಿರುವ ದಿನವಿದು.

ಸಮುದ್ರ ಮಟ್ಟದಿಂದ ಸುಮಾರು 11,000 ಅಡಿಗಳಷ್ಟು ಎತ್ತರದಲ್ಲಿರುವ, ಲಡಾಖ್ ಪ್ರದೇಶದ ಕಾರ್ಗಿಲ್ ಜಿಲ್ಲೆಯ ದ್ರಾಸ್‌ನಲ್ಲಿರುವ 'ಯುದ್ಧಭೂಮಿ ಸ್ಮಾರಕ'ದ ವಿವರಗಳು ರೋಮಾಂಚನಗೊಳಿಸುತ್ತವೆ. ಯುದ್ಧದಲ್ಲಿ ಹುತಾತ್ಮರಾದ ಹೆಮ್ಮೆಯ ಸೈನಿಕರನ್ನು ಬಿಂಬಿಸುವ 527 ನಾಮಫಲಕಗಳು ಇಲ್ಲಿವೆ. ಮಾತ್ರವಲ್ಲದೆ ಇಲ್ಲಿನ ವಸ್ತುಸಂಗ್ರಹಾಲಯದಲ್ಲಿ ಕಾರ್ಗಿಲ್ ಯುದ್ಧದಲ್ಲಿ ಬಳಸಲಾದ ವಿವಿಧ ಶಸ್ತ್ರಾಸ್ತ್ರಗಳು ಮತ್ತು ಯುದ್ಧೋಪಕರಣಗಳನ್ನು ಇರಿಸಲಾಗಿದೆ. ಗುಲಾಬಿ ಬಣ್ಣದ ಮರಳುಗಲ್ಲಿನಲ್ಲಿ ನಿರ್ಮಿಸಲಾದ ಈ ಐತಿಹಾಸಿಕ ಸ್ಮಾರಕವು ಭಾರತದ ಸೈನಿಕರ ಶೌರ್ಯ-ತ್ಯಾಗಗಳ ಸಂಕೇತವಾಗಿದೆ. ಇಲ್ಲಿ ಹಾರುವ ಭಾರತದ ತ್ರಿವರ್ಣ ಧ್ವಜವನ್ನು ನೋಡಲು ಕಂಗಳೆರಡು ಸಾಲವು. ದೇಶಭಕ್ತಿಯನ್ನು ಬಡಿದೆಬ್ಬಿಸುವ, ಯೋಧರ ಬಗೆಗಿನ ಗೌರವವನ್ನು ಮತ್ತಷ್ಟು ಹೆಚ್ಚಿಸುವ ಸ್ಮಾರಕವಿದು. ಕಾರ್ಗಿಲ್ ಯುದ್ಧ ನಡೆದ ಸ್ಥಳ-ಪರಿಸರದಲ್ಲೇ ನಿರ್ಮಾಣವಾಗಿರುವ ಈ ಸ್ಮಾರಕದ ಹಿನ್ನೆಲೆಯಲ್ಲಿ, ಅಂದು ಪಾಕಿಸ್ತಾನವು ವಶಪಡಿಸಿಕೊಂಡಿದ್ದ ಟೋಲೋಲಿಂಗ್ ಹಾಗೂ ಟೈಗರ್ ಬೆಟ್ಟಗಳನ್ನು ಕಾಣಬಹುದು.

ಭಾರತವು ವಿಭಜನೆಯಾಗಿ ಪಾಕಿಸ್ತಾನ ಹುಟ್ಟಿದಾಗಿನಿಂದಲೂ ಕಾಶ್ಮೀರ ಎಂಬುದು ಸಮಸ್ಯೆಯ ಕೂಪವಾಗಿಯೇ ಉಳಿದಿರುವುದು ಕಹಿಸತ್ಯ. ತನ್ನ ಭೂಪ್ರದೇಶವನ್ನು ವಿಸ್ತರಿಸಿಕೊಳ್ಳಲೆಂದು ಕಾಶ್ಮೀರವನ್ನು ವಶಪಡಿಸಿಕೊಳ್ಳಲು ಪಾಪಿ ಪಾಕಿಸ್ತಾನವು ಚೀನಾದ ಜತೆಗೂಡಿ ನಿರಂತರವಾಗಿ ಯತ್ನಿಸಿದ ಕಥೆಗಳು ಸಾಕಷ್ಟು ಸಿಗುತ್ತವೆ. ಅದು ಎಷ್ಟೇ ತಿಪ್ಪರಲಾಗ ಹಾಕಿದರೂ ನಮ್ಮ ವೀರಯೋಧರು ದೇಶದ ಒಂದಿಂಚು ಭೂಮಿಯನ್ನೂ ಬಿಟ್ಟುಕೊಡಲೇ ಇಲ್ಲ. ಆದರೆ ಇಂಥ ಯತ್ನಗಳಲ್ಲಿ ಪೆಟ್ಟು ತಿಂದರೂ, ಹಲವು ಬಾರಿ ಸೋತರೂ ಪಾಕಿಸ್ತಾನ ಬುದ್ಧಿ ಕಲಿಯಲೇ ಇಲ್ಲ. ಗಡಿಯಾಚೆಯಿಂದಲೇ ನಿರಂತರ ಭಯೋತ್ಪಾದನೆ ಮಾಡುತ್ತಾ, ಗಡಿ ನಿಯಂತ್ರಣ ರೇಖೆಯನ್ನು ಆಗೀಗ ಉಲ್ಲಂಘಿಸುತ್ತಾ, ನಂತರ ಬಾಲ ಸುಟ್ಟ ಬೆಕ್ಕಿನಂತೆ ಒಂದಷ್ಟು ದಿನ ಮುದುಡಿ ಕೂರುವ ಪಾಕ್, ನಂತರ ಮತ್ತದೇ ಚಾಳಿಯನ್ನು ಶುರುಹಚ್ಚಿಕೊಳ್ಳುತ್ತದೆ. ಇತ್ತೀಚಿನ ಪಹಲ್ಗಾಮ್ ಭೀಭತ್ಸ ದಾಳಿಯು ಪಾಕಿಸ್ತಾನದ ಇಂಥ ಕುತ್ಸಿತ ಮನಸ್ಥಿತಿಗೆ ಹಿಡಿದ ಕೈಗನ್ನಡಿ. ಪಾಕಿಸ್ತಾನದ ಸೇನೆ ಮತ್ತು ಗುಪ್ತಚರ ಸಂಸ್ಥೆ 'ಐಎಸ್‌ಐ', ವಿವಿಧ ಭಯೋತ್ಪಾದಕ ಸಂಘಟನೆಗಳ ಹೆಸರಿನಲ್ಲಿ ಭಾರತದ ಮೇಲೆ ದಾಳಿ ಮಾಡಲು ನಿರಂತರ ಯತ್ನಿಸಿ ವಿಫಲವಾಗಿರುವುದು ಜಗಜ್ಜಾಹೀರು. ಇಂಥ ಕಸರತ್ತುಗಳನ್ನು ಕಂಡಿದ್ದ ಭಾರತವು ಈ ಬಾರಿ ಪಾಕಿಸ್ತಾನಕ್ಕೆ ತಕ್ಕ ಪಾಠ ಕಲಿಸಲೆಂದು 'ಆಪರೇಷನ್ ಸಿಂದೂರ' ಕಾರ್ಯಾಚರಣೆ, ಸಿಂಧೂ ನದಿ ನೀರನ್ನು ತಡೆಹಿಡಿಯುವಿಕೆ ಮತ್ತು ಆರ್ಥಿಕ ದಿಗ್ಬಂಧನವನ್ನು ಹಾಕಿದೆ. ತನ್ಮೂಲಕ ಪಾಕಿಸ್ತಾನಕ್ಕೆ ತಡವರಿಸಿಕೊಳ್ಳುವಂಥ ಪೆಟ್ಟು ನೀಡಿದೆ. ಆದರೆ ಅಕ್ಷರಶಃ ದಿವಾಳಿಯಾಗಿರುವ ಪಾಕಿಸ್ತಾನಕ್ಕೆ ಬುದ್ಧಿ ಬಂದಂತಿಲ್ಲ.



ಭಾರತವು ಕಾರ್ಗಿಲ್ ಯುದ್ಧವನ್ನು ಗೆದ್ದು 26 ವರ್ಷಗಳು ಸಂದಿವೆ. ಭಾರತದ ಅಂದಿನ ಪರಿಸ್ಥಿತಿಗೂ ಇಂದಿನ ಪರಿಸ್ಥಿತಿಗೂ ಬಹಳಷ್ಟು ವ್ಯತ್ಯಾಸವಿದೆ. ಅಂದು ಪಾಕಿಸ್ತಾನದ ಧೋರಣೆಯನ್ನು ಮತ್ತು ಅದರ ಭಯೋತ್ಪಾದನೆಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಖಂಡಿಸಲು ಭಾರತವು ತುಂಬಾ ಶ್ರಮಪಡಬೇಕಿತ್ತು ಮತ್ತು ಹಲವು ದೇಶಗಳು ತಂತಮ್ಮ ರಾಜಕೀಯ ಮತ್ತು ವಾಣಿಜ್ಯಿಕ ಬೇಳೆ ಬೇಯಿಸಿಕೊಳ್ಳಲು ನೇರವಾಗಿ ಅಥವಾ ಇನ್ನಿತರ ಮಾರ್ಗಗಳ ಮೂಲಕ ಪಾಕಿಸ್ತಾನಕ್ಕೆ ಆಪ್ತವಾಗುತ್ತಿದ್ದವು, ಅದರೊಡನೆ ವ್ಯವಹರಿಸುತ್ತಿದ್ದವು. ಅಂಥ ದೇಶಗಳಿಗೆ ಭಾರತ ಮತ್ತು ಪಾಕಿಸ್ತಾನಗಳು ವ್ಯಾಪಾರ-ವ್ಯವಹಾರಕ್ಕಷ್ಟೇ ಬೇಕಾಗಿದ್ದವೇ ವಿನಾ, ಕಾಶ್ಮೀರದ ಸಮಸ್ಯೆಯನ್ನಾಗಲೀ ಭಯೋತ್ಪಾದನೆಯ ಪಿಡುಗನ್ನಾಗಲೀ ಹತ್ತಿಕ್ಕುವ ಬಗ್ಗೆ ಅವಕ್ಕೆ ಆಸಕ್ತಿ ಇರಲಿಲ್ಲ.

ಈಗ ಕಾಲ ಬದಲಾಗಿದೆ. ಪಹಲ್ಗಾಮ್ ದಾಳಿಯ ತರುವಾಯ ಪಾಕಿಸ್ತಾನವನ್ನು ಬೆಂಬಲಿಸುವ ತಮ್ಮ ಹಳೆಯ ಚಾಳಿಯನ್ನು ಮುಂದುವರಿಸಿರುವ ದೇಶಗಳ ನಿಲುವನ್ನು ಭಾರತ ತೀವ್ರವಾಗಿ ಖಂಡಿಸಿದೆ. ಆ ದೇಶಗಳ ಜತೆಗಿನ ವ್ಯವಹಾರವನ್ನೂ, ಮಾನವೀಯ ನೆಲೆಯಲ್ಲಿ ಅವಕ್ಕೆ ನೀಡುತ್ತಿದ್ದ ನೆರವನ್ನೂ ಸಂಪೂರ್ಣ ನಿಲ್ಲಿಸಿದೆ. ಪಾಕಿಸ್ತಾನವನ್ನು ಬೆಂಬಲಿಸಿದ್ದ ಟರ್ಕಿ ದೇಶವು ಈಗ ಭಾರತದ ಆರ್ಥಿಕ ದಿಗ್ಬಂಧನದ ಬಿಸಿಗೆ ಪತರಗುಟ್ಟುತ್ತಿದೆ. ಪಾಕಿಸ್ತಾನ ಕುರಿತಾದ ತನ್ನ ನಿಲುವನ್ನು ಭಾರತವು ಜಗತ್ತಿನೆದುರು ಗಟ್ಟಿದನಿಯಲ್ಲಿ ತೆರೆದಿಟ್ಟಿದೆ. ''ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸಲು ಜಗತ್ತಿನ ಯಾವ ದೊಣ್ಣೆನಾಯಕನೂ ಮೂಗು ತೂರಿಸುವ, ಹೇಳಿಕೆ ನೀಡುವ ಅಗತ್ಯ ಸುತರಾಂ ಇಲ್ಲ' ಎಂದು ಸ್ಪಷ್ಟಪಡಿಸಿದೆ. ಪಹಲ್ಗಾಮ್ ಮಾರಣಹೋಮಕ್ಕೆ ಪ್ರತಿಯಾಗಿ ಭಾರತ ಕೈಗೊಂಡ 'ಆಪರೇಷನ್ ಸಿಂದೂರ' ಕಾರ್ಯಾಚರಣೆಯಲ್ಲಿ ಪಾಕಿಸ್ತಾನಕ್ಕೆ ಬಿದ್ದ ಏಟು ಪ್ರಬಲವಾಗಿದೆ.

'ಆಪರೇಷನ್ ಸಿಂದೂರ' ಕಾರ್ಯಾಚರಣೆಯು ಯಶಸ್ವಿಯಾಗಿ ಸಂಪನ್ನಗೊಂಡ ನಂತರ ಭಾರತದ ಪ್ರಧಾನಿ ನರೇಂದ್ರ ಮೋದಿಯವರು, ''ನೀರು ಮತ್ತು ರಕ್ತ ಜತೆಯಾಗಿ ಹರಿಯಲಾರವು. ವ್ಯವಹಾರ ಮತ್ತು ಭಯೋತ್ಪಾದನೆ ಜತೆಯಾಗಿ ಸಾಗಲಾರವು. ಪಾಕಿಸ್ತಾನದ ಜತೆಗೆ ಮಾತಾಡುವುದೇನಾದರೂ ಉಳಿದಿದ್ದರೆ, ಅದು ಭಯೋತ್ಪಾದನೆಯ ಸಂಪೂರ್ಣ ನಿರ್ಮೂಲನೆ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ಬಗ್ಗೆ ಮಾತ್ರ. ಇದನ್ನು ನಿರ್ವಹಿಸಲು ಭಾರತ ಸಶಕ್ತವಾಗಿದೆ, ಸ್ವತಂತ್ರವಾಗಿದೆ'' ಎಂಬ ಸ್ಪಷ್ಟ ಸಂದೇಶವನ್ನು ಜಗತ್ತಿಗೆ ತಿಳಿಸಿದರು. ಅಂದಿನ ದಿನಮಾನದಲ್ಲಿ ಅಟಲ್ ಬಿಹಾರಿ ವಾಜಪೇಯಿಯವರು ಕೂಡ ಇದೇ ರೀತಿಯ ದಿಟ್ಟ ನಿಲುವನ್ನು ಹೊಂದಿದ್ದರು ಎಂಬುದು ಗಮನಾರ್ಹ. ಇದು ಸಶಕ್ತ ಮತ್ತು ಶ್ರೇಷ್ಠ ಭಾರತದ ದ್ಯೋತಕ. ಪಾಕಿಸ್ತಾನವು ಇನ್ನೆಂದೂ ಭಾರತದೆದುರು ನೇರವಾಗಿ ಸೆಣಸಲಾರದಷ್ಟು ಸೊರಗಿದೆ. ಅದು ಭಾರತದ ಎದುರು ನೇರವಾಗಿ ಹೋರಾಡಲೇ ಇಲ್ಲ ಎಂಬುದು ಬೇರೆ ಮಾತು! ಪಾಕ್‌ನ ದೈನಂದಿನ ಸಾಮಾಜಿಕ ಬದುಕು ಮತ್ತು ಆಂತರಿಕ ಭದ್ರತೆಗೆ ಆತಂಕವಾಗುವಷ್ಟರ ಮಟ್ಟಿಗೆ ಅಲ್ಲಿ ಭಯೋತ್ಪಾದನೆ ಬೆಳೆದುನಿಂತಿದೆ. ಇಂಥ ಹೊರಗಿನ ಶತ್ರುಗಳನ್ನು ಮೂಲದಲ್ಲೇ ಹತ್ತಿಕ್ಕುವಷ್ಟು ಭಾರತದ ಭದ್ರತಾ ವ್ಯವಸ್ಥೆ ಮತ್ತು ಸೇನೆ ಸದೃಢವಾಗಿವೆ, ಸನ್ನದ್ಧವಾಗಿವೆ.

ಪಾಕಿಸ್ತಾನ ಪ್ರಚೋದಿತ ಆಕ್ರಮಣ ಮತ್ತು ಭಯೋತ್ಪಾದಕ ದಾಳಿಯಲ್ಲಿ ಮಡಿದ ವೀರಯೋಧರಿಗೆ ಮತ್ತು ಅಮಾಯಕ ದೇಶವಾಸಿಗಳಿಗೆ ಈ ಸಂದರ್ಭದಲ್ಲಿ ಗೌರವಯುತ ಪ್ರಣಾಮಗಳು.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಚೇತನ-ಚಿಂತನ
ಲಿಂಗದಹಳ್ಳಿ ಚೇತನ್‌ಕುಮಾರ್
vveditoped@gmail.com

ನಾಯಕರ ಮಹತ್ವಾಕಾಂಕ್ಷೆ ಸ್ವಾರ್ಥವಾಗಿ ಬದಲಾದಾಗ..

ಈ ಸಮಾಜದಿಂದ ವಿವಿಧ ರೀತಿಯಲ್ಲಿ ನೆರವನ್ನು ಪಡೆದು ಬದುಕಿನ ದಾರಿಯನ್ನು ಸುಗಮಗೊಳಿಸಿಕೊಂಡವರು, ತಾವು ಒಂದು ಹಂತಕ್ಕೆ ತಲುಪಿದ ನಂತರ ಈ ಸಮಾಜಕ್ಕೆ ಏನನ್ನಾದರೂ ಮರಳಿ ಕೊಡಬೇಕು, ಅದು ಮುಂದಿನ ಪೀಳಿಗೆಗೆ ಮೇಲ್ಪಂಕ್ತಿಯಾಗಬೇಕು ಹಾಗೂ ತನ್ಮೂಲಕ ತಮ್ಮ ಹೆಜ್ಜೆಗುರುತುಗಳನ್ನು ಸ್ಪಷ್ಟವಾಗಿ ಉಳಿಸಿ ಹೋಗುವಂತಾಗಬೇಕು ಎಂಬ 'ಸಾರ್ವಕಾಲಿಕ' ಸದಾಶಯವನ್ನು ಮರೆಯುವುದುಂಟು. ಇದು ರಾಜಕೀಯ ಕ್ಷೇತ್ರಕ್ಕೂ ಅನ್ವಯವಾಗುವ ಮಾತು. ಆದರೆ ಶುರುವಿನಲ್ಲಿ ಇಂಥ ಆಶಯವನ್ನೇ ಉಸಿರಾಡುತ್ತಿದ್ದವರು (ಅಥವಾ ಆ ರೀತಿಯಲ್ಲಿ ತೋರಿಸಿಕೊಂಡವರು), ಕ್ರಮೇಣ ಅಧಿಕಾರದ ಹಪಾಹಪಿಯಲ್ಲಿ 'ಹತ್ತರಲ್ಲಿ ಹನ್ನೊಂದನೆಯವರು' ಎಂಬಂತೆ ಬದಲಾಗಿಬಿಡುವುದೇಕೆ? ಎಂಬುದು ಮಿಲಿಯನ್ ಡಾಲರ್ ಪ್ರಶ್ನೆ!

ಒಂದೆರಡು ಉದಾಹರಣೆಗಳನ್ನು ವಿಶ್ಲೇಷಿಸಿದರೆ ಈ ಮಾತು ನಿಮಗೆ ಮತ್ತಷ್ಟು ಮನದಟ್ಟಾಗಬಹುದು. ಆಮ್ ಆದ್ಮಿ ಪಕ್ಷದ ಸಂಸ್ಥಾಪಕ ಅರವಿಂದ ಕೇಜ್ರಿವಾಲ್ ಯಾರಿಗೆ ತಾನೇ ಗೊತ್ತಿಲ್ಲ? 'ಭ್ರಷ್ಟಾಚಾರ ವಿರೋಧಿ ಭಾರತ' ಎಂಬ ಅರ್ಥನೀಡುವ ಅಭಿಯಾನವನ್ನು ಹುಟ್ಟುಹಾಕಿದ ಸಾಮಾಜಿಕ ಹೋರಾಟಗಾರ ಅಣ್ಣಾ ಹಜಾರೆಯವರ ತೆಕ್ಕೆಗೆ ಸೇರಿಕೊಂಡು ಶುರುವಿನಲ್ಲಿ ಗುರುತಿಸಿಕೊಂಡವರು ಈ ಕೇಜ್ರಿವಾಲ್. ಈ ಅಭಿಯಾನ ಜನಪ್ರಿಯವಾಗುತ್ತಾ ಹೋದಂತೆ ಅರವಿಂದ ಕೇಜ್ರಿವಾಲರ ವರ್ಚಸ್ಸೂ ಗಟ್ಟಿಯಾಗುತ್ತಾ ಹೋಯಿತು ಎನ್ನಬೇಕು. ದೆಹಲಿಯ ಜನಸಾಮಾನ್ಯರನ್ನು ಕಾಡುತ್ತಿದ್ದ ಕೆಲವಷ್ಟು ದೈನಂದಿನ ಸಮಸ್ಯೆಗಳ ನಿವಾರಣೆಗೆ ಬೀದಿಗಿಳಿದು ಹೋರಾಟ ಮಾಡುವುದಕ್ಕೆ ಮುಂದಾದ ಕೇಜ್ರಿವಾಲ್, ತತ್ಫಲವಾಗಿ ಭರ್ಜರಿ ಜನಪ್ರಿಯತೆಯನ್ನೇ ದಕ್ಕಿಸಿಕೊಂಡುಬಿಟ್ಟರು. ಈ ಜನಪ್ರಿಯತೆಯನ್ನೇ 'ಎನ್‌ಕ್ಯಾಶ್' ಮಾಡಿಕೊಂಡು ಯಾಕೆ ರಾಜಕೀಯಕ್ಕೆ ಇಳಿಯಬಾರದು ಎಂಬ ಚಿಂತನೆ ಅವರಲ್ಲಿ ಮೊಳಕೆಯೊಡೆದಾಗ ಹುಟ್ಟಿಕೊಂಡಿದ್ದೇ ಆಮ್ ಆದ್ಮಿ ಪಕ್ಷ. ಹೀಗೆ ಭ್ರಷ್ಟಾಚಾರ ವಿರೋಧಿ ಅಭಿಯಾನವನ್ನು ಚಿಮ್ಮುಹಲಗೆಯಾಗಿಸಿಕೊಂಡು ರಾಜಕೀಯ ವೇದಿಕೆಗೆ ಜಿಗಿದ ಕೇಜ್ರಿವಾಲರು ನಂತರದಲ್ಲಿ ದೆಹಲಿ ಗದ್ದುಗೆಯನ್ನೂ ಏರಿಬಿಟ್ಟರು, ಹತ್ತು ವರ್ಷಕ್ಕೂ ಹೆಚ್ಚು ಅವಧಿಯವರೆಗೆ ದರ್ಬಾರ್ ಕೂಡ ನಡೆಸಿದರು. ಮೊದಲ ಕೆಲ ವರ್ಷಗಳು ಅವರ ಆಡಳಿತ ಚೆನ್ನಾಗೇ ಇತ್ತು. ಆದರೆ ದಿನಗಳೆದಂತೆ ಅವರಲ್ಲಿ 'ಹೆಚ್ಚುವರಿ' ಮಹತ್ವಾಕಾಂಕ್ಷೆ ಚಿಗುರೊಡೆಯಿತು. ಪ್ರಾಯಶಃ ಅದು, ಬಿಜೆಪಿಯ ನರೇಂದ್ರ ಮೋದಿಯವರಿಗೆ ಪರ್ಯಾಯ ನಾಯಕನೆಂಬ ರೀತಿಯಲ್ಲಿ ತಮ್ಮನ್ನು ರಾಷ್ಟ್ರೀಯ ಮಟ್ಟದಲ್ಲಿ ಬಿಂಬಿಸಿಕೊಳ್ಳಬೇಕು ಎಂಬ 'ಅಕಾಲಿಕ ಆಸೆ'ಯಿಂದಾಗಿ ಚಿಗುರಿಕೊಂಡ ಮಹತ್ವಾಕಾಂಕ್ಷೆ ಇದ್ದಿರಬೇಕು. ಹೀಗಾಗಿ 2014ರ ಲೋಕಸಭಾ ಚುನಾವಣೆಯಲ್ಲಿ ಸಾಕ್ಷಾತ್ ಮೋದಿಯವರ ಎದುರಿಗೇ ವಾರಾಣಸಿಯಲ್ಲಿ ಸ್ಪರ್ಧಿಸಿ ಸೆಡ್ಡು ಹೊಡೆದುಬಿಟ್ಟರು. ಅದರಲ್ಲಿ ಗೆಲುವು ಸಿಗಲಿಲ್ಲ, ಅದು ಬೇರೆಯ ಮಾತು.

ಹಾಗೆಂದ ಮಾತ್ರಕ್ಕೆ ವ್ಯಕ್ತಿಯೊಬ್ಬನಲ್ಲಿ ರಾಜಕೀಯ ಮಹತ್ವಾಕಾಂಕ್ಷೆ ಇರಬಾರದೇ? ಆತ ತಾನು ರಾಷ್ಟ್ರೀಯ ನಾಯಕನಾಗಬೇಕು ಎಂಬ ನಿಟ್ಟಿನಲ್ಲಿ ಕಸರತ್ತು ಮಾಡಬಾರದೇ? ಎಂಬ ಪ್ರಶ್ನೆಗಳು ಹಲವರಲ್ಲಿ ಮೂಡಬಹುದು. ರಾಜಕೀಯ ಮಹತ್ವಾಕಾಂಕ್ಷೆಯನ್ನು ಇಟ್ಟುಕೊಳ್ಳುವುದರಲ್ಲಿ ತಪ್ಪೇನಿಲ್ಲ; ಆದರೆ ಅದಕ್ಕೆ ಮೂಲಸೆಲೆಯಾಗಿರುವುದು 'ಜನಕಲ್ಯಾಣ'ದ ಆಶಯವೇ ಅಥವಾ 'ಸ್ವಾರ್ಥ ಸಾಧನೆ'ಯೇ? ಎಂಬ ಅಂಶವೂ ಇಲ್ಲಿ ಮುಖ್ಯವಾಗುತ್ತದೆ. ಕೇಜ್ರಿವಾಲರ ವಿಷಯದಲ್ಲಿ 'ಜನಕಲ್ಯಾಣ'ಕ್ಕಿಂತ ಹೆಚ್ಚಾಗಿ 'ಸ್ವಾರ್ಥ'ವೇ ಹೆಡೆಯಾಡಿಸುತ್ತಿತ್ತು ಎನಿಸುತ್ತದೆ. ಹೀಗಾಗಿ ಕಾಲಕ್ರಮೇಣ ಜನರು ಅವರಲ್ಲಿ ವಿಶ್ವಾಸವನ್ನು ಕಳೆದುಕೊಳ್ಳಲಾರಂಭಿಸಿದರು. ದೆಹಲಿಯ ಮದ್ಯ ಹಗರಣ, ಅದರಿಂದಾಗಿ ಜೈಲುಪಾಲಾಗಿದ್ದು ಮುಂತಾದ ಬೆಳವಣಿಗೆಗಳಿಂದಾಗಿ ಅವರ ವರ್ಚಸ್ಸು ಕೂಡ ಸಾಕಷ್ಟು ಮಟ್ಟಿಗೆ ಕುಸಿಯಿತು ಎನ್ನಬೇಕು. ಮುಂದೆ ಪಂಜಾಬ್‌ನಲ್ಲಿ ಕೂಡ ಆಮ್ ಆದ್ಮಿ ಪಕ್ಷದ ಸರಕಾರವು ಸ್ಥಾಪನೆಯಾಗುವಂತೆ ಆಯಿತಾದರೂ, ವೈಯಕ್ತಿಕ ನೆಲೆಗಟ್ಟಿನಲ್ಲಿ ಕೇಜ್ರಿವಾಲರಿಗಿದ್ದ ಚರಿಷ್ಮಾ ಈಗ ಸಾಕಷ್ಟು ಕುಸಿದಿದೆ ಎನ್ನಬೇಕಾಗುತ್ತದೆ.

ಇನ್ನು ಪಶ್ಚಿಮ ಬಂಗಾಳದ ವಿಷಯಕ್ಕೆ ಬರೋಣ. ಪ್ರಸ್ತುತ ಅಲ್ಲೀಗ ಮುಖ್ಯಮಂತ್ರಿಯಾಗಿ ದರ್ಬಾರು ನಡೆಸುತ್ತಿರುವ ತೃಣಮೂಲ ಕಾಂಗ್ರೆಸ್ ಪಕ್ಷದ ಅಧಿನಾಯಕಿ ಮಮತಾ ಬ್ಯಾನರ್ಜಿ ಕೂಡ ಒಂದು ಕಾಲಕ್ಕೆ ಜನರಿಗೆ ಭರವಸೆಯ ಆಶಾಕಿರಣವಾಗಿ ಗೋಚರಿಸಿದವರೇ. ಕೇಂದ್ರ ಸರಕಾರದಲ್ಲಿ ಸಚಿವೆಯಾಗಿ ರೈಲ್ವೆ, ಕಲ್ಲಿದ್ದಲು, ಗಣಿಗಾರಿಕೆ ಮುಂತಾದ ಮಹತ್ವದ ಖಾತೆಗಳನ್ನು ಆಕೆ ನಿರ್ವಹಿಸಿದವರೇ. ನೊಂದವರ ಮತ್ತು ಅಸಹಾಯಕರ ಕಣ್ಣೀರನ್ನು ಮಮತಾ ಬ್ಯಾನರ್ಜಿ ಒರೆಸಬಲ್ಲರು ಎಂಬ ಭಾವನೆ ಜನಮಾನಸದಲ್ಲಿ ಗಟ್ಟಿಯಾಗುತ್ತಿರುವಾಗಲೇ, ಈಕೆ ಜನಕಲ್ಯಾಣದ ಸದಾಶಯಕ್ಕೆ ತಿಲಾಂಜಲಿಯಿತ್ತು, ಸ್ವಾರ್ಥಸಾಧನೆಗೆ ಮುಂದಾದರು. ಜತೆಗೆ, ಹಠಮಾರಿತನ, ರಾಜಕೀಯ ದ್ವೇಷಸಾಧನೆ ಮುಂತಾದ ಅನಪೇಕ್ಷಿತ ಗುಣಗಳೂ ಸೇರಿಕೊಂಡು ತಮಿಳುನಾಡಿನ ಜೆ.ಜಯಲಲಿತಾರ ಮತ್ತೊಂದು ಅವತಾರವೇ ಆಗಿಬಿಟ್ಟರು ಮಮತಾ. ಒಬ್ಬ ರಾಷ್ಟ್ರನಾಯಕಿಯಾಗಿ ಮಿಂಚಬಹುದಾಗಿದ್ದ ಮಮತಾ, ಹೀಗೆ ಸ್ವಯಂಕೃತಾಪರಾಧದಿಂದಾಗಿ ಈಗ ಪಶ್ಚಿಮ ಬಂಗಾಳಕ್ಕೆ ಮಾತ್ರವೇ ಸೀಮಿತಗೊಳ್ಳುವಂತಾಗಿದೆ. ರಾಷ್ಟ್ರ ರಾಜಕೀಯದಲ್ಲಿ ಪ್ರಭಾವ ಬೀರಬಲ್ಲವರು ಅಥವಾ ಪರಿಗಣಿಸಬೇಕಾದವರು ಎಂಬ ಸಂದರ್ಭ ಬಂದಾಗಲೆಲ್ಲಾ ಮಮತಾ ಬ್ಯಾನರ್ಜಿ ಅವರ ಹೆಸರು ಪ್ರಸ್ತಾಪವಾಗುವುದು ಹೌದಾದರೂ, ಹಿಂದೊಂದು ಕಾಲಕ್ಕೆ ಅವರಿಗಿದ್ದ ವರ್ಚಸ್ಸಿನ ಮಟ್ಟದಲ್ಲಿ ಈ ಪ್ರಸ್ತಾಪದ ಬೇರು ಗಟ್ಟಿಯಾಗಿರುವುದಿಲ್ಲ ಎಂಬುದು ಗಮನಿಸಬೇಕಾದ ಅಂಶ.

ಆಂಧ್ರಪ್ರದೇಶದ ಮುಖ್ಯಮಂತ್ರಿ ಹಾಗೂ 'ತೆಲುಗುದೇಶಂ' ಪಕ್ಷದ ಮುಖ್ಯಸ್ಥ ಚಂದ್ರಬಾಬು ನಾಯ್ಡು, ಬಿಹಾರದ ಮುಖ್ಯಮಂತ್ರಿ ಹಾಗೂ ಸಂಯುಕ್ತ ಜನತಾದಳದ ಮುಖ್ಯಸ್ಥ ನಿತೀಶ್ ಕುಮಾರ್ ಕೂಡ ಈ ನೆಲೆಯಲ್ಲಿ ಉಲ್ಲೇಖಿಸಬಹುದಾದ ಮತ್ತೆರಡು ಹೆಸರುಗಳು. ಈ ಪೈಕಿ ನಾಯ್ಡು ಅವರು ಬಿಜೆಪಿ ನೇತೃತ್ವದ ಎನ್‌ಡಿಎ ಒಕ್ಕೂಟದೊಂದಿಗೆ ಕೆಲ ಕಾಲ ಕೈಜೋಡಿಸಿದ, ತರುವಾಯದಲ್ಲಿ ಮುನಿಸಿಕೊಂಡು ಹೊರಬಂದ ಹಾಗೂ ಕೆಲ ಹಗರಣಗಳಲ್ಲಿ ಹೆಸರು ಕೆಡಿಸಿಕೊಂಡ ಕಾರಣಗಳಿಗೆ ರಾಜಕೀಯ ವಿಶ್ವಾಸಾರ್ಹತೆಗೂ, ಜನರ ನಂಬಿಕೆಗೂ ಧಕ್ಕೆ ತಂದುಕೊಂಡರು. ನಿತೀಶ್ ಕುಮಾರ್ ಕೂಡ ಹೀಗೆ ರಾಜಕೀಯ ಮೈತ್ರಿಕೂಟಗಳನ್ನು ಮತ್ತೆ ಮತ್ತೆ ಬದಲಿಸುವ ಕಾರಣಕ್ಕೇ ಜನರಿಂದ 'ಪಲ್ಟೂರಾಮ್' ಎಂಬ ಗೇಲಿಗೆ ಒಳಗಾಗಬೇಕಾಯಿತು. ಜನಕಲ್ಯಾಣದ ಸದಾಶಯಕ್ಕಿಂತ ಹೆಚ್ಚಾಗಿ ಅಧಿಕಾರಕ್ಕೆ ಅಂಟಿಕೊಂಡೇ ಇರಬೇಕೆಂಬ ಸ್ವಾರ್ಥವೇ ಅವರಲ್ಲಿ ಹೆಚ್ಚಾದ ಪರಿಣಾಮವಾಗಿ, ಕೆಲ ವರ್ಷದ ಹಿಂದೆ ಲಾಲು ಪ್ರಸಾದ್ ಯಾದವ್ ಅವರ ಆರ್‌ಜೆಡಿ ಪಕ್ಷದ ಜತೆಗೆ ಕೈಜೋಡಿಸಿದ್ದ ನಿತೀಶರು ಬದಲಾದ ರಾಜಕೀಯ ಸಮೀಕರಣಕ್ಕೆ ತಕ್ಕಂತೆ ಪಾಳಯವನ್ನು ಬದಲಿಸಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದೊಂದಿಗೆ ಕೈಕುಲುಕಿ ಮುಖ್ಯಮಂತ್ರಿಯಾಗಿ ದರ್ಬಾರು ನಡೆಸುತ್ತಿದ್ದಾರೆ. ಇದೇ ಸಖ್ಯದಲ್ಲಿ ಮುಂದಿನ ಅವಧಿಗೂ ಸಿಂಹಾಸನವನ್ನು ಉಳಿಸಿಕೊಳ್ಳುವ ತವಕದಲ್ಲಿರುವ ನಿತೀಶರು, ತಮ್ಮ ಈ ವಿಲಕ್ಷಣ ನಡೆಯಿಂದಾಗಿಯೇ ಜನರ ವಿಶ್ವಾಸವನ್ನೂ ನಿಧಾನಕ್ಕೆ ಕಳೆದುಕೊಳ್ಳುತ್ತಿದ್ದಾರೆ ಹಾಗೂ ರಾಷ್ಟ್ರನಾಯಕನಾಗುವ ಅವಕಾಶವನ್ನೂ 'ಮಿಸ್' ಮಾಡಿಕೊಳ್ಳುತ್ತಿದ್ದಾರೆ ಎನಿಸುತ್ತದೆ. ಹೇಳುತ್ತ ಹೋದರೆ ರಾಷ್ಟ್ರದ ಉದ್ದಗಲಕ್ಕೂ ಇಂಥ ಉದಾಹರಣೆಗಳು ಸಾಕಷ್ಟು ಸಿಗುತ್ತವೆ. ಆದರೆ ಒಂದಂತೂ ಸತ್ಯ. 'ಜನಕಲ್ಯಾಣ'ದ ಆಶಯ ಹೊತ್ತಿರುವ ತಥಾಕಥಿತ ನಾಯಕನೊಬ್ಬ, ಆ ಆಶಯವನ್ನು ಬದಿಗೆ ಸರಿಸಿ 'ಸ್ವಾರ್ಥಸಾಧನೆ'ಗೆ ಮುಂದಾದಾಗಲೆಲ್ಲ, ಅಂಥ ಕಸರತ್ತಿನ ಫಲವಾಗಿ ಒಂದೊಮ್ಮೆ ಅಧಿಕಾರವನ್ನು ದಕ್ಕಿಸಿಕೊಂಡಿದ್ದರೂ, ಜನರ ದೃಷ್ಟಿಯಲ್ಲಿ 'ಸ್ವಾರ್ಥಿ' ಎಂಬ ಹಣೆಪಟ್ಟಿಯನ್ನೇ ಲಗತ್ತಿಸಿಕೊಳ್ಳಬೇಕಾಗುತ್ತದೆ. ಆದರೆ ಶತಾಯಗತಾಯ ರಾಜಕೀಯ ಸಿಂಹಾಸನದಲ್ಲಿ ಒಮ್ಮೆ ಮೆರೆಯಬೇಕು ಎಂಬ ಹಪಾಹಪಿ ಇರುವವರು ಇಂಥ ಸೂಕ್ಷ್ಮವನ್ನೆಲ್ಲಾ ಅರ್ಥಮಾಡಿಕೊಳ್ಳುವುದಿಲ್ಲ. ಅದೇ ನಮ್ಮ ದೇಶದ ಒಂದಿಷ್ಟು ನಾಯಕರ ದುರಂತ..!!

(ಲೇಖಕರು ಪತ್ರಕರ್ತರು ಹಾಗೂ ಸಾಮಾಜಿಕ ಚಿಂತಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:193

ಸಮಾಚಾರ ಸಣ್ಣದಲ್ಲ

ಪಾಕ್‌ನಲ್ಲಿ ಭಾರೀ ಮಳೆ: ವಿಪರೀತ ಸಾವು ನೋವು

ಪೇಶಾವರ: ಪಾಕಿಸ್ತಾನದಾದ್ಯಂತ ಸುರಿಯುತ್ತಿರುವ ಧಾರಾಕಾರ ಮಳೆಗೆ ಜೂನ್ 26ರಿಂದ 126 ಮಕ್ಕಳು ಸೇರಿದಂತೆ ಕನಿಷ್ಠ 266 ಜನರು ಸಾವಿಗೀಡಾಗಿದ್ದು, 628 ಜನರು ಗಾಯಗೊಂಡಿದ್ದಾರೆ ಎಂದು ಅಲ್ಲಿನ ವಿಪತ್ತು ನಿರ್ವಹಣಾ ಸಂಸ್ಥೆ ಶುಕ್ರವಾರ ತಿಳಿಸಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎನ್‌ಡಿಎಂಎ) ತನ್ನ ಇತ್ತೀಚಿನ ವರದಿಯಲ್ಲಿ, ಕಳೆದ 24 ಗಂಟೆಗಳಲ್ಲಿ ಮಳೆ ಸಂಬಂಧಿತ ಘಟನೆಗಳಲ್ಲಿ 14 ಜನರು ಸಾವಿಗೀಡಾಗಿದ್ದಾರೆ ಮತ್ತು 17 ಜನರು ಗಾಯಗೊಂಡಿದ್ದಾರೆ ಎಂದು ತಿಳಿಸಿದೆ. ಒಟ್ಟು ಮೃತಪಟ್ಟವರ ಪೈಕಿ 94 ಪುರುಷರು, 46 ಮಹಿಳೆಯರು ಮತ್ತು 126 ಮಕ್ಕಳು ಸೇರಿದ್ದಾರೆ. ಪಂಜಾಬ್‌ನಲ್ಲಿ ಅತಿ ಹೆಚ್ಚು 144 ಸಾವು-ನೋವುಗಳು ಸಂಭವಿಸಿವೆ, ನಂತರ ಖೈಬರ್ ಪಖ್ತುಂಖ್ವಾದಲ್ಲಿ 63, ಸಿಂಧ್‌ನಲ್ಲಿ 25, ಬಲೂಚಿಸ್ತಾನದಲ್ಲಿ 16, ಪಾಕ್ ಆಕ್ರಮಿತ ಕಾಶ್ಮೀರದಲ್ಲಿ 10 ಮತ್ತು ಇಸ್ಲಾಮಾಬಾದ್‌ನಲ್ಲಿ ಎಂಟು ಸಾವು-ನೋವುಗಳು ಸಂಭವಿಸಿವೆ.

ಡಿಕೆಶಿ ಹೇಳಿಕೆ ಕಾಂಗ್ರೆಸ್ ಸಂಸ್ಕೃತಿ: ಸಿಎಂ ಸಾವಂತ್

ಪಣಜಿ: ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದಾರೆಂದು ತಮ್ಮ ಬಗ್ಗೆ ಡಿ.ಕೆ ಶಿವಕುಮಾರ್ ನೀಡಿರುವ ಹೇಳಿಕೆ ಕುರಿತು ತೀವ್ರವಾಗಿ ಕಿಡಿಕಾರಿರುವ ಗೋವಾ

ಮುಖ್ಯಮಂತ್ರಿ ಪ್ರಮೋದ್ ಸಾವಂತ್, ಆ ಹೇಳಿಕೆಯು ಕಾಂಗ್ರೆಸ್ ಸಂಸ್ಕೃತಿಯ ಪ್ರತಿಬಿಂಬಿಸುತ್ತದೆ ಎಂದು ಶುಕ್ರವಾರ ಹೇಳಿದ್ದಾರೆ. ಮಹದಾಯಿ ಯೋಜನೆ ಆರಂಭಿಸಲು ಕೇಂದ್ರ ಸರಕಾರ ಯಾವುದೇ ಕಾರಣಕ್ಕೂ ಅನುಮತಿ ನೀಡುವುದಿಲ್ಲ ಎಂದು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹೇಳಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಶಿವಕುಮಾರ್, ಕರ್ನಾಟಕಕ್ಕೆ ನೋಟಿಸ್ ನೀಡಲು ಗೋವಾದವರಿಗೆ ಹಕ್ಕಿಲ್ಲ. ಏನೇ ನೋಟಿಸ್ ನೀಡಿದರೂ ನಾವು ಯೋಜನೆ ಕಾಮಗಾರಿ ಆರಂಭಿಸುತ್ತೇವೆ. ಅವರು (ಸಾವಂತ್) ಮಾನಸಿಕ ಸ್ಥಿಮಿತ ಕಳೆದುಕೊಂಡು ಈ ರೀತಿ ಮಾತನಾಡಿದ್ದಾರೆ ಎಂದಿದ್ದರು. ಹೇಳಿಕೆಗೆ ಪ್ರತಿಕ್ರಿಯಿಸಿರುವ ಪ್ರಮೋದ್ ಸಾವಂತ್, ಡಿ.ಕೆ. ಶಿವಕುಮಾರ್ ಅವರ ಹೇಳಿಕೆ ಕಾಂಗ್ರೆಸ್ ಸಂಸ್ಕೃತಿಯನ್ನು ತೋರಿಸುತ್ತದೆ. ಯೋಜನೆ ವಿಚಾರದಲ್ಲಿ ಗೋವಾ ಸರಕಾರ ಗಂಭೀರವಾಗಿದ್ದು, ಕೇಂದ್ರದೊಂದಿಗೆ ಮಾತುಕತೆ ಮುಂದುವರೆಸುತ್ತದೆ ಎಂದು ಹೇಳಿದ್ದಾರೆ. ನಿರಾಸೆಗೊಂಡವರು ಮಾತ್ರ ಇಂತಹ ಮಾತುಗಳನ್ನಾಡಲು ಸಾಧ್ಯ. ಎಷ್ಟು ಕೆಳಮಟ್ಟಕ್ಕೆ ಇಳಿಯಬಹುದು ಎಂಬುದರ ಕುರಿತು ಕಾಂಗ್ರೆಸ್ ನಾಯಕರು ತಮ್ಮತಮ್ಮಲ್ಲೇ ಪೈಪೋಟಿ ನಡೆಸುತ್ತಿದ್ದಾರೆಂದು ಅವರು ತಿಳಿಸಿದರು. ಮಹದಾಯಿ ನೀರಿನ ತಿರುವು ಕರ್ನಾಟಕ ಮತ್ತು ಗೋವಾ ನಡುವೆ ಬಹಳ ಹಿಂದಿನಿಂದಲೂ ವಿವಾದದ ವಿಷಯವಾಗಿದೆ.

ದ್ವೀಪರಾಷ್ಟ್ರದಲ್ಲಿ ಮೊಳಗಿದ ವಂದೇ ಮಾತರಂ | ವೈಮನಸ್ಸು ಮರೆಸಿದ ಅಧ್ಯಕ್ಷ ಮುಯಿಝು ನಡೆ

ಮಾಲ್ಡೀವ್ಸ್‌ನಲ್ಲಿ ಮೋದಿಗೆ ಅದ್ದೂರಿ ಸ್ವಾಗತ

ಮಾಲೆ: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಶುಕ್ರವಾರ ಮಾಲ್ಡೀವ್ಸ್‌ನ ರಾಜಧಾನಿ ಮಾಲೆಗೆ ಎರಡು ದಿನಗಳ ಅಧಿಕೃತ ಭೇಟಿಗಾಗಿ ಆಗಮಿಸಿದರು. ವಿಮಾನ ನಿಲ್ದಾಣದಲ್ಲಿ ಆಗಮಿಸಿದ ವೇಳೆ ಅಧ್ಯಕ್ಷ ಮೊಹಮ್ಮದ್ ಮುಯಿಝು ಅವರು ಮೋದಿಯವರನ್ನು ಆತ್ಮೀಯವಾಗಿ ಸ್ವಾಗತಿಸಿದರು. ವಿದೇಶಾಂಗ ಸಚಿವ, ರಕ್ಷಣಾ ಸಚಿವ, ಹಣಕಾಸು ಸಚಿವ ಮತ್ತು ಗೃಹ ಭದ್ರತಾ ಸಚಿವರೂ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮಾಲೆಗೆ ಮೋದಿ ಪ್ರವೇಶಿಸುತ್ತಿದ್ದಂತೆ ವಂದೇ ಮಾತರಂ ಮತ್ತು ಭಾರತ್ ಮಾತಾ ಕೀ ಜೈ ಘೋಷಣೆಗಳು ಮೊಳಗಿದವು. ಭಾರತೀಯ ವಲಸಿಗರು ಉತ್ಸಾಹದಿಂದ ಪ್ರಧಾನಿಯವರ ಆಗಮನಕ್ಕಾಗಿ ಕಾಯುತ್ತಿದ್ದರು. ಮಾಲ್ಡೀವ್ಸ್‌ನ ಕೆಲವು ನಾಯಕರು ಮತ್ತು ಅಧ್ಯಕ್ಷ ಮುಯಿಝು ಅವರ ಚೀನಾ ಪರ ನೀತಿಗಳಿಂದಾಗಿ ಇಂಡಿಯಾ ಔಟ್ ಅಭಿಯಾನ ನಡೆದಿತ್ತು, ಇದರಿಂದ ಉಂಟಾದ ದ್ವಿಪಕ್ಷೀಯ ಸಂಬಂಧಗಳ ಬಿರುಕಿನ ಬಳಿಕ ಮೋದಿಯವರ ಈ ಭೇಟಿ ಮಹತ್ವದ್ದಾಗಿದೆ.

ಮಾಲೆಯ ರಸ್ತೆಗಳು ಭಾರತದ ಧ್ವಜಗಳು, ರೋಮಾಂಚಕ ಬ್ಯಾನರ್‌ಗಳು ಮತ್ತು ಮೋದಿಯವರ ಭಾವಚಿತ್ರಗಳಿರುವ ದೊಡ್ಡ ಪೋಸ್ಟರ್‌ಗಳಿಂದ ಹಬ್ಬದ ಸ್ವರೂಪ ಪಡೆದಿತ್ತು 'ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಗೆ ಆತ್ಮೀಯ ಸ್ವಾಗತ' ಎಂಬ ಸಂದೇಶದ ಬ್ಯಾನರ್‌ಗಳು ನಗರದಾದ್ಯಂತ ಕಾಣಿಸಿಕೊಂಡಿವೆ. ಹಲವು ಮಕ್ಕಳು

ಮಾಲ್ಡೀವ್ಸ್‌ನಲ್ಲಿ ಮೋದಿಗೆ ದೊರೆತ ಸಾಂಪ್ರದಾಯಿಕ ಸ್ವಾಗತ.

ಮಾಲ್ಡೀವ್ಸ್‌ಗೆ ಬಂದಿಳಿದ ಮೋದಿಯನ್ನು ಅಧ್ಯಕ್ಷ ಮೊಹಮ್ಮದ್ ಮುಯಿಝು ಸ್ವಾಗತಿಸಿದರು.

ಮೋದಿಯವರ ಚಿತ್ರಗಳು ಮತ್ತು ವರ್ಣಚಿತ್ರಗಳೊಂದಿಗೆ ಸ್ವಾಗತಕ್ಕಾಗಿ ಕಾದಿದ್ದರು.

ಮಾಲೆಗೆ ಆಗಮಿಸಿದ ಬಳಿಕ, ಪ್ರಧಾನಿ ಮೋದಿ ಎಕ್ಸ್‌ನಲ್ಲಿ ತಮ್ಮ ಭೇಟಿಯ ಚಿತ್ರಗಳನ್ನು ಹಂಚಿಕೊಂಡು, 'ಮಾಲೆಗೆ ಆಗಮಿಸಿದ್ದೇನೆ. ಅಧ್ಯಕ್ಷ ಮುಯಿಝು ವಿಮಾನ ನಿಲ್ದಾಣಕ್ಕೆ ಬಂದು ಸ್ವಾಗತಿಸಿದ ರೀತಿಗೆ ಆಕರ್ಷಿತನಾಗಿದ್ದೇನೆ. ಭಾರತ-ಮಾಲ್ಡೀವ್ಸ್ ಸ್ನೇಹವು ಮುಂಬರುವ ದಿನಗಳಲ್ಲಿ ಹೊಸ ಎತ್ತರವನ್ನು ತಲುಪಲಿದೆ ಎಂಬ ವಿಶ್ವಾಸವಿದೆ' ಎಂದು ಬರೆದಿದ್ದಾರೆ. ಈ ಭೇಟಿಯು ಭಾರತ-ಮಾಲ್ಡೀವ್ಸ್ ಮಧ್ಯೆ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವ ನಿರೀಕ್ಷೆಯನ್ನು ಹುಟ್ಟುಹಾಕಿದೆ, ವಿಶೇಷವಾಗಿ ರಾಜಕೀಯ ಒತ್ತಡದ ನಂತರ ಎರಡೂ ದೇಶಗಳ ನಡುವಿನ ಸಹಕಾರವನ್ನು ಮರುಸ್ಥಾಪಿಸುವ ಗುರಿಯನ್ನು ಹೊಂದಿದೆ.

ಹೊಸ ಬಾಂಧವ್ಯದ ನಿರೀಕ್ಷೆ

ಇವತ್ತು ನಡೆಯಲಿರುವ ಮಾಲ್ದೀವ್ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿರುವ ಪ್ರಧಾನಿ ಮೋದಿ, ಗೌರವ ವಂದನೆಯನ್ನು ಸ್ವೀಕರಿಸಲಿದ್ದಾರೆ, ಅಲ್ಲದೆ ಮಾಲ್ದೀವ್‌ನಲ್ಲಿ ಭಾರತದ ಸಹಾಯದೊಂದಿಗೆ ಹಲವಾರು ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ. ಉಭಯ ನಾಯಕರು ದ್ವಿಪಕ್ಷೀಯ ಮಾತುಕತೆಯಲ್ಲಿ ಭಾಗಿಯಾಗಲಿದ್ದಾರೆ, ಆ ಮೂಲಕ ಭಾರತ ಹಾಗೂ ಮಾಲ್ಡೀವ್ಸ್ ನಡುವಣ ದ್ವಿಪಕ್ಷೀಯ ಬಾಂಧವ್ಯಕ್ಕೆ ಹೊಸ ತಿರುವು ಪಡೆದುಕೊಳ್ಳುವ ನಿರೀಕ್ಷೆಯಿದೆ. 'ಸಮಗ್ರ ಆರ್ಥಿಕ, ಸಾಗರ ಭದ್ರತೆಯ ದೂರದೃಷ್ಟಿ ಮತ್ತು ಹಿಂದೂ ಮಹಾಸಾಗರ ಪ್ರದೇಶದಲ್ಲಿ ಶಾಂತಿ, ಸಮೃದ್ಧಿ, ಸ್ಥಿರತೆಗಾಗಿ ನಮ್ಮ ಸಹಕಾರವನ್ನು ಬಲಪಡಿಸಲು ಮೊಹಮ್ಮದ್ ಮುಯಿಜು ಮತ್ತು ಇತರೆ ನಾಯಕರೊಂದಿಗಿನ ಮಾತುಕತೆಯನ್ನು ಎದುರು ನೋಡುತ್ತಿದ್ದೇನೆ' ಎಂದು ಮೋದಿ ಹೇಳಿದ್ದಾರೆ.

ಅಗ್ನಿವೀರ್ ಸೈನಿಕ ಹುತಾತ್ಮ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯ ನಿಯಂತ್ರಣ ರೇಖೆಯಲ್ಲಿ ಶುಕ್ರವಾರ

ಸಂಭವಿಸಿದ ನೆಲಬಾಂಬ್ ಸ್ಫೋಟಗೊಂಡಿದ್ದು, ಓರ್ವ ಸೈನಿಕ ಹುತಾತ್ಮರಾಗಿದ್ದಾರೆ, ಘಟನೆಯಲ್ಲಿ ಇಬ್ಬರಿಗೆ ಗಂಭೀರ ಗಾಯಗಳಾಗಿವೆ. ಕೃಷ್ಣ ಘಾಟಿಯ ಸಾಮಾನ್ಯ ಪ್ರದೇಶದಲ್ಲಿ ಏರಿಯಾ ಡಾಮಿನೇಷನ್ ಗಸ್ತು ತಿರುಗುತ್ತಿದ್ದಾಗ, ಒಂದು ಗಣಿ ಸ್ಫೋಟ ಸಂಭವಿಸಿದೆ. ಇದರಲ್ಲಿ ಒಬ್ಬ ಅಗ್ನಿವೀರ್ ಜವಾನ್ ಹುತಾತ್ಮರಾದರು. ಗಾಯಾಳುಗಳಲ್ಲಿ ಒಬ್ಬರು ಜೆಸಿಒ ಆಗಿದ್ದು, ಮಿಲಿಟರಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದ್ದು, ಅವರ ಸ್ಥಿತಿ ಗಂಭೀರವಾಗಿದೆ ಎಂದು ತಿಳಿದು ಬಂದಿದೆ.

ಕಮಲ್ ಪ್ರಮಾಣ ವಚನ

ದೆಹಲಿ: ನಟ, ರಾಜಕಾರಣಿ ಕಮಲ್ ಹಾಸನ್ ಶುಕ್ರ

ವಾರ ರಾಜ್ಯಸಭಾ ಸದಸ್ಯರಾಗಿ ತಮಿಳಿನಲ್ಲೇ ಪ್ರಮಾಣ ವಚನ ಸ್ವೀಕರಿಸುವ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ. ಪ್ರಮಾಣ ವಚನ ಸ್ವೀಕಾರಕ್ಕೂ ಮುನ್ನ ಮಾತನಾಡಿದ ಅವರು, 'ಒಬ್ಬ ಭಾರತೀಯನಾಗಿ, ನಾನು ನನ್ನ ಕರ್ತವ್ಯವನ್ನು ಮಾಡುತ್ತೇನೆ' ಎಂದು ಹೇಳಿದರು. ಡಿಎಂಕೆ ನೇತೃತ್ವದ ಮೈತ್ರಿಕೂಟದ ಬೆಂಬಲದೊಂದಿಗೆ ಜೂನ್‌ನಲ್ಲಿ ಕಮಲ ಹಾಸನ್ ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾಗಿದ್ದರು. 2024ರ ಲೋಕಸಭಾ ಚುನಾವಣೆಗೆ ಮುನ್ನ ಅವರ ಪಕ್ಷವಾದ ಮಕ್ಕಳ್ ನೀಧಿ ಮಯ್ಯಮ್ (ಎಂಎನ್‌ಎಂ) ಡಿಎಂಕೆ ಬಣಕ್ಕೆ ಬೆಂಬಲ ನೀಡಿತ್ತು.

ಅಶ್ಲೀಲ ವಿಷಯ ಬಿತ್ತರಿಸುವ ಕಂಪನಿಗಳ ವಿರುದ್ಧ ಕೇಂದ್ರದ ಕ್ರಮ

ಸರಕಾರದಿಂದ 25 ಆ್ಯಪ್ ನಿಷೇಧ

ದೆಹಲಿ: ಅಶ್ಲೀಲ ಮತ್ತು ವಯಸ್ಕರ ಕಟೆಂಟ್‌ಗಳನ್ನು ಹೋಸ್ಟ್ ಮಾಡುತ್ತಿರುವ ಆರೋಪದ ಮೇಲೆ ಕೇಂದ್ರ ಸರಕಾರವು ಹಲವಾರು ಅಪ್ಲಿಕೇಶನ್‌ಗಳು ಮತ್ತು ವೆಬ್‌ಸೈಟ್‌ಗಳನ್ನು ನಿಷೇಧಿಸಿದೆ. ಅವುಗಳಲ್ಲಿ ಉಲ್ಲು, ಆಲ್ಟ್‌ಬಾಲಾಜಿ ಸೇರಿ 25 ಆ್ಯಪ್‌ಗಳು ಸೇರಿವೆ. ಗುರುತಿಸಲಾದ ಅಪ್ಲಿಕೇಶನ್‌ಗಳು ಮತ್ತು ವೆಬ್‌ಸೈಟ್‌ಗಳಲ್ಲಿ ಎಎಲ್‌ಟಿಟಿ, ಉಲ್ಲು, ಬಿಗ್ ಶಾಟ್ಸ್ ಅಪ್ಲಿಕೇಶನ್, ಡೆಸಿಫ್ಲಿಕ್ಸ್, ಬೂಮೆಕ್ಸ್, ನವರಸ ಲೈಟ್, ಗುಲಾಬ್ ಅಪ್ಲಿಕೇಶನ್, ಕಂಗನ್ ಅಪ್ಲಿಕೇಶನ್, ಬುಲ್ ಅಪ್ಲಿಕೇಶನ್, ಜಲ್ವಾ ಅಪ್ಲಿಕೇಶನ್, ವಾವ್ ಎಂಟರ್‌ಟೈನ್‌ಮೆಂಟ್, ಲುಕ್ ಎಂಟರ್‌ಟೈನ್‌ಮೆಂಟ್, ಹಿಟ್‌ಪ್ರೈಮ್, ಫೆನಿಯೊ, ಶೋಎಕ್ಸ್, ಸೋಲ್ ಟಾಕೀಸ್, ಅಡ್ಡಾ ಟಿವಿ, ಹಾಟ್‌ಎಕ್ಸ್ ವಿಐಪಿ, ಹಲ್ಚುಲ್ ಅಪ್ಲಿಕೇಶನ್, ಮೂಡ್‌ಎಕ್ಸ್, ನಿಯಾನ್‌ಎಕ್ಸ್ ವಿಐಪಿ, ಫ್ಯೂಗಿ, ಮೊಜ್‌ಫ್ಲಿಕ್ಸ್ ಮತ್ತು ಟ್ರೈಫ್ಲಿಕ್ಸ್ ಸೇರಿವೆ ಎಂದು ವರದಿ ತಿಳಿಸಿದೆ.

ಇವು ಮಾಹಿತಿ ತಂತ್ರಜ್ಞಾನ ಕಾಯ್ದೆ 2000ರ ಸೆಕ್ಷನ್ 67 ಮತ್ತು ಸೆಕ್ಷನ್ 67ಎ, ಭಾರತೀಯ ನ್ಯಾಯ ಸಂಹಿತಾ 2023ರ ಸೆಕ್ಷನ್ 294 ಮತ್ತು ಮಹಿಳೆಯರ ಅಸಭ್ಯ ಪ್ರಾತಿನಿಧ್ಯ (ನಿಷೇಧ) ಕಾಯ್ದೆ 1986ರ ಸೆಕ್ಷನ್ 4 ಸೇರಿದಂತೆ ವಿವಿಧ ಕಾನೂನುಗಳನ್ನು ಉಲ್ಲಂಘಿಸುತ್ತವೆ ಎಂದು ಸರಕಾರ ಹೇಳಿದೆ. ವರದಿಯು ಸರಕಾರಿ ಅಧಿಸೂಚನೆಯನ್ನು ಉಲ್ಲೇಖಿಸಿ, ಮಾಹಿತಿ ತಂತ್ರಜ್ಞಾನ ಕಾಯ್ದೆ, 2000 ಮತ್ತು ಮಾಹಿತಿ ತಂತ್ರಜ್ಞಾನ (ಮಧ್ಯವರ್ತಿ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮಾಧ್ಯಮ ನೀತಿ



ಸಂಹಿತೆ) ನಿಯಮಗಳು, 2021ರ ಅಡಿಯಲ್ಲಿ ಕಾನೂನು ಬಾಹಿರ ಮಾಹಿತಿಗೆ ಪ್ರವೇಶವನ್ನು ತೆಗೆದುಹಾಕಲು ಅಥವಾ ನಿಷ್ಕ್ರಿಯಗೊಳಿಸಲು ಮಧ್ಯವರ್ತಿಗಳು ಜವಾಬ್ದಾರರಾಗಿರುತ್ತಾರೆ ಎಂದು ಆದೇಶ ಹೊರಡಿಸಿದೆ. ಮೇ ತಿಂಗಳಿನಲ್ಲಿ, ಮಾಜಿ ಬಿಗ್‌ಬಾಸ್ ಸ್ಪರ್ಧಿ ಅಜಾಜ್ ಖಾನ್ ನಡೆಸಿಕೊಡುವ 'ಹೌಸ್ ಅರೆಸ್ಟ್' ವೆಬ್ ಸರಣಿಯ ಕ್ಲಿಪ್ ಅಶ್ಲೀಲ ವಿಷಯಕ್ಕಾಗಿ ವೈರಲ್ ಆದ ನಂತರ ಒಟಿಟಿ ಪ್ಲಾಟ್‌ಫಾರ್ಮ್ ಉಲ್ಲು ಟೀಕೆಗೆ ಗುರಿಯಾಗಿತ್ತು. ಇಂತಹ ಕಾರ್ಯಕ್ರಮಗಳು ಸಮಾಜದ ಮೇಲೆ ಪರಿಣಾಮ ಬೀರುತ್ತವೆ ಎಂದು ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿತ್ತು, ಇದೀಗ ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿರುವ ಕೇಂದ್ರ ಸರಕಾರ ಅವುಗಳ ನಿಷೇಧ ಮಾಡಿದೆ.

6 ತಿಂಗಳ ಕಾಲ ವಿಸ್ತರಣೆ ಬಗ್ಗೆ ರಾಜ್ಯಸಭೆಯಲ್ಲಿ ನಿರ್ಣಯ | ಸಂಸದೀಯ ಬುಲೆಟ್‌ನಲ್ಲಿ ಉಲ್ಲೇಖ

ಮಣಿಪುರ: ರಾಷ್ಟ್ರಪತಿ ಆಳ್ವಿಕೆ ವಿಸ್ತರಣೆ

ದೆಹಲಿ: ಕೇಂದ್ರ ಸರಕಾರವು ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತವನ್ನು ಆಗಸ್ಟ್ 13ರಿಂದ ಆರು ತಿಂಗಳಿಗೆ ವಿಸ್ತರಿಸಿದ್ದು, ಫೆಬ್ರವರಿ 13, 2026ರವರೆಗೆ ಮುಂದುವರಿಯಲಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ರಾಜ್ಯಸಭೆಯಲ್ಲಿ ಈ ಕುರಿತು ಶಾಸನಬದ್ಧ ನಿರ್ಣಯವನ್ನು ಮಂಡಿಸಿದರು. ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ರಾಜೀನಾಮೆಯ ಬಳಿಕ, ಫೆಬ್ರವರಿ 13ರಂದು ಕೇಂದ್ರವು ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತವನ್ನು ಜಾರಿಗೊಳಿಸಿತ್ತು. ಮಣಿಪುರಕ್ಕೆ ಸಂಬಂಧಿಸಿದಂತೆ ಫೆಬ್ರವರಿಯಿಂದ ರಾಷ್ಟ್ರಪತಿಗಳು ಸಂವಿಧಾನದ 356ನೇ ವಿಧಿಯ ಅಡಿಯಲ್ಲಿ ಹೊರಡಿಸಿದ ಘೋಷಣೆಯ ಜಾರಿಯನ್ನು ಆಗಸ್ಟ್ 13ರಿಂದ ಜಾರಿಗೆ ಬರುವಂತೆ ಇನ್ನೂ ಆರು ತಿಂಗಳ ಅವಧಿಗೆ ಈ ಸದನವು ಅನುಮೋದಿಸುತ್ತದೆ' ಎಂದು ರಾಜ್ಯಸಭೆಯ ಸಂಸದೀಯ ಬುಲೆಟಿನ್‌ನಲ್ಲಿ ಉಲ್ಲೇಖಿಸಲಾಗಿದೆ.

ಗಂಭೀರ ರಾಜಕೀಯ ಅಸ್ಥಿರತೆ ಮತ್ತು ಕಾನೂನು ಸುವ್ಯವಸ್ಥೆ ಕುರಿತ ಆತಂಕಗಳ ಮಧ್ಯೆ, ರಾಷ್ಟ್ರಪತಿ ದ್ರೌಪದಿ ಮುರ್ಮು, ರಾಜ್ಯಪಾಲರ ವರದಿಯ ಆಧಾರದ ಮೇಲೆ ಫೆಬ್ರವರಿಯಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಿದ್ದರು. ಸಂವಿಧಾನದ 356ನೇ ವಿಧಿಯಡಿ, ರಾಷ್ಟ್ರಪತಿಯು ರಾಜ್ಯದ ಆಡಳಿತ ಕಾರ್ಯಗಳನ್ನು ರಾಜ್ಯಪಾಲರ ಮೂಲಕ ನೇರವಾಗಿ ನಿಯಂತ್ರಿಸುತ್ತಾರೆ. ಮಣಿಪುರ ವಿಧಾನಸಭೆಯ ಅಧಿಕಾರವನ್ನು ಸಂಸತ್‌ಗೆ ವರ್ಗಾಯಿಸಲಾಗಿದ್ದು, ರಾಜ್ಯ ಸರಕಾರದ ಅಧಿಕಾರವನ್ನು ಅಮಾನತುಗೊಳಿಸಲಾಗಿದೆ.

ಈ ಆದೇಶದಂತೆ, ರಾಜ್ಯಪಾಲರ ಅಧಿಕಾರವನ್ನು ರಾಷ್ಟ್ರಪತಿ ವಹಿಸಿಕೊಂಡಿದ್ದು, ರಾಜ್ಯದ ಶಾಸಕಾಂಗದ ಅಧಿಕಾರವನ್ನು ಸಂಸತ್ ತೆಗೆದುಕೊಂಡಿದೆ. ರಾಜ್ಯದ ಎಲ್ಲಾ ಕಾನೂನುಗಳು ಮತ್ತು ನಿರ್ಧಾರಗಳನ್ನು ಈಗ ಕೇಂದ್ರದ ಅಧಿಕಾರದಡಿ ಸಂಸತ್ ಅಥವಾ ರಾಷ್ಟ್ರಪತಿಯಿಂದ ತೆಗೆದುಕೊಳ್ಳಲಾಗುತ್ತದೆ. ರಾಜಕೀಯ ಅಸ್ಥಿರತೆ ಮತ್ತು ಎರಡು ವರ್ಷಗಳಿಂದ ರಾಜ್ಯದಲ್ಲಿ ಮುಂದುವರಿದ ಹಿಂಸಾಚಾರದಿಂದಾಗಿ ಈ ಕ್ರಮ ಕೈಗೊಳ್ಳಲಾಗಿದೆ.

ಇತ್ತೀಚೆಗಿನ ಬೆಳವಣಿಗೆ

ಕಳೆದ ಮೇ 28ರಂದು ಭಾರತೀಯ ಜನತಾ ಪಕ್ಷದ 8 ಶಾಸಕರು, ರಾಷ್ಟ್ರೀಯ ಜನತಾ ಪಕ್ಷದ ಓರ್ವ ಶಾಸಕ, ಮತ್ತು ಒಬ್ಬ ಸ್ವತಂತ್ರ ಶಾಸಕ ಸೇರಿದಂತೆ ಸುಮಾರು 10 ಶಾಸಕರು, ಇಂಫಾಲ್‌ನ ರಾಜಭವನದಲ್ಲಿ ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರನ್ನು ಭೇಟಿಯಾಗಿ ಸರಕಾರ ರಚನೆಗೆ ಹಕ್ಕು ಮಂಡಿಸಿದ್ದರು. ತಿಂಗಳ ಬಳಿಕ 25 ಶಾಸಕರು ಇಂಫಾಲ್‌ನ ಶಾಸಕಿ ಥೊಂಗಂ ಬಿಶ್ವಜಿತ್ ಸಿಂಗ್ ನಿವಾಸದಲ್ಲಿ ಸಭೆ ಸೇರಿ ರಾಜ್ಯದಲ್ಲಿ ಸರಕಾರ ರಚನೆಗೆ ಒತ್ತಾಯಿಸಿದ್ದರು.

ಜೈಲ್‌ನಿಂದ ಪರಾರಿಯಾಗಿದ್ದ ಆರೋಪಿ ಸೆರೆ

ತಿರುವನಂತಪುರಂ: ಸೌಮ್ಯಾ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಆರೋಪಿ ಶುಕ್ರವಾರ ಕೇರಳದ ಕಣ್ಣೂರು ಕೇಂದ್ರ ಕಾರಾಗೃಹದಿಂದ ಪರಾರಿಯಾಗಿದ್ದು, ಕೆಲವೇ ಗಂಟೆಗಳಲ್ಲಿ ಪೊಲೀಸರು ಆತನನ್ನು ಬಂಧಿಸಿದ್ದಾರೆ. ಆರೋಪಿ ಗೋವಿಂದಚಾಮಿಯು ಶುಕ್ರವಾರ ಬೆಳಗ್ಗೆ ಕಣ್ಣೂರು ಸೆಂಟ್ರಲ್ ಜೈಲಿನಿಂದ ತಪ್ಪಿಸಿಕೊಂಡಿದ್ದ. ಸೆಲ್‌ನಲ್ಲಿ ನಿಯಮಿತ ತಪಾಸಣೆ ನಡೆಸುತ್ತಿದ್ದಾಗ ಗೋವಿಂದಚಾಮಿಯು ನಾಪತ್ತೆಯಾಗಿರುವುದು ಬೆಳಕಿಗೆ ಬಂದಿತ್ತು.

ಜೈಲು ಅಧಿಕಾರಿಗಳು ತಕ್ಷಣ ಜೈಲಿನ ಸುತ್ತಮುತ್ತ ಆತನಿಗಾಗಿ ಹುಡುಕಾಟ ನಡೆಸಿದ್ದರೂ, ಆತ ಎಲ್ಲಿಯೂ ಪತ್ತೆಯಾಗಿರಲಿಲ್ಲ. ಗೋವಿಂದಚಾಮಿಯು ಜೈಲಿನಿಂದ ತಪ್ಪಿಸಿಕೊಂಡು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ದೃಶ್ಯವು ಕೆಲವು ಅಂಗಡಿಗಳ ಸಿಸಿಟಿವಿ ಕ್ಯಾಮೆರಾ ಸೆರೆಯಾಗಿತ್ತು. ಬಳಿಕ ಹುಡುಕಾಟ ಚುರುಕುಗೊಳಿಸಿದ ಪೊಲೀಸರು, ಕಣ್ಣೂರು ನಗರ ವ್ಯಾಪ್ತಿಯ ತಲಾಪ್‌ನಲ್ಲಿರುವ ಪಾಳುಬಿದ್ದ ಕಟ್ಟಡದ ಬಳಿಯ ಬಾವಿಯೊಳಗೆ ಅಡಗಿಕೊಂಡಿದ್ದ ಆತನನ್ನು ಪೊಲೀಸರು ಬಂಧಿಸಿದ್ದಾರೆ.

ಸೂಲಿಬೆಲೆ ವಿರುದ್ಧದ ಪ್ರಕರಣ ಸುಪ್ರೀಂ ರದ್ದು

ದೆಹಲಿ: ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು 'ಅಯೋಗ್ಯ' ಎಂದು ಕರೆದ ಆರೋಪಕ್ಕೆ ಸಂಬಂಧಿಸಿದಂತೆ ಕರ್ನಾಟಕದ ವಾಗ್ಮಿ, ಚಿಂತಕ ಚಕ್ರವರ್ತಿ ಸೂಲಿಬೆಲೆ ವಿರುದ್ಧ ದಾಖಲಾಗಿದ್ದ

ಕ್ರಿಮಿನಲ್ ಪ್ರಕರಣವನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ. ಮಾನಹಾನಿ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಮತ್ತು ಎನ್. ಕೋಟಿಶ್ವರ್ ಸಿಂಗ್ ಅವರಿದ್ದ ಪೀಠ ಈ ತೀರ್ಪು ನೀಡಿದೆ. 2024ರ ಜನವರಿ 18ರಂದು ರಾಯಚೂರಿನ ಸಿರಿವಾರದಲ್ಲಿ ಯುವ ಬ್ರಿಗೇಡ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಷಣ ಮಾಡಿದ್ದ ಸೂಲಿಬೆಲೆ, ಮಲ್ಲಿಕಾರ್ಜುನ ಖರ್ಗೆ ಅವರನ್ನು ಅಯೋಗ್ಯ ಎಂದು ನಿಂದಿಸಿದ್ದಲ್ಲದೇ, ಆಧಾರರಹಿತ ಸುಳ್ಳು ಭಾಷಣ ಮಾಡಿದ್ದಾರೆ ಎಂದು ಕಲಬುರ್ಗಿ ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಜಗದೇವ್ ಗುತ್ತೇದಾರ್ ಕಾಳಗಿ ಅವರು ಕಲಬುರ್ಗಿಯ ಬ್ರಹ್ಮಾಪುರ ಠಾಣೆಯಲ್ಲಿ ದೂರು ನೀಡಿದ್ದರು. ಈ ದೂರಿನ ಹಿನ್ನೆಲೆಯಲ್ಲಿ ಸೂಲಿಬೆಲೆ ವಿರುದ್ಧ ಐಪಿಸಿ ಸೆಕ್ಷನ್‌ಗಳಾದ 153ಎ, 153ಬಿ, 505(2) ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯಿದೆ ಸೆಕ್ಷನ್ 3(2) ಅಡಿ ಪ್ರಕರಣ ದಾಖಲಿಸಲಾಗಿತ್ತು. ಇದನ್ನು ಸೂಲಿಬೆಲೆ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಅಕ್ಟೋಬರ್ 2024ರಲ್ಲಿ ಎಸ್‌ಸಿ/ಎಸ್‌ಟಿ ಕಾಯಿದೆಯಡಿಯ ಆರೋಪಗಳನ್ನು ಹೈಕೋರ್ಟ್ ರದ್ದುಗೊಳಿಸಿತ್ತು.

ಕರ್ನಾಟಕ ಸರ್ಕಾರ
ಮಂಡ್ಯ ಜಿಲ್ಲಾ ಪಂಚಾಯತ್ ಕಾರ್ಯಾಲಯ.
ಸುರ್ವಣಸೌಧ, ಮಂಡ್ಯ-571401, ದೂ:08232-229624
e-mail:nrlmmandya@gmail.com
ಜಿಪಂಮಂ/ಪಿಡಿ/ಸಂಜೀವಿನಿ/HR ಸಿಬ್ಬಂದಿ/ಸಿಆರ್ :63/2024-25
ದಿ:22-07-2025

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ - (ದ್ವಿ-ಲಕೋಟೆ ಪದ್ಧತಿ)

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯರವರಿಂದ 2025-26ನೇ ಸಾಲಿನಲ್ಲಿ ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್. ಸಂಸ್ಥೆಯ ಜಿಲ್ಲಾ ಮತ್ತು ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕಗಳಿಗೆ ಅವಶ್ಯವಿರುವ ಮಾನವ ಸಂಪನ್ಮೂಲವನ್ನು ಒದಗಿಸುವ ಸಂಸ್ಥೆಯನ್ನು ಆಯ್ಕೆ ಮಾಡಲು ಅರ್ಹ ಅಧಿಕೃತ ಮಾನವ ಸಂಪನ್ಮೂಲ ಸಂಸ್ಥೆ/ಕಂಪನಿ/ಏಜೆನ್ಸಿಗಳಿಂದ 'ದ್ವಿಲಕೋಟಿ ಪದ್ಧತಿ' ಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ಅಧಿನಿಯಮ 2000ರ ಅನುಸಾರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https:/kppp.karnataka.gov.in ಮೂಲಕ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದು. ಕರ್ನಾಟಕ ಸರ್ಕಾರದ ಪ್ರಕಟಣೆ ಸಂಖ್ಯೆ: ಪಿ.ಡಬ್ಲ್ಯೂ.ಡಿ.154/ಎಫ್.ಸಿ/111/2000 ದಿನಾಂಕ: 24-10-2000ರಂತೆ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮಗಳ ಪ್ರಕಾರ ಹಾಗೂ ಮಾನ್ಯ ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆ.ಎಸ್ ಆರ್. ಎಲ್. ಪಿ.ಎಸ್ ಬೆಂಗಳೂರು ರವರ ಪತ್ರ ಸಂ: ಕೆ.ಎಸ್.ಆರ್.ಎಲ್.ಪಿ.ಎಸ್/ಪೊ/03/2020-21/22 ದಿನಾಂಕ: 01.10.2020 ರಲ್ಲಿನ ಜಿಲ್ಲೆಗಳಲ್ಲಿ ಮಾನವ ಸಂಪನ್ಮೂಲ ಒದಗಿಸುವ ಸಂಸ್ಥೆಯನ್ನು ಅನುಬಂಧ-2 ರ ಮಾದರಿ ಟೆಂಡರ್ ಡಾಕ್ಯುಮೆಂಟ್ ನಮೂನೆ ಪ್ರಕಾರ ಆಯ್ಕೆ ಮಾಡುವಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: FD 4 PCL 2008, ಬೆಂಗಳೂರು, ದಿನಾಂಕ: 14.10.2008ರ ರೀತ್ಯಾ ಹಾಗೂ ಇತ್ತೀಚಿನ ಸರ್ಕಾರದ ತಿದ್ದುಪಡಿ ಆದೇಶಗಳಿಗೆ ಒಳಪಟ್ಟು ಕೆಳಕಂಡಂತೆ ನಿಗಧಿಪಡಿಸಿರುವ ದಿನಾಂಕದಂದು ಟೆಂಡರ್‌ಗಳನ್ನು ಸ್ವೀಕರಿಸಲಾಗುವುದು.
ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ:- ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿದ ದಿನಾಂಕ: 25.07.2025 ರಿಂದ 06.08.2025 ಸಂಜೆ 5.30 ಗಂಟೆವರೆಗೆ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:08.08.2025 ರಂದು ಬೆಳಿಗ್ಗೆ 11.00 ಗಂಟೆಗೆ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:11.08.2025 ರಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ನಂತರದ ಕಛೇರಿ ಕೆಲಸದ ದಿನಗಳಲ್ಲಿ). ಟೆಂಡರಿಗೆ ಇಡಲಾದ (Approximate) ಮೊತ್ತ - ರೂ. 1,18,70,904/- ಇ.ಎಂ.ಡಿ ಮೊತ್ತ : ರೂ.2,37,418/-.
ಸಾಮಾನ್ಯ ಷರತ್ತುಗಳು, ನಿಬಂಧನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ https://kppp.karnataka.gov.in, KPP Portal ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಸಹಿ/-ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ಮಂಡ್ಯ,

ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/317/2025-26

ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 126, ನವನಗರ, ಬಾಗಲಕೋಟೆ
ದೂರವಾಣಿ : 08354-235042, ಇ-ಮೇಲ್: bgkeezpe@yahoo.com
ಸಂಖ್ಯೆ : ಕಾ.ನಿ.ಇಂ./ಪಂ.ರಾ.ಇಂ.ವಿ./ಬಿಜಿಕೆ/ಪಿಬಿ-1/ಟೆಂಡರ್/2025-26/1560
ದಿನಾಂಕ : 23-07-2025

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ದ್ವಿ-ಲಕೋಟೆ - 3ನೇ ಕರೆ) ಕೆ.ಡಬ್ಲ್ಯೂ. 4 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ 2023-24 ನೇ ಸಾಲಿನ **ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮ ಲೆಕ್ಕ ಶೀರ್ಷಿಕೆ : 5054 ಯೋಜನೆ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆ ಹುನಗುಂದ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ರಸ್ತೆ ಕಾಮಗಾರಿಗಳ ರೂ. 12.00 ಕೋಟಿ ಯೋಜನೆಯಡಿ ಅನುದಾನದ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆಯ ಹುನಗುಂದ ಉಪವಿಭಾಗ ವ್ಯಾಪ್ತಿಯ ಈ ಕೆಳಗಿನ ಕಾಮಗಾರಿಗೆ** ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ. - 4 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999 - 2000 ರ ಪ್ರಕಾರ ಆ್ಯಕ್ಟ್ 2000 ರ ನಿಯಮದಂತೆ ದ್ವಿ-ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ಗುತ್ತಿಗೆ ಕಾಮಗಾರಿಗಳ ಇಂಡೆಂಟ್ ನಂ. : RDPR/2024-25/RD/WORK_INDENT13331/CALL-3, RDPR/2024-25/RD/WORK_INDENT 13363/CALL-3 ಇದ್ದು, ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ (ರೂ. 170.00 ರಿಂದ 180.00 ಲಕ್ಷಗಳ ಮಿತಿಗೊಳಪಟ್ಟು), ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಎಲ್ಲ ವಿವರಗಳು ಇ-ಪೋರ್ಟಲ್‌ನಲ್ಲಿ ಇದ್ದಂತೆ.

1) ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್-ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 31-07-2025 ರ ಸಂಜೆ 5.30 ಗಂಟೆವರೆಗೆ. 2) ಪ್ರೀ-ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ : 28-07-2025 ರ ಬೆಳಿಗ್ಗೆ 11.00 ಗಂಟೆಯ ನಂತರ. 3) ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : 02-08-2025 ರ ಬೆಳಿಗ್ಗೆ 11.00 ಗಂಟೆಯ ನಂತರ.

ಸೂಚನೆ : ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ **ವೆಬ್‌ಸೈಟ್ : https://kppp.karnataka.gov.in** ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ) ವಿಭಾಗ,
ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟ/180/ಮಣಿಪಾಲ್/2025-26

ರಾಜಸ್ಥಾನದಲ್ಲಿ ಶಾಲಾ ಕಟ್ಟಡ ಕುಸಿತ: 7 ಬಲಿ

ಜೈಪುರ: ರಾಜಸ್ಥಾನದಲ್ಲಿ ಶುಕ್ರವಾರ ಬೆಳಗ್ಗೆ ಶಾಲಾ ಕಟ್ಟಡ ಕುಸಿದು ಬಿದ್ದಿದ್ದು, 7 ಮಕ್ಕಳು ಸಾವನ್ನಪ್ಪಿದ್ದರೆ, 40ಕ್ಕೂ ಹೆಚ್ಚು ಮಕ್ಕಳು ಅವಶೇಷದಡಿಯಲ್ಲಿ ಸಿಲುಕಿದ್ದಾರೆ. ಝಲಾವರ್ ಜಿಲ್ಲೆಯ ಮನೋಹರ್ ಥಾನಾದ ಪಿಪ್ಲೋಡಿ ಸರಕಾರಿ ಶಾಲೆಯಲ್ಲಿ ಬೆಳಿಗ್ಗೆ 8.30ರ ಸುಮಾರಿಗೆ ಈ ಘಟನೆ ನಡೆದಿದೆ. ಒಂದೇ ಅಂತಸ್ತಿನ ಕಟ್ಟಡದ ಛಾವಣಿ ಕುಸಿದಾಗ ಶಿಕ್ಷಕರು ಮತ್ತು ಸಿಬ್ಬಂದಿ ಸದಸ್ಯರಲ್ಲದೆ ಸುಮಾರು 40 ಮಕ್ಕಳು ಆವರಣದಲ್ಲಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಾವಿನ ಸಂಖ್ಯೆ ಏರಿಕೆಯಾಗುವ ಸಾಧ್ಯತೆ ಇದೆ.

ಮೂಲಗಳ ಪ್ರಕಾರ, ಕಟ್ಟಡವು ಶಿಥಿಲ ಸ್ಥಿತಿ

ಯಲ್ಲಿತ್ತು ಮತ್ತು ಈ ಬಗ್ಗೆ ಹಲವಾರು ದೂರುಗಳು ಮೊದಲೇ ಬಂದಿತ್ತು. ಶಾಲೆಯು 8ನೇ ತರಗತಿಯವರೆಗೆ ಶಿಕ್ಷಣ ನೀಡುತ್ತದೆ. ಗಾಯಾಳುಗಳನ್ನು ತಕ್ಷಣ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಅದರಲ್ಲಿ ಮೂರರಿಂದ ನಾಲ್ವರು ಮಕ್ಕಳು ಗಂಭೀರ ಸ್ಥಿತಿಯಲ್ಲಿದ್ದಾರೆ ಎಂದು ಝಲಾವರ್ ಪೊಲೀಸ್ ವರಿಷ್ಠಾಧಿಕಾರಿ ಅಮಿತ್ ಕುಮಾರ್ ತಿಳಿಸಿದ್ದಾರೆ. ಅವಶೇಷದಡಿಯಲ್ಲಿ ಸಿಲುಕಿರುವ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಿಬ್ಬಂದಿಯನ್ನು ರಕ್ಷಿಸಲು ಸ್ಥಳೀಯ ನಿವಾಸಿಗಳು ಧಾವಿಸಿದ್ದಾರೆ. ಅವಶೇಷಗಳನ್ನು ತೆರವುಗೊಳಿಸಲು ಕನಿಷ್ಠ ನಾಲ್ಕು ಜೆಸಿಬಿ ಯಂತ್ರಗಳು ಸ್ಥಳಕ್ಕೆ ಬಂದಿವೆ. ಜಿಲ್ಲಾಧಿಕಾರಿ ಸೇರಿದಂತೆ ಜಿಲ್ಲಾಡಳಿತದ ಅಧಿಕಾರಿಗಳು ಮತ್ತು ವಿಪತ್ತು ಪರಿಹಾರ ತಂಡಗಳು ರಕ್ಷಣಾ ಕಾರ್ಯಾಚರಣೆಗಾಗಿ ಸ್ಥಳದಲ್ಲಿವೆ ಎಂದು ಮೂಲಗಳು ತಿಳಿಸಿವೆ.

ಜುಲೈ 28ರಿಂದ ಸಿಂದೂರ ಕುರಿತು ಚರ್ಚೆ

ದೆಹಲಿ: ಪ್ರಸ್ತುತ

ಸಂಸತ್ತಿನ ಮಳೆಗಾಲದ ಅಧಿವೇಶನದ ಎರಡನೇ ವಾರದ ಕಲಾಪವು ಆಪರೇಷನ್ ಸಿಂದೂರ್ ಕುರಿತು ಚರ್ಚೆಯೊಂದಿಗೆ ಪ್ರಾರಂಭವಾಗಲಿದೆ. ಜುಲೈ 28ರಂದು ಲೋಕಸಭೆಯಲ್ಲಿ ಆ ಕುರಿತು ಚರ್ಚಿಸಲಾಗುತ್ತದೆ. ಇದಕ್ಕಾಗಿ, ಆಡಳಿತಾರೂಢ ಎನ್‌ಡಿಎ ಪರವಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಚರ್ಚೆಯನ್ನು ಪ್ರಾರಂಭಿಸಲಿದ್ದಾರೆ. ಗೃಹ ಸಚಿವ ಅಮಿತ್ ಶಾ ಮತ್ತು ವಿದೇಶಾಂಗ ಸಚಿವ ಎಸ್. ಜೈಶಂಕರ್ ಜೊತೆಗೆ, ನಿಶಿಕಾಂತ್ ದುಬೆ ಮತ್ತು ಅನುರಾಗ್ ಠಾಕೂರ್ ಅವರ ಹೆಸರುಗಳನ್ನು ಪಟ್ಟಿಯಲ್ಲಿ ಸೇರಿಸಲಾಗಿದೆ ಎಂದು ಹೇಳಲಾಗುತ್ತಿದೆ.

ಪ್ರಧಾನಿ ನರೇಂದ್ರ ಮೋದಿ ಕೂಡ ಈ ಚರ್ಚೆಯಲ್ಲಿ ಭಾಗವಹಿಸಲಿದ್ದಾರೆ. ಉಭಯ ಸದನಗಳಲ್ಲಿ 16 ಗಂಟೆಗಳ ಕಾಲ ಚರ್ಚೆ ನಡೆಯಬೇಕಿದೆ.

ಮೋದಿ ವಿರುದ್ಧ ರಾಹುಲ್ ಕಿಡಿ

ದೆಹಲಿ: ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ದೆಹಲಿಯ ಟಾಲ್ಕಟೋರಾ ಕ್ರೀಡಾಂಗಣದಲ್ಲಿ ಮಾತನಾಡಿದ ರಾಹುಲ್, ಅವರಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ ಎಂದು ಹೇಳಿದ್ದಾರೆ. ಪ್ರಧಾನಿ ಮೋದಿಯವರನ್ನು ಎರಡು ಮೂರು ಬಾರಿ ಭೇಟಿಯಾಗಿ ಅವರೊಂದಿಗೆ ಒಂದೇ ಕೋಣೆಯಲ್ಲಿ ಕುಳಿತು ಅವರನ್ನು ಗಮನಿಸಿದ್ದೇನೆ. ಹೀಗಾಗಿ ತನಗೆ ಈ ಕುರಿತು ಸಂಪೂರ್ಣವಾಗಿ ತಿಳಿದಿದೆ ಎಂದು ರಾಹುಲ್ ಹೇಳಿದ್ದಾರೆ.

ರೈಲ್ವೆ ಯೋಜನೆಗಳ ಯಶಸ್ಸು ಕರ್ನಾಟಕದ ಸಹಕಾರದ ಮೇಲೆ ಅವಲಂಬನೆ: ರೈಲ್ವೆ ಸಚಿವ ಅಶ್ವಿನಿ ವೈಷ್ಣವ್

ರಾಜ್ಯಕ್ಕೆ 42,517 ಕೋಟಿ ವೆಚ್ಚದ 25 ರೈಲ್ವೆ ಯೋಜನೆಗಳು

ದೆಹಲಿ: ಕರ್ನಾಟಕದಲ್ಲಿ ರೈಲು ಸಂಪರ್ಕವನ್ನು ಹೆಚ್ಚಿಸಲು, ಭಾರತೀಯ ರೈಲ್ವೆ ಇಲಾಖೆ ಹಲವಾರು ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಈ ವರ್ಷದ ಮಾರ್ಚ್ ಹೊತ್ತಿಗೆ, ಕರ್ನಾಟಕದಲ್ಲಿ ಸಂಪೂರ್ಣವಾಗಿ ಅಥವಾ ಭಾಗಶಃ 42,517 ಕೋಟಿ ರು. ವೆಚ್ಚದ 3,264 ಕಿ.ಮೀ ಉದ್ದದ 25 ಯೋಜನೆಗಳು (15 ಹೊಸ ಮಾರ್ಗಗಳು, 10 ಜೋಡಿ ಮಾರ್ಗ) ಮಂಜೂರಾಗಿದ್ದು, ಅವುಗಳಲ್ಲಿ 1,394 ಕಿ.ಮೀ ಉದ್ದ ಯೋಜನೆಗಳು ಕಾರ್ಯಾರಂಭ ಮಾಡಿವೆ. 2025ರ ಮಾರ್ಚ್‌ವರೆಗೆ 21,310 ಕೋಟಿ ರು. ವೆಚ್ಚ ಮಾಡಲಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ರಾಜ್ಯಸಭೆಯಲ್ಲಿ ಅಜಯ್ ಮಾಕನ್ ಮತ್ತು ಧೈರ್ಯಶೀಲ ಮೋಹನ್ ಪಾಟೀಲ್ ಅವರ ಚುಕ್ಕಿ ಪ್ರಶ್ನೆಗಳಿಗೆ ರೈಲ್ವೆ ಸಚಿವರು ಉತ್ತರ ನೀಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಪೂರ್ಣವಾಗಿ/ಭಾಗಶಃ 7,072 ಕಿ.ಮೀ ಉದ್ದದ ಒಟ್ಟು 64 ಯೋಜನೆಗಳ (25 ಹೊಸ ಮಾರ್ಗಗಳು ಮತ್ತು 39 ಜೋಡಿ ಮಾರ್ಗ) ಸಮೀಕ್ಷೆಯನ್ನು ಕಳೆದ ಮೂರು ವರ್ಷಗಳಲ್ಲಿ (2022-2023, 2023-24, 2024-25 ಮತ್ತು ಪ್ರಸ್ತುತ ಹಣಕಾಸು ವರ್ಷ 2025-26) ಮಂಜೂರು ಮಾಡಲಾಗಿದೆ, ಅಲ್ಲದೆ ಹೆಜ್ಜಾಲ-ಚಾಮರಾಜನಗರ ಹೊಸಮಾರ್ಗ ಯೋಜನೆಗೆ ವೆಚ್ಚ ಹಂಚಿಕೆ ಆಧಾರದ ಮೇಲೆ ಅನುಮೋದನೆ ನೀಡಲಾಗಿದೆ. ಆದಾಗ್ಯೂ, ಕರ್ನಾಟಕ ಸರಕಾರವು ಈ

ನಾಲ್ಕು ಸಮೀಕ್ಷೆಗಳು

ಮಂಗಳೂರು ಮತ್ತು ಕಾರವಾರಕ್ಕೆ ಸಂಪರ್ಕವನ್ನು ಮತ್ತಷ್ಟು ಸುಧಾರಿಸಲು ನಾಲ್ಕು ಸಮೀಕ್ಷೆಗಳು ಅಂದರೆ, ಶಿವಮೊಗ್ಗ-ಶೃಂಗೇರಿ- ಮಂಗಳೂರು ಹೊಸ ಮಾರ್ಗ ಯೋಜನೆ (332 ಕಿಮೀ), ಹಾಸನ-ಮಂಗಳೂರು ಜೋಡಿ ಮಾರ್ಗ ಯೋಜನೆ (247 ಕಿಮೀ), ಶೊರ್ನೂರು-ಮಂಗಳೂರು 3ನೇ ಮತ್ತು 4ನೇ ಮಾರ್ಗ ಯೋಜನೆ (307 ಕಿಮೀ) ಮತ್ತು ಹುಬ್ಬಳ್ಳಿ-ಅಂಕೋಲಾ ಹೊಸ ಜೋಡಿ ಮಾರ್ಗ (163 ಕಿಮೀ) ಮಂಜೂರು ಮಾಡಲಾಗಿದೆ.

ಯೋಜನೆಗೆ ಒಪ್ಪಿಗೆ ನೀಡದ ಕಾರಣ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಿಲ್ಲ. ಯಶವಂತಪುರ-ಚನ್ನಸಂದ್ರ ಮತ್ತು ಬೈಯಪ್ಪನಹಳ್ಳಿ-ಹೊಸೂರು ಜೋಡಿ ಮಾರ್ಗ ಯೋಜನೆಗಳನ್ನು ಕರ್ನಾಟಕ ರಾಜ್ಯ ಸರಕಾರದ ನಿಯಂತ್ರಿತ ಕಂಪನಿಯಾದ ರೈಲ್ ಇನ್ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಂಪನಿ (ಕರ್ನಾಟಕ) ಲಿಮಿಟೆಡ್ (ಕೆ- ರೈಡ್) ನಿರ್ವಹಿಸುತ್ತಿದೆ. ಯೋಜನೆಗಳ ಪ್ರಗತಿ ಮತ್ತು ಪೂರ್ಣಗೊಳಿಸುವಿಕೆಯು ಭೂಸ್ವಾಧೀನ, ಸೌಲಭ್ಯಗಳ ಸ್ಥಳಾಂತರ, ಅರಣ್ಯ ಅನುಮತಿ, ಮರಗಳನ್ನು ಕಡಿಯಲು ಅನುಮತಿ ಇತ್ಯಾದಿಗಳನ್ನು ಅವಲಂಬಿಸಿರುತ್ತದೆ ಎಂದು ಅಶ್ವಿನಿ ವೈಷ್ಣವ್ ಹೇಳಿದರು. ಕರ್ನಾಟಕ ರಾಜ್ಯದಲ್ಲಿ ಸಂಪೂರ್ಣವಾಗಿ/ಭಾಗಶಃ ನಡೆಯುವ ರೈಲ್ವೆ ಮೂಲಸೌಕರ್ಯ ಯೋಜನೆಗಳು ಭಾರತೀಯ ರೈಲ್ವೆಯ ನೈಋತ್ಯ ರೈಲ್ವೆ (ಎಸ್ ಡಬ್ಲ್ಯುಆರ್), ಮಧ್ಯ ರೈಲ್ವೆ (ಸಿ.ಆರ್), ದಕ್ಷಿಣ ರೈಲ್ವೆ (ಎಸ್.ಆರ್) ಮತ್ತು ದಕ್ಷಿಣ ಮಧ್ಯ ರೈಲ್ವೆ (ಎಸ್‌ಸಿಆರ್) ವಲಯಗಳ ವ್ಯಾಪ್ತಿಗೆ ಬರುತ್ತವೆ. ರೈಲ್ವೆ ಯೋಜನೆಗಳ ವಲಯವಾರು ವಿವರಗಳನ್ನು ಭಾರತೀಯ ರೈಲ್ವೆಯ ವೆಬ್‌ಸೈಟ್‌ನಲ್ಲಿ ಸಾರ್ವಜನಿಕವಾಗಿ ಲಭ್ಯವಾಗುವಂತೆ ಮಾಡಲಾಗಿದೆ. ಭಾರತ ಸರಕಾರವು ಯೋಜನೆಗಳನ್ನು ಕಾರ್ಯಗತಗೊಳಿಸಲು ಸಿದ್ಧವಾಗಿದೆ, ಆದಾಗ್ಯೂ ಅದರ ಯಶಸ್ಸು ಕರ್ನಾಟಕ ಸರಕಾರದ ಸಹಕಾರವನ್ನು ಅವಲಂಬಿಸಿರುತ್ತದೆ ಎಂದು ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದರು.

ಸಮಾಚಾರ ಸಣ್ಣದಲ್ಲ

ನಾನೂ ಕೂಡಾ ತಪ್ಪು ಮಾಡಿದ್ದೇನೆ: ರಾಹುಲ್

ದೆಹಲಿ: ಕಾಂಗ್ರೆಸ್ ಸರಕಾರವಿರುವ ರಾಜ್ಯಗಳಲ್ಲಿ ಜಾತಿ ಜನಗಣತಿ ನಡೆಸದಿರುವುದು ದೊಡ್ಡ ತಪ್ಪು ಎಂದು ಕಾಂಗ್ರೆಸ್ ಸಂಸದ ಮತ್ತು ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಒಪ್ಪಿಕೊಂಡಿದ್ದು, ಈಗ ಅದನ್ನು ಸರಿಪಡಿಸಲು ಬಯಸುತ್ತೇನೆ ಎಂದು ಹೇಳಿದ್ದಾರೆ. ದೆಹಲಿಯ ಟಾಲ್ಕಟೋರಾ ಕ್ರೀಡಾಂಗಣದಲ್ಲಿ ನಡೆದ ಕಾಂಗ್ರೆಸ್ ಒಬಿಸಿ ಭಾಗಿದಾರಿ ನ್ಯಾಯ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ರಾಹುಲ್ ಗಾಂಧಿ, ನಾನು ರಾಜಕೀಯ ಮಾಡಲು ಪ್ರಾರಂಭಿಸಿ 21 ವರ್ಷಗಳಾಗಿವೆ. ನಾನು ಹಿಂತಿರುಗಿ ನೋಡಿದಾಗ ಎಲ್ಲಿ ಉತ್ತಮ ಕೆಲಸ ಮಾಡಿದೆ ಮತ್ತು ನಾನು ಎಲ್ಲಿ ತಪ್ಪು ಮಾಡಿದೆ ಎಂದು ನೋಡಿದಾಗ ಅದರಲ್ಲಿ ದೊಡ್ಡ ಸಮಸ್ಯೆಗಳು ಗೋಚರಿಸುತ್ತವೆ. ನನ್ನ ನ್ಯೂನತೆಗಳ ಬಗ್ಗೆ ಮಾತನಾಡಿದರೆ, ನಾನೂ ತಪ್ಪು ಮಾಡಿದ್ದೇನೆ. ಒಬಿಸಿ ವರ್ಗವನ್ನು ನಾನು ಮಾಡಬೇಕಾದ ರೀತಿಯಲ್ಲಿ ರಕ್ಷಿಸಲಿಲ್ಲ ಎಂದು ರಾಹುಲ್ ಗಾಂಧಿ ಹೇಳಿದರು.

ಎಲ್‌ಒಸಿ ಬಳಿ ನೆಲಬಾಂಬ್ ಸ್ಫೋಟ: ಯೋಧ ಹುತಾತ್ಮ

ದೆಹಲಿ: ಜಮ್ಮು ಮತ್ತು ಕಾಶ್ಮೀರದ ಪೂಂಚ್‌ನ ಗಡಿ ನಿಯಂತ್ರಣ ರೇಖೆಯ ಕೃಷ್ಣ ಘಾಟಿ ಸೆಕ್ಟರ್‌ನಲ್ಲಿ ಸಂಭವಿಸಿದ ನೆಲಬಾಂಬ್ ಸ್ಫೋಟದಲ್ಲಿ ಅಗ್ನಿವೀರ ಯೋಧ ಹುತಾತ್ಮರಾಗಿದ್ದು, ಜೂನಿಯರ್ ಕಮಾಂಡಿಂಗ್ ಆಫೀಸರ್ (ಜೆಸಿಒ) ಸೇರಿದಂತೆ ಇಬ್ಬರು ಗಾಯಗೊಂಡಿದ್ದಾರೆ. ಪೂಂಚ್ ಜಿಲ್ಲೆಯ ಕೃಷ್ಣ ಘಾಟ್ ಸೆಕ್ಟರ್‌ನಲ್ಲಿ ಸೇನಾ ಸಿಬ್ಬಂದಿ ಗಸ್ತು ನಡೆಸುತ್ತಿದ್ದಾಗ ನೆಲಬಾಂಬ್ ಸ್ಫೋಟ ಸಂಭವಿಸಿದ್ದು, ಘಟನೆಯಲ್ಲಿ 7 ಜೆಎಟಿ ರೆಜಿಮೆಂಟ್‌ನ ಅಗ್ನಿವೀರ ಲಲಿತ್ ಕುಮಾರ್ ಅವರು ಹುತಾತ್ಮರಾಗಿದ್ದಾರೆ ಎಂದು ಸೇನಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸ್ಫೋಟದಲ್ಲಿ, ಮೂವರು ಸೈನಿಕರು ಗಾಯಗೊಂಡಿದ್ದರು. ಲಲಿತ್ ಕುಮಾರ್ ಅವರನ್ನು ಆಸ್ಪತ್ರೆಗೆ ಸಾಗಿಸುವಾಗ ಸಾವನ್ನಪ್ಪಿದರು. ಜೆಸಿಒ ಸೇರಿದಂತೆ ಇತರ ಇಬ್ಬರು ಗಾಯಗೊಂಡ ಸೈನಿಕರನ್ನು ವಿಶೇಷ ಚಿಕಿತ್ಸೆಗಾಗಿ ಹತ್ತಿರದ ಮಿಲಿಟರಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಸ್ಫೋಟದ ನಂತರ, ಪರಿಸ್ಥಿತಿಯನ್ನು ಪರಿಶೀಲಿಸಲು ಹೆಚ್ಚುವರಿ ಪಡೆಗಳನ್ನು ಸ್ಥಳಕ್ಕೆ ರವಾನಿಸಲಾಗಿದ್ದು, ಭದ್ರತಾ ಅಧಿಕಾರಿಗಳು ನೆಲಬಾಂಬ್ ಸ್ಫೋಟದ ಕಾರಣವನ್ನು ಖಚಿತಪಡಿಸಿಕೊಳ್ಳುತ್ತಿದ್ದಾರೆ.

ನೇರ ಮಾತುಕತೆಯು ಕದನ ವಿರಾಮಕ್ಕೆ ಕಾರಣ

ದೆಹಲಿ: ಭಾರತ ಮತ್ತು ಪಾಕಿಸ್ತಾನ ಮೇ 10ರಂದು ಎರಡೂ ರಾಷ್ಟ್ರಗಳ ಮಿಲಿಟರಿ ಕಾರ್ಯಾಚರಣೆಗಳ ಮಹಾನಿರ್ದೇಶಕರ ನಡುವಿನ 'ನೇರ ಮಾತುಕತೆ'ಯ ಪರಿಣಾಮವಾಗಿ ಕದನ ವಿರಾಮಕ್ಕೆ ಒಪ್ಪಿಕೊಂಡವು ಎಂದು ಕೇಂದ್ರ ಸರಕಾರ ಶುಕ್ರವಾರ ಸಂಸತ್ತಿಗೆ ತಿಳಿಸಿದೆ. ಭಾರತ ಮತ್ತು ಪಾಕಿಸ್ತಾನದ ನಡುವಿನ ಕದನ ವಿರಾಮದಲ್ಲಿ ಅಮೆರಿಕದ ಹಸ್ತಕ್ಷೇಪ ಇರುವುದು ಸತ್ಯವೇ ಎಂದು ಕೇಳಿದ ಪ್ರಶ್ನೆಗೆ ವಿದೇಶಾಂಗ ಸಚಿವಾಲಯ ಲಿಖಿತ ಉತ್ತರ ನೀಡಿದೆ. ಲೋಕಸಭೆಯಲ್ಲಿ ಲಿಖಿತ ಉತ್ತರ ನೀಡಿದ ವಿದೇಶಾಂಗ ವ್ಯವಹಾರಗಳ ಖಾತೆ ರಾಜ್ಯ ಸಚಿವ ಕೀರ್ತಿ ವರ್ಧನ್ ಸಿಂಗ್ ಅವರು, ಪಾಕಿಸ್ತಾನ ಮೊದಲು ಕದನ ವಿರಾಮದ ಬಗ್ಗೆ ಪ್ರಸ್ತಾಪ ಮಾಡಿತು ಎಂದು ಹೇಳಿದ್ದಾರೆ. ಭಾರತ ಮತ್ತು ಪಾಕಿಸ್ತಾನ ಮೇ 10ರಂದು ಎರಡೂ ರಾಷ್ಟ್ರಗಳ ನಡುವಿನ ನೇರ ಮಾತುಕತೆಯ ಪರಿಣಾಮವಾಗಿ ಗುಂಡಿನ ದಾಳಿ ಮತ್ತು ಮಿಲಿಟರಿ ಕಾರ್ಯಾಚರಣೆಯನ್ನು ನಿಲ್ಲಿಸಲು ಒಪ್ಪಿಕೊಂಡಿವೆ ಎಂದು ಹೇಳಿದರು

ಪಾದಚಾರಿ ಮಾರ್ಗ ಒತ್ತುವರಿ ತೆರವು

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ನಾಲ್ಕು ವಲಯಗಳಲ್ಲಿ ಪಾದಚಾರಿ ಮಾರ್ಗ ಒತ್ತುವರಿ, ಅನಧಿಕೃತ ಜಾಹೀರಾತು ತೆರವು ಕಾರ್ಯಾಚರಣೆ ಹಾಗೂ ಸಾಮೂಹಿಕ ಸ್ವಚ್ಛತಾ ಕಾರ್ಯವನ್ನು ಶುಕ್ರವಾರ ನಡೆಸಲಾಯಿತು. ಪೂರ್ವ ವಲಯದಲ್ಲಿ ಆಯಾ ವಿಭಾಗಗಳ ಕಾರ್ಯಪಾಲಕ ಎಂಜಿನಿಯರ್ ನೇತೃತ್ವದಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ಹಾಗೂ ಪವರ್ ವಾಶರ್ ಬಳಸಿ ಸ್ವಚ್ಛತಾ ಕಾರ್ಯ ನಡೆಸಲಾಯಿತು. ಪಶ್ಚಿಮ ವಲಯದಲ್ಲಿ ರಾಜಾಜಿನಗರ ವಿಭಾಗದಲ್ಲಿ 1ನೇ ಮುಖ್ಯರಸ್ತೆ ಬಸವೇಶ್ವರ ನಗರ, ಮಹಾಲಕ್ಷ್ಮಿಪುರ ವಿಭಾಗದ ಪೈಪ್‌ಲೈನ್ ರಸ್ತೆ ಹಾಗೂ ವಾರ್ಡ್ 49ರ ನಾಗಾಪುರ, ಚಾಮರಾಜ ಪೇಟೆ ವಿಭಾಗದ ವಾರ್ಡ್ 138ರ ಚಲವಾದಿಪಾಳ್ಯದಲ್ಲಿ, ಗಾಂಧಿನಗರ ವಿಭಾಗದ ಚಿಕ್ಕಪೇಟೆಯ ಪಾರ್ಕ್ ರಸ್ತೆ, ಗೋವಿಂದ ರಾಜನಗರ ವಿಭಾಗದ ವಾರ್ಡ್ 139 ಮೂಡಲ ಪಾಳ್ಯ ಚಂದ್ರ ಲೇಔಟ್‌ನಲ್ಲಿ ಸ್ವಚ್ಛತೆ ಹಾಗೂ ಪಾದಚಾರಿ ಮಾರ್ಗ ಒತ್ತುವರಿ ತೆರವು ಮಾಡಲಾಯಿತು. ರಾಜರಾಜೇಶ್ವರಿ ನಗರ ವಲಯದಲ್ಲಿ ರಾಜರಾಜೇಶ್ವರಿ ವಿಭಾಗದ ಕೆಂಪೇಗೌಡ ಡಬಲ್ ರಸ್ತೆ, ರಾಜರಾಜೇಶ್ವರಿನಗರ ಕೆಂಪೇಗೌಡ ವೃತ್ತದಿಂದ ಕನಕದಾಸ ವೃತ್ತದವರೆಗೆ ಪಾದಚಾರಿ ಒತ್ತುವರಿಯನ್ನು ತೆರವು ಮಾಡಲಾಯಿತು.

{ ಬೃಂದಾ ಕಾರಟ್ } ಸಿಪಿಎಂ ನಾಯಕಿ

ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯು ಪ್ರಜಾಪ್ರಭುತ್ವದ ಹಕ್ಕುಗಳು ಮತ್ತು ಸಾಂವಿಧಾನಿಕ ಮೌಲ್ಯಗಳ ಮೇಲಿನ ದಾಳಿಯಾಗಿದೆ. ಚುನಾವಣಾ ಆಯೋಗದ ಮೂಲಕ ಬಿಹಾರದಲ್ಲಿ ಮತದಾರರ ಪಟ್ಟಿಯ ದೊಡ್ಡ ಪ್ರಮಾಣದ ಪರಿಷ್ಕರಣೆ ನಡೆಸುವ ಮೂಲಕ ಬಿಜೆಪಿಯು ಅಕ್ರಮ ಎಸಗಲು ಮುಂದಾಗಿದೆ.

ಎಐಸಿಸಿ ಒಬಿಸಿ ವಿಭಾಗದ ಭಾಗಿಧಾರಿ ನ್ಯಾಯ ಸಮ್ಮೇಳನದ ಉದ್ದೇಶ ವಿವರಿಸಿದ ಮುಖ್ಯಮಂತ್ರಿ

ಹಿಂದುಳಿದವರನ್ನು ಮುಖ್ಯವಾಹಿನಿಗೆ ತರಲು ಸಮೀಕ್ಷೆ: ಸಿಎಂ

ವಿಶ್ವವಾಣಿ ಸುದ್ದಿಮನೆ ದೆಹಲಿ

ಹಿಂದುಳಿದವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸಮೀಕ್ಷೆ ಅನಿವಾರ್ಯವಾಗಿದ್ದು, ಈ ದಿಸೆಯಲ್ಲಿ ದೇಶದ ಪ್ರತಿ ನಾಗರಿಕನ ಆರ್ಥಿಕ ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಸ್ಥಿತಿಗತಿಯ ಮಾಹಿತಿ ಅತ್ಯಗತ್ಯವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ದೆಹಲಿಯ ಕರ್ನಾಟಕ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪ್ರತಿಯೊಬ್ಬ ಪ್ರಜೆಯ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಹಾಗೂ ಔದ್ಯೋಗಿಕ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಪಡೆಯುವುದು ಅತ್ಯಗತ್ಯ. ನಮ್ಮ ಸಂವಿಧಾನ ಸಾಮಾಜಿಕ ನ್ಯಾಯ ಬೆಂಬಲಿಸುತ್ತದೆ. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಸಮಾನತೆಯೆಂಬುದು ದೇಶದಲ್ಲಿ ಸ್ಥಾಪಿತವಾಗಿದೆಯೇ ಎಂಬ ಬಗ್ಗೆ ತಿಳಿದುಕೊಳ್ಳಲು ಇಂತಹ ಸಮೀಕ್ಷೆ ನಡೆಸಲೇಬೇಕಾಗುತ್ತದೆ. ಸಾಮಾಜಿಕ ಆರ್ಥಿಕ ಸಮೀಕ್ಷೆ ನಡೆಸಬೇಕೆಂಬುದು ರಾಹುಲ್ ಗಾಂಧಿಯವರು ಬದ್ಧರಾಗಿದ್ದಾರೆ. ಕೇವಲ ಜಾತಿ ಗಣತಿ ಮಾಡುವ ಜೊತೆಗೆ ಆರ್ಥಿಕ ಸಾಮಾಜಿಕ ಸಮೀಕ್ಷೆ ನಡೆಸಿದಾಗ ಮಾತ್ರ, ಹಿಂದುಳಿದವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸಾಧ್ಯವಾಗುತ್ತದೆ. ಇದು ಭಾಗೀಧಾರಿ ನ್ಯಾಯ ಸಮ್ಮೇಳನದ ಮೂಲ ಉದ್ದೇಶ ಎಂದು ವಿವರಿಸಿದರು. ಮುಂದಿನ ದಿನಗಳಲ್ಲಿ ದೇಶದೆಲ್ಲೆಡೆ ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತೇವೆ ಎಂದರು. ಕಳೆದ ಲೋಕಸಭಾ ಚುನಾವಣೆಯಲ್ಲಿ ಅರ್ಹ ಮತದಾರರನ್ನು ಪಟ್ಟಿಯಿಂದ ತೆಗೆದು ಕ್ಷೇತ್ರಕ್ಕೆ ಸಂಬಂಧಪಡದ ಹೊಸ ಮತದಾರರನ್ನು ಪಟ್ಟಿಯಲ್ಲಿ ಸೇರಿಸಲಾಗಿತ್ತು. ಈ ರೀತಿ ಇಡೀ ದೇಶದಲ್ಲಿ ನಡೆದಿರುವ ಸಾಧ್ಯತೆಯಿದೆ. ಹೀಗಾಗಿ ರಾಹುಲ್ ಗಾಂಧಿ ಈ ಗಂಭೀರ ವಿಚಾರವನ್ನು ಸದನದ ಒಳಗೆ ಹಾಗೂ ಹೊರಗೆ ಪ್ರಸ್ತಾಪಿಸಿದ್ದಾರೆ.

ಬೆಂಗಳೂರು ಕೇಂದ್ರ ಲೋಕಸಭೆ ಕ್ಷೇತ್ರದ ಎಲ್ಲ ಕ್ಷೇತ್ರದಲ್ಲಿ ಮತ ಎಣಿಕೆಯಲ್ಲಿ ಕಾಂಗ್ರೆಸ್ ಮುಂದಿದ್ದರೂ, ಮಹದೇವಪುರ ಕ್ಷೇತ್ರದಿಂದಾಗಿ ಕಾಂಗ್ರೆಸ್ ಸೋಲು ವಂತಾಯಿತು. ಈ ರೀತಿ ಆಗಿರುವುದನ್ನು ಪ್ರಶ್ನಿಸಿದ ರಾಹುಲ್ ಗಾಂಧಿ, ಈ ಬಗ್ಗೆ ಸಾಕ್ಷ್ಯಾಧಾರಗಳು ಇವೆ ಎಂದು ತಿಳಿಸಿರುವುದಾಗಿ ಎಂದರು. ಚುನಾವಣೆಗೆ ಸಂಬಂಧಿಸಿದ ಪ್ರಕರಣಗಳು ಇತ್ಯರ್ಥವಾಗುವುದರೊಳಗೆ ಸರಕಾರದ ಅವಧಿಯೇ ಮುಗಿದಿರುತ್ತದೆ. ಹಲವು ಪ್ರಕರಣಗಳಲ್ಲಿ ಮತಪಟ್ಟಿ ವಿಚಾರದಲ್ಲಿ ಚುನಾವಣಾ ಆಯೋಗ ನಕಾರಾತ್ಮಕವಾಗಿ ಪ್ರತಿಕ್ರಿಯೆ ನೀಡಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಕೆಲವು ಆಯ್ದ ಮತಕ್ಷೇತ್ರಗಳಲ್ಲಿ ಮಾತ್ರ ಮತಗಳವು ಆಗಿದೆ. ಬಿಹಾರದ ರೀತಿಯಲ್ಲಿ ದೇಶದ ಉಳಿದೆಡೆಗಳಲ್ಲೂ ಮತಪಟ್ಟಿ ಪರಿಷ್ಕರಣೆ ಮಾಡುವುದಾಗಿ ಚುನಾವಣಾ ಆಯೋಗ ತಿಳಿಸಿದ್ದು, ಚುನಾವಣೆಯ ದಿನ ಬೇರೆಯೇ ಮತದಾರರ ಪಟ್ಟಿ ಬರುವಂತೆ ಮಾಡುತ್ತಾರೆ ಎಂದರು.

> ನಿಗಮ ಮಂಡಳಿಗಳಿಗೆ ಅಧ್ಯಕ್ಷರ ನೇಮಕ ಸಂಬಂಧ ನಾನು ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅಭಿಪ್ರಾಯ ನೀಡಿದ್ದೇವೆ, ಅಂತಿಮವಾಗಿ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳಲಿದೆ.
>
> **ಸಿದ್ದರಾಮಯ್ಯ**, ಮುಖ್ಯಮಂತ್ರಿ



ದೆಹಲಿಯ ಟಾಲ್ಕಟೋರಾ ಕ್ರೀಡಾಂಗಣದಲ್ಲಿ ನಡೆದ ಕಾಂಗ್ರೆಸ್ ಒಬಿಸಿ ಭಾಗಿದಾರಿ ನ್ಯಾಯ ಸಮ್ಮೇಳನದಲ್ಲಿ ರಾಹುಲ್ ಭೇಟಿ ಮಾಡಿದ ಸಿಎಂ ಸಿದ್ದರಾಮಯ್ಯ. ಸಮ್ಮೇಳನದ ಉದ್ಘಾಟನೆ ಗೌರವ ಪಡೆದ ಸಿಎಂ. ▶▶ ಚಿತ್ರ–2

ಮಹದಾಯಿ ಯೋಜನೆ–ಗೋವಾ ಸಿಎಂ ನಡೆ ಸರಿಯಿಲ್ಲ

ಮಹದಾಯಿ ವಿಚಾರ ನ್ಯಾಯಮಂಡಳಿಯಲ್ಲಿ ಈಗಾಗಲೇ ಇತ್ಯರ್ಥವಾಗಿದ್ದರೂ, ಗೋವಾ ಸಿಎಂ ನ ಹೇಳಿಕೆ ಸರಿಯಾದುದಲ್ಲ. ಮಹದಾಯಿ ಯೋಜನೆಗೆ ಪರಿಸರ ಒಪ್ಪಿಗೆ ಸಿಗಬೇಕಾಗಿದೆಯೇ ಹೊರತು, ಉಚ್ಚ ನ್ಯಾಯಾಲಯದಲ್ಲಿಯೂ ಈ ವಿಚಾರ ಇತ್ಯರ್ಥವಾಗಿದೆ. ಅವರು ನ್ಯಾಯಾಲಯದ ಮೊರೆ ಹೋಗಲು ನಮ್ಮ ಅಭ್ಯಂತರವಿಲ್ಲ. ನ್ಯಾಯಮಂಡಳಿ ಈಗಾಗಲೇ ನಿರ್ಧಾರ ಮಾಡಿದ್ದು, ಸುಪ್ರೀಂಕೋರ್ಟ್ ಸಹ ಎಲ್ಲ ವಿವಾದ ಬಗೆಹರಿಸಿದೆ. ಗೋವಾ ಸಿಎಂ ಹೇಳಿರುವ ವಿಚಾರ ಕೇಂದ್ರ ಸರ್ಕಾರದ ಗಮನಕ್ಕೆ ಏಕೆ ತರಬೇಕೆಂದು ಪ್ರಶ್ನಿಸಿದ ಸಿಎಂ, ಗೋವಾ ಮುಖ್ಯಮಂತ್ರಿಗಳಿಗೆ ನ್ಯಾಯಾಲಯದ ಮೊರೆ ಹೋಗಲು ಯಾವ ಹಕ್ಕೂ ಇಲ್ಲ(ಲೋಕಸ್ ಸ್ಟ್ಯಾಂಡಿ). ಅರಣ್ಯ ಹಾಗೂ ಪರಿಸರ ಇಲಾಖೆಯು ಕೇಂದ್ರ ಸರಕಾರದಡಿಯಲ್ಲಿದ್ದು, ಈ ಬಗ್ಗೆ ತೀರುವಳಿ ನೀಡಬೇಕಿದೆ ಎಂದರು.

ಸಾವಿರಾರು ಟನ್ ಹಸಿ ಹಾಗೂ ಒಣಕಸದಿಂದ ವಿದ್ಯುತ್ ಉತ್ಪಾದನೆಗೆ ಉತ್ತೇಜಿಸಲು ಕ್ರಮ

ವಿದ್ಯುತ್ ಉತ್ಪಾದನೆಗೆ ಹೊಸ ಘಟಕ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಂಗಳೂರಿನ ವಿವಿಧ ಪ್ರದೇಶಗಳಲ್ಲಿ ಉತ್ಪತ್ತಿಯಾಗುವ ಸಾವಿರಾರು ಟನ್ ಹಸಿ ಹಾಗೂ ಒಣಕಸದಿಂದ ವಿದ್ಯುತ್ ಉತ್ಪಾದನೆಗೆ ಉತ್ತೇಜನ ನೀಡುವ ಸಲುವಾಗಿ ಹೊಸ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪಿಸುವಂತೆ ಅಧಿಕಾರಿಗಳಿಗೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ ನೀಡಿದರು.

ತ್ಯಾಜ್ಯ ಸಂಸ್ಕರಣಾ ಘಟಕ ಹಾಗೂ ರಾಜಕಾಲುವೆಗಳ ಕಾಮಗಾರಿಗಳ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾತನಾಡಿ, ಕನ್ನಹಳ್ಳಿ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಪ್ರತಿನಿತ್ಯ 350 ಮೆಟ್ರಿಕ್ ಟನ್ ತ್ಯಾಜ್ಯ ಸಂಸ್ಕರಣೆ ಮಾಡಲಾಗುತ್ತಿದೆ. ಈ ಘಟಕವನ್ನು ಖಾಸಗಿ ಸಂಸ್ಥೆಯಾದ ಸತಾರಾಂ ಮೂಲಕ ನಡೆಸಲಾಗುತ್ತಿದ್ದು, ತ್ಯಾಜ್ಯ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪಿಸುವ ಸಲುವಾಗಿ ಸಾಧಕ–ಬಾಧಕಗಳನ್ನು ಚರ್ಚಿಸಿ ಯೋಜನೆ ರೂಪಿಸಬೇಕು ಎಂದರು.

ಸೀಗೇಹಳ್ಳಿ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ 120 ಮೆಟ್ರಿಕ್ ಟನ್ ತ್ಯಾಜ್ಯ ಸಂಸ್ಕರಿಸುವ ಸಾಮರ್ಥ್ಯವಿದ್ದು, ಸಂಪೂರ್ಣ ತ್ಯಾಜ್ಯವನ್ನು ಸ್ವೀಕರಿಸಿ ಸಂಸ್ಕರಣೆ ಮಾಡಲಾಗುತ್ತಿದೆ. ಘಟಕದಲ್ಲಿ 5 ಲಕ್ಷ ಟನ್ ಲೆಗಸಿ ವೇಸ್ಟ್ ಇದ್ದು, ಟ್ರಾಮಲ್ ಯಂತ್ರ ಬಳಸಿಕೊಂಡು ಲೆಗೆಸಿ ವೇಸ್ಟ್‌ನ್ನು ರೀ ಪ್ರೊಸೆಸಿಂಗ್ ಮಾಡಬೇಕು. ಅದರಲ್ಲಿ ಆರ್.ಡಿ.ಎಫ್ ತ್ಯಾಜ್ಯವನ್ನು ಬಿಡದಿಯಲ್ಲಿರುವ ವಿದ್ಯುತ್ ಉತ್ಪಾದನಾ ಘಟಕಕ್ಕೆ ಕಳುಹಿಸಿ ಇನರ್ಟ್‌ನ್ನು ಲ್ಯಾಂಡ್ ಫಿಲ್‌ಗೆ ವಿಲೇವಾರಿ ಮಾಡಬೇಕು ಎಂದು ಹೇಳಿದರು.

ಸೀಗೇಹಳ್ಳಿ ಘಟಕದಲ್ಲಿ ಪಾಲಿಕೆಯ ಬಳಕೆಯಾಗದ ವಾಹನಗಳಿಗೆ ಆರ್‌ಟಿಒ ಇಲಾಖೆಯು ಅದನ್ನು ತಪಾಸಣೆ ಮಾಡಿ ವಾಹನಗಳ ದರವನ್ನು ನಿಗದಿಪಡಿಸಿ ಇ–ಆಕ್ಷನ್ ಮಾಡಬೇಕು. ಸುಬ್ಬರಾಯನ ಪಾಳ್ಯ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ 150 ಮೆಟ್ರಿಕ್ ಟನ್ ತ್ಯಾಜ್ಯ ಉತ್ಪತ್ತಿ ಆಗುತ್ತಿದೆ. ಸದ್ಯ 120 ಟನ್ ತ್ಯಾಜ್ಯವನ್ನು ಸ್ವೀಕರಿಸಲಾಗುತ್ತಿದೆ. ಘಟಕಕ್ಕೆ ಸಂಪೂರ್ಣ ತ್ಯಾಜ್ಯ ಸ್ವೀಕರಿಸಿ ಸಂಸ್ಕರಣೆ ಮಾಡಬೇಕು. ಏನಾದರು ದುರಸ್ತಿ ಕಾರ್ಯ ವಿದ್ದರೆ ಅದನ್ನು ಸರಿಪಡಿಸಿಕೊಂಡು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುವಂತೆ ಮಾಡಬೇಕು ಎಂದು ಸೂಚಿಸಿದರು.

ರಾಜಕಾಲುವೆ ಕಾಮಗಾರಿಗೆ ಜಂಟಿ ಪರಿಶೀಲನೆ

ನಾಗರಬಾವಿಯ ಟೀಚರ್ಸ್ ಕಾಲೋನಿಯಲ್ಲಿ ಮಳೆಗಾಲದ ವೇಳೆ ಪ್ರವಾಹ ಸಮಸ್ಯೆ ಎದುರಾಗುತ್ತಿದೆ. ಆ ಸಮಸ್ಯೆಯನ್ನು ಬಗೆಹರಿಸಬೇಕಾದರೆ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ ಆವರಣದಲ್ಲಿರುವ ಕಚ್ಚಾ ರಾಜಕಾಲುವೆಯನ್ನು ಪಕ್ಕಾ ರಾಜಕಾಲುವೆ ಮಾಡಬೇಕಿದೆ. ಈ ಸಂಬಂಧ ಪಾಲಿಕೆ ಹಾಗೂ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ಉಪಕುಲಪತಿಗಳು ಜಂಟಿ ಪರಿಶೀಲನೆ ನಡೆಸಿ ರಾಜಕಾಲುವೆ ನಿರ್ಮಾಣ ಮಾಡಲು ಕ್ರಮವಹಿಸಲಾಗಿದೆ. ಈ ನಿಟ್ಟಿನಲ್ಲಿ ಕೂಡಲೇ ರಾಜಕಾಲುವೆ ಕಾಮಗಾರಿ ಆರಂಭಿಸಿ ಈ ಭಾಗದಲ್ಲಿ ಯಾವುದೇ ರೀತಿಯ ಸಮಸ್ಯೆ ಆಗದಂತೆ ಕ್ರಮ ವಹಿಸಬೇಕು ಎಂದು ತಿಳಿಸಿದರು. ಮುಖ್ಯ ಅಭಿಯಂತರ ರಾಜೇಶ್, ಬಿಎಸ್.ಡಬ್ಲ್ಯೂ.ಎಂ.ಎಲ್‌ನ ಡಿಜಿಎಂ ಥಾನ್ ನಾಯ್ಕ್, ಕಾರ್ಯಪಾಲಕ ಅಭಿಯಂತರರು, ಅಧಿಕಾರಿಗಳು ಇದ್ದರು.

ಕೇಂದ್ರ ಸಚಿವ ಜೋಶಿ ಭೇಟಿಯಾಗಿ ಚರ್ಚಿಸಿದ ಸಚಿವ ಮುನಿಯಪ್ಪ

ಸ್ಮಾರ್ಟ್ ಪಿಡಿಎಸ್‌ಗೆ ಅನುದಾನ ಕೋರಿ ಮನವಿ

ಬೆಂಗಳೂರು: ಕರ್ನಾಟಕದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಆಧುನಿಕರಿಸಲು ಸರಕಾರ ಸ್ಮಾರ್ಟ್ ಪಿಡಿಎಸ್ ಯೋಜನೆಯನ್ನು ಜಾರಿಗೆ ತರಲು ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಸ್ಮಾರ್ಟ್ ಪಿಡಿಎಸ್ ಜಾರಿಗೆ ಬೇಕಾಗಿರುವ ಮೂಲಸೌಕರ್ಯಗಳ ಸ್ಥಾಪನೆ ಹಾಗೂ ನಿರ್ವಹಣೆಗೆ 35 ಕೋಟಿ ಅನುದಾನವನ್ನು ನೀಡಲು ಕೇಂದ್ರ ಸರಕಾರಕ್ಕೆ ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ ಮನವಿ ಸಲ್ಲಿಸಿದ್ದಾರೆ.

ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರನ್ನು ಭೇಟಿಯಾದ ಮುನಿಯಪ್ಪ ಅವರು, ಸ್ಮಾರ್ಟ್ ಪಿಡಿಎಸ್ ಯೋಜನೆಯಲ್ಲಿ, ಅಂಗಡಿಗಳಲ್ಲಿ ಇಲೆಕ್ಟ್ರಾನಿಕ್ ತೂಕದ ಯಂತ್ರ ಹಾಗೂ ಪಾಯಿಂಟ್ ಆಫ್ ಸೇಲ್ ಸಾಧನಗಳ ಏಕೀಕರಣವನ್ನು ಜಾರಿಗೊಳಿಸುವುದು ಮುಖ್ಯ ಉದ್ದೇಶವಾಗಿದೆ. ಈ ಕ್ರಮವು ಪಿಡಿಎಸ್ ವ್ಯವಸ್ಥೆಯಲ್ಲಿ ಪಾರದರ್ಶಕತೆ, ಹೊಣೆಗಾರಿಕೆ ಹಾಗೂ ತಂತ್ರಜ್ಞಾನ ಆಧಾರಿತ ಸೇವೆಗಳ ಮಾರ್ಗವಾಗಿ ಸಹಕಾರಿಯಾಗಲಿದೆ. ಭಾರತ ಸರಕಾರ ಪ್ರತಿ ಕ್ವಿಂಟಾಲ್‌ಗೆ 21 ಸಬ್ಸಿಡಿಯನ್ನು ರಾಜ್ಯಗಳಿಗೆ ನೀಡುವ ಮೂಲಕ ಈ ಯೋಜನೆಗೆ ಬಲ ನೀಡುತ್ತಿದೆ. ಆದರೆ ಈ ಮೊತ್ತವನ್ನು ಚಿಲ್ಲರೆ ಆಯುಕ್ತದ ಭಾಗವಾಗಿ ಪರಿಗಣಿಸಲಾಗುತ್ತಿದೆ ಎಂಬ ಅಸಮಾಧಾನವನ್ನು ಅಂಗಡಿ ಡೀಲರ್‌ಗಳ ಸಂಘ ವ್ಯಕ್ತಪಡಿಸಿದೆ. ನಿಜವಾದ ತಾಂತ್ರಿಕ ವೆಚ್ಚ ಮತ್ತು ನಿರ್ವಹಣೆಗೆ ಈ ಮೊತ್ತ ಸಾಕಾಗುತ್ತಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಆದ್ದರಿಂದ ತಾಂತ್ರಿಕ ಸಹಾಯದ ಕೊರತೆ ಹಾಗೂ ನಿರ್ವಹಣಾ ಸವಾಲುಗಳನ್ನು ನಿಭಾಯಿಸಲು, ಡೀಲರ್‌ಗಳ ಸಂಘವು ಈ ಕಾರ್ಯವಿಧಾನವನ್ನು ಕೇಂದ್ರೀಕೃತ ರೀತಿಯಲ್ಲಿ ಜಾರಿಗೆ ತರುವಂತೆ ರಾಜ್ಯ ಸರಕಾರಕ್ಕೆ ಮನವಿ ಸಲ್ಲಿಸಿವೆ. ಈ ಹಿನ್ನೆಲೆಯಲ್ಲಿ ರಾಜ್ಯವು 35 ಕೋಟಿ ಮೊತ್ತದ ಅನುದಾನಕ್ಕಾಗಿ ಕೇಂದ್ರ ಆಹಾರ ಸಚಿವಾಲಯಕ್ಕೆ ಪತ್ರ ಬರೆದಿದ್ದು, ಈ ಅನುದಾನದಿಂದ ಸಾಫ್ಟ್‌ವೇರ್‌ನ ಪರಿಣಾಮಕಾರಿ ಜಾರಿಗೆ, ಸಾಧನಗಳ ಖರೀದಿ, ನಿರ್ವಹಣೆ ಹಾಗೂ ರಾಜ್ಯದಾದ್ಯಂತ ಪಿಡಿಎಸ್ ವ್ಯವಸ್ಥೆಯ ಸಮರ್ಥೀಕರಣಕ್ಕೆ ಸಹಕಾರವಾಗಲಿದೆ ಎಂದು ಸಚಿವರು ಕೋರಿದ್ದಾರೆ.

ರಾಜ್ಯ ಸರಕಾರ 17.5 ಲಕ್ಷ ಕಾರ್ಡ್‌ಗಳನ್ನು, 45 ಲಕ್ಷ ಫಲಾನುಭವಿಗಳನ್ನು ಒಳಗೊಂಡಿದೆ. ಈ ಫಲಾನುಭವಿಗಳಿಗೆ ಪ್ರತಿ ತಿಂಗಳು 10 ಕೆ.ಜಿ. ಆಹಾರ ಧಾನ್ಯಗಳ ವೆಚ್ಚವನ್ನು ರಾಜ್ಯ ಸರಕಾರದಿಂದ ಭರಿಸಲಾಗುತ್ತಿದೆ. 2023ರಲ್ಲಿ ಮಾತ್ರವೇ 2.95 ಲಕ್ಷ ಹೊಸ ಕಾರ್ಡ್ ಅರ್ಜಿಗಳು ಬಂದಿವೆ. ಇದರಲ್ಲಿ ಈಗಾಗಲೇ 1.65 ಲಕ್ಷ ಕಾರ್ಡ್‌ಗಳನ್ನು ಮಂಜೂರು ಮಾಡಲಾಗಿದೆ. 1.90 ಲಕ್ಷ ಅರ್ಜಿಗಳನ್ನು ಪರಿಶೀಲನೆ ಮಾಡಲಾಗುತ್ತಿದೆ ಮತ್ತು ಇನ್ನೂ 2.6 ಲಕ್ಷ ಅರ್ಜಿಗಳು ಪರಿಶೀಲನೆಯ ಪ್ರಕ್ರಿಯೆಯಲ್ಲಿವೆ. ಈ ಹಿನ್ನೆಲೆಯಲ್ಲಿ, ಎನ್‌ಎಫ್‌ಎಸ್‌ಎ ಫಲಾನುಭವಿಗಳ ಮಿತಿಯನ್ನು 4.60 ಕೋಟಿಗೆ ಮಿತಿ ಹೆಚ್ಚಿಸುವಂತೆ ಕೇಂದ್ರಕ್ಕೆ ಮನವಿ ಸಲ್ಲಿಸಲಾಗಿದೆ.

ಪ್ರಧಾನಿಯಾಗಿ ದಾಖಲೆ ದಿನಗಳ ಆಡಳಿತ, ಮೋದಿಗೆ ಅಭಿನಂದನೆ

ಸಿಎಂ, ಡಿಸಿಎಂ, ರಾಹುಲ್ ಕ್ಷಮೆ ಕೇಳಲಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಲೋಕಸಭಾ ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಚುನಾವಣಾ ಆಯೋಗದ ಮೇಲೆ ಆರೋಪ ಮಾಡಿರುವ ರಾಹುಲ್ ಗಾಂಧಿ ಹಾಗೂ ಅವರ ಮಾತಿಗೆ ಧ್ವನಿಗೂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಾಡಿನ ಜನರ ಕ್ಷಮೆಯಾಚಿಸಬೇಕೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಎಂಬ ಗಾದೆ ಮಾತಿದ್ದುಮ ಕಾಂಗ್ರೆಸ್ ಪರಿಸ್ಥಿತಿ ಇಂದು ಹೀಗಾಗಿದೆ. ರಾಹುಲ್ ಗಾಂಧಿ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಹೇಳಿಕೆಗಳು ಅಪಾಯಕಾರಿ ಬೆಳವಣಿಗೆ. ಕಾಂಗ್ರೆಸ್ ನಾಯಕರ ತುರ್ತು ಪರಿಸ್ಥಿತಿಯ ಮನಸ್ಥಿತಿ ಇಂದಿಗೂ ಬದಲಾಗಿಲ್ಲ ಎಂಬುದಕ್ಕೆ ಮತ್ತೊಂದು ನಿದರ್ಶನವಿದು. ಡಿ.ಕೆ.ಶಿವಕುಮಾರ್ ನಾಡಿನ ಜನರ ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿದರು.

ಚುನಾವಣಾ ಆಯೋಗ ಒಂದು ಸಾಂವಿಧಾನಿಕ ಸಂಸ್ಥೆ. ರಾಹುಲ್ ಗಾಂಧಿ ಮತ್ತಿತರರು ಇಂಥ ಸಾಂವಿಧಾನಿಕ ಸಂಸ್ಥೆ ಬಗ್ಗೆ ಅನುಮಾನ ವ್ಯಕ್ತಪಡಿಸುವುದು ಆ ಚುನಾವಣಾ ಆಯೋಗದ ಅಪಮಾನ ಮಾತ್ರವಲ್ಲ, ಪ್ರಜಾಪ್ರಭುತ್ವ ವಿರೋಧಿ ನಡೆಯೂ ಹೌದು. ಡಿ.ಕೆ.ಶಿವಕುಮಾರ್ ತಮ್ಮ ಸೋದರ ಡಿ.ಕೆ.ಸುರೇಶ್ ಅವರು ಇದೇ ಅಕ್ರಮದಿಂದ ಸೋತಿದ್ದಾಗಿ ಹೇಳಿದ್ದಾರೆ. ಚುನಾವಣಾ ಅಕ್ರಮ ನಡೆದಿದ್ದರೆ ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ 136 ಶಾಸಕರ ಬಲದೊಂದಿಗೆ ಯಾಕೆ ಅಧಿಕಾರಕ್ಕೆ ಬರುತ್ತಿತ್ತು? ಕೇಂದ್ರ ಸರಕಾರ, ನರೇಂದ್ರ ಮೋದಿ, ಬಿಜೆಪಿ ಸೇರಿ ಚುನಾವಣಾ ಆಯೋಗದ ದುರ್ಬಳಕೆ ಮಾಡಿದ್ದಿದ್ದರೆ ಕಾಂಗ್ರೆಸ್‌ನವರು ಮುಖ್ಯಮಂತ್ರಿಯಾಗಲು ಸಾಧ್ಯವಿತ್ತೇ? ಡಿಕೆಶಿ ಡಿಸಿಎಂ ಆಗಿ ಇವತ್ತು ರಾಜ್ಯದಲ್ಲಿ ಅಲೆದಾಡುತ್ತಿಲ್ಲವೇ? ಈಚೆಗೆ 3 ಉಪ ಚುನಾವಣೆಯಲ್ಲೂ ಗೆದ್ದರಲ್ಲವೇ? ಆಗ ಚುನಾವಣಾ ಆಯೋಗದಿಂದ ದುರ್ಬಳಕೆ ಆಗಿಲ್ಲವೇ ಎಂದು ಪ್ರಶ್ನಿಸಿದರು. ಬಿಹಾರ ಮತದಾರರ ಪಟ್ಟಿ ಪರಿಷ್ಕರಣೆ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ ಈಗಾಗಲೇ ಚರ್ಚೆ ನಡೆಯುತ್ತಿದೆ. ಇಂಥ ಸಂದರ್ಭದಲ್ಲಿ ಹೇಳಿಕೆ ಕೊಡುವುದಾದರೆ ಸುಪ್ರೀಂಕೋರ್ಟಿನಲ್ಲಿ ತಿಳಿಸಲಿ ಎಂದರು.

ಪ್ರಧಾನಿಗೆ ಅಭಿನಂದನೆ

ದೇಶದ ಪ್ರಧಾನಿ ನರೇಂದ್ರ ಮೋದಿ ಸಮರ್ಥವಾಗಿ 4,078 ದಿನಗಳ ಆಡಳಿತ ನಡೆಸಿದ್ದಾರೆ. ಅಂದರೆ, ಜವಾಹರಲಾಲ್ ನೆಹರೂ ಅವರ ನಂತರದಲ್ಲಿ ಅತಿ ಹೆಚ್ಚು ದಿನಗಳ ಕಾಲ ದೇಶ ಮುನ್ನಡೆಸುತ್ತಿರುವ ಎರಡನೇ ಪ್ರಧಾನಿ ಆಗಿ ಹೊರಹೊಮ್ಮಿದ್ದಾರೆ. ಇದು ಹೊಸ ದಾಖಲೆ. ಇದಕ್ಕಾಗಿ ನಾಡಿನ, ದೇಶದ ಜನರ ಪರವಾಗಿ ಅಭಿನಂದನೆಗಳು ಎಂದರು. ನರೇಂದ್ರ ಮೋದಿ ಸತತ 3ನೇ ಬಾರಿಗೆ ಪ್ರಧಾನಿಯಾಗಿ ದೇಶ ಮುನ್ನಡೆಸುತ್ತಿದ್ದಾರೆ. ದೇಶದ ಪ್ರಧಾನಮಂತ್ರಿಯಲ್ಲ, ದೇಶ ಸೇವಕ ಎಂಬ ವಿಚಾರ ಇಟ್ಟುಕೊಂಡು ದೇಶ ಮುನ್ನಡೆಸುತ್ತಿದ್ದಾರೆ. ಮೋದಿ ಅವರು ತುರ್ತು ಪರಿಸ್ಥಿತಿ ಹೇರಿದವರಲ್ಲ. ಯಾವುದೇ ಒಂದು ಅನುಕಂಪದ ಆಧಾರದಲ್ಲಿ ಸತತವಾಗಿ ಈ ದೇಶದ ಆಡಳಿತ ನಡೆಸುತ್ತಿಲ್ಲ. ಅವರು ಪ್ರಾಮಾಣಿಕರಾಗಿ, ಪರಿಶ್ರಮದಿಂದ ಅಭಿವೃದ್ಧಿ ಮಾಡುವ ಮೂಲಕ 3ನೇ ಬಾರಿಗೆ ಪ್ರಧಾನಮಂತ್ರಿಯಾಗಿ ಸುದೀರ್ಘವಾಗಿ ದೇಶ ಮುನ್ನಡೆಸುತ್ತಿದ್ದಾರೆ, ಮುಂದೆಯೂ ಕೂಡ ಈ ದೇಶವನ್ನು ಸದೃಢವಾಗಿ ಮುನ್ನಡೆಸಲಿದ್ದಾರೆ ಎಂದರು.

ದ್ವಿಪಕ್ಷೀಯ ಸಂಬಂಧಗಳನ್ನು ಸುಧಾರಿಸುವ ಮಹತ್ವದ ಹೆಜ್ಜೆ

ಮಾಲ್ಡೀವ್ಸ್‌ಗೆ 4,850 ಕೋಟಿ ಸಾಲ

ಮಾಲಿ: ವಿದೇಶಗಳ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಮಾಲ್ಡೀವ್ ಗೆ ಭೇಟಿ ನೀಡಿದ್ದು, ದ್ವಿಪಕ್ಷೀಯ ಸಂಬಂಧಗಳನ್ನು ಸುಧಾರಿಸುವ ಮಹತ್ವದ ಹೆಜ್ಜೆಯಾಗಿ, ಭಾರತ ಸರಕಾರವು ಮಾಲ್ಡೀವ್ಸ್‌ಗೆ 4,850 ಕೋಟಿ ರು. ಮೌಲ್ಯದ ಸಾಲ ನೀಡುವುದನ್ನು ಘೋಷಿಸಿದ್ದಾರೆ.

ಮೋದಿ ಅವರ ಭೇಟಿಯ ಸಂದರ್ಭದಲ್ಲಿ ಮುಕ್ತ ವ್ಯಾಪಾರ ಒಪ್ಪಂದಕ್ಕಾಗಿ ಮಾತುಕತೆಗಳನ್ನು ಪ್ರಾರಂಭಿಸಲಾಗಿದೆ. ಮಾಲ್ಡೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಝು ಅವರೊಂದಿಗೆ ವ್ಯಾಪಕ ಮಾತುಕತೆಗಳ ನಂತರ, ಮೋದಿ ದ್ವಿಪಕ್ಷೀಯ ಹೂಡಿಕೆ ಒಪ್ಪಂದವನ್ನು ಅಂತಿಮಗೊಳಿಸುವ ಪ್ರಯತ್ನಗಳನ್ನು ಘೋಷಿಸಿದರು. ಮಾಲ್ಡೀವ್ಸ್‌ನ ರಕ್ಷಣಾ ಸಾಮರ್ಥ್ಯಗಳನ್ನು ಬಲಪಡಿಸಲು ಭಾರತದ ಬೆಂಬಲವನ್ನು ಇದೇ ವೇಳೆ ಪುನರುಚ್ಚರಿಸಿದರು. 'ಮಾಲ್ಡೀವ್ಸ್‌ನ ಅತ್ಯಂತ ವಿಶ್ವಾಸಾರ್ಹ ಸ್ನೇಹಿತನಾಗಲು ಭಾರತ ಹೆಮ್ಮೆಪಡುತ್ತದೆ' ಎಂದು ಮೋದಿ ಹೇಳಿದ್ದಾರೆ. ಭಾರತದ 'ನೆರೆಹೊರೆಯವರು ಮೊದಲು' ನೀತಿ ಮತ್ತು ಮಹಾಸಾಗರ ದೃಷ್ಟಿಕೋನದಲ್ಲಿ ದ್ವೀಪ ರಾಷ್ಟ್ರದ ಪ್ರಾಮುಖ್ಯತೆಯನ್ನು ಮೋದಿ ಈಗ ಒತ್ತಿ ಹೇಳಿದ್ದಾರೆ. 'ಇಂಡಿಯಾ ಔಟ್' ಅಭಿಯಾನದ ಮೂಲಕ ಅಧಿಕಾರಕ್ಕೆ ಬಂದಿದ್ದ ಮುಯಿಝು ಕೆಲವು ತಿಂಗಳುಗಳ ಉದ್ವಿಗ್ನತೆ ಎದುರಿಸಿದ್ದರು. ಈಗ ಸ್ವತಃ ಮೊಯಿಝು ವಿಮಾನ ನಿಲ್ದಾಣಕ್ಕೆ ತೆರಳಿ ಪ್ರಧಾನಿ ಮೋದಿ ಅವರನ್ನು ಸ್ವಾಗತಿಸಿದ್ದಾರೆ. ಅಧ್ಯಕ್ಷರಾಗಿ ಮೊದಲ ಕ್ರಮಗಳ ಪೈಕಿ ಭಾರತೀಯ ಸೇನಾ ಸಿಬ್ಬಂದಿಯನ್ನು ನಂತರ ನಾಗರಿಕರಿಂದ ಹಿಂತೆಗೆದುಕೊಳ್ಳುವಂತೆ ಮೊಯಿಝು ಒತ್ತಾಯಿಸಿದ್ದರು.



ಮಾಲ್ಡೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಝು ಅವರೊಂದಿಗೆ ಮೋದಿ ದ್ವಿಪಕ್ಷೀಯ ಮಾತುಕತೆ .

ಚುನಾವಣಾ ಅಕ್ರಮ ಆರೋಪ: ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ರಾಜ್ಯದ ಜನರ ಕ್ಷಮೆ ಕೇಳಲು ಬಿಜೆಪಿ ಆಗ್ರಹ

ಚುನಾವಣಾ ಅಕ್ರಮ: ಕಮಲ–ಕೈ ನಡುವೆ ವಾಕ್ಸಮರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೆಲ ದಿನಗಳ ಹಿಂದೆ ಲೋಕಸಭಾ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿಯವರ ಚುನಾವಣಾ ಅಕ್ರಮ ಹೇಳಿಕೆ ರಾಜ್ಯ ರಾಜಕೀಯದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದ್ದು, 'ಪರ–ವಿರೋಧ' ಟೀಕೆಯಲ್ಲಿ ನಾಯಕರು ಮುಳುಗಿದ್ದಾರೆ.

ರಾಹುಲ್ ಗಾಂಧಿ ಹೇಳಿಕೆಯನ್ನು ಸಮರ್ಥಿಸಿಕೊಂಡು ಕಾಂಗ್ರೆಸ್ ನಾಯಕರು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದರೆ, ಇನ್ನೊಂದೆಡೆ ಬಿಜೆಪಿ ನಾಯಕರು, 'ಚುನಾವಣಾ ಅಕ್ರಮ' ಕೇವಲ ಬಿಜೆಪಿ ಗೆದ್ದಿರುವ ಕ್ಷೇತ್ರಗಳಿಗೆ ಸೀಮಿತಗೊಳಿಸಿ ಏಕೆ ಮಾತನಾಡಬೇಕು? ಕರ್ನಾಟಕದಲ್ಲಿ ಅಕ್ರಮ ನಡೆದಿದೆ ಎನ್ನುವುದಾದರೆ, ಕಾಂಗ್ರೆಸ್‌ನ ಒಂಬತ್ತು ಸಂಸದರು ಅಕ್ರಮವಾಗಿಯೇ ಗೆಲುವು ಸಾಧಿಸಿದ್ದಾರೇಯೇ?' ಎಂದು ಪ್ರಶ್ನಿಸಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ದೆಹಲಿಯಲ್ಲಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಚುನಾವಣಾ ಆಯೋಗ ನಾವು ಎತ್ತುತ್ತಿರುವ ಪ್ರಶ್ನೆಗಳನ್ನು ಕೇಳಿಸಿಕೊಳ್ಳುತ್ತಿಲ್ಲ ಹಾಗೂ ಪರಿಸ್ಥಿತಿ ಸರಿಪಡಿಸಲು ಪ್ರಯತ್ನಿಸುತ್ತಿಲ್ಲ, ಆಯೋಗದ ವಿರುದ್ಧ ಹೋರಾಡಬೇಕಾಗುತ್ತದೆ. ಮತಗಳ್ಳತನ ವಿಚಾರವಾಗಿ ರಾಹುಲ್ ಗಾಂಧಿಯವರ ಹೇಳಿಕೆಯನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅವರು ಈ ಬಗ್ಗೆ ದೊಡ್ಡ ಸಂಶೋಧನೆ ಮಾಡಿದ್ದಾರೆ. ಈ ವಿಚಾರವಾಗಿ ನಾವು ಇನ್ನೂ ಹೆಚ್ಚಿನ ದಾಖಲೆಗಳನ್ನು ಒದಗಿಸುತ್ತೇವೆ. ರಾಹುಲ್ ಗಾಂಧಿ ಅವರ ಧ್ವನಿಗೆ ನಾವೂ ಧ್ವನಿ ಸೇರಿಸುತ್ತೇವೆ ಎಂದು ತಿಳಿಸಿದರು.

ಬೆಂಗಳೂರಿನಲ್ಲಿ ನಾನು ಸಹ ಚುನಾವಣಾ ಪ್ರಕ್ರಿಯೆಯನ್ನು ಸಂಪೂರ್ಣ ಪರಿಶೀಲಿಸಿದ್ದೇನೆ. ಒಂದು ಬೂತ್‌ನಿಂದ ಇನ್ನೊಂದು ಬೂತ್‌ಗೆ ಭಾರೀ ಪ್ರಮಾಣದಲ್ಲಿ ಮತಗಳ ವ್ಯತ್ಯಾಸ ಹಲವಾರು ಕ್ಷೇತ್ರಗಳಲ್ಲಿ ಕಂಡು ಬಂದಿದೆ. ಕ್ರಮಬದ್ಧವಾಗಿ ಮತಗಟ್ಟೆಗಳಲ್ಲಿ ಹೆಸರುಗಳನ್ನು ಸೇರಿಸಿಲ್ಲ, ಅಕ್ರಮವಾಗಿ ಸೇರಿಸಲಾಗಿದೆ. ಮಹದೇವಪುರ ಭಾಗದಲ್ಲಿ ನಾವು ಅಧ್ಯಯನ ನಡೆಸಿದ ಪ್ರಕಾರ ಸಾಕಷ್ಟು ಮತಗಳ ವ್ಯತ್ಯಾಸ ಕಂಡು ಬಂದಿದೆ. ನಮ್ಮ ಕಾನೂನು ತಂಡದ ಸುಮಾರು 20 ಸದಸ್ಯರು ಇದರಲ್ಲಿ ಕೆಲಸ ಮಾಡಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ತನ್ನ ಮೇಲೆ ತಾನೇ ಸಂಶಯ ಪಡುತ್ತಿದೆ

ಇದೇ ವಿಷಯಕ್ಕೆ ಸಂಬಂಧಿಸಿದಂತೆ ದೆಹಲಿಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪ್ರತಿಕ್ರಿಯಿಸಿದ್ದು, ಲೋಕಸಭೆ ಚುನಾವಣೆ ವೇಳೆ ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರವೇ ಆಡಳಿತದಲ್ಲಿದ್ದು, ಕಾಂಗ್ರೆಸ್ ತನ್ನ ಆಡಳಿತದ ಮೇಲೆ ತಾನೇ ಸಂಶಯ ಪಡುತ್ತಿದೆ. ಚುನಾವಣೆ ಸೋಲನ್ನು ಅರಗಿಸಿಕೊಳ್ಳಲಾಗದ ಕಾಂಗ್ರೆಸ್‌ಗೆ ಎಲ್ಲೆದರ ಮೇಲೂ ಅನುಮಾನ ಪಡುವುದಾಗಿದೆ. 2024ರ ಲೋಕಸಭೆ ಚುನಾವಣೆ ವೇಳೆ ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಡಳಿತವೇ ಇದೆ. ಚುನಾವಣಾ ಆಯೋಗದಲ್ಲಿ ಅಂದರೆ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ, ತಹಶೀಲ್ದಾರ್ ಹುದ್ದೆಗಳಲ್ಲಿ ತಮ್ಮವರೇ ಇದ್ದಾರೆ. ಈಗ ಅವರನ್ನೇ ಅನುಮಾನದಿಂದ ಕಾಣುತ್ತಿದ್ದಾರೆ ಎಂದು ಸಿಎಂ ಹೇಳಿಕೆಗೆ ಸಚಿವ ಜೋಶಿ ತಿರುಗೇಟು ನೀಡಿದರು.

> ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿಯೂ ಮತಗಳ್ಳತನ ನಡೆದಿದೆ. ಸೋಲಿನ ಅಂತರ ಸುಮಾರು ಏಳೆಂಟು ಇರಬಹುದು ಎಂದುಕೊಂಡಿದ್ದೆವು. ಆದರೆ 1 ಲಕ್ಷ ಮೀರಿತು. ನಾವು ಮತದಾರರ ಪಟ್ಟಿಯನ್ನು ಗಮನಿಸಿದೆವು. ಆಗ ಸಾಕಷ್ಟು ಪೂರ್ವಯೋಜನೆ ನಡೆದಿರುವುದು ಗಮನಕ್ಕೆ ಬಂದಿದೆ. ಇದೇ ರೀತಿ ಮಹದೇವಪುರ ಕ್ಷೇತ್ರವೊಂದರಲ್ಲಿಯೇ 60 ಸಾವಿರ ಮತಗಳಿಗೆ ಸರಿಯಾದ ದಾಖಲೆಗಳೇ ಇಲ್ಲ.
>
> – **ಡಿ.ಕೆ.ಶಿವಕುಮಾರ್**, ಉಪಮುಖ್ಯಮಂತ್ರಿ

> ಕೇಂದ್ರ ಚುನಾವಣಾ ಆಯೋಗ ತರಾತುರಿಯಲ್ಲಿ ಲೋಕಸಭಾ ಚುನಾವಣೆಯ ಸಿಸಿಟಿವಿ ದೃಶ್ಯಾವಳಿಗಳು ಹಾಗೂ ದತ್ತಾಂಶಗಳನ್ನು ಅಳಿಸಿಹಾಕಿದ್ದೇಕೆ? ಚುನಾವಣಾ ಮತಯಂತ್ರಗಳ ಮೇಲೆ ಅನುಮಾನಗಳಿವೆ. ರಾಹುಲ್ ಅವರಿಗೆ ಈ ಬಗ್ಗೆ ಹೆಚ್ಚಿನ ಮಾಹಿತಿ ಇದೆ. ಸೂಕ್ತ ಸಂದರ್ಭದಲ್ಲಿ ಅವರು ಅದನ್ನು ಬಹಿರಂಗ ಪಡಿಸಿದ್ದಾರೆ. ಸಿಸಿಟಿವಿ ಕ್ಯಾಮೆರಾ ಹಾಗೂ ಇತರ ದತ್ತಾಂಶಗಳನ್ನು ಆಯೋಗ 45 ದಿನಗಳಲ್ಲೆ ಅಳಿಸಿ ಹಾಕಿದೆ.
>
> –**ಎಂ.ಬಿ. ಪಾಟೀಲ್**, ಕೈಗಾರಿಕಾ ಸಚಿವ

> ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಇಟ್ಟರು ಎಂಬ ಗಾದೆ ಮಾತಿದೆ. ಕಾಂಗ್ರೆಸ್ ಪರಿಸ್ಥಿತಿ ಇಂದು ಹೀಗಾಗಿದೆ. ರಾಹುಲ್ ಗಾಂಧಿ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಹೇಳಿಕೆ ಅಪಾಯಕಾರಿ ಬೆಳವಣಿಗೆ. ಕಾಂಗ್ರೆಸ್ ನಾಯಕರ ತುರ್ತು ಪರಿಸ್ಥಿತಿಯ ಮನಸ್ಥಿತಿ ಇಂದಿಗೂ ಬದಲಾಗಿಲ್ಲ ಎಂಬುದಕ್ಕೆ ಮತ್ತೊಂದು ನಿದರ್ಶನವಿದು. ಡಿ.ಕೆ.ಶಿವಕುಮಾರ್ ನಾಡಿನ ಜನರ ಕ್ಷಮೆ ಯಾಚಿಸಬೇಕು
>
> –**ವಿಜಯೇಂದ್ರ**, ಬಿಜೆಪಿ ರಾಜ್ಯಾಧ್ಯಕ್ಷ

ಭಾರತೀಯ ಸೈನಿಕರ ಕಲಿತನಕ್ಕೆ ಸಾಕ್ಷಿ ಆಪರೇಷನ್ ಸಿಂದೂರಕ್ಕೂ ಪ್ರೇರಣೆ

ಕಾರ್ಗಿಲ್ ವಿಜಯ ಎಂದೆಂದೂ ಸ್ಫೂರ್ತಿ

ಕಾರ್ಗಿಲ್ ಯುದ್ಧ ಭಾರತೀಯರು ಎಂದೆಂದಿಗೂ ಮರೆಯಲಾಗದ, ಮರೆಯಬಾರದ ಸಮರ. ಪಾಕಿಸ್ತಾನ ಸೇನೆಯನ್ನು ಸದೆಬಡಿದು ಯುದ್ಧವನ್ನು ಸಮಾಪ್ತಿಗೊಳಿಸಿದ, ನಮ್ಮ ಭೂಭಾಗವನ್ನು ಕಬಳಿಸುವ ನೆರೆ ರಾಷ್ಟ್ರದ ದುಷ್ಟ ಹುನ್ನಾರವನ್ನು ವಿಫಲಗೊಳಿಸಿದ 1999ರ ಜುಲೈ 26ರ ದಿನದ ನೆನಪಿಗೆ ಕಾರ್ಗಿಲ್ ವಿಜಯೋತ್ಸವ ದಿನವನ್ನು ಆಚರಿಸಲಾಗುತ್ತದೆ. ನಮ್ಮ ದೇಶದ ಅರ್ಧದಷ್ಟು ಜನಸಂಖ್ಯೆ ಈಗ 25ರ ವಯೋಮಿತಿಯೊಳಗಿನವರು. ಇವರಿಗೆ ಕಾರ್ಗಿಲ್ ಯುದ್ಧ ಎಂದರೆ ಇತಿಹಾಸದ ಪುಟಗಳಲ್ಲಿ ಕೇಳಿ ಬಂದ ವರ್ತಮಾನ. ಇನ್ನುಳಿದ ಬಹುತೇಕರ ಪಾಲಿಗೆ ಕಾರ್ಗಿಲ್ ಯುದ್ಧ ಜೀವಿತಾವಧಿಯಲ್ಲಿ ನಡೆದ ಮೊದಲ ಯುದ್ಧ. ಕಾರ್ಗಿಲ್ ಯುದ್ಧದಲ್ಲಿ ನಮ್ಮ ಸೈನಿಕರು ಪ್ರದರ್ಶಿಸಿದ ಕೆಚ್ಚೆದೆಯ ಧೈರ್ಯ, ರಣೋತ್ಸಾಹವನ್ನು ಮತ್ತೊಮ್ಮೆ ನೆನಪಿಸಿಕೊಂಡು ಹುತಾತ್ಮ ಯೋಧರಿಗೆ ಗೌರವ ಅರ್ಪಿಸುವ ದಿನವಿದು.

ಕಾರ್ಗಿಲ್ ಯುದ್ಧ ಕಲಿಸಿದ ಪಾಠ

- ಗುಪ್ತಚರ ವೈಫಲ್ಯ ಸುಧಾರಣೆ
- ಗಡಿ ಭದ್ರತೆ ಮತ್ತು ಕಣ್ಗಾವಲು ಬಿಗಿ
- ಸಶಸ್ತ್ರ ಪಡೆಗಳ ಆಧುನೀಕರಣ
- ಸದಾ ಯುದ್ಧದ ಸರ್ವಸನ್ನದ್ಧತೆ
- ಮೂರು ಸೇವೆಗಳ ನಡುವೆ ಸಮನ್ವಯ
- ಶಕ್ತರ ಜತೆ ರಾಜತಾಂತ್ರಿಕ ಬಾಂಧವ್ಯ
- ನಾಯಕತ್ವ, ಸೈನಿಕರ ತ್ಯಾಗದ ಮಹತ್ವ
- ನಂಬಿಕೆ ಅರ್ಹವಲ್ಲದ ಪಾಕ್ ವರ್ತನೆ

ಈ ಯುದ್ಧದ ಬಳಿಕ ಪಾಕಿಸ್ತಾನದೊಂದಿಗಿನ ಭಾರತದ ಸಂಬಂಧ ಮತ್ತಷ್ಟು ಹದಗೆಟ್ಟಿದೆ. ಆದರೆ ಯುದ್ಧ ಸನ್ನದ್ಧತೆ, ಯುದ್ಧ ತಂತ್ರ ಮತ್ತು ಶಸ್ತ್ರಾಸ್ತ್ರ ಸಂಗ್ರಹದಲ್ಲಿ ನಾವು ಬಹಳಷ್ಟು ಮುಂದೆ ಸಾಗಿದ್ದೇವೆ. ಗುಪ್ತಚರ ದಳ ಈಗ ಹಿಂದೆಂದಿಗಿಂತಲೂ ಸಮರ್ಥವಾಗಿದೆ. ರಾಜತಾಂತ್ರಿಕತೆಯಲ್ಲೂ ಭಾರತ ಮೇಲುಗೈ ಸಾಧಿಸಿದೆ. ಇದೇ ಕಾರಣದಿಂದ ಇತ್ತೀಚೆಗೆ ನಡೆದ ಆಪರೇಷನ್ ಸಿಂದೂರ್ ಕಾರ್ಯಾಚರಣೆಯಲ್ಲಿ ಕೇವಲ ಮೂರು ದಿನಗಳಲ್ಲಿ ಪಾಕಿಸ್ತಾನವನ್ನು ಮಂಡಿಯೂರುವಂತೆ ಮಾಡಲಾಯಿತು. ಕಾರ್ಗಿಲ್ ಯುದ್ಧದ ಬಳಿಕ ನಾವು ಎರಡು ಬಾರಿ ಪಾಕಿಸ್ತಾನದೊಳಗೆ ನುಗ್ಗಿ ಉಗ್ರರ ಅಡಗುದಾಣಗಳನ್ನು ಧ್ವಂಸಗೊಳಿಸಿದ್ದೇವೆ. ಇಂದು ಭಾರತದ ಪಾಲಿಗೆ ಪಾಕ್ ಸಮನಿಲ್ಲದ ಶತ್ರು. ಆದರೆ ಇದಕ್ಕೆ ಮೂಲ ಪ್ರೇರಣೆ ಕಾರ್ಗಿಲ್ ಯುದ್ಧದಲ್ಲಿ ನಮ್ಮ ಯೋಧರು ತೋರಿಸಿದ ಅತ್ಯುಚ್ಚ ಪರಾಕ್ರಮ ಮತ್ತು ಬಲಿದಾನ ಎನ್ನುವುದರಲ್ಲಿ ಎರಡು ಮಾತಿಲ್ಲ.

ಎರಡು ತಿಂಗಳ ಸಮರ: 1999 ಮೇ ತಿಂಗಳಿನಲ್ಲಿ ಆರಂಭವಾದ ಕಾರ್ಗಿಲ್ ಯುದ್ಧ ಜುಲೈ ಅಂತ್ಯದ ತನಕ ಅಂದರೆ ಸುಮಾರು ಎರಡು ತಿಂಗಳ ಕಾಲ ನಡೆಯಿತು. ಈ ಯುದ್ಧದಲ್ಲಿ ಲೇಹ್ ಹೆದ್ದಾರಿಯವರೆಗೆ ನುಗ್ಗಿ ಬಂದಿದ್ದ ಪಾಕ್ ಸೇನೆಯನ್ನು ಭಾರತೀಯ ಸೇನೆ ಕೆಚ್ಚೆದೆಯಿಂದ ಯಶಸ್ವಿಯಾಗಿ ಹಿಮ್ಮೆಟ್ಟಿಸಿತ್ತು. ಈ ಯುದ್ಧದಲ್ಲಿ ಭಾರತೀಯ ಸೇನೆಯ ಅಧಿಕಾರಿಗಳು ಸೇರಿದಂತೆ ಸುಮಾರು 527 ಭಾರತೀಯ ಯೋಧರು ಹುತಾತ್ಮರಾದರು.

ಕಾಶ್ಮೀರದಲ್ಲಿರುವ ಕಾರ್ಗಿಲ್ ಹಿಮಾಲಯದ ಬೆಟ್ಟಗುಡ್ಡಗಳಿಂದ ಆವೃತವಾದ ಪ್ರದೇಶ. ಕಾರ್ಗಿಲ್ ಕಾಶ್ಮೀರದ ರಾಜಧಾನಿ ಶ್ರೀನಗರದಿಂದ 205 ಕಿ.ಮೀ. ದೂರದಲ್ಲಿದೆ. ಲೇಹ್ ಮತ್ತು ಶ್ರೀನಗರವನ್ನು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ 1 ಕಾರ್ಗಿಲ್ ಮೂಲಕ ಹಾದು ಹೋಗುತ್ತದೆ. ಈ ಪ್ರದೇಶದಲ್ಲಿ ಇರುವ ಏಕೈಕ ಹೆದ್ದಾರಿ ಇದಾಗಿದೆ. ಅಲ್ಲದೆ ವಿಶ್ವದ ಅತ್ಯಂತ ಎತ್ತರದಲ್ಲಿರುವ ಯುದ್ಧ ಭೂಮಿ ಸಿಯಾಚಿನ್‌ಗೂ ಸಂಪರ್ಕ ಕಲ್ಪಿಸುತ್ತದೆ ಈ ಹೆದ್ದಾರಿ. ಈಗ ಈ ಹೆದ್ದಾರಿಯಲ್ಲಿ ಸುರಂಗ ಮಾರ್ಗ ನಿರ್ಮಾಣವಾಗಿದೆ. ಆದರೆ ಈ ಮೊದಲು ಕಡಿದಾದ ಬೆಟ್ಟಗುಡ್ಡಗಳಿಂದ ಆವೃತ್ತವಾದ ಪ್ರದೇಶದಲ್ಲಿ ಹಾದು ಹೋಗಬೇಕಿತ್ತು. ಬೆಟ್ಟದ ಮೇಲ್ಭಾಗದಲ್ಲಿರುವ ಪಾಕಿಸ್ತಾನದ ಸೈನಿಕರ ಫಿರಂಗಿ ಮತ್ತು ರೈಫಲ್‌ಗಳಿಗೆ ನಮ್ಮ ಸೇನಾ ವಾಹನಗಳು ಸುಲಭದ ಗುರಿಯಾಗಿದ್ದವು.

ಯುದ್ಧ ಆರಂಭವಾಗಿದ್ದು ಏಕೆ?: ಈ ಯುದ್ಧ ನಡೆಯಲು ಮುಖ್ಯ ಕಾರಣ ಪಾಕಿಸ್ತಾನದ ದುಷ್ಟ ಹುನ್ನಾರ. ಕಾರ್ಗಿಲ್ ಪ್ರದೇಶದಲ್ಲಿ ಭಾರತ ಮತ್ತು ಪಾಕಿಸ್ತಾನದ ಗಡಿ ನಿಯಂತ್ರಣ ರೇಖೆ ಇದೆ. ಈ ಪ್ರದೇಶದಲ್ಲಿ ಚಳಿಗಾಲದಲ್ಲಿ ತಾಪಮಾನ ಮೈನಸ್ 60 ಡಿಗ್ರಿ ಸೆಲ್ಸಿಯಸ್‌ವರೆಗೂ ಇಳಿಯುತ್ತದೆ. ಇದರಿಂದ ಇಲ್ಲಿ ಗಡಿ ಕಾಯುವುದು ಯಾವುದೇ ಸೈನ್ಯಕ್ಕೆ ಸವಾಲಿನ ಕೆಲಸ. ಚಳಿಗಾಲದಲ್ಲಿ ಭಾರತೀಯ ಸೈನಿಕರು ಮತ್ತು ಪಾಕ್ ಸೈನಿಕರು ಇಲ್ಲಿಂದ ಸ್ಥಳಾಂತರಗೊಳ್ಳುತ್ತಿದ್ದರು. ಚಳಿಗಾಲ ಮುಗಿದ ಬಳಿಕ ಇಲ್ಲಿಗೆ ಮತ್ತೆ ಗಡಿ ಕಾಯುವುದಕ್ಕೆ ಹೋಗುವುದು ಹಿಂದಿನಿಂದ ನಡೆದುಕೊಂಡು ಬಂದ ಪದ್ಧತಿಯಾಗಿತ್ತು. 1999 ರಲ್ಲಿ ಈ ಸಂದರ್ಭವನ್ನೇ ಬಳಸಿಕೊಂಡ ಪಾಕಿಸ್ತಾನ, ಕಾಶ್ಮೀರದ ಹೋರಾಟಗಾರರ ಹೆಸರಿನಲ್ಲಿ ಪಾಕ್ ಸೈನಿಕರು, ಭಾರತದ ಪ್ರಮುಖ ಭಾಗಗಳನ್ನು ತನ್ನ ವಶಕ್ಕೆ ಪಡೆದುಕೊಂಡಿದ್ದರು.

ಪಾಕಿಸ್ತಾನದ ದುಷ್ಟ ಸಂಚು: ಭಾರತದ ಎದುರು ನೇರ ಯುದ್ಧ ಸಾಧ್ಯವಿಲ್ಲ ಎಂದು ಮನಗಂಡ ಅಂದಿನ ಪಾಕ್ ಸೇನಾ ಮುಖ್ಯಸ್ಥ ಜನರಲ್ ಪರ್ವೇಜ್ ಮುಷರ್ರಫ್ ಈ ಯುದ್ಧದ ರೂವಾರಿ. 1998ರ ಜನವರಿ 16ರಂದು ಪಾಕಿಸ್ತಾನದ ಮಿಲಿಟರಿ ಕಾರ್ಯಾಚರಣೆ ನಿರ್ದೇಶನಾಲಯದ ಕಾರ್ಯಾಚರಣೆ ಕೊಠಡಿಯಲ್ಲಿ ಮುಷರ್ರಫ್ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಕಾರ್ಗಿಲ್ ದಾಳಿಯ ಸಂಚು ರೂಪುಗೊಂಡಿತ್ತು. ವಿಚಿತ್ರ ಎಂದರೆ ಫೆಬ್ರವರಿ 19, 1999 ರಂದು ಭಾರತದ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಮತ್ತು ಪಾಕ್ ನವಾಜ್ ಷರೀಫ್ ಲಾಹೋರ್‌ನಲ್ಲಿ ಭೇಟಿಯಾಗಿ ಹೊಸ ಸಂಬಂಧ ಬೆಸೆಯಲು ಮುಂದಾಗಿದ್ದರು. ಆದರೆ ಇದರ ನಡುವೆಯೇ 'ಆಪರೇಷನ್ ಕೊಹ್-ಇ-ಪೈಮಾ (ಕೆಪಿ)' ಸಂಕೇತನಾಮದ ಹೆಸರಿನಲ್ಲಿ ಭಾರತದ ನೆಲ ಕಬಳಿಕೆಗೆ ಪಾಕ್ ಸೇನೆ ಯೋಜನೆ ಅಂತಿಮಗೊಳಿಸಿತ್ತು. 1998 ರ ಅಕ್ಟೋಬರ್ ಆರಂಭದಲ್ಲಿ ಕಾರ್ಯಾಚರಣೆ ಸಿದ್ಧತೆ ನಡೆದು ಕೆಲವೇ ತಿಂಗಳಲ್ಲಿ ಪಾಕ್ ಸೈನಿಕರು ಭಾರತದೊಳಕ್ಕೆ ನುಗ್ಗಲು ಪ್ರಾರಂಭಿಸಿದ್ದರು. ಸೈನಿಕ ಕಾರ್ಯಾಚರಣೆಗೆ ಪಾಕ್ ಸೇನೆ ಅನುಮೋದನೆ ನೀಡುವ ಹೊತ್ತಿಗೆ, ನಾರ್ದರ್ನ್ ಲೈಟ್ ಇನ್‌ಫೆಂಟ್ರಿ ಮತ್ತು ಸಿಂಧ್ ರೆಜಿಮೆಂಟ್‌ನ 200 ಕ್ಕೂ ಹೆಚ್ಚು ಪಾಕಿಸ್ತಾನಿ ಸೈನಿಕರು ಭಾರತದ ಭೂಪ್ರದೇಶದೊಳಗೆ ಹಬ್ಬಿಬಿಟ್ಟಿದ್ದರು.

ಆಪರೇಷನ್ ವಿಜಯಕ್ಕೆ ಚಾಲನೆ: ಆರಂಭದಲ್ಲಿ ಪಾಕ್ ಸೈನ್ಯದ ಹುನ್ನಾರ ಭಾರತೀಯ ಸೇನೆಯ ಅರಿವಿಗೆ ಬಂದಿರಲಿಲ್ಲ. ಆದರೆ ಪಾಕಿಸ್ತಾನಿಯರನ್ನು ಕಂಡ ಕಾಶ್ಮೀರದ ಕೆಲವು ಕುರಿಗಾಹಿ ಜನರು, ಭಾರತೀಯ ಸೇನೆಗೆ ವಿಷಯ ಮುಟ್ಟಿಸಿದ್ದರು. ತಕ್ಷಣವೇ ಕಾರ್ಯ ಪ್ರವೃತ್ತರಾದ ಸೇನಾಧಿಕಾರಿಗಳು, ಐದು ಯೋಧರನ್ನು ಗಸ್ತು ತಿರುಗಲೆಂದು ಕಳುಹಿಸಿಕೊಟ್ಟರು. ಆದರೆ ರಾಕ್ಷಸೀ ಪ್ರವೃತ್ತಿಯ ಪಾಕ್ ಸೇನೆ, ಭಾರತದ ಆ ಐವರು ಯೋಧರನ್ನು ನಾನಾ ವಿಧದ ಚಿತ್ರಹಿಂಸೆ ನೀಡಿ ಸಾಯಿಸಿತು. ಇದನ್ನು ಗಂಭೀರವಾಗಿ ಪರಿಗಣಿಸಿದ ಭಾರತ, ತಕ್ಷಣವೇ ಪಾಕಿಸ್ತಾನಕ್ಕೆ ಪ್ರತ್ಯುತ್ತರ ನೀಡಲು ನಿರ್ಧರಿಸಿತು. ಇಪ್ಪತ್ತು ಸಾವಿರ ಭಾರತೀಯ ಸೈನಿಕರನ್ನು ಸಜ್ಜುಗೊಳಿಸಿ ಮೇ 3 ರಿಂದ ಆಪರೇಷನ್ ವಿಜಯ ಹೆಸರಿನಲ್ಲಿ ಕಾರ್ಯಾಚರಣೆ ಆರಂಭ ಮಾಡಿತು.

ಆಪರೇಷನ್ ಸಫೇದ್ ಸಾಗರ್: ಪಾಕಿಸ್ತಾನವು ಭಾರತದ ದಾಳಿ ಎದುರಿಸಲು ಮೊದಲೇ ಸಕಲ ಸಿದ್ಧತೆ ಮಾಡಿಕೊಂಡಿತ್ತು. ಪಾಕ್ ಸುಮಾರು 5,000ಕ್ಕೂ ಹೆಚ್ಚು ಸೈನಿಕರು ಶಸ್ತ್ರಾಸ್ತ್ರಗಳೊಂದಿಗೆ ಗಡಿ ನುಸುಳಿ ಬಂದಿದ್ದರು. ದ್ರಾಸ್ ಮತ್ತು ಕಾರ್ಗಿಲ್ ಬೆಟ್ಟದಲ್ಲಿ ಕಾದು ಕುಳಿತಿದ್ದ ಪಾಕ್ ಸೇನೆಯನ್ನು ಎದುರಿಸುವುದು ಸುಲಭವಿರಲಿಲ್ಲ. ಎತ್ತರದ ಪ್ರದೇಶದಲ್ಲಿ ಸಾಕಷ್ಟು ಸಮಸ್ಯೆ ಇದ್ದರೂ ಶೆಲ್ ದಾಳಿಯ ಮೂಲಕ ಭಾರತೀಯ ಸೇನೆ ಪಾಕಿಸ್ತಾನಿಯ ಬಂಕರ್‌ಗಳತ್ತ ದೃಷ್ಟಿ ಇರಿಸಿತ್ತು. ಭಾರತಕ್ಕೆ ಬೋಫೋರ್ಸ್ ಫಿರಂಗಿ , ವಾಯುಪಡೆಯ ಮಿಗ್-27, ಮಿಗ್-29 ಯುದ್ಧ ವಿಮಾನಗಳು ಸೇನೆಗೆ ಸಾಕಷ್ಟು ಬಲ ತುಂಬಿದ್ದವು.

ಇನ್ನೊಂದೆಡೆ 'ಆಪರೇಷನ್ ಸಫೇದ್ ಸಾಗರ್ ' ಅನ್ನು ಪ್ರಾರಂಭಿಸಿದ ಭಾರತೀಯ ವಾಯುಪಡೆ, ಪಾಕಿಸ್ತಾನದ ಸೈನಿಕರ ಮೇಲೆ ದಾಳಿ ಮಾಡಲು ಇಂಡಿಯನ್ ಮಿಗ್ -21, ಮಿಗ್ -27 ಮತ್ತು ಮಿರಾಜ್ 2000 ನಂತಹ ಯುದ್ಧ ವಿಮಾನಗಳನ್ನು ಬಳಸಿತು. ಪಾಕ್ ಶತ್ರುಗಳನ್ನು ನಿರ್ಮೂಲನೆ ಮಾಡಲು ಐಎಎಫ್ ಯೋಧರು ಈ ವಿಮಾನಗಳಿಂದ ರಾಕೆಟ್ ಮತ್ತು ಕ್ಷಿಪಣಿಗಳನ್ನು ಹಾರಿಸಿದರು.

ಆಪರೇಷನ್ ತಲ್ವಾರ್: ತೈಲ ಮತ್ತು ಇಂಧನ ಪೂರೈಕೆಯನ್ನು ನಿಲ್ಲಿಸಲು ಯುದ್ಧದ ಸಮಯದಲ್ಲಿ ಪಾಕಿಸ್ತಾನದ ಬಂದರುಗಳನ್ನು ನಿರ್ಬಂಧಿಸಲು ಭಾರತೀಯ ನೌಕಾಪಡೆ 'ಆಪರೇಷನ್ ತಲ್ವಾರ್ ' ಅನ್ನು ಪ್ರಾರಂಭಿಸಿತು. ಇದರಿಂದಾಗಿ ಪಾಕಿಸ್ತಾನೀಯರ ಸೇನೆಯನ್ನು ಹಿಮ್ಮೆಟ್ಟಿಸುವಲ್ಲಿ ಭಾರತ ಯಶಸ್ವಿಯಾಯಿತು. ಪಾಕಿಸ್ತಾನಿಗಳನ್ನು ಬಗ್ಗು ಬಡಿದ ಭಾರತೀಯ ಸೈನಿಕರು, ಜುಲೈ 24 ರಂದು ಪಾಕಿಗಳನ್ನು ಹಿಮ್ಮೆಟ್ಟಿಸಿ ಭಾರತ ಯುದ್ಧ ಗೆದ್ದಿತು. ಇದಾದ ಬಳಿಕ ಪ್ರತೀ ವರ್ಷ ಜುಲೈ 26 ರಂದು ಕಾರ್ಗಿಲ್ ವಿಜಯ ದಿವಸ್ ಅನ್ನು ಆಚರಣೆ ಮಾಡಲಾಗುತ್ತದೆ.

ಶೌರ್ಯ, ಪರಾಕ್ರಮಗಳ ಸಂಕೇತ

ಭಾರತದ ಯುವ ಅಧಿಕಾರಿಗಳು ಮತ್ತು ಸೈನಿಕರ ಶೌರ್ಯವು ಅಂತಿಮವಾಗಿ ಪಾಕಿಸ್ತಾನವನ್ನು ಮಂಡಿಯೂರುವಂತೆ ಮಾಡಿತು. ಪಾಕಿಸ್ತಾನದ ಮಿಲಿಟರಿಯನ್ನು ಸಂಪೂರ್ಣವಾಗಿ ಸೋಲಿಸುವ ಮೂಲಕ ಭಾರತವು ಅಸಾಧ್ಯವಾದದ್ದನ್ನು ಸಾಧಿಸಿ ತೋರಿಸಿತು. ಕಾರ್ಗಿಲ್ ಯುದ್ಧವು 2 ತಿಂಗಳು 3 ವಾರಗಳು ಮತ್ತು 2 ದಿನಗಳ ಕಾಲ ನಡೆಯಿತು, ಅಂದರೆ ಸರಿಸುಮಾರು 60 ದಿನಗಳು. ಇದು ಮೇ 3, 1999 ರಂದು ಪ್ರಾರಂಭವಾಗಿ ಜುಲೈ 26, 1999 ರಂದು ಕೊನೆಗೊಂಡಿತು. ಈ ಯುದ್ಧದಲ್ಲಿ ಭಾರತೀಯ ಸಶಸ್ತ್ರ ಪಡೆಗಳ 527 ಸೈನಿಕರು ಹುತಾತ್ಮರಾದರು.

ದೆ ಯೇ ದಿಲ್ ಮಾಂಗೇ ಮೋರ್

ತಮ್ಮ ಅಸಾಧಾರಣ ಧೈರ್ಯ, ಕಲಿತನಕ್ಕೆ ಹೆಸರಾದ ಕ್ಯಾಪ್ಟನ್ ವಿಕ್ರಮ್ ಬಾತ್ರಾ, ಅವರ ಸಾಹಸಗಾಥೆ ಕಾರ್ಗಿಲ್ ಯುದ್ಧದ ಹೈಲೈಟ್. ಜೂನ್ 20 ರಂದು ಪಾಯಿಂಟ್ 5140 ವಶಪಡಿಸಿಕೊಂಡ ಬಾತ್ರಾ ಎರಡನೇ ದಿನಗಳ ಅಂತರದಲ್ಲಿ ನಡೆದ ಮತ್ತೊಂದು ಕಾರ್ಯಾಚರಣೆಯಲ್ಲಿ ಹುತಾತ್ಮರಾದರು. ಅವರ ಶ್ರೇಷ್ಠ ನಾಯಕತ್ವ ಹಾಗೂ ಬಲಿದಾನದ ದ್ಯೋತಕವಾಗಿ ಸೈನ್ಯದ ಅತ್ಯುನ್ನತ ಗೌರವವಾದ ಪರಮ ವೀರ ಚಕ್ರದಿಂದ ಸನ್ಮಾನಿಸಲಾಯಿತು. ಯುದ್ಧದ ಸಮಯದಲ್ಲಿ ಅವರು ಬಳಸಿದ 'ಯೇ ದಿಲ್ ಮಾಂಗೆ ಮೋರ್' ಈಗಲೂ ನಮ್ಮ ಸೈನಿಕರಿಗೆ ಸ್ಫೂರ್ತಿಯ ಸಾಲುಗಳಾಗಿವೆ.

ಯುದ್ಧದಲ್ಲಿನ ಅಸಾಧಾರಣ ಶೌರ್ಯಕ್ಕಾಗಿ ಕ್ಯಾಪ್ಟನ್ ಮನೋಜ್ ಕುಮಾರ್ ಪಾಂಡೆ, ರೈಫಲ್‌ಮ್ಯಾನ್ ಸಂಜಯ್ ಕುಮಾರ್, ಗ್ರೆನೇಡಿಯರ್ ಯೋಗೇಂದ್ರ ಸಿಂಗ್ ಯಾದವ್ ಅವರಿಗೆ ಪರಮ ವೀರ ಚಕ್ರವನ್ನು ನೀಡಲಾಯಿತು. ಆದರೆ ಕ್ಯಾಪ್ಟನ್ ಅನುಜ್ ನಾಯರ್, ಮೇಜರ್ ವಿವೇಕ್ ಗುಪ್ತಾ, ಮೇಜರ್ ರಾಜೇಶ್ ಸಿಂಗ್ ಅಧಿಕಾರಿ, ಮೇಜರ್ ಪದ್ಮಪಾಣಿ ಆಚಾರ್ಯ, ಕ್ಯಾಪ್ಟನ್ ಎನ್ ಕೆಂಗುರುಸೆ, ಲೆಫ್ಟಿನೆಂಟ್ ಕೀಶಿಂಗ್ ಸಿ



ನೊಂಗ್ರಮ್, ಮೇಜರ್ ಸೋನಮ್ ವಾಂಗ್ಚುಕ್, ಲೆಫ್ಟಿನೆಂಟ್ ಬಲ್ವಂತ್ ಸಿಂಗ್, ನಾಯಕ್ ದಿಗೇಂದ್ರ ಕುಮಾರ್ ಅವರೆಲ್ಲರಿಗೂ ಮಹಾ ವೀರ ಚಕ್ರವನ್ನು ನೀಡಲಾಯಿತು. ಇನ್ನೂ ಅನೇಕ ಯೋಧರು ಇತಿಹಾಸದ ಪುಟದಲ್ಲಿ ಅಚ್ಚಳಿಯದೆ ಉಳಿದುಬಿಟ್ಟಿದ್ದಾರೆ.

ನಿಗದಿತ ಬೆಲೆಗಿಂತ ದುಬಾರಿ ದರಕ್ಕೆ ಮಾರಾಟ | ಗದಗ ಜಿಲ್ಲೆಯಲ್ಲಿ ಮುಖ್ಯ ಬೆಳೆಯೇ ಹೆಸರು

ಈ ಬಾರಿ ಎಲ್ಲ ಕಡೆ ಮೆಕ್ಕೆಜೋಳ ಬೆಳೆ ಹಾವಳಿ | ಜಿಲ್ಲಾಡಳಿತದ ವಿರುದ್ಧ ಅನ್ನದಾತರ ಆಕ್ರೋಶ

ರಸಗೊಬ್ಬರ ಮೇನಿಯಾ, ಸಿಗುತ್ತಿಲ್ಲ ಯೂರಿಯಾ !

ಜಿಲ್ಲಾ ನೋಟ

ಮಾಳಿಂಗರಾಯ ಪೂಜಾರ, ಗದಗ

ಈ ಬಾರಿ ಮಳೆರಾಯನ ಕೃಪೆಯಿಂದ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಬೆಳೆಗಳು ಚೆನ್ನಾಗಿದ್ದು ಅತಿವೃಷ್ಟಿಯಿಂದ ತೇವಾಂಶ ಹೆಚ್ಚಾಗಿ ರೈತರಿಗೆ ರಸಗೊಬ್ಬರದ ಕೊರತೆ ಬಿಸಿ ತಟ್ಟಿದೆ. ರೈತರು ರಸಗೊಬ್ಬರದ ಮಾರಾಟ ಮಳಿಗೆಗಳ ಮುಂದೆ ಇಡೀ ರಾತ್ರಿ ಕಳೆದರೂ ಗೊಬ್ಬರ ಸಿಗದಂತಹ ಸ್ಥಿತಿ ಉದ್ಭವಿಸಿದೆ..!

ದುಬಾರಿ ದರಕ್ಕೆ ಮಾರಾಟ: ಸಕಾಲಕ್ಕೆ ಗೊಬ್ಬರ ಹಾಕದಿದ್ದರೆ ಬೆಳೆಗಳು ಅತಿವೃಷ್ಟಿಯಿಂದ ಹಾಳಾಗುತ್ತವೆ ಎಂದು ರೈತರು ಪರದಾಡುತ್ತಿದ್ದಾರೆ. ಬೇಡಿಕೆ ಹೆಚ್ಚಾದರೆ ಬೆಲೆ ಹೆಚ್ಚಾಗುತ್ತದೆ. ಈ ಅಭಾವದ ಪರಿಸ್ಥಿತಿಯನ್ನೇ ಬಳಸಿಕೊಂಡ ವರ್ತಕರು ಗೊಬ್ಬರವನ್ನು ದುಬಾರಿ ದರಕ್ಕೆ ಮಾರಾಟ ಮಾಡುತ್ತಿದ್ದಾರೆ. ಯೂರಿಯಾ ಗೊಬ್ಬರದ ಚೀಲದ ಲಿಂಕ್ ಕೂಡ ನೀಡಲಾಗುತ್ತದೆ ಎಂಬ ಆರೋಪಗಳು ಕೇಳಿ ಬರುತ್ತಿದೆ.

ಬದಲಾಗಿದೆ ಬೆಳೆ : ಪ್ರತಿ ವರ್ಷದಂತೆ ಜಿಲ್ಲೆಯಲ್ಲಿ ರೈತರು ತಾವು ಬಿತ್ತನೆ ಮಾಡುವ ಬೆಳೆಯನ್ನು ಬದಲಾವಣೆ ಮಾಡಿಕೊಂಡಿರುವುದೇ ಗೊಬ್ಬರ ಕೊರತೆಗೆ ಕಾರಣ ಎನ್ನಲಾಗುತ್ತಿದ್ದು, ಜಿಲ್ಲೆಯ ಪ್ರಮುಖ ಬೆಳೆ ಹೆಸರು ಬೆಳೆಯಾಗಿತ್ತು ಆದರೆ ಈ ವರ್ಷ ಮೆಕ್ಕೆಜೋಳ ಹೆಚ್ಚಾಗಿ ಬೆಳೆಯುತ್ತಿದ್ದಾರೆ ಅತಿ ತೇವಾಂಶ ಆದರೆ ಮೆಕ್ಕೆಜೋಳಕ್ಕೆ ರಸಗೊಬ್ಬರ ಅವಲಂಬನೆ ಆಗುತ್ತದೆ. ಜಿಲ್ಲೆಯ ಲಕ್ಷ್ಮೇಶ್ವರ, ನರಗುಂದ, ರೋಣ, ಗಜೇಂದ್ರಗಡ, ಶಿರಹಟ್ಟಿ, ಗದಗ ಸೇರಿದಂತೆ ಜಿಲ್ಲಾದ್ಯಂತ ಯೂರಿಯಾ ಗೊಬ್ಬರದ ಕೊರತೆ ಹೆಚ್ಚಾಗಿದ್ದು, ರೈತರು ಗೊಬ್ಬರಕ್ಕಾಗಿ ಬೀದಿಗೆ ಬಂದಿದ್ದಾರೆ.

ದುಪ್ಪಟ್ಟು ಗೊಬ್ಬರದ ಬೇಡಿಕೆ : ಈಗಾಗಲೇ ಕೃಷಿ ಇಲಾಖೆಯ ಮಾಹಿತಿ ಪ್ರಕಾರ ಜಿಲ್ಲೆಗೆ ಯೂರಿಯಾ ಗೊಬ್ಬರದ ಪೂರೈಕೆ ಜುಲೈ ತಿಂಗಳವರೆಗೆ 20 ಸಾವಿರ ಮೆಟ್ರಿಕ್ ಟನ್ ಮಾಡಲಾಗಿದ್ದು, ಇದರಲ್ಲಿ 18 ಸಾವಿರ ಮೆಟ್ರಿಕ್ ಟನ್ ಮಾರಾಟ ಮಾಡಲಾಗಿದೆ. ಇನ್ನೂ ಕೇವಲ 2ಸಾವಿರ ಮೆಟ್ರಿಕ್ ಟನ್ ಮಾತ್ರ ದಾಸ್ತಾನು ಇದೆ. ನಾಳೆ 200 ಟನ್ ಹಾಗೂ ನಾಡಿದ್ದು 500 ಟನ್ ಬರುವುದಿದೆ. ಆದರೆ ರೈತರಿಗೆ ಸಮರ್ಪಕ ಗೊಬ್ಬರ ವಿತರಣೆಯಲ್ಲಿ ಕೃಷಿ ಇಲಾಖೆಯಿಂದ ಆಗುತ್ತಿಲ್ಲ. ಹಿಂದಿನ 5 ವರ್ಷದ ವಿತರಣೆ ನೋಡಿ ಕೇಂದ್ರ ಕಚೇರಿಯಿಂದ ಗೊಬ್ಬರ ಕಳುಹಿಸಲಾಗಿದೆ ಎಂದು ಕೃಷಿ ಇಲಾಖೆ ಮಾಹಿತಿ ನೀಡುತ್ತದೆ. ಆದರೆ ಹಿಂದಿನ ವರ್ಷದ ಗೊಬ್ಬರ ಮಾರಾಟಕ್ಕಿಂತ ಎರಡು ಪಟ್ಟು ಗೊಬ್ಬರದ ಬೇಡಿಕೆಯಿದೆ.

ಯೂರಿಯಾ ಸೈಡ್ ಎಫೆಕ್ಟ್ : ಯೂರಿಯಾ ಗೊಬ್ಬರದ ಬಳಕೆಯಿಂದ ಮನುಷ್ಯನ ಆರೋಗ್ಯದ ಮೇಲೆ ಪರಿಣಾಮ ಹಾಗೂ ಮಣ್ಣಿನ ಫಲವತ್ತತೆ ಕಡಿಮೆ ಆಗುತ್ತಿದೆ. ಇದರ ಬದಲಿ ಸಾರಜನಕ, ರಂಜಕ, ಪೊಟ್ಯಾಷ್ ಕಾಂಪ್ಲೆಕ್ಸ್ ಗೊಬ್ಬರ, ನ್ಯಾನೋ ಯೂರಿಯಾ ಬಳಸುವಂತೆ ಕೃಷಿ ಅಧಿಕಾರಿಗಳು ರೈತರಿಗೆ ಮನವಿ ಮಾಡಿಕೊಳ್ಳುತ್ತಿದ್ದಾರೆ. ಆದರೆ ರೈತರು ಇಲಾಖೆ ಸಲಹೆ ಕೇಳಿಸಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಯೂರಿಯಾ ಗೊಬ್ಬರವೇ ಬೇಕೆಂದು ಹಠಕ್ಕೆ ಬೀಳುತ್ತಿದ್ದಾರೆ.

ಮೆಕ್ಕೆಜೋಳ ಪ್ರದೇಶ ಹೆಚ್ಚಳ: ಜಿಲ್ಲೆಯಲ್ಲಿ ಈ ಹಿಂದಿನಿಂದ ಪ್ರಮುಖ ಬೆಳೆ ಹೆಸರು ಬೆಳೆ ಆಗಿತ್ತು. ಹೆಸರು ಬೆಳೆ ಗುರಿ 1,32,500 ಹೆಕ್ಟೇರ್ ಗುರಿ ಇತ್ತು. ಆದರೆ 95 ಸಾವಿರ ಹೆಕ್ಟೇರ್ ಬಿತ್ತನೆ ಆಗಿದೆ. ಕೇವಲ 72 ರಷ್ಟು ಮಾತ್ರ ಬಿತ್ತನೆ ಆಗಿದೆ. ಹೆಸರು ಬೆಳೆಗೆ ರಸ ಗೊಬ್ಬರ ಬಳಕೆ ಕಡಿಮೆ. ಆದರೆ ಮೆಕ್ಕೆಜೋಳ 1,15,700 ಹೆಕ್ಟೇರ್ ಗುರಿಗೆ 1,43,000 ಹೆಕ್ಟೇರ್ ಪ್ರದೇಶ ಬಿತ್ತನೆ ಆಗಿದೆ. ಗುರಿಗಿಂತ 30 ಸಾವಿರ ಹೆಕ್ಟೇರ್ ಹೆಚ್ಚು ಮೆಕ್ಕೆಜೋಳ ಬಿತ್ತನೆಗೆ ಮಾಡಲಾಗಿದೆ. ಇದರಿಂದ ಜಿಲ್ಲೆಯಲ್ಲಿ ಯೂರಿಯಾ ಗೊಬ್ಬರ ಕೊರತೆ ಬಿಸಿ ಹೆಚ್ಚಾಗಿದೆ.

ರಾತ್ರಿಯೇ ರೈತರ ಪಾಳೆ : ಸಮರ್ಪಕ ಯೂರಿಯಾ ಗೊಬ್ಬರ ಸಿಗದಿರುವುದಕ್ಕೆ ರೈತರು ಪರದಾಡುತ್ತಿದ್ದಾರೆ. ಕಳೆದ ಮೂರು-ನಾಲ್ಕು ದಿನಗಳಿಂದ ನಿರಂತರ ಮಳೆ ಆಗುತ್ತಿದ್ದು, ಇದರಿಂದ ಬೆಳೆಯನ್ನು ಉಳಿಸಿಕೊಳ್ಳಲು ರೈತರು ರಸ ಗೊಬ್ಬರಕ್ಕಾಗಿ ಹರಸಾಹಸ ಪಡುತ್ತಿದ್ದಾರೆ. ಲಕ್ಷ್ಮೇಶ್ವರದಲ್ಲಿ ಅನೇಕ ಅಗ್ರೋ ಕೇಂದ್ರಗಳಲ್ಲಿ ರೈತರು ರಾತ್ರಿ ಬಂದು ಟಿಕಾಣಿ ಹೂಡಿ ಪಾಳೆ ನಿಲ್ಲುತ್ತಿದ್ದು, ಒಬ್ಬರಿಗೆ 1 ಅಥವಾ 2 ಚೀಲ ಯೂರಿಯಾ ಕೊಡುತ್ತಿದ್ದು, ಇದರಿಂದ ರೈತರು ಮತ್ತಷ್ಟು ಆಕ್ರೋಶಕ್ಕೆ ಒಳಗಾಗುತ್ತಿದ್ದಾರೆ. ಕೃಷಿಲಾಖೆಯವರು ರೈತರಿಗೆ ಅವಶ್ಯಕತೆಗೆ ತಕ್ಕಂತೆ ರಸಗೊಬ್ಬರ ನೀಡುವಲ್ಲಿ ವಿಫಲರಾಗಿದ್ದಾರೆ ಎನ್ನಲಾಗುತ್ತಿದೆ.

> **ಮೆಕ್ಕೆಜೋಳ ಬಿತ್ತನೆ ಪ್ರದೇಶ ಹೆಚ್ಚಾಗಿರುವುದರಿಂದ ಗೊಬ್ಬರದ ಬೇಡಿಕೆ ಹೆಚ್ಚಾಗಿದೆ. ರೈತರು ಯೂರಿಯಾ ಗೊಬ್ಬರದ ಬದಲಿ ನ್ಯಾನೋ ಯೂರಿಯಾ ಹಾಕಬೇಕು. ಅಲ್ಲದೆ ಅತಿಯಾಗಿ ರಸಗೊಬ್ಬರ ಬಳಕೆ ಮಾಡಿದರೆ ಭೂಮಿಯಲ್ಲಿ ಫಲವತ್ತತೆ ಕಡಿಮೆ ಆಗುತ್ತದೆ. ಹಾಗೆ ನಮ್ಮ ಆರೋಗ್ಯದ ಮೇಲೂ ಪರಿಣಾಮ ಬೀರುತ್ತದೆ. ಆದಷ್ಟು ಸಾವಯವ ಗೊಬ್ಬರ ಬಳಕೆ ಮಾಡಬೇಕು.**
>
> -ಜಿ.ಎಚ್.ತಾರಾಮಣಿ, ಜಂಟಿ ಕೃಷಿ ನಿರ್ದೇಶಕರು

ಅನ್ನದಾತರ ಆಕ್ರೋಶ : ಸಮರ್ಪಕ ಗೊಬ್ಬರ ನೀಡಲಾಗದ ಜಿಲ್ಲಾಡಳಿತದ ವಿರುದ್ಧ ಅನ್ನದಾತರು ಹಿಡಿಶಾಪ ಹಾಕುತ್ತಿದ್ದು, ಅಗ್ರೋ ಕೇಂದ್ರಗಳ ಬಳಿ ಸಾಕಷ್ಟು ಸಂಖ್ಯೆಯಲ್ಲಿ ರೈತರು ಜಮಾವಣೆಗೊಂಡಿದ್ದರಿಂದ, ಪರಸ್ಥಿತಿ ನಿಯಂತ್ರಿಸಲು ಪೊಲೀಸರು ಹರಸಾಹಸ ಪಡಬೇಕಾಗಿದೆ. ಈ ಬಾರಿ ರಸಗೊಬ್ಬರ ಬೇಡಿಕೆ ಹೆಚ್ಚಾಗಲು ಕಾರಣ ಕಳೆದ ಬಾರಿಗಿಂತ ಈ ಬಾರಿ ಮಳೆ ಹೆಚ್ಚಾಗಿರುವುದು, ಮೆಕ್ಕೆಜೋಳ ಪ್ರದೇಶ ಹೆಚ್ಚಾಗಿದ್ದು ಅಂದರೆ ಬಿತ್ತನೆ ಗುರಿಗಿಂತ ಹೆಚ್ಚಾಗಿರುವುದು, ಇದು ಒಂದು ಜಿಲ್ಲೆಯ ಸಮಸ್ಯೆ ಅಲ್ಲ ಉತ್ತರ ಕರ್ನಾಟಕದ ಬಹುತೇಕ ಕಡೆ ರಸ ಗೊಬ್ಬರ ಕೊರತೆ ಎದುರಾಗಿದೆ. ಗದಗ ಜಿಲ್ಲೆಯಲ್ಲಿ ಸಿಗದೆ ಇದ್ದಾಗ ನೆರೆ ಜಿಲ್ಲೆಯಲ್ಲಿ ಗೊಬ್ಬರ ಖರೀದಿಸಲು ಮುಗಿ ಬೀಳುತ್ತಿದ್ದಾರೆ..!

ಖಾಲಿ ಬಿದ್ದ 3876 ಹುದ್ದೆಗಳು | 222 ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ

248 ಶಾಲೆಗಳಲ್ಲಿ ಒಬ್ಬರೇ ಶಿಕ್ಷಕ | ಸಿಗುತ್ತಿಲ್ಲ ಗುಣಮಟ್ಟದ ಶಿಕ್ಷಣ

ನೀಗದ ಶಿಕ್ಷಕರ ಕೊರತೆ, ಆಗದು ಫಲಿತಾಂಶ ಸುಧಾರಣೆ !

ಜಿಲ್ಲಾ ನೋಟ

ಬಸವರಾಜ ನಾಗಡದಿನ್ನಿ, ರಾಯಚೂರು

ಒಂದು ಜಿಲ್ಲೆ ಅಭಿವೃದ್ಧಿ ಪಥದತ್ತ ಸಾಗಬೇಕಾದರೆ, ಶಿಕ್ಷಣ ಅತಿ ಪ್ರಮುಖ ಪಾತ್ರ ವಹಿಸುತ್ತದೆ. ರಾಯಚೂರು ಜಿಲ್ಲೆ ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆ ಎಂಬ ಹಣೆ ಪಟ್ಟಿ ಅಳಿಸಲು ಶಿಕ್ಷಣದ ಗುಣಮಟ್ಟ ಸುಧಾರಣೆಯಾಗಬೇಕಿದೆ. ಶಿಕ್ಷಣದ ಗುಣಮಟ್ಟ ಸುಧಾರಣೆ ಆಗಬೇಕಾದರೆ ಖಾಲಿ ಇರುವ ಶಿಕ್ಷಕರ ಕೊರತೆ ನೀಗಿಸಬೇಕಿದೆ. ಆದರೆ ಈ ಬಗ್ಗೆ ಸರಕಾರಕ್ಕೆ ಕಾಳಜಿ ಇದ್ದಂತಿಲ್ಲ.

ಈ ಬಾರಿಯ ಎಸ್ ಎಸ್ ಎಲ್ ಸಿ ಫಲಿತಾಂಶದಲ್ಲಿ ರಾಯಚೂರು ಜಿಲ್ಲೆ 29 ನೇ ಸ್ಥಾನದಲ್ಲಿದೆ. ಖಾಲಿ ಇರುವ ಶಿಕ್ಷಕರ ಹುದ್ದೆ ಭರ್ತಿಗೆ ಸರಕಾರವಾಗಲಿ, ಜಿಲ್ಲೆಯ ಜನಪ್ರತಿನಿಧಿಗಳಾಗಲಿ ಕಾಳಜಿ ವಹಿಸದೆ, ನಿರ್ಲಕ್ಷ್ಯ ತೋರಿರುವುದರ ಪರಿಣಾಮ ಹತ್ತನೇ ತರಗತಿ ಫಲಿತಾಂಶ ಕುಸಿದಿರುವುದೇ ಸಾಕ್ಷಿಯಾಗಿದೆ. ಫಲಿತಾಂಶ ಕುಸಿತವಾಗಿರುವುದು ಇದೇ ಮೊದಲೇನು ಅಲ್ಲ. ಹತ್ತಾರು ವರ್ಷಗಳಿಂದಲೂ ಫಲಿತಾಂಶ ಪ್ರಮಾಣ ಹೆಚ್ಚಾಗದೆ ಕುಸಿತವಾಗುತ್ತಲೇ ಮುಂದುವರೆದಿದೆ.

ಸಚಿವರು ಸುದೀರ್ಘ ಚರ್ಚೆ: ಇದೇ 18 ರಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣ ಪ್ರಕಾಶ ಪಾಟೀಲ ಅವರ ಅಧ್ಯಕ್ಷತೆಯಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಹತ್ತನೇ ತರಗತಿ ಫಲಿತಾಂಶ ಸುಧಾರಣೆ ಬಗ್ಗೆ ಸುದೀರ್ಘ ಚರ್ಚೆ ನಡೆಸಲಾಯಿತು. ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಸುಮಾರು 3876 ಶಿಕ್ಷಕರ ಹುದ್ದೆಗಳು ಹಲವು ವರ್ಷಗಳಿಂದ ಖಾಲಿ ಇದ್ದರೂ, ಭರ್ತಿಗೆ ಮುಂದಾಗದೆ ಗುಣಮಟ್ಟದ ಶಿಕ್ಷಣ ನೀಡುವುದು ಮತ್ತು ಫಲಿತಾಂಶ ಸುಧಾರಣೆ ಮಾಡಲು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪಂಚಾಯತ ಸಿಇಒ ಅವರಿಗೆ ಉಸ್ತುವಾರಿ ಸಚಿವರು ಜವಬ್ದಾರಿ ನೀಡಿದ್ದಾರೆ. ಶಿಕ್ಷಕರಿಲ್ಲದೆ ಅದ್ಹೇಗೆ ಶಿಕ್ಷಣದ ಗುಣಮಟ್ಟ ಸುಧಾರಿಸಿ, ಫಲಿತಾಂಶದ ಪ್ರಮಾಣ ಹೆಚ್ಚಿಸಬೇಕೆಂಬುವುದು ಮಾತ್ರ ಸಚಿವರು ಹೇಳಲಿಲ್ಲ ಎಂಬ ಮಾತುಗಳು ಕೇಳಿ ಬಂದಿವೆ.



ಶೂನ್ಯ ಶಿಕ್ಷಕರ ಶಾಲೆ; ರಾಯಚೂರು ಜಿಲ್ಲೆಯಲ್ಲಿ 1454 ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿದ್ದು, 8425 ಶಿಕ್ಷಕರ ಹುದ್ದೆ ಮಂಜೂರು ಮಾಡಲಾಗಿದೆ. ಆದರೆ 5263 ಶಿಕ್ಷಕರ ಹುದ್ದೆ ತುಂಬಲಾಗಿದ್ದು, 3162 ಶಿಕ್ಷಕರ ಹುದ್ದೆ ಖಾಲಿ ಇವೆ. 179 ಶಿಕ್ಷಕರೇ ಇಲ್ಲದ ಅಂದ್ರೆ ಶೂನ್ಯ ಶಿಕ್ಷಕರ ಶಾಲೆಗಳಿದ್ದರೆ, 222 ಶಾಲೆಗಳು ಏಕ ಶಿಕ್ಷಕರ ಶಾಲೆಗಳಾಗಿವೆ. ಇದು ಪ್ರಾಥಮಿಕ ಶಾಲೆಯ ಗೋಳಾದರೆ, ಪ್ರೌಢಶಾಲೆಗಳ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ.

> **ಕಲ್ಯಾಣ ಕರ್ನಾಟಕದಲ್ಲಿ ಅತಿ ಹೆಚ್ಚು ಶಿಕ್ಷಕರ ಹುದ್ದೆ ಖಾಲಿ ಇದ್ದು, ದೇವದುರ್ಗ ತಾಲೂಕಿನ ಒಂದರಲ್ಲೇ 85ಕ್ಕಿಂತ ಹೆಚ್ಚು ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರೇ ಇಲ್ಲ. ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರ ಕೊರತೆಯಿಂದಾಗಿ ಈ ಭಾಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಲು ಸಾಧ್ಯವಾಗುತ್ತಿಲ್ಲ. ಎಸ್ ಎಲ್ ಸಿ ಫಲಿತಾಂಶ ಉತ್ತಮಗೊಳಿಸಲು ಶಿಕ್ಷಕರನ್ನು ಭರ್ತಿ ಮಾಡದಿದ್ದರೆ ಫಲಿತಾಂಶ ಸುಧಾರಣೆ ಹೇಗೆ ಸಾಧ್ಯ? ಶಿಕ್ಷಕರನ್ನು ಕೊಡದೆ ಫಲಿತಾಂಶ ಪ್ರಮಾಣ ಹೆಚ್ಚಿಸಬೇಕೆಂದು ಅಧಿಕಾರಿಗಳ ಮೇಲೆ ಒತ್ತಡ ತರೋದು ಇದು ಯಾವ ನ್ಯಾಯ.?**
>
> -ಸೈಯದ್ ಹಫೀಜುಲ್ಲಾ, ಶಿಕ್ಷಣ ಪ್ರೇಮಿ

ಹುದ್ದೆಗಳು ಖಾಲಿ : 230 ಪ್ರೌಢ ಶಾಲೆಗಳಿಗೆ 2222 ಶಿಕ್ಷಕರ ಮಂಜೂರಾತಿಯಾಗಿದೆ. ಆದರೆ 1508 ಶಿಕ್ಷಕರು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದು, 714 ಹುದ್ದೆಗಳು ಖಾಲಿ ಇವೆ. 230 ಪ್ರೌಢ ಶಾಲೆಗಳಲ್ಲಿ 43 ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ. ಇನ್ನೂ 26 ಶಾಲೆಗಳಲ್ಲಿ ಒಬ್ಬರೆ ಶಿಕ್ಷಕರು ಪಾಠ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಶಿಕ್ಷಣ ಗುಣಮಟ್ಟ ಸುಧಾರಿಸಿ, ಫಲಿತಾಂಶ ಹೆಚ್ಚು ಮಾಡಬೇಕೆಂಬುವುದೇ ತಿಳಿಯದಂತಾಗಿದೆ.

ಬಹುಮುಖಿ ಕೆಲಸದ ಒತ್ತಡ: ಶಿಕ್ಷಕರು ಪಾಠ ಮಾಡುವುದರ ಜೊತೆಗೆ ಮತಗಟ್ಟೆ ಅಧಿಕಾರಿ, ಜಾತಿ ಗಣತಿ ಮಾಡುವುದು, ವಿದ್ಯಾರ್ಥಿಗಳ ಶಿಷ್ಯ ವೇತನ ಹಾಕುವುದು, ಆನ್‌ಲೈನ್ ಕೆಲಸ ಮತ್ತು ಬಿಸಿಯೂಟ ಕಾರ್ಯ ನಿರ್ವಹಣೆಯ ಜವಾಬ್ದಾರಿ ನಿರ್ವಹಿಸಬೇಕಿದ್ದು, ಈ ಕೆಲಸಗಳಲ್ಲಿ ಏನಾದರೂ ವ್ಯತ್ಯಾಸವಾದರೆ ಕರ್ತವ್ಯ ಲೋಪದಡಿ ಶಿಕ್ಷೆ ಅನುಭವಿಸಬೇಕಿದೆ. ಹತ್ತಾರು ಒತ್ತಡಗಳ ನಡುವೆ ಶಿಕ್ಷಕರಿಗೆ ಪಾಠ ಮಾಡುವುದೇ ಸವಾಲಿನ ಕೆಲಸವಾಗಿದೆ. ಖಾಲಿ ಇರುವ ಶಿಕ್ಷಕರ ಹುದ್ದೆ ತುಂಬಿ ಮೂಲ ಸಮಸ್ಯೆಗಳನ್ನ ಅರಿತು, ಸಮಸ್ಯೆ ಬಗೆಹರಿಸಿದಾಗ ಮಾತ್ರ ಗುಣಮಟ್ಟದ ಶಿಕ್ಷಣ ಸಿಗುವುದರ ಜತೆಗೆ ಫಲಿತಾಂಶ ಕೂಡ ಹೆಚ್ಚಳವಾಗಲಿದೆ ಎಂಬ ಮಾತು ಶಿಕ್ಷಣ ಪ್ರೇಮಿಗಳದ್ದಾಗಿದೆ.

ಆರಾಮ

ವಿಶ್ವವಾಣಿ
@vishwavaninews
ಬೆಂಗಳೂರು
26-07-2025
ಶನಿವಾರ

ಚಿತ್ತವಿಹಾರ

ಸ್ನೇಹ ಮಾಡ ಬೇಕಿಂಥವರ

● ಮಹಾದೇವ ಬಸರಕೋಡ

ಬದುಕಿನ ಹಾದಿಯಲ್ಲಿ ಸ್ನೇಹಕ್ಕೆ ಅದರದೇ ಆದ ಘನತೆಯಿದೆ. ವೈಯಕ್ತಿಕ ನೆಲೆಯಿಂದ ವಿಶ್ವಸಾಮರಸ್ಯದತ್ತ ಕೊಂಡೊಯ್ಯುವ ಬಹುದೊಡ್ಡ ಶಕ್ತಿಯಿದೆ. ಸ್ನೇಹವಿರದ ಬದುಕು ಜಲವಿಲ್ಲದ ಕೊಳದಂತೆ ಎಂಬ ಮಾತು ಮನನೀಯ. ಸ್ನೇಹ ಮಾಡದವರು ಅದರ ಹದವನ್ನು ಅರಿಯರು. ನಮ್ಮ ನೋವು-ನಲಿವು, ಕಷ್ಟ-ನಷ್ಟಗಳಲ್ಲಿ ಭಾಗಿಯಾಗಿ ಪರಿಹಾರಗಳಿಗೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಬಲ್ಲ, ನಾನಿದ್ದೇನೆ ಎಂಬ ಸಮಾಧಾನದ ಮಾತುಗಳಿಂದ ಸಂತೈಸುವ, ಮಾಗದರ್ಶ ಮಾಡಬಲ್ಲ ಸ್ನೇಹಬಳಗ ನಮ್ಮದಾಗಿದ್ದರೆ ಅದು ನಮ್ಮ ಸೌಭಾಗ್ಯವೇ ಸರಿ. ಯಾವುದೇ ರಕ್ತ ಸಂಬಂಧವಿರದ, ಸ್ವಾರ್ಥಗಳಿಂದ ಮುಕ್ತವಾದ, ಸ್ನೇಹಭಾಂಧವ್ಯ ಬದುಕಿಗೆ ಒಂದರ್ಥದಲ್ಲಿ ಸಾರ್ಥಕತೆಯನ್ನು ತಂದುಕೊಡುವುದು ನಿಜಕ್ಕೂ ಒಪ್ಪತಕ್ಕ ಸಂಗತಿ. ಸ್ನೇಹ ಪರಸ್ಪರ ವಿಶ್ವಾಸವನ್ನು ಅವಲಂಬಿಸಿರುವುದರಿಂದ ಸಾಧ್ಯವಾದಷ್ಟು ಸಮಾನ ಮನಸ್ಕರ ನಡುವೆ ಇರಬೇಕು ಎಂಬ ಸಂಗತಿಯನ್ನು ಅಲ್ಲಗಳೆಯಲಾಗುವುದಿಲ್ಲ.

ನಮಗೆಲ್ಲ ಪರಿಚಿತವಾದ ದುರ್ಯೋಧನ ಮತ್ತು ಕರ್ಣನ ಸ್ನೇಹ ಸಾಮಾಜಿಕ ಮತ್ತು ಆರ್ಥಿಕ ಅಂತಸ್ತನ್ನು ಮೀರಿದ್ದು, ಶ್ರೇಷ್ಠವಾದದ್ದು ಎಂದು ಮೇಲ್ನೋಟಕ್ಕೆ ಕಂಡರೂ ಅದು ಪರಸ್ಪರತೆಯ ಅವಲಂಬನೆಗೆ ಹೊರತಾದದ್ದು ಆಗಿರಲಿಲ್ಲ. ಅಲ್ಲೊಂದು ಬಗೆಯ ವಿನಿಮಯದ ಅಗತ್ಯತೆಯ ಮೇಲೆ ಸ್ನೇಹ ಸಂಬಂಧ ದಿನ ದಿನಕ್ಕೂ ಗಟ್ಟಿಗೊಳ್ಳುತ್ತ ಹೋಯಿತು. ಪಾಂಡವರು ತನ್ನ ಸಹೋದರರೆಂಬ ಸತ್ಯವನ್ನು ತಿಳಿದಾಗಲೂ, ಕರ್ಣ ಅಧರ್ಮಿಯಾದ ದುರ್ಯೋಧನ ಜೊತೆಗೆ ನಿಂತು ಹೋರಾಡುವ ಅನಿಯವಾರ್ಯತೆ ಎದುರಾಯಿತು. ತಾಯಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಮತ್ತು ದುರ್ಯೋಧನನದ ಸ್ನೇಹದ ಋಣವನ್ನು ಅನಿವಾರ್ಯವಾಗಿ ತೀರಿಸಬೇಕಾದ ಸಂದಿಗ್ಧತೆಯನ್ನು ಅನುಭವಿಸಿದ. ಇದಕ್ಕಾಗಿ ತನ್ನ ಪ್ರಾಣವನ್ನು ಕಳೆದುಕೊಳ್ಳಬೇಕಾದ ಅನಿವಾರ್ಯತೆಯನ್ನು ಎದುರಿಸಬೇಕಾಯಿತು. ಇದು ಸ್ನೇಹದ ನಡುವೆ ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಇರದ ದುರಂತವನ್ನು ಬಿಂಬಿಸುತ್ತದೆ. ಸಾಧ್ಯವಾದಷ್ಟು ಸ್ನೇಹ ಸಮಾನಸ್ಕಂದರ ನಡುವೆ ಇರಬೇಕಾದದ್ದು ಅಗತ್ಯವಾಗಿದೆ. ಸ್ನೇಹಿತರ ನಡುವೆ ಸಾಮಾಜಿಕ ಮತ್ತು ಆರ್ಥಿಕ ಅಂತಸ್ತು ಸಮತೆಯಿಂದ ಕೂಡಿದ್ದರೆ ಅಲ್ಲಿ ಸಮತೋಲಿತ ಭಾವ ಕಂಡು ಬರುತ್ತದೆ. ಅಲ್ಲಿ ಅಹಂಕಾರಕ್ಕೆ ಅವಕಾಶವಿರುವುದಿಲ್ಲ, ಯಾವುದೇ ರೀತಿಯ ನಿಂದನೆ, ಅಪಹಾಸ್ಯದ ವ್ಯಸನವಿರದು. ಒಂದೊಮ್ಮೆ ಒಬ್ಬರು ಬಲಿಷ್ಠರಾಗಿ, ಉನ್ನತಿಯನ್ನು ಹೊಂದಿದ್ದರೆ ಮತ್ತೊಬ್ಬರು ಅವರ ಉನ್ನತಿಯಲ್ಲಿ ಅಪವ್ಯಸನಗಳ ಗುರುತಿಸುವಿಕೆಗೆ ಮುಂದಾಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ. ಬಲಿಷ್ಠನಾದವನ ಬುದ್ಧಿ ಶಕ್ತಿಯನ್ನು ಟೀಕಿಸುತ್ತ ಅವನ ಕುರಿತು ಇಲ್ಲಸಲ್ಲದ ಕೊಂಕು ನುಡಿಗಳನ್ನಾಡಬಹುದು. ಅಸಮಾನತೆಯ ಸ್ನೇಹ ಬಹುತೇಕ ಬಾರಿ ಸಾಮಾಜಿಕ ಅಪಹಾಸ್ಯಗಳಿಗೆ ಗುರಿಯಾಗಬಹುದು. ಸ್ವಾರ್ಥವೇ ಎರಕಗೊಂಡ ಸರಕಾಗುತ್ತದೆ. ಇವುಗಳು ಸ್ನೇಹ ಸಂಬಂಧದ ಸೇತುವೆಗೆ ಕೊಡಲಿಪೆಟ್ಟು ನೀಡಬಹುದು. ಹಾಗಾಗಿಯೇ ಸ್ನೇಹ ಮಾಡುವ ಮುನ್ನ ಸಾಧ್ಯವಾದಷ್ಟು ಸಮಾನಸ್ಕಂದರ ಮಧ್ಯೆಯೇ ಸ್ನೇಹ ಬೆಳೆಸುವುದು ಅಗತ್ಯವಾಗಿದೆ. ಇದರ ಜೊತೆಗೆ ಸಮಾನಶೀಲವ್ಯಸನೇಸು ಸಖ್ಯಮ್ ಎಂಬ ಮಾತು ಕೂಡ ಗಮನೀಯ. ಸೀತೆಯನ್ನು ಕಳೆದುಕೊಂಡ ರಾಮ ನೋವು ಪತ್ನಿಯಿದ್ದರೂ ಅವಳ ಸಾಂಗತ್ಯದಿಂದ ದೂರಾಗಿದ್ದ ಸುಗ್ರೀವನಿಗೆ ಜೊತೆ ಬಹುಬೇಗ ಸ್ನೇಹ ಸಂಪಾದಿಸಲು, ಕಾರಣವಾಗುತ್ತದೆ. ನಡುವಿನ ಸ್ನೇಹದಂತೆ ಪರಸ್ಪರ ಅವಲಂಬನೆಯ ತಳಹದಿಯ ಮೇಲೆ ಕಟ್ಟಲ್ಪಟ್ಟರೆ ಅದು ಬಹುಕಾಲ ಬದುಕುತ್ತದೆ. ಮಾತ್ರವಲ್ಲದೇ ಬದುಕನ್ನು ಸುಂದರಗೊಳಿಸಬಲ್ಲದು.

ಭಾರತದ ಹುಲಿ ಮನುಷ್ಯ ಕೈಲಾಶ್ ಸಂಖಲಾ

● ಡಾ.ಕಾರ್ತಿಕ ಜೆ.ಎಸ್

ಅದು 1950 ರ ದಶಕದ ಆರಂಭದ ದಿನಗಳು. ನಮ್ಮ ದೇಶದಲ್ಲಿ ರಾಜರಿಗೆ, ಶ್ರೀಮಂತರಿಗೆ ಬೇಟೆಯಾಡಲು ಪರವಾನಿಗೆ ಸಿಗುತ್ತಿದ್ದ ಕಾಲವದು. ಆ ದಿನಗಳಲ್ಲಿ ಬೇಟೆ ಒಂದು ವಿಶಿಷ್ಟ ಹಬ್ಬವೇ ಆಗಿತ್ತು! ಹೀಗಿರುವಾಗ, ಒಂದು ದಿನ ರಾಜಸ್ಥಾನದ ದಟ್ಟಾರಣ್ಯ ಪ್ರದೇಶವೊಂದರಲ್ಲಿ ಅರಣ್ಯಾಧಿಕಾರಿಯೊಬ್ಬರು ಹುಲಿಯೊಂದಕ್ಕೆ ಗುಂಡು ಹೊಡೆಯುತ್ತಾರೆ. ಸಾವಿನಂಚಿನಲ್ಲಿದ್ದ ಹುಲಿಯ ಸನಿಹಕ್ಕೆ ಬಂದ ಅವರು ಅದರ ಭವ್ಯ ರೂಪ ಮತ್ತು ಕೊನೆ ಕ್ಷಣದ ಆರ್ತನಾದ ನೋಡಿ ಆಘಾತಕ್ಕೊಳಗಾಗುತ್ತಾರೆ. 'ನಾನು ನಿಜವಾಗಿಯೂ ಪ್ರಾಣಿಗಳ ರಕ್ಷಕನೇ? ಅಥವಾ ಬೇಟೆಗಾರನೇ?' ಎಂಬ ಪ್ರಶ್ನೆ ಅವರ ಮನದಲ್ಲಿ ಮೂಡುತ್ತದೆ. ಈ ಘಟನೆ ಆ ವ್ಯಕ್ತಿಯ ಜೀವನದ ದಿಕ್ಕನ್ನೇ ಬದಲಿಸುತ್ತದೆ.

ಪ್ರತಿ ವರ್ಷ ಜುಲೈ 29 ಅನ್ನು ವಿಶ್ವ ಹುಲಿ ದಿನವನ್ನಾಗಿ ಆಚರಿಸಲಾಗುತ್ತಿದೆ. ಜಾಗತಿಕ ಮಟ್ಟದಲ್ಲಿ ಹುಲಿಗಳು ಮತ್ತು ಅವುಗಳ ನೈಸರ್ಗಿಕ ಆವಾಸಸ್ಥಾನಗಳನ್ನು ರಕ್ಷಿಸುವ ತುರ್ತು ಅವಶ್ಯಕತೆ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು ಈ ದಿನದ ಪ್ರಮುಖ ಉದ್ದೇಶವಾಗಿದೆ. ಭಾರತದಲ್ಲಿ ಹುಲಿ ಸಂರಕ್ಷಣೆಗೆ ತನ್ನ ಜೀವನವನ್ನೇ ಮುಡಿಪಾಗಿಟ್ಟ ಕೈಲಾಶ್ ಸಂಖಲಾ ಅವರ ಕುರಿತ ಬರಹವಿದು.

ಅದರ ನಂತರ, ಅವರು ತಮ್ಮ ಸಂಪೂರ್ಣ ಜೀವನವನ್ನು ಹುಲಿಗಳ ಸಂರಕ್ಷಣೆಗೆ ಮೀಸಲಿಡುವ ಶಪಥ ಮಾಡುತ್ತಾರೆ. ಆ ಅಪರೂಪದ ಅರಣ್ಯಾಧಿಕಾರಿಯೇ 'ಭಾರತದ ಹುಲಿ ಮನುಷ್ಯ' ಎಂದೇ ಹೆಸರಾದ ಕೈಲಾಶ್ ಸಂಖಲಾ. ಭಾರತದಲ್ಲಿ ಹುಲಿ ಸಂರಕ್ಷಣಾ ಕಾರ್ಯಕ್ಕೆ ನಾಂದಿ ಹಾಡಿದ ಹೆಗ್ಗಳಿಕೆ ಅವರಿಗೆ ಸಲ್ಲುತ್ತದೆ.

ಕೈಲಾಶ್ ಅವರು 1925 ರಲ್ಲಿ ರಾಜಸ್ಥಾನದ ಜೋಧಪುರದಲ್ಲಿ ಜನಿಸಿದರು. ಬಾಲ್ಯದಿಂದಲೇ ಅವರಿಗೆ ಪರಿಸರ, ವನ್ಯಜೀವಿಗಳ ಕುರಿತು ಅತೀವ ಆಸಕ್ತಿ ಇತ್ತು. ಈ ಆಸಕ್ತಿಯೇ ಅವರಿಗೆ ರಾಜಸ್ಥಾನ ವಿಶ್ವವಿದ್ಯಾನಿಲಯದಿಂದ ಜೀವಶಾಸ್ತ್ರ ವಿಷಯದಲ್ಲಿ ಪದವಿ ಪಡೆಯಲು ಪ್ರೇರಣೆ ನೀಡಿತು. ಮುಂದೆ ಅವರು ಅಮೇರಿಕಾದ ಮಿಚಿಗನ್ ವಿಶ್ವವಿದ್ಯಾನಿಲಯದಿಂದ 'ವನ್ಯಜೀವಿ ಜೀವಶಾಸ್ತ್ರ ಮತ್ತು ಸಂರಕ್ಷಣೆ' ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. 1953 ರಲ್ಲಿ ಅವರು ಭಾರತದ ಅರಣ್ಯ ಸೇವೆಗೆ ಸೇರಿದರು. ಮುಂದೆ ಎರಡು ದಶಕಗಳ ಕಾಲ ಭಾರತದ ವಿವಿಧ ಅಭಯಾರಣ್ಯಗಳಲ್ಲಿ ಅರಣ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

ಅಕ್ರಮ ಬೇಟೆ

ಆ ಸಮಯದಲ್ಲಿ ನಮ್ಮ ದೇಶದಲ್ಲಿ ಅವ್ಯಾಹತವಾಗಿ ನಡೆಯುತ್ತಿದ್ದ ಅಕ್ರಮ ಬೇಟೆ ಮತ್ತು ಆವಾಸಸ್ಥಾನದ ನಾಶದಿಂದಾಗಿ ಹುಲಿಗಳ ಸಂಖ್ಯೆ ತೀವ್ರವಾಗಿ ಕುಸಿಯುತ್ತಿತ್ತು. ಕಾನೂನನ್ನು ಬದಲಾಯಿಸದೆ ಹುಲಿಗಳನ್ನು ಉಳಿಸಲು ಸಾಧ್ಯವಿಲ್ಲ ಎಂಬುದು ಕೈಲಾಶರ ಚಿಂತನೆಯಾಗಿತ್ತು. 1971 ರಲ್ಲಿ ದೇಶದ ಇತಿಹಾಸದಲ್ಲಿಯೇ ಮೊದಲ ಬಾರಿಗೆ, ಕೈಲಾಶರು ರಾಷ್ಟ್ರೀಯ ಮಟ್ಟದ ಹುಲಿ ಗಣತಿಗೆ ಚಾಲನೆ ನೀಡಿದರು. ಫಲಿತಾಂಶ ಆಘಾತಕಾರಿಯಾಗಿತ್ತು. ಕೇವಲ 1400 ಹುಲಿಗಳು ಮಾತ್ರ ಉಳಿದಿದ್ದವು. ಇವರ ಈ ಮಹತ್ತರ ಕಾರ್ಯ ಆಗಿನ ಪ್ರಧಾನಿ ಇಂದಿರಾ ಗಾಂಧಿಯವರ ಗಮನಸೆಳೆಯಿತು; ಮಾತ್ರವಲ್ಲದೆ ಅವರಿಂದಲೇ 1973 ರಲ್ಲಿ ಹುಲಿಗಳನ್ನು ರಕ್ಷಿಸುವ ಮಹತ್ವಾಕಾಂಕ್ಷಿ ಪ್ರಾಜೆಕ್ಟ್ ಟೈಗರ್ ಯೋಜನೆಗೆ ಚಾಲನೆ ಸಿಕ್ಕಿತು. ಕೈಲಾಶ್ ಅವರು ಇದರ ಮೊದಲ ನಿರ್ದೇಶಕರಾಗಿ ನೇಮಕಗೊಂಡರು.

ಪ್ರಾಜೆಕ್ಟ್ ಟೈಗರ್

ಈ ಯೋಜನೆಯ ಮುಖಾಂತರ ಅವರು ನಮ್ಮ ದೇಶದಲ್ಲಿ 9 ಹುಲಿ ಸಂರಕ್ಷಿತ ಪ್ರದೇಶಗಳನ್ನು ಸ್ಥಾಪಿಸಿದರು. ಸ್ವತಃ ಕಾಡಿಗೆ ಭೇಟಿ ನೀಡಿ ಅರಣ್ಯ ಸಿಬ್ಬಂದಿಗಳಿಗೆ ತರಬೇತಿ ನೀಡಿದರು. ಕಠಿಣ ಬೇಟೆ ವಿರೋಧಿ ಕಾನೂನುಗಳ ಅನುಷ್ಠಾನಕ್ಕೆ ಶ್ರಮಿಸಿದರು. ಕೈಲಾಶರ ಅಚಲ ಬದ್ಧತೆ ಮತ್ತು ಅರಣ್ಯ ಸಿಬ್ಬಂದಿಗಳ ನಿಸ್ವಾರ್ಥ ಸೇವೆಯಿಂದಾಗಿ ಯೋಜನೆ ಯಶಸ್ವಿಯಾಯಿತು. ಹುಲಿಗಳ ಸಂಖ್ಯೆ ಜಾಸ್ತಿಯಾಯಿತು. 2022 ರ ಹುಲಿ ಗಣತಿ ವರದಿ ಪ್ರಕಾರ ನಮ್ಮ ದೇಶದಲ್ಲಿರುವ ಹುಲಿಗಳ ಸಂಖ್ಯೆ

3682.ಹುಲಿ ಸಂರಕ್ಷಣೆ ಕಾರ್ಯದಲ್ಲಿ ಸರ್ಕಾರದ ಜೊತೆಗೆ ಸಾರ್ವಜನಿಕರ ಸಕ್ರಿಯ ಭಾಗವಹಿಸುವಿಕೆಯೂ ಅತ್ಯಗತ್ಯ ಎಂಬುದು ಅವರ ನಂಬಿಕೆಯಾಗಿತ್ತು. ಕೈಲಾಶರು ವಿಜ್ಞಾನಿಯಾಗಿ ಮಾತ್ರವಲ್ಲ, ಲೇಖಕರಾಗಿಯೂ ಗುರುತಿಸಿಕೊಂಡಿದ್ದರು.ಅವರು ಬರೆದ 'ಟೈಗರ್! ದಿ ಸ್ಟೋರಿ ಆಫ್ ದಿ ಇಂಡಿಯನ್ ಟೈಗರ್', 'ರಿಟರ್ನ್ ಆಫ್ ದಿ ಟೈಗರ್' ಪುಸ್ತಕಗಳು ಹುಲಿಗಳ ಕುರಿತು ಜನಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾದವು.

ಪದ್ಮಶ್ರೀ ಪ್ರಶಸ್ತಿ

ಹುಲಿಗಳ ಸಂರಕ್ಷಣೆಗೆ ಕೈಲಾಶರು ನೀಡಿದ ಕೊಡುಗೆಗಳು ಅವರಿಗೆ ವ್ಯಾಪಕ ಪುರಸ್ಕಾರಗಳನ್ನು ಗಳಿಸಿಕೊಟ್ಟವು. ಅವುಗಳಲ್ಲಿ 1992 ರಲ್ಲಿ ಅವರು ಪಡೆದ ಪದ್ಮಶ್ರೀ ಪ್ರಶಸ್ತಿ ಪ್ರಮುಖವಾದುದು. 'ಹುಲಿಗಳು ಉಳಿದರೆ ಕಾಡು ಉಳಿಯುತ್ತದೆ. ಕಾಡು ಇದ್ದರೆ ಮಾತ್ರ ನಾವು ಉಳಿದೇವು' ಎಂಬ ದೂರದೃಷ್ಟಿಯ ಸಂದೇಶ ಸಾರಿದ ಕೈಲಾಶರು 1994 ರಲ್ಲಿ ದೈವಾಧೀನರಾದರು. ಅವರು ಸ್ಥಾಪಿಸಿದ ಟೈಗರ್ ಟ್ರಸ್ಟ್, ಇಂದಿಗೂ ವನ್ಯಜೀವಿ ಸಂರಕ್ಷಣೆ ಬೇಕಾದ ಕಾನೂನು ಸಹಾಯ, ಶಿಕ್ಷಣ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ.

ಪ್ರತಿ ವರ್ಷ ಜುಲೈ 29 ಅನ್ನು ವಿಶ್ವ ಹುಲಿ ದಿನವನ್ನಾಗಿ ಆಚರಿಸಲಾಗುತ್ತಿದೆ. ಜಾಗತಿಕ ಮಟ್ಟದಲ್ಲಿ ಹುಲಿಗಳು ಮತ್ತು ಅವುಗಳ ನೈಸರ್ಗಿಕ ಆವಾಸಸ್ಥಾನಗಳನ್ನು ರಕ್ಷಿಸುವ ತುರ್ತು ಅವಶ್ಯಕತೆ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು ಈ ದಿನದ ಪ್ರಮುಖ ಉದ್ದೇಶವಾಗಿದೆ. ಈ ಸಂದರ್ಭ, ಭಾರತದಲ್ಲಿ ಹುಲಿ ಸಂರಕ್ಷಣೆಗೆ ತನ್ನ ಜೀವನವನ್ನೇ ಮುಡಿಪಾಗಿಟ್ಟ ಕೈಲಾಶ್ ಸಂಖಲಾರನ್ನು ಸ್ಮರಿಸುವುದು ಅವರಿಗೆ ನಾವು ನೀಡಬಹುದಾದ ಬಹುದೊಡ್ಡ ಗೌರವ.

● ಮಂಜುನಾಥ ಡಿ. ಎಸ್.

ನೀವು ನಿದ್ದೆಯಲ್ಲಿ ಕಾಣುವುದು ಕನಸಲ್ಲ, ನಿಮ್ಮನ್ನು ನಿದ್ದೆ ಮಾಡಲು ಬಿಡದಿರುವುದು ಕನಸು. ಇದು ದೇಶ ಕಂಡ ಜನಪ್ರಿಯ ರಾಷ್ಟ್ರಪತಿ, ಭಾರತ ರತ್ನ ಡಾ. ಎ ಪಿ ಜೆ ಅಬ್ದುಲ್ ಕಲಾಂ ಅವರ ಪ್ರಚಲಿತ ಹೇಳಿಕೆ.

ತಮಿಳು ನಾಡಿನ ರಾಮೇಶ್ವರಂನಲ್ಲಿ 1931ರ ಅಕ್ಟೋಬರ್ 15ರಂದು ಜನಿಸಿದ ಡಾ. ಕಲಾಮ್ ಸ್ವತಃ ಇಂತಹ ಕನಸು ಕಂಡು ಅದನ್ನು ನನಸಾಗಿಸಿದ ಬಹುಮುಖ ಪ್ರತಿಭೆ. ವಿಜ್ಞಾನಿಯಾಗಿ, ತಂತ್ರಜ್ಞಾನಿಯಾಗಿ, ಶಿಕ್ಷಕರಾಗಿ, ಲೇಖಕರಾಗಿ, ದಾರ್ಶನಿಕರಾಗಿ, ದೇಶದ ಅತ್ಯುನ್ನತ ಸಾಂವಿಧಾನಿಕ ಹುದ್ದೆಯನ್ನಲಂಕರಿಸಿ, ಜನಮಾನಸದಲ್ಲಿ ನೆಲೆಯಾದ ಅಪರೂಪದ ವ್ಯಕ್ತಿ ಡಾ.ಕಲಾಂ. ಭಾರತದ ಮಿಸೈಲ್ ಮ್ಯಾನ್ ಎಂದೇ ಪ್ರಖ್ಯಾತರಾದ ಅವರು ಭಾರತದ ರಕ್ಷಣಾ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರ.

ಇಷ್ಟೆಲ್ಲ ಇದ್ದರೂ ಬೋಧಕ ವೃತ್ತಿ ಅವರಿಗೆ ಅತ್ಯಂತ ಆಪ್ತವಾಗಿತ್ತು; ಅದು ಅವರ ಆದ್ಯತೆಯಾಗಿತ್ತು. ವಿದ್ಯಾರ್ಥಿಗಳೆಂದರೆ ಅವರಿಗೆ ಅಗಾಧ ಪ್ರೇಮ. ಅವರೊಡನೆ ಬೆರೆತು, ಚರ್ಚಿಸಿ, ಮಾರ್ಗದರ್ಶನ ಮಾಡಿ, ಅವರನ್ನು ಪ್ರೇರೇಪಿಸುವುದೆಂದರೆ ಅವರಿಗೆ ಎಲ್ಲಿಲ್ಲದ ಉತ್ಸಾಹ. ಈ ಕಾರಣದಿಂದಲೇ ಅವರ ಜನ್ಮದಿನವನ್ನು ವಿಶ್ವ ವಿದ್ಯಾರ್ಥಿಗಳ ದಿನ ಎಂದು ಆಚರಿಸಲಾಗುತ್ತದೆ. ಅವರ ಜೀವನದ ಅಂತಿಮ ಕ್ಷಣದಲ್ಲೂ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದರು ಎಂಬುದು ಗಮನಾರ್ಹ.

ಕಲಾಂ ರಾಷ್ಟ್ರೀಯ ಸ್ಮಾರಕ

ಡಾ. ಕಲಾಂ ಅವರ ನೆನಪಿನ ಈ ರಾಷ್ಟ್ರೀಯ ಸ್ಮಾರಕವು ರಾಮೇಶ್ವರದಲ್ಲಿದೆ.



2015ರ ಜುಲೈ 27ರಂದು ಐಐಎಂ ಶಿಲ್ಲಾಂಗ್‌ನಲ್ಲಿ ಅವರು, ಜೀವಿಸಲು ಅರ್ಹವಾದ ವಿಶ್ವವನ್ನು ಸೃಷ್ಟಿಸುವ ಕುರಿತು ಉಪನ್ಯಾಸ ಪ್ರಾರಂಭಿಸಿದ್ದರು. ಉಪನ್ಯಾಸ ನೀಡುತ್ತಿರುವಾಗಲೇ ಕುಸಿದು ಬಿದ್ದು ಇಹಲೋಕ ತ್ಯಜಿಸಿದರು. ಬರಸಿಡಿಲಿನಂತೆ ಬಂದೆರಗಿದ ಅವರ ನಿಧನದ ವಾರ್ತೆ ದೇಶವಾಸಿಗಳನ್ನು ದುಃಖಸಾಗರದಲ್ಲಿ ಮುಳುಗಿಸಿತು. ದಿನಾಂಕ 30ರಂದು ಹುಟ್ಟೂರು ರಾಮೇಶ್ವರಂನಲ್ಲಿ ಅವರ ಅಂತ್ಯಕ್ರಿಯೆಯನ್ನು ನೆರವೇರಿಸಲಾಯಿತು. ಈ ಮಹಾಚೇತನಕ್ಕೆ ಗೌರವ ಸಲ್ಲಿಸಲು ಅವರ ಸಮಾಧಿ ಸ್ಥಳದಲ್ಲಿ ರಾಷ್ಟ್ರೀಯ ಸ್ಮಾರಕವೊಂದನ್ನು ನಿರ್ಮಿಸಲು ನಿರ್ಧರಿಸಲಾಯಿತು. ತ್ವರಿತ ಗತಿಯಲ್ಲಿ ನಿರ್ಮಾಣಗೊಂಡ ಈ ಸ್ಮಾರಕ ಸಂಗ್ರಹಾಲಯವನ್ನು 2017ರ ಜುಲೈ 27ರಂದು ಪ್ರಧಾನಿ ನರೇಂದ್ರ ಮೋದಿಯವರು ಲೋಕಾರ್ಪಣೆಗೊಳಿಸಿದರು.

ಡಾ. ಕಲಾಂ ಅವರ ಆಸಕ್ತಿ ಮತ್ತು ಆಶಯಗಳನ್ನು ಬಿಂಬಿಸುವ ದೃಷ್ಟಿಯಿಂದ ನಿರ್ಮಿಸಲಾಗಿರುವ ಈ ಸಂಗ್ರಹಾಲಯದಲ್ಲಿ ನಾಲ್ಕು ಪ್ರದರ್ಶನ ಹಜಾರಗಳಿವೆ. ಸಮಾಧಿಯ ನಾಲ್ಕೂ ದಿಕ್ಕುಗಳಲ್ಲಿನ ಕೋಣೆಗಳಲ್ಲಿರುವ ದರ್ಶಿಕೆಗಳು ಡಾ.ಕಲಾಂ ಅವರ ಜೀವನದ ಪ್ರಮುಖ ಘಟನೆಗಳನ್ನು ಪರಿಚಯಿಸುತ್ತವೆ. ಇವುಗಳಲ್ಲಿ ಮುಖ್ಯವಾಗಿ ಪೋಕರ್ಣ್ ಅಣ್ವಸ್ತ್ರ ಪರೀಕ್ಷೆ, ರಾಕೆಟ್ ಕ್ಷಿಪಣಿ ಹಾಗು ಸಂಬಂಧಿತ ಚಿತ್ರಗಳ ಪ್ರತಿಕೃತಿಗಳು, ಮಕ್ಕಳ ಮೇಲಿನ ಪ್ರೀತಿಯ ಪ್ರತೀಕಗಳು, ಇತ್ಯಾದಿಗಳ ಪ್ರತಿಕೃತಿಗಳು ಸೇರಿವೆ. ಇವಲ್ಲದೆ ಇಲ್ಲಿರುವ ಕುರಾನ್, ಬೈಬಲ್, (ಅಕ್ಷರಬ್ರಹ್ಮ ಯೋಗದ ಪುಟ ತೆರೆದಿಟ್ಟಿರುವ) ಭಗವದ್ಗೀತೆ, ಪ್ರಮಾಣ ಪತ್ರಗಳು, ಪ್ರಶಸ್ತಿಗಳು, ಪದಕಗಳು, ವೀಣೆ, ಹಾಗು ಇತರ ದರ್ಶಿಕೆಗಳು ಡಾ. ಕಲಾಂ ಅವರ ಬಹುಮುಖ ವ್ಯಕ್ತಿತ್ವ ಮತ್ತು ಪ್ರತಿಭೆಯ ಪುರಾವೆಗಳಂತಿವೆ. ಡಾ.ಕಲಾಂ ಅವರು ಜೆ ಎಸ್ ಎಸ್ ಸಂಸ್ಥೆಗೆ ಭೇಟಿ ನೀಡಿದ್ದಾಗಿನ ಚಿತ್ರವೂ ಇಲ್ಲಿದೆ. ಇದು ಶಿಕ್ಷಣಪ್ರೇಮಿ ಕಲಾಂ ಅವರ ಕರ್ನಾಟಕದ ನಂಟಿನ ನಿದರ್ಶನವಾಗಿ ಕಂಡಿತು. ವೀಣಾ ವಾದನದಲ್ಲಿ ತಲ್ಲೀನರಾಗಿರುವ ಡಾ. ಕಲಾಂರ ಪ್ರತಿಮೆ ಅವರ ಕಲಾಪ್ರೇಮದ ಪ್ರತೀಕದಂತೆ ಕಂಗೊಳಿಸುತ್ತದೆ. ರಾಷ್ಟ್ರಪತಿ ಭವನದಲ್ಲಿ ಆಸೀನರಾಗಿರುವ ಡಾ. ಕಲಾಂ ಅವರ ಮೂರ್ತಿ ವೀಕ್ಷಕರನ್ನು ಆಕರ್ಷಿಸುವಂತಿದೆ. ಡಾ. ಕಲಾಂ ಶಿಲ್ಲಾಂಗಿನ ಐಐಎಂನಲ್ಲಿ ಉಪನ್ಯಾಸ ನೀಡುತ್ತಿರುವ ಮತ್ತು ಅಲ್ಲಿಯೇ ಕುಸಿದು ಬಿದ್ದು ಅಸ್ತಂಗತರಾದ ಘಟನೆಯ ಚಿತ್ರಣ ಮನಮುಟ್ಟುವಂತಿದೆ. ಇಲ್ಲಿರುವ ಎರಡೂ ಪ್ರತಿಮೆಗಳಲ್ಲಿ ಒಂದೇ ರೀತಿಯ ದಿರಿಸು ಇದ್ದಿದ್ದರೆ ಇದು ಇನ್ನೂ ನೈಜವೆನಿಸುತ್ತಿತ್ತೆಂಬುದು ನನ್ನ ವೈಯುಕ್ತಿಕ ಅಭಿಮತ. ಡಾ. ಕಲಾಂ ಅವರು ಶಿಲ್ಲಾಂಗಿಗೆ ಕೊಂಡೊಯ್ದಿದ್ದ ಎಲ್ಲ ವಸ್ತುಗಳನ್ನು ಈ ಸ್ಮಾರಕದಲ್ಲಿ ಸಂಗ್ರಹಿಸಿಡಲಾಗಿದೆ. ಇವುಗಳನ್ನು ಕಂಡಾಗ, ಸರಳ ಜೀವನ ಉನ್ನತ ಚಿಂತನೆಯ ಚೇತನದ ಸಾಕಾರವಾದಂತಾಯಿತು.

ಈ ಸ್ಮಾರಕವನ್ನು ವೀಕ್ಷಿಸಿದಾಗ, ದೇಶದ ಪ್ರಗತಿಗೆ ಕಟಿಬದ್ಧರಾಗಿದ್ದ ಡಾ. ಕಲಾಂ ಅವರ ದೃಢ ಸಂಕಲ್ಪ, ಸಂಪೂರ್ಣ ಸಮರ್ಪಣೆ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿನ ಅಪಾರ ಆಸಕ್ತಿ, ಯುವಜನತೆಯನ್ನು ಪ್ರೇರೇಪಿಸುವ ಅವರ ಮಾಂತ್ರಿಕ ಶಕ್ತಿ, ಇತ್ಯಾದಿ ಆಯಾಮಗಳು ಗೋಚರವಾಗುತ್ತವೆ.

ಬೃಹತ್ ಹುತ್ತಕ್ಕೆ ಪೂಜೆ

● ಡಾ.ಕರವೀರಪ್ರಭು ಕ್ಯಾಲಕೊಂಡ ಬಾದಾಮಿ

ಹುತ್ತಗಳನ್ನು ಕಂಡರೆ ಮನುಷ್ಯನಿಗೆ ಅದೊಂದು ರೀತಿಯ ಭಯ, ಭಕ್ತಿ. ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಸುಕ್ಷೇತ್ರ ಸಿದ್ದನಕೊಳ್ಳದಲ್ಲಿ ಸಿದ್ದಪ್ಪಜ್ಜನ ಗದ್ದುಗೆ ಇದೆ. ಅಲ್ಲಿಯೇ ಒಂದು ಮೂಲೆಯಲ್ಲಿ ಹನ್ನೊಂದು ಅಡಿಯ ಹುತ್ತವಿದೆ. ಅಲ್ಲೊಂದು ನಾಗರಹಾವು ವಾಸವಾಗಿದ್ದು, ಅದು ಸಿದ್ದಪ್ಪಜ್ಜನ ಪ್ರತಿರೂಪವೆಂದೇ ಭಕ್ತರ ನಂಬಿಕೆ. ನಾಗರಪಂಚಮಿಯ ಸಮಯದಲ್ಲಿ, ಈ ಹುತ್ತಕ್ಕೆ ಪೂಜಿಸಲು ಭಕ್ತರ ದಂಡೇ ಹರಿದು ಬರುವುದು. ನಮ್ಮ ರಾಜ್ಯದ ಬೇರೆ ಬೇರೆ ಕಡೆಗಳಲ್ಲೂ, ನಾಗರ ಪಂಚಮಿ ಮತ್ತು ವಿನಾಯಕ ಚತುರ್ಥಿಯ ಸಮಯದಲ್ಲಿ ಹುತ್ತಕ್ಕೆ ಪೂಜೆ ಮಾಡಿ, ಎಡೆ ಇಟ್ಟು, ಭಕ್ತಿಯಿಂದ ಜನರು ನಮಿಸುವುದನ್ನು ನೋಡಬಹುದು! ಮೂಲತಃ, ಇಂತಹ ಹುತ್ತಗಳನ್ನು ನಿರ್ಮಿಸುವುದು ಗೆದ್ದಲು ಹುಳಗಳು; ನೆಲದಾಳದಿಂದ ಮಣ್ಣನ್ನು ಮೇಲಕ್ಕೆ ತಂದು, ತಾವೇ ಉತ್ಪತ್ತಿಮಾಡುವ ದ್ರವದೊಂದಿಗೆ ಬೆರೆಸಿ, ಹುತ್ತ ಕಟ್ಟುತ್ತವೆ. ಅದು ಅವುಗಳ ಬಹುಮಹಡಿ ಮನೆ! ನಂತರದ ದಿನಗಳಲ್ಲಿ, ಅಲ್ಲಿ ಹಾವುಗಳು ವಾಸಿಸುವುದುಂಟು. ಅದೇನೇ ಇದ್ದರೂ, ನಾಗರಪಂಚಮಿಯ ಸಮಯದಲ್ಲಿ, ಹುತ್ತದಲ್ಲಿ ವಾಸಿಸುವ ನಾಗರಹಾವಿಗೆ ಪೂಜಿಸುವುದು ನಮ್ಮ ನಾಡಿನ ಸಂಪ್ರದಾಯ, ಪದ್ಧತಿ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

■	1	■	2		3	■	4	
5				■		■		■
■		■		■	6			7
8		9	■	10		■	■	
	■		■		■	11	■	
	■	■	12		■	13	14	
15	16			■	17	■		■
■		■		■	18			
19		■	20			■		■

ಎಡದಿಂದ ಬಲಕ್ಕೆ

2. ಹಣವನ್ನು ಪಾವತಿ ಮಾಡುವಿಕೆ (3)
4. ಶೀವಿ, ದರ್ಪವೂ ಆಗಬಲ್ಲುದು (2)
5. ಒಂದೇ ಹಲ್ಲಿರುವ ಗಣಪ (4)
6. ಯಕ್ಷಿಣಿಗಾರನಿಗೆ ಮತ್ತೊಂದು ಹೆಸರು (4)
8. ಉದಯಕಾಲದಲ್ಲಿ ತಂದ ನೀರು (3)
10. ಸಂಪತ್ತು, ಹಣ (2)
12. ಖಾತ್ರಿಯಾಗಿ ಇದು ಋಷಿಯೊಬ್ಬರ ಹೆಸರು (2)
13. ಶುಭಕೋರು (3)
15. ಮೋಹಕ ನಗೆಯುಳ್ಳವಳು (4)
18. ಮಹತ್ತರವಾದ (4)
19. ಹಿಡಿತ ಅಥವಾ ಸ್ವಾಧೀನ (2)
20. ಮದುವೆಯ ಗಂಡಿನ ಜೊತೆ ಲೋಹವಿದೆ (3)

ಮೇಲಿಂದ ಕೆಳಕ್ಕೆ

1. ದುಂಬಿಯು ಹೂವಿನಿಂದ ಹೀರುವ ರಸ (4)
2. ಋಷಿ (3)
3. ಕರಾವಳಿ ಕರ್ನಾಟಕದ ಪ್ರಸಿದ್ಧ ಕಲೆ (4)
4. ವ್ಯಾಯಾಮ ಶಾಲೆ ಗಡಿಯಲ್ಲಿದೆ (3)
7. ಆ ಕಡೆ ಲಕ್ಷ್ಯ ಕೊಡು (4)
8. ನಿಯಮವನ್ನು ಮೀರು (4)
9. ದುಡಿತಕ್ಕೆ ಹೆಸರಾದ ಪ್ರಾಣಿ (2)
10. ಭೂಮಿ (3)
11. ಜೋರಾದ ಬಾಯಾರಿಕೆ (2)
12. ಅನಿಶ್ಚಿತವಾದ ಎಂದರ್ಥ (4)
14. ಭೂಮಿಯ ಕೆಳಗಿರುವುದೆಂದು ನಂಬಲಾಗಿರುವ ಲೋಕ (4)
16. ಮೇಲಕ್ಕೆ ಜಿಗಿತ (3)
17. ಭಾರವೇ ಇಲ್ಲದ್ದು (3)

ಸರಿಯುತ್ತರಗಳು

[illegible]

ಅನೇಕ ಸಮಸ್ಯೆಗಳಿಗೆ ಪರಿಹಾರ ನಮ್ಮೊಳಗೆ ಇರುತ್ತದೆ

ಆ ಗುರುಗಳ ಆಶ್ರಯದಲ್ಲಿ ಅನೇಕ ಶಿಷ್ಯರು ವಿದ್ಯಾರ್ಜನೆ ಮಾಡುತ್ತಿದ್ದರು. ಅಲ್ಲಿರುವ ಶಿಷ್ಯನೊಬ್ಬನಿಗೆ, ಸದಾ ಒಂದಲ್ಲ ಒಂದು ವಿಷಯದ ಬಗ್ಗೆ ಕೊರಗು. ಅವನಿಗೆ ಅದೆಷ್ಟೇ ಬುದ್ಧಿ ಹೇಳಿದರೂ ಅವನನ್ನು ತಿದ್ದಲು ಗುರುಗಳಿಗೆ ಸಾಧ್ಯವಾಗಿರಲಿಲ್ಲ. ಒಂದಷ್ಟು ಹೊತ್ತು ಧ್ಯಾನಕ್ಕೆ ಕುಳಿತುಕೊಳ್ಳಲು ಕೂಡ ಅವನಿಗೆ ಸಾಧ್ಯವಾಗುತ್ತಿರಲಿಲ್ಲ. ಅವನ ಮನಸ್ಸು ಸದಾ ವಿಚಲಿತವಾಗಿರುತ್ತಿತ್ತು. ಅವನನ್ನು ಹೇಗಾದರೂ ಸರಿದಾರಿಗೆ ತರಬೇಕು ಎಂದು ಗುರುಗಳು ಸದಾ ಆಲೋಚಿಸುತ್ತಿದ್ದರು.

ಒಮ್ಮೆ ತಮ್ಮ ಸಣ್ಣ ಗುಡಿಸಿಲಿನ ಹೊರಗಿನ ಬೀದಿ ದೀಪದ ಬೆಳಕಿನಲ್ಲಿ ಏನನ್ನೂ ಹುಡುಕುತ್ತಿದ್ದರು. ಭಿಕ್ಷೆಗಾಗಿ ಹೊರಗೆ ಹೋಗಿದ್ದ ಅವರ ಶಿಷ್ಯ ಬಂದು ಗುರುಗಳು ಹುಡುಕುವುದನ್ನು ನೋಡಿ ಕೇಳಿದ ಗುರುಗಳೆ, 'ಏನನ್ನು ಈ ಬೀದಿ ದೀಪದ ಬೆಳಕಿನಲ್ಲಿ ಹುಡುಕಾಟ ಮಾಡುತ್ತಿರುವಿರಿ?' ಆಗ ಗುರುಗಳು ಬೇಸರದಲ್ಲೇ 'ಒಂದು ಸೂಜಿ ಕಳೆದು ಹೋಗಿದೆ. ಅದು ಈ ಬೀದಿ ದೀಪದ ಬೆಳಕಿನಲ್ಲಿ ಸಿಗಬಹುದೆ ಎಂದು ಹುಡುಕುತ್ತಿದ್ದೇನೆ' ಎಂದರು.ಅದಕ್ಕೆ ಶಿಷ್ಯ ಕೇಳಿದ, 'ತಾವು ಸೂಜಿಯನ್ನು ಯಾವ ಜಾಗದಲ್ಲಿ ಕಳೆದುಕೊಂಡಿರೆಂದು ಜ್ಞಾಪಕವಿದೆಯೇ?'

'ಹೌದು, ನಾನು ಗುಡಿಸಲಿನಲ್ಲಿ ನನ್ನ ಹಾಸಿಗೆ ಮೇಲೆ ಕಳೆದುಕೊಂಡೆ' ಎಂದರು ಗುರುಗಳು ಹೆಚ್ಚು ಯೋಚಿಸದೆ. ಶಿಷ್ಯನಿಗೆ ಆಶ್ಚರ್ಯವಾಯಿತು, 'ಗುರುಗಳೆ, ನೀವೇ ಆ ಸೂಜಿಯನ್ನು ಗುಡಿಸಲಿನಲ್ಲಿ ಕಳೆದುಕೊಂಡೆ ಎಂದು ಹೇಳುತ್ತಿದ್ದೀರಿ, ಆದರೆ ಇಲ್ಲೇಕೆ ಹುಡುಕುತ್ತೀರಿ?' ಎಂದು ಪ್ರಶ್ನಿಸಿಯೇ ಬಿಟ್ಟ ಅವನಿಗಾದ ಆಶ್ಚರ್ಯವನ್ನು ತಡೆದುಕೊಳ್ಳದೆ ಗುರುಗಳು, ಕಬ್ಬಿಣ ಕಾದಿದೆ ಬಡಿಯಲು ಈಗಲೇ ಸರಿಯಾದ ಸಮಯ ಎಂದುಕೊಂಡರು. ಅಷ್ಟೇ ಮುಗ್ಧತೆಯಿಂದ ಹೇಳಿದರು, 'ಗುಡಿಸಲಿನಲ್ಲಿ ಇರುವ ದೀಪದ ಎಣ್ಣೆ ಕಾಲಿಯಾಗಿದೆ, ಅಲ್ಲಿ ತುಂಬಾ ಕತ್ತಲೆಯಿದೆ, ಆದ್ದರಿಂದ ಹೊರಗಡೆ ಸಾಕಷ್ಟು ಬೀದಿ ದೀಪದ ಬೆಳಕಿರುವುದರಿಂದ ಇಲ್ಲಿ ಹುಡುಕುತ್ತಿದ್ದೇನೆ' ಎಂದರು.

ಶಿಷ್ಯ ತನ್ನ ನಗುವನ್ನು ಹಾಗೆ ತಡೆದು ಹೇಳಿದ ಗುರುಗಳೆ, 'ನೀವು ನಿಮ್ಮ ಸೂಜಿಯನ್ನು ಗುಡಿಸಿಲಿನ ಒಳಗೆ ಕಳೆದುಕೊಂಡರೆ ಅದು ಹೊರಗೆ ಸಿಗುತ್ತದೆ ಎಂದು ಹೇಗೆ ನಿರೀಕ್ಷಿಸುತ್ತೀರಿ?' ಗುರುಗಳು ತಮ್ಮ ಮಂದಸ್ಮಿತ ನಗುವಿನಿಂದ ತಮ್ಮ ಶಿಷ್ಯನಿಗೆ ಹೇಳಿದರು, 'ನಾವೆಲ್ಲರೂ ಹೀಗೆ ತಾನೆ ಮಾಡೋದು? ನಮ್ಮಲ್ಲಿರುವುದನ್ನು ಕಳೆದುಕೊಂಡೆವು ಎಂದು ಭಾವಿಸಿ ಅದನ್ನು ಹುಡುಕಲು ನೂರಾರು ಮೈಲಿಗಳು ಓಡಾಡುತ್ತೇವೆ. ನಮಗೆ ಆಗುವ ಖಿನ್ನತೆ ಆತಂಕ ಬೇಸರಗಳಿಗೆ ದೇವರನ್ನು ದೂಷಿಸುತ್ತ ಓಡಾಡುತ್ತೇವೆ. ಆದರೆ ಧ್ಯಾನ ಮಾಡುತ್ತಾ ನಮ್ಮೊಳಗೆ ನಾವು ಆತ್ಮಾವಲೋಕನ ಮಾಡಿದರೆ ನಮ್ಮ ಆತಂಕಗಳಿಗೆ ಕಾರಣ ಗೊತ್ತಾಗುವುದು ಅಲ್ಲವೇ? ಒಳಗೆ ಕಳೆದುಕೊಂಡದ್ದನ್ನು ನಾವು ಕೂಡ ಹೊರಗೆಲ್ಲೋ ಹುಡುಕುತ್ತಾ ಇದ್ದೆವಲ್ಲ ದಡ್ಡತನ ಅಲ್ಲವೇ' ಎಂದರು? ಶಿಷ್ಯನಿಗೆ ಗುರುಗಳು ಯಾಕೆ ಈ ರೀತಿ ಮಾತನಾಡುತ್ತಿದ್ದಾರೆ ಎಂದು ಅರ್ಥವಾಯಿತು. ಕೈ ಮುಗಿಯುತ್ತಾ ಗುರುಗಳ ಪಾದಕ್ಕೆ ಬಿದ್ದು ನಮಸ್ಕರಿಸಿದ. 'ಕ್ಷಮಿಸಿ, ಗುರುಗಳೇ ನಿಮ್ಮಿಂದ ಒಂದು ದೊಡ್ಡ ಪಾಠ ಕಲಿತಂತಾಯಿತು. ನನ್ನೊಳಗೆ ಕಂಡುಕೊಳ್ಳಬೇಕಾದ ಸಮಾಧಾನ ನೆಮ್ಮದಿ ಆತ್ಮ ಶಕ್ತಿಯನ್ನು ಹೊರಗಿನ ಪ್ರಪಂಚದಲ್ಲಿ ಬೇರೆಯವರನ್ನು ದೂಷಿಸುತ್ತಾ ಹುಡುಕಾಡುತ್ತಿದ್ದೆ. ಇನ್ನು ಮುಂದೆ ನೀವು ಹೇಳಿದಂತೆ ಧ್ಯಾನದಿಂದ ನನ್ನನ್ನು ನಾನು ಕಂಡುಕೊಳ್ಳುವ ಪ್ರಯತ್ನ ಮಾಡುತ್ತೇನೆ' ಎಂದ. ಗುರುಗಳಿಗೆ ಸಂತೋಷವಾಗಿ ಅವನಿಗೆ ಆಶೀರ್ವಾದ ಮಾಡಿದರು.

ನಾವು ಕೂಡ ಹೀಗೆಯೇ ಅಲ್ಲವೇ? ನಮಗೆ ಬಂದ ಕಷ್ಟಗಳಿಗೆ ಮತ್ತೊಬ್ಬರನ್ನು ದೂಷಿಸುತ್ತಾ ಅವರ ಮೇಲೆ ಅಪವಾದ ಹೊರಿಸುತ್ತಾ ಪ್ರಪಂಚದ ಮೇಲೆ ಸಿಟ್ಟು ಮಾಡಿಕೊಂಡು ಓಡಾಡುತ್ತೇವೆ. ಆದರೆ ನಾವು ಎದುರಿಸುವ ಅನೇಕ ಸಮಸ್ಯೆಗಳು ಕಷ್ಟಕೋಟಲೆಗಳಿಗೆ ನಾವೇ ಜವಾಬ್ದಾರರು. ಸಾವಿರ ಜನರನ್ನು ಬೈದುಕೊಂಡು ಓಡಾಡಿದರು. ಅದರಿಂದ ಪಾರಾಗುವ ಕೆಲಸವನ್ನು ನಾವೇ ಮಾಡಬೇಕು. ಅದಕ್ಕ ಆಂತರ್ಯದಲ್ಲಿ ಮೊದಲು ನಾವು ಗಟ್ಟಿಯಾಗಬೇಕು. ಈ ಸಮಸ್ಯೆಗೆ ಹೊರಗಿನಿಂದ ಪರಿಹಾರ ಸಿಗುವುದಿಲ್ಲ. ಇದಕ್ಕೆ ಬೇಕಿರುವ ಮನೋಸ್ಥೈರ್ಯವನ್ನು ಒಳಗಿನಿಂದ ನಾವು ಬೆಳೆಸಿಕೊಳ್ಳಬೇಕು. ಆಗ ಮಾತ್ರ ನಮಗೆ ಪರಿಹಾರ ದೊರಕುತ್ತದೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಎಲ್ಲರ ಹೃದಯದಲ್ಲೂ ಇದೆ ಒಲವು

ಕೊಲೆಗಡಿಕನೆನಿಪ ಹುಲಿ ಸಲಹದೇಂ ಮರಿಗಳನು?
ಒಲುಮೆಕರುಳಡಗಿಹುದು ಪಗೆತನದ ಪೊಡೆಯೊಳ್
ನಲುಮೆಯನು ಹೊರಹೊಮ್ಮಿಸುವುದು ನರನುನ್ನತಿಕೆ
ಒಲವಾತ್ಮವಿಸ್ತರಣ - ಮಂಕುತಿಮ್ಮ॥

ಕೊಲೆಗಡುಕ, ಎಂದೆನಿಸುವ ಹುಲಿಯು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮರಿಗಳನ್ನು ಪ್ರೀತಿಯಿಂದ ಸಲುಹುವುದಿಲ್ಲವೇ? ಅಂದರೆ ಬಾಹ್ಯದಲ್ಲಿ ಕ್ರೂರಿ ಎಂದೆನಿಸುವ ಹುಲಿಯ ಕರುಳಲ್ಲಿ ಒಲುಮೆ ಅಡಗಿರುವುದಿಲ್ಲವೇ? ಹಾಗೆಯೇ ಒಲುಮೆ ಹಾಗೂ ಕ್ರೂರತನ ಎರಡೂ ಸಹ ಎಲ್ಲಾ ಜೀವಿಗಳ ಮನಸ್ಸಿನಲ್ಲೂ ಅಡಗಿದೆ. ಮನುಷ್ಯನ ಹೃದಯದಲ್ಲಿ ಕ್ರೂರತನಕ್ಕಿಂತ ಒಳ್ಳೆಯತನವೆಂಬ ಒಲುಮೆ ಹೊರಹೊಮ್ಮುವುದದು ನರನ ಉನ್ನತಿಗಾಗಿಯೇ ಹೌದು. ಒಲವನ್ನು ತೋರುವುದದು ಆತ್ಮದ ವಿಸ್ತರಣೆಯೇ ಆಗಿದೆ ಎಂದು ಈ ಪದ್ಯದಲ್ಲಿ ಹೇಳಿದ್ದಾರೆ.

ಕೊಂದು ತಿನ್ನುವ ಹುಲಿಗೆ ಅದಕ್ಕಿರುವ ಕೋರೆಹಲ್ಲುಗಳೇ ಕಾರಣ. ಬಲಿಯಾಗುವ ಇತರೆ ಪ್ರಾಣಿಗಳಿಗೆ ಆ ಹುಲಿಯ ಕೋರೆಗಳು ಯಮಪಾಶವಾಗಿ ಕಂಡು ಬರುತ್ತದೆ. ಆದರೆ ಅದೇ ಕೋರೆ ಹಲ್ಲುಗಳು ಆ ಹುಲಿಯ ಮರಿಗಳಿಗೆ ಸುಖದ ಸೋಪಾನವೇ ಹೌದು. ಹುಲಿಯು ಅದೆಷ್ಟು ಕ್ರೂರಿಯೇ ಆಗಿದ್ದರೂ ಸಹ ತನ್ನೊಡಲ ಮರಿಗಳಿಗೆ ಪ್ರೀತಿಯನ್ನು, ವಾತ್ಸಲ್ಯವನ್ನು ತೋರುವುದಿಲ್ಲವೇ? ಹಾಗೆಯೇ ಈ ಜಗದ ಸಕಲ ಜೀವ ರಾಶಿಗಳಲ್ಲೂ ಸಹ ಪ್ರಕೃತಿ ಧರ್ಮಕ್ಕನುಗುಣವಾಗಿ ನಾನಾ ಭಾವನೆಗಳು ಮಾನವನಿಗೆ ಇರುವಂತೆಯೇ ಇವೆ. ಪ್ರಾಣಿಗಳಲ್ಲೂ ಸಹ ಪ್ರೀತಿ, ಬೆದೆ, ಕರುಣೆ, ವಾತ್ಸಲ್ಯ, ಪ್ರೇಮ, ರಾಗ, ದ್ವೇಷ, ಕ್ರೌರ್ಯ ಮತ್ತು ದುಷ್ಟತನಗಳು ಇದ್ದೇ ಇರುತ್ತವೆ. ಹಾಗೆಯೇ ಮನುಷ್ಯನಲ್ಲಿಯೂ ಈ ಗುಣ ಸ್ವಭಾವಗಳು ಇದ್ದೇ ಇರುತ್ತವೆ. ಪ್ರಾಣಿಗಳಿಗೆ ಪ್ರಕೃತಿದತ್ತವಾಗಿ ಬಂದ ಗುಣಗಳು ಇವಾಗಿದ್ದರೆ ಅದೇ ಮಾನವನಿಗೆ ಇವುಗಳು ಕಲಿತು ಬಂದಂತಹ ಗುಣಗಳು. ಅಂದರೆ ಮಾನವನಿಗೆ ಪ್ರಕೃತಿದತ್ತವಾಗಿಯೂ ಜೊತೆಗೆ ಕಲಿತು ಬಂದಂತಹ ಗುಣಗಳೂ ಸೇರಿ ಈತನು ಜ್ಞಾನಿಯಾಗುತ್ತಾ ಬಂದಿದ್ದಾನೆ. ನಾಗರೀಕತೆಯ ಮಜಲುಗಳನ್ನು ನೋಡುತ್ತಲಿದ್ದಾನೆ. ಯಾವ ಮನುಷ್ಯನ ಆಂತರ್ಯದಲ್ಲಿ ದಯೆ, ಕ್ಷಮೆ, ಪ್ರೀತಿ, ವಿಶ್ವಾಸ, ಭ್ರಾತೃತ್ವಗಳು ಮೇಳೈಸುವುದೋ ಆತನು ಒಳ್ಳೆಯ ವ್ಯಕ್ತಿಯಾಗಿ ಈ ಸಮಾಜದಲ್ಲಿ ಕಂಡು ಬರುತ್ತಾನೆ. ಅದೇ ಯಾವ ವ್ಯಕ್ತಿಯಲ್ಲಿ ಈರ್ಷ್ಯೆ, ಸ್ವಾರ್ಥ, ಅಸೂಯೆ, ಇಬ್ಬಂಧಿತನ, ಶ್ರೇಷ್ಟ ಎನ್ನುವ ಕುಟಿಲತೆ, ಮೋಸಗಳು ಕಂಡು ಬರುತ್ತವೆಯೋ ಆತನು ಕೆಟ್ಟವ್ಯಕ್ತಿಯಾಗಿ ಕಾಣಿಸುತ್ತಾನೆ. ಈ ಜಗತ್ತಿನಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಗುಣ ಹಾಗೂ ಅವಗುಣಗಳು ಕಂಡು ಬಂದೇ ಬರುತ್ತವೆ. ಮನುಷ್ಯನ ಹೃದಯದಲ್ಲಿ ಅದೇನೇ ಅವಗುಣಗಳಿದ್ದರೂ ಅವುಗಳನ್ನು ನಿಸ್ತೇಜಿಸಿ ಒಳ್ಳೆಯ ಗುಣಗಳನ್ನು ಪೋಷಿಸುವುದೇ ನಿಜವಾದ ಮಾನವ ಧರ್ಮ, ಅದೇ ನಿಜವಾದ ಒಲುಮೆ, ಅದೇ ನಿಜವಾದ ಅಂತರಾತ್ಮ. ಹಾಗಾಗಿ ಒಲುಮೆ, ಪ್ರೀತಿಯನ್ನು ಉಕ್ಕಿಸುವುದು ನಮ್ಮಗಳ ಉನ್ನತಿಗಾಗಿ, ನಮ್ಮಗಳ ಏಳಿಗೆಗಾಗಿ, ನಮ್ಮಗಳ ಆತ್ಮೋದ್ಧಾರಕ್ಕಾಗಿ. ಹಾಗಾಗಿಯೇ ಈ ಜಗದಲ್ಲಿ ಮಾನವನ ಮಾನವೀಯತೆಯೆಂಬುದು, ಒಲುಮೆ ಎಂಬುದು, ಪ್ರೀತಿ ಎಂಬುದು ವಿಸ್ತಾರವಾಗುತ್ತಾ ಹೋದರೆ ಆ ಬದುಕೇ ಬಲು ಚೆಂದ ಎಂದು ಈ ಕಗ್ಗದಲ್ಲಿ ಪೂಜ್ಯರು ಹೇಳುತ್ತಾರೆ. ಮಾನವನ ಆತ್ಮವು ಎಂದಿಗೂ ಆನಂದ ಸ್ವರೂಪವಾದದ್ದು. ಎತ್ತಲೆಂದೆತ್ತ ನೋಡಿದರೂ ಆತ್ಮವು ಸಂತೋಷವನ್ನೇ ಹರಸುತ್ತಿರುತ್ತದೆ. ಇದು ಮಾನವನ ಸಹಜ ಗುಣವೂ ಹೌದು. ಈ ಒಲುಮೆ, ಪ್ರೀತಿ, ಕ್ಷಮೆ, ಭ್ರಾತೃತ್ವದಿಂದ ಮಾನವನ ಹೃದಯವು ಕೂಡಿದರೆ ಈ ಜಗತ್ತಿನಲ್ಲಿ ಎಲ್ಲೆಲ್ಲಿಯೂ ಶಾಂತಿ ಹಾಗೂ ಸಮೃದ್ಧಿಯೇ ನೆಲಸುತ್ತದೆ. ಶಾಂತಿ ಸಮೃದ್ಧಿಯಿಂದ ಇದ್ದರೆ ಈ ಜಗದಲ್ಲಿ ಯಾವ ಅವಘಡಗಳಿಗೂ ಸ್ಥಳವೇ ಇರುವುದಿಲ್ಲ. ಆದರೆ ಮಾನವನು ಹೊಸತನದ ಅನ್ವೇಷಣೆಯಲ್ಲಿ ಇರುವುದನ್ನು ಬಿಟ್ಟು ಇರದುದರೆಡೆಗೆ ಸಾಗುತ್ತಾ, ತನ್ನೊಳಗೇ ಸಂಘರ್ಷವನ್ನೇರ್ಪಡಿಸುತ್ತಾ ಇರುವ ಶಾಂತಿಯನ್ನು ಕಳೆದುಕೊಂಡು, ಅಶಾಂತಿಯನ್ನು ಸೃಷ್ಟಿಸಿ, ಮತ್ತೆ ಮತ್ತೆ ಶಾಂತಿಯನರಸುತ್ತಾ ಇರುತ್ತಾನೆ. ಹಾಗಾಗಿ ಒಲುಮೆಯು ಮಾನವನಲ್ಲಿ ಹಿರಿದಾದರೆ ಅದೇ ಈ ಜಗತ್ತಿಗೆ ನಾವು ಕೊಡುವ ಕೊಡುಗೆ ಎಂಬುದೇ ಈ ಕಗ್ಗದ ಹೂರಣವಾಗಿದೆ.

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ನೀವೂ ಬರೆಯಬಹುದು

ನಮ್ಮ ವಿಳಾಸ

ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ದಯಾಳ್ ವಿರುದ್ಧ ಮತ್ತೆ ಅತ್ಯಾಚಾರ ಆರೋಪ

ಜೈಪುರ: ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಐಪಿಎಲ್‌ನ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವೇಗಿ ಯಶ್ ದಯಾಳ್ ವಿರುದ್ಧ ರಾಜಸ್ಥಾನದ ಜೈಪುರದಲ್ಲಿ ಎಫ್‌ಐಆರ್ ದಾಖಲಾಗಿದೆ. ಉತ್ತರ ಪ್ರದೇಶದ ಗಾಜಿಯಾಬಾದ್‌ನಲ್ಲಿ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿದ ಆರೋಪ ಎದುರಿಸುತ್ತಿರುವ ದಯಾಳ್ ವಿರುದ್ಧ ದಾಖಲಾದ 2ನೇ ಎಫ್‌ಐಆರ್ ಇದಾಗಿದೆ. ಮದುವೆಯಾಗುವುದಾಗಿ ನಂಬಿಸಿ 5 ವರ್ಷ ಸಹಜೀವನ ನಡೆಸಿದ ಬಳಿಕ ದಯಾಳ್ ಮೋಸ ಮಾಡಿದ್ದಾರೆ ಎಂದು ಮಹಿಳೆ ಆರೋಪಿಸಿದ್ದಾರೆ. ಮಹಿಳೆ ದಾಖಲಿಸಿರುವ ಪ್ರಕರಣದಲ್ಲಿ ದಯಾಳ್ ಬಂಧನಕ್ಕೆ ಹೈಕೋರ್ಟ್ ತಡೆ ನೀಡಿದೆ. ದೂರು ನೀಡಿರುವ ಸಂತ್ರಸ್ತೆ ಕ್ರಿಕೆಟ್ ಆಟಗಾರ್ತಿಯಾಗಿದ್ದು, 2023ರಲ್ಲಿ ನಾನು 17 ವರ್ಷದವಳಾಗಿದ್ದಾಗ ನನ್ನ ಮೇಲೆ ಅತ್ಯಾಚಾರ ಎಸಗಿದ್ದರು. ಈ ವರ್ಷದ ಏಪ್ರಿಲ್‌ನಲ್ಲಿ ಸೀತಾಪುರ ಪ್ರದೇಶದ ಹೋಟೆಲ್‌ನಲ್ಲಿ ಮತ್ತೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿದ್ದಾರೆ. ತಮ್ಮ ಮೇಲಿನ ಎರಡೂ ಅತ್ಯಾಚಾರ ಪ್ರಕರಣಗಳ ಬಗ್ಗೆ ದಯಾಳ್ ಈವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. 2018ರಲ್ಲಿ ಉತ್ತರ ಪ್ರದೇಶ ಪರ ಪ್ರಥಮ ದರ್ಜೆ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಯಶ್ ದಯಾಳ್, 27 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದು, 84 ವಿಕೆಟ್‌ಗಳನ್ನು ಕಬಳಿಸಿದ್ದಾರೆ. 2024ರಿಂದ ಐಪಿಎಲ್‌ನ ಆರ್‌ಸಿಬಿ ತಂಡದಲ್ಲಿ ಆಡುತ್ತಿದ್ದಾರೆ.

ಟೆನಿಸ್: ವೈಷ್ಣವಿಗೆ ಕಂಚು

ಬರ್ಲಿನ್: ಭಾರತದ ಟೆನಿಸ್ ಆಟಗಾರ್ತಿ ವೈಷ್ಣವಿ ಅಡ್ಕರ್ ಇಲ್ಲಿ ನಡೆದ ವಿಶ್ವ ಯೂನಿವರ್ಸಿಟಿ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗೆದ್ದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಪದಕ ಗೆದ್ದ ಭಾರತದ ಮೊದಲ ಆಟಗಾರ್ತಿ ಎಂಬ ಹಿರಿಮೆಗೆ ಅವರು ಪಾತ್ರವಾದರು. ಸೆಮಿಫೈನಲ್‌ನಲ್ಲಿ ವೈಷ್ಣವಿ 6-2, 4-6, 4-6ರಿಂದ ಸ್ಲೋವಾಕಿಯಾದ ಎಸ್ಟರ್ ಮೇರಿ ಅವರಿಗೆ ಸೋತು ಕಂಚು ತಮ್ಮದಾಗಿಸಿ ಕೊಂಡರು. ಮತ್ತೊಂದೆಡೆ ಭಾರತದ ಕಾಂಪೌಂಡ್ ಪುರುಷರ ಮತ್ತು ಮಿಶ್ರ ತಂಡಗಳು ಚಿನ್ನದ ಪದಕ ಸುತ್ತು ಪ್ರವೇಶಿಸಿದವು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಜೋ ರೂಟ್ 38ನೇ ಶತಕ | ಭಾರತದ ಬೌಲರ್‌ಗಳ ಕಳಪೆ ಪ್ರದರ್ಶನ

ಬೃಹತ್ ಮುನ್ನಡೆಯತ್ತ ಇಂಗ್ಲೆಂಡ್

ಮ್ಯಾಂಚೆಸ್ಟರ್: ಭಾರತದ ವಿರುದ್ಧದ ಟೆಸ್ಟ್ ಕ್ರಿಕೆಟ್ ಸರಣಿಯ ನಾಲ್ಕನೇ ಪಂದ್ಯದ 3ನೇ ದಿನದಂದು ಅತಿಥೇಯ ಇಂಗ್ಲೆಂಡ್ ತಂಡವು ಮೊದಲ ಇನ್ನಿಂಗ್ಸ್‌ನಲ್ಲಿ 186 ರನ್‌ಗಳ ಮುನ್ನಡೆ ಸಾಧಿಸಿದ್ದು, ಬೃಹತ್ ಮೊತ್ತ ದಾಖಲಿಸುವತ್ತ ದಾಪುಗಾಲಿಟ್ಟಿದೆ.

ಟೆಸ್ಟ್ ಪರಿಣತ ಬ್ಯಾಟರ್ ಜೋ ರೂಟ್ ಸಿಡಿಸಿದ ಶತಕ, ಅಗ್ರ ಕ್ರಮಾಂಕದ ಜಾಕ್ ಕ್ರಾಲಿ, ಬೆನ್ ಡಕೆಟ್, ಓಲಿ ಪೋಪ್ ಮತ್ತು ನಾಯಕ ಬೆನ್ ಸ್ಟೋಕ್ಸ್ ಅವರ ಅರ್ಧಶತಕಗಳ ಬಲದಿಂದ ಶುಕ್ರವಾರದ ದಿನದಾಟದ ಅಂತ್ಯದ ವೇಳೆಗೆ ಮೊದಲ ಇನ್ನಿಂಗ್ಸ್‌ನಲ್ಲಿ 7 ವಿಕೆಟ್ ನಷ್ಟಕ್ಕೆ 544 ರನ್ ಗಳಿಸಿದೆ.

ಲಿಯಾಮ್ ಡಾಸನ್ 21 ರನ್ ಹಾಗೂ ಬೆನ್ ಸ್ಟೋಕ್ಸ್ 77 ರನ್ ಗಳಿಸಿ ಅಜೇಯರಾಗಿ ಆಟವಾಡುತ್ತಿದ್ದಾರೆ. 2ನೇ ದಿನವೇ ಬ್ಯಾಟಿಂಗ್ ಆರಂಭಿಸಿದ ಅತಿಥೇಯ ಬ್ಯಾಟರ್‌ಗಳು, ಭಾರತದ ಬೌಲರ್‌ಗಳನ್ನು ಚೆನ್ನಾಗಿ ದಂಡಿಸಿದರು. ಆರಂಭಿಕರಾದ ಜಾಕ್ ಕ್ರಾಲಿ ಹಾಗೂ ಬೆನ್ ಡಕೆಟ್ ಜೋಡಿ ಮೊದಲ ವಿಕೆಟ್‌ಗೆ 166 ರನ್ ಸೇರಿಸುವ ಮೂಲಕ ಭದ್ರ ಬುನಾದಿ ಹಾಕಿಕೊಟ್ಟಿತು.

ಜಾನ್ ಕ್ರಾಲಿ 113 ಬಾಲ್‌ಗಳನ್ನು ಎದುರಿಸಿ 84 ರನ್ ಗಳಿಸಿ ಜಡೇಜಾ ಬೌಲಿಂಗ್‌ನಲ್ಲಿ ಕೆ.ಎಲ್. ರಾಹುಲ್‌ಗೆ ಕ್ಯಾಚಿತ್ತು ಔಟಾದರು. ಆ ಬಳಿಕ ಬೆನ್ ಡಕೆಟ್ 94 ರನ್ ಗಳಿಸಿದ್ದ ವೇಳೆ ತಮ್ಮ ವಿಕೆಟ್ ಕಳೆದುಕೊಂಡರು.

ಓಲಿ ಪೋಪ್ ಕೂಡಾ ಶುಕ್ರವಾರ ಉತ್ತಮ ಪ್ರದರ್ಶನ ತೋರಿದರು. 128 ಬಾಲ್‌ಗಳನ್ನು ಎದುರಿಸಿ 71 ರನ್ ಗಳಿಸಿ ವಾಷಿಂಗ್ಟನ್ ಸುಂದರ್ ಬೌಲಿಂಗ್‌ನಲ್ಲಿ ಕೆ.ಎಲ್ ರಾಹುಲ್‌ಗೆ ಕ್ಯಾಚಿತ್ತು ಪೆವಿಲಿಯನ್‌ಗೆ ನಿರ್ಗಮಿಸಿದರು.

ಆ ಬಳಿಕ ಬಂದ ಬ್ರೂಕ್ ಕೇವಲ 3 ರನ್ ಗಳಿಸಿ ತಮ್ಮ ವಿಕೆಟ್ ಕಳೆದುಕೊಂಡರು.

ನಂತರ ಜೋ ರೂಟ್ ಹಾಗೂ ಓಲಿ ಪೋಪ್ ಇಂಗ್ಲೆಂಡ್ ಪರವಾಗಿ ರನ್ ಶಿಖರ ಕಟ್ಟಿದರು. ಜಾನ್ ಕ್ರಾಲಿ (84 ರನ್) ಹಾಗೂ ಡಕೆಟ್ (94 ರನ್) ಶತಕದ ಹೊಸ್ತಿಲಲ್ಲಿ ಎಡವಿದರೆ, ಪೋಪ್ 71 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಹ್ಯಾರಿ ಬ್ರೂಕ್ ಆಟ ಕೇವಲ 3 ರನ್‌ಗೆ ಕೊನೆಯಾಯಿತು. ಶತಕ ಗಳಿಸಿ ಮುನ್ನಡೆದ ಜೋ ರೂಟ್ 150 ರನ್ ಗಳಿಸಿ ಜಡೇಜಾ ಬೌಲಿಂಗ್‌ನಲ್ಲಿ ಔಟ್ ಆದರು.

ಪಾಂಟಿಂಗ್ ದಾಖಲೆ ಮುರಿದ ಜೋ ರೂಟ್

ಇಂಗ್ಲೆಂಡ್ ಮಾಜಿ ನಾಯಕ ಜೋ ರೂಟ್, ಟೆಸ್ಟ್ ಕ್ರಿಕೆಟ್‌ನಲ್ಲಿ ನೂತನ ಮೈಲುಗಲ್ಲು ತಲುಪಿದ್ದಾರೆ. ಟೆಸ್ಟ್ ಕ್ರಿಕೆಟ್‌ನಲ್ಲಿ ಅತೀ ಹೆಚ್ಚು ರನ್‌ಗಳನ್ನು ಗಳಿಸಿದ ಬ್ಯಾಟ್ಸ್‌ಮನ್‌ಗಳ ಸಾಲಿನಲ್ಲಿ ಭಾರತೀಯ ದಿಗ್ಗಜ ರಾಹುಲ್ ದ್ರಾವಿಡ್ ಹಾಗೂ ಜಾಕ್ ಕಾಲಿಸ್ ಅವರನ್ನು ಹಿಂದಿಕ್ಕಿದರು. ಅಷ್ಟೇ ಅಲ್ಲದೆ, ಆಸ್ಟ್ರೇಲಿಯಾ ದಿಗ್ಗಜ ರಿಕಿ ಪಾಂಟಿಂಗ್ ದಾಖಲೆಯನ್ನು ಕೂಡ ಶುಕ್ರವಾರ ಜೋ ರೂಟ್ ಮುರಿದಿದ್ದು, ಇದೀಗ ಮಾಸ್ಟರ್ ಬ್ಲಾಸ್ಟರ್ ಸಚಿನ್ ತೆಂಡೂಲ್ಕರ್ ಮಾತ್ರ ಒಟ್ಟು ರನ್‌ನಲ್ಲಿ ಜೋ ರೂಟ್‌ಗಿಂತ ಮುಂದಿದ್ದಾರೆ.

ಅಯ್ಯರ್ ನೇಮಕ ದೃಢೀಕರಿಸಿದ ಐಒಎ ಮಂಡಳಿ

ದೆಹಲಿ: ಭಾರತ ಒಲಿಂಪಿಕ್ ಸಂಸ್ಥೆಯಲ್ಲಿ ದೀರ್ಘಕಾಲದಿಂದ ಇದ್ದ ಅಂತಃಕಲಹ ಕೊನೆಗೊಂಡಿದ್ದು, ಸಿಇಒ ರಘುರಾಮ್ ಅಯ್ಯರ್ ಅವರ ನೇಮಕವನ್ನು ಕಾರ್ಯಕಾರಿ ಮಂಡಳಿ ಗುರುವಾರ ದೃಢೀಕರಿಸಿದೆ.

ಉದ್ದೀಪನ ಮದ್ದು ಸೇವನೆ ಪ್ರಮಾಣ ದೇಶದಲ್ಲಿ ಗಮನಾರ್ಹ ಮಟ್ಟದಲ್ಲಿ ಏರುತ್ತಿರುವ ಬಗ್ಗೆ ಐಒಸಿ ಎಚ್ಚರಿಸಿದ ಪರಿಣಾಮ ಇದರ ಕಡಿವಾಣಕ್ಕೆ ಸಮಿತಿಯನ್ನು ನೇಮಿಸಿದೆ. ಸಂಸ್ಥೆಯ ಅಧ್ಯಕ್ಷೆ ಪಿ.ಟಿ.ಉಷಾ ಅವರು 2024ರ ಜನವರಿಯಲ್ಲಿ ಅಯ್ಯರ್ ಅವರನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಕ ಮಾಡಿದ್ದರು. ಅವರಿಗೆ ತಿಂಗಳಿಗೆ ₹20 ಲಕ್ಷ ಮತ್ತು ಇತರ ಭತ್ಯೆ ನಿಗದಿ ಗೊಳಿಸಿರುವ ಸಂಬಂಧ ಉಷಾ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರ ನಡುವೆ ಸಂಘರ್ಷ ತಲೆದೋರಿತ್ತು. ಆದರೆ ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರ ಮಧ್ಯಪ್ರವೇಶದ ನಂತರ ಕಗ್ಗಂಟಿಗೆ ಪರಿಹಾರ ದೊರೆಯಿತು.

ಏಳು ಮಂದಿ ಸದಸ್ಯರನ್ನು ಹೊಂದಿರುವ ಉದ್ದೀಪನ ಮದ್ದು ತಡೆ ಸಮಿತಿಗೆ ಡೇವಿಸ್ ಕಪ್ ಮಾಜಿ ಆಟಗಾರ ರೋಹಿತ್ ರಾಜಪಾಲ್ ಅಧ್ಯಕ್ಷರಾಗಿದ್ದಾರೆ. ಬ್ಯಾಡ್ಮಿಂಟನ್ ಆಟಗಾರ್ತಿ ಅಪರ್ಣಾ ಪೊಪಟ್, ಕ್ರೀಡಾ ವೈದ್ಯ ಪಿ.ಎಸ್.ಎಂ. ಚಂದ್ರನ್ ಮತ್ತಿತರರು ಸಮಿತಿಯಲ್ಲಿದ್ದಾರೆ. ಭಾರತದಲ್ಲಿ ಉದ್ದೀಪನ ಮದ್ದು ಸೇವನೆ ಪಾಸಿಟಿವಿಟಿ ಪ್ರಕರಣಗಳು ಹೆಚ್ಚಿನ ಪ್ರಮಾಣದಲ್ಲಿದೆ ಎಂದು ಲುಸಾನ್‌ಗೆ ಭೇಟಿ ನೀಡಿದ್ದ ಭಾರತದ ನಿಯೋಗದ ಮುಂದೆ ಐಒಸಿ ಪ್ರಸ್ತಾಪಿಸಿತ್ತು ಎಂದು ಅಯ್ಯರ್ ಜಂಟಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಉಷಾ, ಐಒಸಿ ಸದಸ್ಯರು ಈ ವೇಳೆ ಹಾಜರಿದ್ದರು. ಅಹಮದಾಬಾದಿನಲ್ಲಿ 2036 ಒಲಿಂಪಿಕ್ಸ್ ಆತಿಥ್ಯಕ್ಕೆ ಭಾರತ ಆಸಕ್ತಿ ವಹಿಸಿತ್ತು.

ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಕನ್ನಡತಿ ವೇದಾ ಕೃಷ್ಣಮೂರ್ತಿ ವಿದಾಯ

ಬೆಂಗಳೂರು: ಭಾರತೀಯ ಮಹಿಳಾ ಕ್ರಿಕೆಟ್ ತಂಡದ ಸ್ಟಾರ್ ಬ್ಯಾಟರ್ ವೇದಾ ಕೃಷ್ಣಮೂರ್ತಿ ಅವರು ಅಂತಾರಾಷ್ಟ್ರೀಯ ಕ್ರಿಕೆಟ್ ವೃತ್ತಿಜೀವನಕ್ಕೆ ನಿವೃತ್ತಿ ಘೋಷಿಸಿದ್ದಾರೆ. 32 ವರ್ಷದ ಕರ್ನಾಟಕದ ಬ್ಯಾಟರ್ ಶುಕ್ರವಾರ ಸಾಮಾಜಿಕ ಮಾಧ್ಯಮದಲ್ಲಿ ಭಾವನಾತ್ಮಕ ಪೋಸ್ಟ್ ಹಂಚಿಕೊಳ್ಳುವ ಮೂಲಕ ವಿದಾಯ ಘೋಷಿಸಿದ್ದು, ತಮ್ಮ ಕ್ರಿಕೆಟ್ ಪ್ರಯಾಣದ ಭಾಗವಾಗಿದ್ದ ಪ್ರತಿಯೊಬ್ಬರಿಗೂ ಧನ್ಯವಾದ ಹೇಳಿದ್ದಾರೆ.

ತಮ್ಮ ಇನ್ಸ್ಟಾಗ್ರಾಂ ಖಾತೆಯಲ್ಲಿ, ದೊಡ್ಡ ಕನಸುಗಳನ್ನು ಹೊಂದಿರುವ ಸಣ್ಣ ಪಟ್ಟಣದ ಹುಡುಗಿಯಿಂದ ಹಿಡಿದು ಹೆಮ್ಮೆಯಿಂದ ಭಾರತದ ಜೆರ್ಸಿ ಧರಿಸುವವರೆಗೆ ಪ್ರತಿಯೊಂದು ಹಂತದಲ್ಲೂ ಕ್ರಿಕೆಟ್ ನನಗೆ ಹಲವು ಪಾಠಗಳನ್ನು ಕಲಿಸಿತು. ಈ ಜರ್ನಿಯಲ್ಲಿ ನನ್ನ ಜತೆಗೆ ನಿಂತ ಪ್ರತಿಯೊಬ್ಬರಿಗೂ ಕೃತಜ್ಞಳಾಗಿದ್ದೇನೆ. ಇದು ಆಟಕ್ಕೆ ವಿದಾಯ ಹೇಳುವ ಸಮಯ, ಆದರೆ ಕ್ರಿಕೆಟ್‌ಗೆ ಅಲ್ಲ. ನಾನು ಭಾರತಕ್ಕಾಗಿ ಮತ್ತು ತಂಡಕ್ಕಾಗಿ ಸದಾ ಲಭ್ಯ ಇರುತ್ತೇನೆ ಎಂದು ತಿಳಿಸಿದ್ದಾರೆ.

- 18ನೇ ವಯಸ್ಸಿನಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ
- 11 ವರ್ಷಗಳಲ್ಲಿ 48 ಏಕದಿನ ಮತ್ತು 76 ಟಿ20 ಪಂದ್ಯ ಆಡಿದ ವೇದಾ

ಮಧ್ಯಮ ಕ್ರಮಾಂಕದ ಬ್ಯಾಟಿಂಗ್‌ಗೆ ಹೆಸರುವಾಸಿಯಾಗಿದ್ದ ವೇದಾ ಕೃಷ್ಣಮೂರ್ತಿ, 2017ರ ವಿಶ್ವಕಪ್‌ನಲ್ಲಿ ಭಾರತ ತಂಡದ ಭಾಗವಾಗಿದ್ದರು. 2011ರಿಂದ 2020ರ ವರೆಗಿನ 11 ವರ್ಷಗಳ ವೃತ್ತಿಜೀವನದಲ್ಲಿ 48 ಏಕದಿನ ಮತ್ತು 76 ಟಿ20 ಪಂದ್ಯಗಳನ್ನಾಡಿದ್ದಾರೆ. ಈ ವೇಳೆ, ಏಕದಿನ ಸ್ವರೂಪದಲ್ಲಿ 829 ರನ್ ಮತ್ತು 875 ಟಿ20 ರನ್ ಗಳಿಸಿದ್ದಾರೆ.

ಜೂನ್ 2011ರಲ್ಲಿ ಇಂಗ್ಲೆಂಡ್ ವಿರುದ್ಧದ ಪಂದ್ಯದೊಂದಿಗೆ 18ನೇ ವಯಸ್ಸಿನಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ವೇದಾ, ಚೊಚ್ಚಲ ಪಂದ್ಯದಲ್ಲೇ 51 ರನ್ ಗಳಿಸಿ ಪ್ರಭಾವ ಬೀರಿದ್ದರು. ಆಸ್ಟ್ರೇಲಿಯಾ ವಿರುದ್ಧ 2017ರ ವಿಶ್ವಕಪ್ ಸೆಮಿಫೈನಲ್‌ನಲ್ಲಿ 45 ಎಸೆತಗಳಲ್ಲಿ 70 ರನ್ ಗಳಿಸಿ ತಂಡ ಫೈನಲ್ ತಲುಪುವಲ್ಲಿ ಉಪಯುಕ್ತ ಕೊಡುಗೆ ನೀಡಿದ್ದರು. ಆಸ್ಟ್ರೇಲಿಯಾದಲ್ಲಿ ನಡೆದ 2020ರ ಟಿ20 ವಿಶ್ವಕಪ್ ಫೈನಲ್ ಇವರ ಕೊನೆಯ ಅಂತಾರಾಷ್ಟ್ರೀಯ ಪಂದ್ಯವಾಗಿತ್ತು.

ಗಾಯ ಲೆಕ್ಕಿಸದೆ ಬ್ಯಾಟಿಂಗ್ ಮಾಡಿದ ರಿಷಬ್

ರಿಷಬ್ ಪಂತ್ ಪರಾಕ್ರಮಕ್ಕೆ ಅಭಿನಂದನೆಗಳ ಮಹಾಪೂರ

ಮ್ಯಾಂಚೆಸ್ಟರ್: ಇಂಗ್ಲೆಂಡ್ ವಿರುದ್ಧ ನಡೆಯುತ್ತಿರುವ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ಗಾಯವನ್ನು ಲೆಕ್ಕಿಸದೇ ಬ್ಯಾಟಿಂಗ್ ಮಾಡಲು ಮೈದಾನಕ್ಕಿಳಿದಿರುವ ಭಾರತದ ವಿಕೆಟ್ ಕೀಪರ್ ಎಡಗೈ ಬ್ಯಾಟರ್ ರಿಷಭ್ ಪಂತ್ ಅವರ ದಿಟ್ಟತನಕ್ಕೆ ಅಭಿನಂದನೆಗಳ ಪೂರವೇ ಹರಿದು ಬಂದಿವೆ.

ಮೊದಲ ದಿನದ ಆಟದ ವೇಳೆ ಗಾಯಗೊಂಡಿದ್ದ ಪಂತ್ ನಿವೃತ್ತಿಯಾಗಿದ್ದರು. ಬಳಿಕ ಸ್ಕ್ಯಾನಿಂಗ್ ವರದಿಯಲ್ಲಿ ಗಾಯಗೊಂಡ ಪಂತ್ ಅವರಿಗೆ ಆರು ವಾರಗಳ ವಿಶ್ರಾಂತಿ ಸೂಚಿಸಲಾಗಿತ್ತು. ಆದರೆ ಎರಡನೇ ದಿನದಾಟದಲ್ಲಿ ಭಾರತದ ಸ್ಥಿತಿ ಉತ್ತಮವಾಗಿರಲಿಲ್ಲ. ಈ ನಡುವೆ ಕಾಲ್ಬೆರಳು ಮುರಿದ ನೋವಿನಲ್ಲಿಯೂ ಬ್ಯಾಟಿಂಗ್ ಮಾಡಿದ ಪಂತ್ ಕ್ರಿಕೆಟ್ ಲೋಕದ ಮನಗೆದ್ದಿದ್ದಾರೆ.

ಆಂಗ್ಲರ ಬೌಲರನ್ನು ಸಮರ್ಥವಾಗಿ ಎದುರಿಸಿದ ಪಂತ್ ಮಗದೊಂದು ಆಕರ್ಷಕ ಅರ್ಧಶತಕ (54) ಗಳಿಸಿದರು. ಪಂತ್ ಅವರ ಈ ಆಟವನ್ನು ಸ್ಪಿನ್ ದಿಗ್ಗಜ ಅನಿಲ್ ಕುಂಬ್ಳೆ ಅವರೊಂದಿಗೆ ಹೋಲಿಸಲಾಗುತ್ತಿದೆ. 2002ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ದವಡೆ ಮುರಿದಿದ್ದರೂ ಕುಂಬ್ಳೆ ಬ್ಯಾಂಡೇಜ್ ಹಾಕಿಸಿಕೊಂಡೇ ಬೌಲಿಂಗ್ ಮಾಡಲು ಕಣಕ್ಕಿಳಿದಿದ್ದರು.

ಕೆಚ್ಚೆದೆಯ ಪ್ರಯತ್ನ : ನೋವಿನ ನಡುವೆಯೂ ಆಟವಾಡಿ ಮೇಲೇರುವುದೇ ನಿಜವಾದ ಸ್ಥಿತಿಸ್ಥಾಪಕತ್ವ ಗುಣಕ್ಕೆ ನಿದರ್ಶನ. ರಿಷಬ್ ಪಂತ್ ಅವರು ಗಾಯಗೊಂಡಿದ್ದರೂ ಮೈದಾನಕ್ಕೆ ಮರಳುವ ಮೂಲಕ ಮತ್ತು ಶ್ರೇಷ್ಠ ಪ್ರದರ್ಶನ ನೀಡಿದರು. ಅವರು ನಮ್ಮ ದೇಶವನ್ನು ಪ್ರತಿನಿಧಿಸುವಾಗ ತೆಗೆದುಕೊಂಡ ಧೈರ್ಯ ಮತ್ತು ದೃಢಸಂಕಲ್ಪ ನಿಜವಾಗಿಯೂ ಮೆಚ್ಚುವಂತಹದ್ದು. ಈ ಕೆಚ್ಚೆದೆಯ ಪ್ರಯತ್ನ ದೀರ್ಘಕಾಲ ನೆನಪಿನಲ್ಲಿ ಉಳಿಯುವಂತಹದ್ದು ಎಂದು ಸಚಿನ್ ತೆಂಡೂಲ್ಕರ್ ಶ್ಲಾಘಿಸಿದ್ದಾರೆ.

ಏನಾಗಿತ್ತು ಪಂತ್‌ಗೆ?

ಓಲ್ಡ್ ಟ್ರಾಫರ್ಡ್ ಟೆಸ್ಟ್‌ನ ಮೊದಲ ದಿನದಂದು ಕ್ರಿಸ್ ವೋಕ್ಸ್ ಎಸೆದ ಚೆಂಡು ರಿಷಭ್ ಪಂತ್ ಅವರ ಕಾಲಿಗೆ ಗಾಯವನ್ನು ಉಂಟು ಮಾಡಿತ್ತು. ಕಾಲಿನಿಂದ ರಕ್ತ ಒಸರಿದ್ದಲ್ಲದೆ, ಊತವೂ ಕಂಡುಬಂದಿತ್ತು. ಸ್ಕ್ಯಾನ್ ಮಾಡಿದಾಗ ಪಾದದ ಮೂಳೆ ಮುರಿತವಾಗಿರುವುದು ಸಹ ತಿಳಿದು ಬಂದಿತು. ಅವರು ಮತ್ತೆ ಬ್ಯಾಟಿಂಗ್‌ಗೆ ಆಗಮಿಸುವುದು ಸಾಧ್ಯವೇ ಇಲ್ಲ ಎಂದೇ ಹೇಳಲಾಗುತ್ತಿತ್ತು. ಆದರೆ ಎರಡನೇ ದಿನದಂದು ಪಂತ್ ಅವರು ಮೈದಾನಕ್ಕೆ ಆಗಮಿಸಿ ಬ್ಯಾಟಿಂಗ್ ಮುಂದುವರಿಸಿದ್ದರು.

ಪರಿಪೂರ್ಣ ಟೀಮ್‌ಮ್ಯಾನ್

ಪಂತ್ ಬಗ್ಗೆ ಯಾರೇ ಅನುಮಾನಿಸಿದ್ದರೆ, ಅವರಿಗೆ ಈ ಪ್ರದರ್ಶನದಿಂದ ಉತ್ತರ ಸಿಕ್ಕಿರಬಹುದು. ಪಂತ್ ಪರಿಪೂರ್ಣ ಟೀಂ ಮ್ಯಾನ್ ಎಂದು ಮಾಜಿ ಕೋಚ್ ರವಿ ಶಾಸ್ತ್ರಿ ಅಭಿಪ್ರಾಯಪಟ್ಟಿದ್ದಾರೆ. ಪಂತ್ ಮತ್ತೆ ಆಡಲು ಬಂದಿರುವುದು ವಿಶೇಷವಾಗಿತ್ತು. ಕೆಲವೊಮ್ಮೆ ಇಂತಹ ಪ್ರೇರಣಾ ಶಕ್ತಿಯು ಇನ್ನೊಂದು ಹಂತಕ್ಕೆ ತಲುಪುತ್ತದೆ. ಇದರಿಂದ ತಂಡದ ಮನೋಬಲವನ್ನು ಇಮ್ಮಡಿಗೊಳಿಸುತ್ತದೆ. ಇಂಗ್ಲೆಂಡ್ ತಂಡದಿಂದಲೂ ಚಪ್ಪಾಳೆ ಗಿಟ್ಟಿಸಿಕೊಂಡಿದ್ದಾರೆ. ಅಂತಿಮವಾಗಿ ಅದಕ್ಕಾಗಿಯೇ ನೀವು ಆಡುತ್ತಿದ್ದೀರಿ' ಎಂದು ಹೇಳಿದ್ದಾರೆ. ಲಾರ್ಡ್ಸ್‌ನಲ್ಲಿ ನಡೆದಿದ್ದ ಮೂರನೇ ಟೆಸ್ಟ್ ಪಂದ್ಯದಲ್ಲೂ ಕೈಗೆ ಗಾಯಗೊಂಡಿದ್ದರೂ ಪಂತ್ ಬ್ಯಾಟಿಂಗ್ ಮಾಡುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು. ಅಂದು ಬೆರಳು ಹೇಗಿದೆ ಅಂತಾ ಕೇಳಿದಾಗ, ಸ್ವಲ್ಪ ಮುರಿದರೂ ಆಡುತ್ತೇನೆ ಎಂದು ಹೇಳಿರುವುದು ಪಂತ್ ದಿಟ್ಟತನಕ್ಕೆ ಸಾಕ್ಷಿಯಾಗಿದೆ. ಅವರು ದೇಶಕ್ಕಾಗಿ ಟೆಸ್ಟ್ ಕ್ರಿಕೆಟ್ ಆಡಲು ಇಷ್ಟಪಡುತ್ತಾರೆ' ಎಂದು ಶಾಸ್ತ್ರಿ ಉಲ್ಲೇಖಿಸಿದ್ದಾರೆ.

ಡ್ಯೂಡ್‌ನಲ್ಲಿ ತೇಜ್ ರಗಡ್ ಲುಕ್

ಈ ಹಿಂದೆ ರಿವೈಂಡ್ ಸ್ಟೋರಿ ಹೇಳಿ ಪ್ರೇಕ್ಷಕರ ಮನಗೆದ್ದಿದ್ದ ನಟ ತೇಜ್ ಈಗ ಡ್ಯೂಡ್ ಅನ್ನುತ್ತಾ ತೆರೆಗೆ ಬರುತ್ತಿದ್ದಾರೆ. ಹೌದು, ತೇಜ್ ಡ್ಯೂಡ್ ಚಿತ್ರದಲ್ಲಿ ನಾಯಕನಾಗಿ ನಟಿಸುತ್ತಿದ್ದಾರೆ. ಮಹಿಳಾ ಪುಟ್ಬಾಲ್ ತಂಡದ ಕುರಿತ ಕಥೆಯನ್ನು ಒಳಗೊಂಡಿರುವ ಡ್ಯೂಡ್‌ನಲ್ಲಿ ಆ್ಯಕ್ಷನ್‌ಗೆ ಹೆಚ್ಚಿನ ಒತ್ತು ನೀಡಲಾಗಿದೆ. ಪೋಸ್ಟರ್‌ನಲ್ಲಿಯೇ ಗಮನಸೆಳೆದಿದ್ದ ಡ್ಯೂಡ್ ಈಗ ಟ್ರೇಲರ್ ಮೂಲಕ ಕ್ರೇಜ್ ಹೆಚ್ಚಿಸಿದೆ. ಜಿಮ್‌ಗೆ ಎಂಟ್ರಿ ಕೊಡುವ ನಾಯಕ ಅಲ್ಲಿದ್ದ ದುರುಳರ ಅಟಹಾಸಕ್ಕೆ ಹೆದರದೆ ತನ್ನ ತಂಟೆಗೆ ಬಂದವರನ್ನು ಹೆಡೆಮುರಿ ಕಟ್ಟುತ್ತಾನೆ. ಹಠತೊಟ್ಟು ತನ್ನ ತಂಡವನ್ನು ಗೆಲ್ಲಿಸುವ ಹಠ ತೊಡುತ್ತಾನೆ, ಇದರಲ್ಲಿ ಹೇಗೆ ಯಶಸ್ವಿಯಾಗುತ್ತಾನೆ ಎಂಬುದನ್ನು ಚಿತ್ರದಲ್ಲಿ ರೋಚಕವಾಗಿ ಕಟ್ಟಿಕೊಡಲಾಗುತ್ತಿದೆ. ಈ ಹಿಂದಿನ ಚಿತ್ರಗಳಲ್ಲಿ ಸಿಂಪಲ್ ಆಗಿ ಕಂಗೊಳಿಸಿದ್ದ ತೇಜ್ ಈ ಚಿತ್ರದಲ್ಲಿ ರಗಡ್ ಆಗಿ ಕಂಗೊಳಿಸಿದ್ದಾರೆ. ಈ ಚಿತ್ರಕ್ಕೆ ತೇಜ್ ಅವರೇ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ, ಬಹುತೇಕ ಚಿತ್ರೀಕರಣ ಮುಗಿಸಿರುವ ಚಿತ್ರತಂಡ ಅಂತಿಮ ಹಂತದ ಶೂಟಿಂಗ್‌ನಲ್ಲಿ ಬ್ಯುಸಿಯಾಗಿದೆ. ಬೆಂಗಳೂರು ಹೊರವಲಯದಲ್ಲಿ ಶೂಟಿಂಗ್ ನಡೆಸಲಾಗುತ್ತಿದೆ. ದೊಡ್ಮನೆ ಮಗ ರಾಘವೇಂದ್ರ ರಾಜ್‌ಕುಮಾರ್ ವಿಶೇಷ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ರಂಗಾಯಣ ರಘು, ಸುಂದರ್ ರಾಜ್ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಸಾನ್ಯಾ ಕಾವೇರಮ್ಮ ನಾಯಕಿಯಾಗಿ ನಟಿಸುತ್ತಿದ್ದಾರೆ. ಎಲ್ಲವೂ ಅಂದುಕೊಂಡಂತೆ ಆದರೆ ಡ್ಯೂಡ್ ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ತೆರೆಗೆ ಬರಲಿದೆ.

ಮನಸೆಳೆದ ಶಿವಗಂಗನ ಗಾನ

ಶ್ರೀಮಂಜು ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಶಿವಗಂಗ ಚಿತ್ರ ಸದ್ದಿಲ್ಲದೆ ಚಿತ್ರೀಕರಣ ಮುಗಿಸಿದ್ದು, ತೆರೆಗೆ ಬರಲು ಸಿದ್ಧವಾಗಿದೆ. ಸದ್ಯ ಈ ಚಿತ್ರದ ಹಾಡುಗಳು ಬಿಡುಗಡೆಯಾಗಿವೆ. ಹರ್ಷ ಕಾಗೋಡು ಸಂಗೀತ ಸಂಯೋಜಿಸಿರುವ ಈ ಸಿನಿಮಾದ ಹಾಡುಗಳು ಜನರ ಮನಸ್ಸಿಗೆ ಹತ್ತಿರವಾಗಿವೆ. ಚಿತ್ರದಲ್ಲಿ ನವಿರಾದ ಪ್ರೇಮಕಥೆ ಬೆರೆತಿದ್ದು, ಸಾಮಾಜಿಕ ಸಂದೇಶವೂ ಅಡಕವಾಗಿದೆ. ಸಿ.ವಿ.ಕುಮಾರ್ ನಾಯಕನಾಗಿ ನಟಿಸಿದ್ದು, ಶ್ರೀಪಂಚಮಿ ಸಿನಿ ಕ್ರಿಯೇಷನ್ಸ್ ಲಾಂಛನದಲ್ಲಿ ಚಿತ್ರ ನಿರ್ಮಾಣಕ್ಕೂ ಬಂಡವಾಳ ಹೂಡಿದ್ದಾರೆ. ರಿವಾನ್ಸಿ ನಾಯಕಿಯಾಗಿ ಬಣ್ಣಹಚ್ಚಿದ್ದು, ಉಳಿದಂತೆ ಸಂಗೀತಾ, ಪುಷ್ಪಾ, ಸುಧೀಂದ್ರ, ಶಿವಮೊಗ್ಗ ರಾಮಣ್ಣ, ನಟರಾಜು, ಭಾಗ್ಯಮ್ಮ, ನಾಗರಾಜ್ ಮುಂತಾದವರು ತಾರಾಗಣದಲ್ಲಿದ್ದಾರೆ. ಸುನಯ್ ಜೈನ್ ಛಾಯಾಗ್ರಹಣ ಈ ಚಿತ್ರಕ್ಕಿದೆ. ಶಿವಗಂಗ ಚಿತ್ರೀಕರಣ ಪೂರ್ಣಗೊಳಿಸಿದ್ದು, ಶೀಘ್ರದಲ್ಲಿಯೇ ತೆರೆಗೆ ಬರಲಿದೆ.

ಶಿವಗಂಗ ಎರಡು ಪಾತ್ರಗಳ ಹೆಸರು, ಪ್ರೇಮಕಥೆಯ ಸುತ್ತ ಚಿತ್ರದ ಕಥೆ ಸಾಗುತ್ತದೆ. ಹಾಗಂತ ಅಷ್ಟಕ್ಕೇ ಸೀಮಿತವಾಗಿಲ್ಲ. ಸಾಮಾಜಿಕ ಸಂದೇಶವೂ ಚಿತ್ರದಲ್ಲಿ ಬೆರೆತಿದೆ. ವಿಶೇಷವೆಂದರೆ ಈ ಚಿತ್ರದ ಕ್ಲೈಮ್ಯಾಕ್ಸ್ ಚಿತ್ರೀಕರಣ ಮಾಡಿಲ್ಲ. ಆದರೆ ಕ್ಲೈಮ್ಯಾಕ್ಸ್ ಇದೆ. ಅದು ಏನು ಎಂಬುದನ್ನು ನೀವು ತೆರೆಯ ಮೇಲೆ ನೋಡಬೇಕು.

-ಶ್ರೀಮಂಜು ನಿರ್ದೇಶಕ

ಸಿನಿಮಾ ನಟನಾಗಬೇಕು ಎಂಬುದು ನನ್ನ ಕನಸಾಗಿತ್ತು. ಅದು ಈ ಚಿತ್ರದ ಮೂಲಕ ನನಸಾಗಿದೆ. ನಿರ್ದೇಶಕ ಶ್ರೀಮಂಜು ಅವರು ಹೇಳಿದ ಕಥೆ ಇಷ್ಟವಾಯಿತು. ಹಾಗಾಗಿ ನಾನೇ ನಿರ್ಮಾಣ ಕೂಡ ಮಾಡಿದ್ದೀನಿ. ಚಿತ್ರತಂಡದ ಸದಸ್ಯರ ಸಹಕಾರದಿಂದ ಒಳ್ಳೆಯ ಚಿತ್ರ ಮೂಡಿಬಂದಿದೆ. ಸದ್ಯದಲ್ಲಿಯೇ ಚಿತ್ರ ತೆರೆಗೆ ಬರಲಿದೆ.

-ಸಿ.ವಿ.ಕುಮಾರ್ ನಿರ್ಮಾಪಕ

ವಾರ್‌ನಲ್ಲಿ ಭರ್ಜರಿ ಆ್ಯಕ್ಷನ್

ಹೃತಿಕ್ ರೋಷನ್ ಹಾಗೂ ಜೂ.ಎನ್‌ಟಿಆರ್ ಒಟ್ಟಿಗೆ ಅಭಿನಯಿಸಿ ರುವ ವಾರ್ 2 ಆರಂಭದಿಂದಲೂ ಕುತೂಹಲ ಮೂಡಿಸಿತ್ತು. ಈ ಹಿಂದೆ ತೆರೆಗೆ ಬಂದ ವಾರ್ ಚಿತ್ರದ ಸೀಕ್ವೆಲ್ ಆಧರಿಸಿ ವಾರ್ 2 ಈ ಚಿತ್ರ ಮೂಡಿಬಂದಿದ್ದು, ಆಗಸ್ಟ್ 15ರಂದು ಅದ್ದೂರಿಯಾಗಿ ತೆರೆಗೆ ಬರಲಿದೆ. ಸದ್ಯ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು, ಸಿನಿಪ್ರಿಯರನ್ನು ಸೆಳೆಯುತ್ತಿದೆ. ಟ್ರೇಲರ್ ಉದ್ದಕ್ಕೂ ಆ್ಯಕ್ಷನ್ ಮೇಳೈಸಿದೆ. ತಮ್ಮ ದೇಶಕ್ಕಾಗಿ ಪ್ರಾಣವನ್ನೇ ಮುಡಿ ಪಾಗಿಟ್ಟಿರುವ ಇಬ್ಬರು ಯೋಧರ ನಡುವೆ ನಡೆಯುವ ರೋಚಕ ಯುದ್ಧ ಇಲ್ಲಿದೆ. ಹೃತಿಕ್ ಹಾಗೂ ತಾರಕ್ ನಡುವಿನ ಫೈಟ್ ಕುತೂಹಲ ಮೂಡಿಸುತ್ತದೆ. ಹಾಲಿವುಡ್ ಸಿನಿಮಾದ ಲೆವೆಲ್‌ಗೆ ಸಾಹಸ ದೃಶ್ಯಗಳು ಮೂಡಿಬಂದಿವೆ. ವಿಮಾನದ ಮೇಲೆ ನಡೆಯುವ ಫೈಟ್, ರೈಲಿನ ಮೇಲೆ ನಡೆಯುವ ಚೇಸಿಂಗ್, ಸಮುದ್ರದ ಮಧ್ಯೆ ಖಳರ ನಡುವೆ ನಡೆಯುವ ಕಾಳಗ ಬಲು ರೋಚಕವಾಗಿದೆ. ಕಿಯಾರಾ ಅಡ್ವಾಣಿ ನಾಯಕಿಯಾಗಿ ನಟಿಸಿದ್ದು, ಈ ಚಿತ್ರದಲ್ಲಿ ಗ್ಲಾಮರ್ ಆಗಿ ಕಂಗೊಳಿಸಿದ್ದಾರೆ ಜತೆಗೆ ಆ್ಯಕ್ಷನ್‌ನಲ್ಲಿಯೂ ಮಿಂಚಿದ್ದಾರೆ. ಅಶೋತೋಷ್ ರಾಣ ಕೂಡ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಶ್ರೀಧರ್ ರಾಘವನ್ ಚಿತ್ರಕಥೆ ಬರೆ ದಿದ್ದು, ಅಯಾನ್ ಮುಖರ್ಜಿ ಅದ್ಭುತವಾಗಿ ನಿರ್ದೇಶನ ಮಾಡಿದ್ದಾರೆ. ಬಲು ಅದ್ದೂರಿಯಾಗಿ ಮೂಡಿಬಂದಿರುವ ವಾರ್ 2, ಯಶ್ ರಾಜ್ ಫಿಲಂಸ್‌ನಲ್ಲಿ ನಿರ್ಮಾಣವಾಗಿದೆ. ಅಮಿತಾಬ್ ಭಟ್ಟಾಚಾರ್ಯ ಸಾಹಿತ್ಯ ರಚಿಸಿರುವ ಈ ಚಿತ್ರಕ್ಕೆ ಪ್ರೀತಮ್ ಸಂಗೀತ ಸಂಯೋಜಿಸಿದ್ದಾರೆ.

ಸೆಪ್ಟೆಂಬರ್ 10ಕ್ಕೆ ಪ್ರಶಸ್ತಿಯ ಗರಿ

ಕನ್ನಡ ಚಿತ್ರರಂಗದಲ್ಲಿ ನೂರಕ್ಕೂ ಹೆಚ್ಚು ಸಿನಿಮಾಗಳನ್ನು ನಿರ್ದೇಶಿಸಿ ಪ್ರಸಿದ್ಧಿ ಪಡೆದಿರುವ ಹಿರಿಯ ನಿರ್ದೇಶಕ ಸಾಯಿ ಪ್ರಕಾಶ್ ಈಗ ಸಾಮಾಜಿಕ ಸಂದೇಶ ಹೊತ್ತ ಸೆಪ್ಟೆಂಬರ್ 10 ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. ಸೆಪ್ಟೆಂಬರ್ 10 ಬಿಡುಗಡೆಗೂ ಮುನ್ನವೇ ಪ್ರಶಸ್ತಿಗೆ ಭಾಜನವಾಗಿದೆ. ಎಲ್ಲಾ ಸಮಸ್ಯೆಗಳಿಗೆ ಆತ್ಮಹತ್ಯೆ ಒಂದೇ ಪರಿಹಾರವಲ್ಲ ಎಂಬ ಸಂದೇಶವನ್ನು ಹೊತ್ತು ತೆರೆಗೆ ಬರುತ್ತಿರುವ ಸೆಪ್ಟೆಂಬರ್ 10 ಚಿತ್ರಕ್ಕೆ ಅಂತಾರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ. ಯುನಿವರ್ಸಲ್ ಫಿಲಂ ಮೇಕರ್ಸ್ ಕೌನ್ಸಿಲ್ ಹಾಗೂ ಜೆನಸಿಸ್ ಅಲ್ಟಿಮಾ ದುಬೈನ ಸಹಯೋಗದೊಂದಿಗೆ ನಡೆಯುತ್ತಿರುವ ಹೈದರಾಬಾದ್‌ನ ಚಾರ್ ಮಿನಾರ್ 17ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನ ಕಂಡ ಸೆಪ್ಟೆಂಬರ್ 10 ಸಿನಿಮಾ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ.

ಕೆಲವರು ಸಮಸ್ಯೆಗಳಿಗೆ ಸಿಲುಕಿ ಜೀವನದಲ್ಲಿ ಜಿಗುಪ್ಸೆಗೊಂಡು ಆತ್ಮಹತ್ಯೆ ದಾರಿ ಹಿಡಿಯುತ್ತಿದ್ದಾರೆ. ಸಮಸ್ಯೆಗೆ ಆತ್ಮಹತ್ಯೆ ಒಂದೇ ಪರಿಹಾರವಲ್ಲ, ಜೀವನ ದೊಡ್ಡದಾಗಿದೆ, ಸಮಸ್ಯೆಗಳನ್ನು ಎದಿರಿಸಿ ಜೀವನ ಸಾಗಿಸಬೇಕು ಎಂಬ ಸಂದೇಶ ಈ ಚಿತ್ರದಲ್ಲಿ ಅಡಕವಾಗಿದೆ. ಈ ಸಿನಿಮಾ ವೀಕ್ಷಿಸಿದ ತೀರ್ಪುಗಾರರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಶ್ರೀದೇವಿ ಪಿಕ್ಚರ್ಸ್ ಬ್ಯಾನರ್‌ನಲ್ಲಿ ರಾಜಮ್ಮ ಸಾಯಿಪ್ರಕಾಶ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಹಿರಿಯ ನಟ ಶಶಿಕುಮಾರ್, ರಮೇಶ್ ಭಟ್, ಶ್ರೀರಕ್ಷಾ, ಶಿವಕುಮಾರ್ ಸೇರಿದಂತೆ ಹಲವಾರು ಕಲಾವಿದರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಜೆಜಿ.ಕೃಷ್ಣ ಛಾಯಾಗ್ರಹಣ ಈ ಚಿತ್ರಕ್ಕಿದೆ.



ದಿನಕರ್ ಚಿತ್ರದಲ್ಲಿ ದರ್ಶನ್

ನಟ ದರ್ಶನ್ ಈ ಹಿಂದೆ ಸಾರಥಿ ಚಿತ್ರದಲ್ಲಿ ನಟಿಸಿದ್ದರು, ದರ್ಶನ್ ಸಹೋದರ ದಿನಕರ್ ತೂಗುದೀಪ್ ಈ ಚಿತ್ರವನ್ನು ನಿರ್ದೇಶಿಸಿದ್ದರು. ಯಶಸ್ವಿ ಪ್ರದರ್ಶನಕಂಡ ಸಾರಥಿ ಬಾಕ್ಸ್ ಆಫೀಸ್‌ನಲ್ಲಿ ಭರ್ಜರಿ ಕಲೆಕ್ಷನ್ ಮಾಡಿತ್ತು. ಈಗ ಬಹು ದಿನಗಳ ಬಳಿಕ ದಿನಕರ್ ಮತ್ತೊಂದು ಚಿತ್ರವನ್ನು ನಿರ್ದೇಶಿಸುತ್ತಿದ್ದು ಈ ಚಿತ್ರದಲ್ಲಿ ದರ್ಶನ್ ಅಭಿನಯಿಸಲಿದ್ದಾರೆ. ವಿಶೇಷ ಎಂದರೆ ಈ ಸಿನಿಮಾದ ನಾಯಕನಾಗಿ ದರ್ಶನ್ ಅಕ್ಕನ ಮಗ ಚಂದು ಅಭಿನಯಿಸಲಿದ್ದಾರೆ. ನಟನಾಗಬೇಕೆಂಬ ಕನಸು ಹೊತ್ತಿರುವ ಚಂದು ನಟನೆಯ ಬಗ್ಗೆ ತರಬೇತಿಯನ್ನು ಪಡೆದಿದ್ದಾರೆ. ಮಾತ್ರವಲ್ಲ ಕಾಟೇರ ಹಾಗೂ ರಾಬರ್ಟ್ ಸಿನಿಮಾಗಳ ನಿರ್ದೇಶನದ ವಿಭಾಗದಲ್ಲಿಯೂ ಕಾರ್ಯನಿರ್ವಹಿಸಿದ್ದಾರೆ. ಇದೆಲ್ಲದರ ಅನುಭವದಿಂದ ಈಗ ಚಂದನವನದಲ್ಲಿ ನಾಯಕನಾಗಿ ಎಂಟ್ರಿಕೊಡಲು ಸಿದ್ಧವಾಗಿದ್ದಾರೆ.

ಇನ್ನೂ ವಿಶೇಷ ಎಂದರೆ ದರ್ಶನ್ ಈ ಸಿನಿಮಾದಲ್ಲಿ ನೆಗೆಟಿವ್ ರೋಲ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎನ್ನಲಾಗುತ್ತಿದೆ. ಈ ಹಿಂದೆ ನವಗ್ರಹ ಚಿತ್ರದಲ್ಲಿಯೂ ದಾಸ ನೆಗೆಟಿವ್ ರೋಲ್‌ನಲ್ಲಿ ಕಂಗೊಳಿಸಿದ್ದರು. ಅದಾದ ಬಳಿಕ ಇನ್ನೇನು ಆರಂಭವಾಗಲಿರುವ ಹೊಸ ಚಿತ್ರದಲ್ಲಿ ವಿಲನ್ ಆಗಿ ಮಿಂಚಲಿದ್ದಾರೆ. ಹಾಗಾಗಿ ಸಿನಿಮಾ ಸೆಟ್ಟೇರುವ ಮೊದಲೇ ಕುತೂಹಲ ಮೂಡಿಸಿದೆ. ಸದ್ಯ ದರ್ಶನ್, ಡೆವಿಲ್ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಬಹುತೇಕ ಚಿತ್ರೀಕರಣ ಮುಗಿಸಿರುವ ಡೆವಿಲ್ ತಂಡ ಹಾಡಿನ ಚಿತ್ರೀಕರಣಕ್ಕಾಗಿ ಥೈಲ್ಯಾಂಡ್‌ಗೆ ತೆರಳಿದ್ದು, ಹಾಡಿನ ಶೂಟಿಂಗ್ ಮುಗಿಸಿದೆ. ಇನ್ನೇನು ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಆರಂಭವಾಗಲಿದ್ದು, ನವೆಂಬರ್‌ನಲ್ಲಿ ತೆರೆಗೆ ಬರುವ ಸಾಧ್ಯತೆ ಇದೆ.